ಶನಿವಾರ, ಮೇ 27, 2023 | ಬೆಂಗಳೂರು | ₹ 7.00 | ಸಂಪುಟ 00 | ಸಂಚಿಕೆ 146 | ಪುಟ 24
• www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ರಾಹುಲ್‌ಗೆ ಪಾಸ್‌ಪೋರ್ಟ್: ಸಮ್ಮತಿ 12
ನರೇಗಾ ಅಕ್ರಮ: ತನಿಖೆಗೆ ಹಿಂದಿನ ಸರ್ಕಾರ ಬ್ರೇಕ್ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,501 ▲	18,499 ▲	₹61,900 (ಬೆಂಗಳೂರು) ▼	₹72,100 (ಬೆಂಗಳೂರು) ▼	82.60 ▲

24 ಶಾಸಕರು ಸಂಪುಟಕ್ಕೆ • ಹಿರಿ – ಕಿರಿಯರ ಸಮ್ಮಿಶ್ರಣ • ಬೋಸರಾಜುಗೆ ಒಲಿದ ಅದೃಷ್ಟ

ಇಂದು ಸಂಪುಟ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜತೆಗೆ ಕಾಂಗ್ರೆಸ್ ಹೈಕಮಾಂಡ್ ಸತತ ಮೂರು ದಿನಗಳ ಕಾಲ ಸಮಾಲೋಚನೆ ನಡೆಸಿ ಸಂಪುಟ ವಿಸ್ತರಣೆಯ ಕಗ್ಗಂಟನ್ನು ಬಗೆಹರಿಸಿದ್ದು, 24 ಶಾಸಕರು ಸಂಪುಟಕ್ಕೆ ಶನಿವಾರ ಸೇರ್ಪಡೆಯಾಗಲಿದ್ದಾರೆ. ಉಭಯ ಸದನಗಳ ಸದಸ್ಯರೂ ಅಲ್ಲದ ಪಕ್ಷದ ಹಿರಿಯ ಮುಖಂಡ ಎನ್.ಎಸ್.ಬೋಸರಾಜು ಅವರಿಗೆ ಸಚಿವರಾಗುವ 'ಭಾಗ್ಯ' ದೊರಕಿದೆ. ಸಚಿವರಾಗುವ 'ಗ್ಯಾರಂಟಿ'ಯಲ್ಲಿದ್ದ ಹಲವು ಹಿರಿಯ ಶಾಸಕರಿಗೆ ಅವಕಾಶ ಕೈ ತಪ್ಪಿದೆ.

ನೂತನ ಸಚಿವರ ಪ್ರಮಾಣವಚನ ಸಮಾರಂಭ ಶನಿವಾರ ಬೆಳಿಗ್ಗೆ 11.45ಕ್ಕೆ ರಾಜ-ಭವನದಲ್ಲಿ ನಡೆಯಲಿದೆ. ಪ್ರಮಾಣವಚನಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ರಾಜಭವನಕ್ಕೆ ಶುಕ್ರವಾರ ಮಧ್ಯಾಹ್ನವೇ ಮುಖ್ಯಮಂತ್ರಿ ಸಚಿವಾಲಯ ಸಂದೇಶ ರವಾನಿಸಿತ್ತು. ನೂತನ ಸಚಿವರ ಪಟ್ಟಿಯನ್ನು ಶುಕ್ರವಾರ ರಾತ್ರಿ ರಾಜಭವನಕ್ಕೆ ಕಳುಹಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ-ಮಂತ್ರಿ ಶಿವಕುಮಾರ್ ಹಾಗೂ ಎಂಟು ಶಾಸಕರು ಸಚಿವರಾಗಿ ಕಳೆದ ಶನಿವಾರ ಪ್ರಮಾಣವಚನ ಸ್ವೀಕರಿಸಿದ್ದರು. ಸಚಿವ ಸಂಪುಟದಲ್ಲಿ ಒಟ್ಟು 34 ಮಂದಿಯ ಸೇರ್ಪಡೆಗೆ ಅವಕಾಶ ಇದೆ. 24 ಮಂದಿಯ ಸೇರ್ಪಡೆಯಿಂದ ಸಂಪುಟ ಭರ್ತಿಯಾದಂತೆ ಆಗುತ್ತದೆ.

ಎರಡು ವರ್ಷದ ಬಳಿಕ ಸಂಪುಟ ಪುನಾರಚರಣೆ ಮಾಡಿ ನಿಮಗೆ ಅವಕಾಶ ನೀಡಲಾಗುತ್ತದೆ ಎಂದು ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಸಚಿವ ಸ್ಥಾನ ಕೈ ತಪ್ಪಿದ ಕೂಡಲೇ ಕೆಲವು ಶಾಸಕರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಾತಿವಾರು ಮತ್ತು ಪ್ರಾದೇಶಿಕ ಪ್ರಾತಿನಿಧ್ಯದ ಜತೆಗೆ ಸಾಮಾಜಿಕ ನ್ಯಾಯದ ಮಾನದಂಡದಲ್ಲಿ ಹಿರಿಯ ಹಾಗೂ ಕಿರಿಯ ಶಾಸಕರನ್ನು ಸಂಪುಟಕ್ಕೆ ಆಯ್ಕೆ ಮಾಡಿಕೊಳ್ಳುವ ಮೂಲಕ ಸಮತೋಲನ ಕಾಪಾಡಲಾಗಿದೆ ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದ್ದಾರೆ.

5ನೇ ಪುಟ ನೋಡಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ನವದೆಹಲಿಯಲ್ಲಿ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಭೇಟಿಯಾದರು –ಪಿಟಿಐ ಚಿತ್ರ

ಹರಿಪ್ರಸಾದ್ ರಾಜೀನಾಮೆ?

ಸಚಿವ ಸ್ಥಾನ ಸಿಗದ ಕಾರಣಕ್ಕೆ ನೊಂದಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಅವರು ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ.

ಶನಿವಾರವೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಸಾಮಾನ್ಯ ಕಾರ್ಯಕರ್ತನಾಗಿ ಇರುತ್ತೇನೆ ಎಂದು ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಸಿದ್ದರಾಮಯ್ಯ ಜಿದ್ದು ಸಾಧಿಸಿ ಸಂಪುಟಕ್ಕೆ ಸೇರ್ಪಡೆಯಾ-ಗದಂತೆ ನೋಡಿಕೊಂಡಿದ್ದಾರೆ ಎಂದೂ ಆಪ್ತರಲ್ಲಿ ಬೇಸರ ತೋಡಿಕೊಂಡಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹರಿಪ್ರಸಾದ್ ಅವರು ಪರಿಷತ್‌ನ ವಿರೋಧ ಪಕ್ಷದ ನಾಯ-ಕರಾಗಿದ್ದರು. ಬಿಜೆಪಿ ಸರ್ಕಾರದ ವಿರುದ್ಧ ಹೋರಾಟದ ಮುಂಚೂಣಿಯಲ್ಲಿದ್ದರು. ಜತೆಗೆ, ಅವರು ಹೈಕಮಾಂಡ್ ಜತೆಗೆ ಉತ್ತಮ ಒಡನಾಟ ಹೊಂದಿದ್ದಾರೆ. ಹಿರಿತನದ ಆಧಾರದಲ್ಲಿ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎಂಬ ವಿಶ್ವಾಸದಲ್ಲೂ ಇದ್ದರು. ಆದರೆ, ಹರಿಪ್ರಸಾದ್ ಸೇರ್ಪಡೆಗೆ ಸಿದ್ದರಾಮಯ್ಯ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲೇಬೇಕು ಎಂದು ಶಿವಕುಮಾರ್ ಪಟ್ಟು ಹಿಡಿದಿದ್ದರು. ಇದಕ್ಕೆ ಸಿದ್ದರಾಮಯ್ಯ ಕೊನೆಯವರೆಗೆ ಒಪ್ಪಲೇ ಇಲ್ಲ.

ಈಡಿಗ ಕೋಟಾದಲ್ಲಿ ಹರಿಪ್ರಸಾದ್ ಬದಲು ಮಧು ಬಂಗಾರಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಸಿದ್ದರಾಮಯ್ಯ ಹಟ ಹಿಡಿದರು. 'ಅವರ ಸೇರ್ಪಡೆಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಪಕ್ಷಕ್ಕೆ ಇನ್ನಷ್ಟು ಅನುಕೂಲವಾಗಲಿದೆ. ಜತೆಗೆ, ಯುವ ನಾಯಕರು. ನಟ ಶಿವರಾಜ ಕುಮಾರ್ ಅವರು ಅನೇಕ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದಾರೆ. ಹೀಗಾಗಿ, ಮಧು ಅವರನ್ನು ಸೇರಿಸಿಕೊಳ್ಳಲೇಬೇಕು ಎಂದು ಸಿದ್ದರಾಮಯ್ಯ ಒತ್ತಡ ಹೇರಿದರು. ಇದಕ್ಕೆ ಹೈಕಮಾಂಡ್ ಸಹ ಒಪ್ಪಿತು ಎಂದು ಮೂಲಗಳು ಹೇಳಿವೆ.

ಹರಿಪ್ರಸಾದ್ ಅವರಿಗೆ ಯಾವುದೇ ಕಾರಣಕ್ಕೆ ಸಚಿವ ಸ್ಥಾನ ನೀಡಬಾರದು ಎಂದು ಹಠಕ್ಕೆ ಬಿದ್ದಿರುವ ಸಿದ್ದರಾಮಯ್ಯ ಅವರು ಬೋಸರಾಜು ಹೆಸರನ್ನು ಮುನ್ನೆಲೆಗೆ ತಂದರು. ಚುನಾವಣೆಗೆ ಮುನ್ನ ಸಿದ್ದರಾಮಯ್ಯ, ಶಿವಕುಮಾರ್ ಅವರಿಗೆ ಸರಿಸಮಾನಾಗಿ ಕಾಣಿಸಿಕೊಂಡಿದ್ದ ಹರಿಪ್ರಸಾದ್ ಅವರಿಗೆ ಕನಿಷ್ಠ ಸಚಿವರಾಗುವ ಭಾಗ್ಯವೂ ಸಿಕ್ಕಿಲ್ಲ ಎಂದು ಹಿರಿಯ ನಾಯಕರೊಬ್ಬರು ವ್ಯಾಖ್ಯಾನಿಸಿದರು.

ಯಾರಿಗೆ ಸಚಿವ ಸ್ಥಾನ

ಹೆಸರು	ಜಾತಿ
ಎಚ್.ಕೆ.ಪಾಟೀಲ	ನಾಮಧಾರಿ ರೆಡ್ಡಿ
ಕೃಷ್ಣ ಬೈರೇಗೌಡ	ಒಕ್ಕಲಿಗ
ಎನ್.ಚಲುವರಾಯಸ್ವಾಮಿ	ಒಕ್ಕಲಿಗ
ಕೆ.ವೆಂಕಟೇಶ್	ಒಕ್ಕಲಿಗ
ಡಾ.ಎಚ್.ಸಿ.ಮಹದೇವಪ್ಪ	ಎಸ್‌ಸಿ (ಬಲಗೈ)
ಈಶ್ವರ ಖಂಡ್ರೆ	ಬಣಜಿಗ ಲಿಂಗಾಯತ
ಕೆ.ಎನ್.ರಾಜಣ್ಣ	ವಾಲ್ಮೀಕಿ (ಎಸ್‌ಟಿ)
ದಿನೇಶ್ ಗುಂಡೂರಾವ್	ಬ್ರಾಹ್ಮಣ
ಶರಣಬಸಪ್ಪ ದರ್ಶನಾಪುರ	ರೆಡ್ಡಿ ಲಿಂಗಾಯತ
ಶಿವಾನಂದ ಪಾಟೀಲ	ಪಂಚಮಸಾಲಿ
ಆರ್.ಬಿ.ತಿಮ್ಮಾಪುರ	ಎಸ್‌ಸಿ (ಎಡಗೈ)
ಎಸ್.ಎಸ್.ಮಲ್ಲಿಕಾರ್ಜುನ	ಸಾದರ ಲಿಂಗಾಯತ
ಶಿವರಾಜ ತಂಗಡಗಿ	ಎಸ್‌ಸಿ (ಭೋವಿ)
ಶರಣ ಪ್ರಕಾಶ ಪಾಟೀಲ	ಬಣಜಿಗ ಲಿಂಗಾಯತ
ಮಂಕಾಳ ಸುಬ್ಬ ವೈದ್ಯ	ಮೊಗವೀರ
ಲಕ್ಷ್ಮಿ ಹೆಬ್ಬಾಳಕರ	ಪಂಚಮಸಾಲಿ
ರಹೀಂ ಖಾನ್	ಮುಸ್ಲಿಂ
ಡಿ.ಸುಧಾಕರ್	ಜೈನ
ಸಂತೋಷ್ ಎಸ್.ಲಾಡ್	ಮರಾಠ
ಎನ್.ಎಸ್.ಬೋಸರಾಜು	ರಾಜು ಕ್ಷತ್ರೀಯ
ಬೈರತಿ ಸುರೇಶ್	ಕುರುಬ
ಮಧು ಬಂಗಾರಪ್ಪ	ಈಡಿಗ
ಡಾ.ಎಂ.ಸಿ.ಸುಧಾಕರ್	ಒಕ್ಕಲಿಗ
ಬಿ.ನಾಗೇಂದ್ರ	ವಾಲ್ಮೀಕಿ (ಎಸ್‌ಟಿ)

ಬೋಸರಾಜು ಆಯ್ಕೆ ಹಿಂದಿರುವ ಲೆಕ್ಕಾಚಾರ

ಮಾನ್ವಿ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಬೋಸರಾಜು ಅವರು 2014ರಿಂದ 2020ರ ವರೆಗೆ ಪರಿಷತ್ತಿನ ಸದಸ್ಯರಾಗಿದ್ದರು. ಅವರು ಈಗ ಉಭಯ ಸದನಗಳ ಸದಸ್ಯರಲ್ಲ. ಮುಂದಿನ ದಿನಗಳಲ್ಲಿ (ಆರು ತಿಂಗಳೊಳಗೆ) ಅವರನ್ನು ವಿಧಾನ ಪರಿಷತ್‌ನ ಸದಸ್ಯರನ್ನಾಗಿ ಮಾಡಲಾಗುತ್ತದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

5ನೇ ಪುಟ ನೋಡಿ



ಜಿ.ಎಚ್.ನಾಯಕ

ವಿಮರ್ಶಕ ಪ್ರೊ.ಜಿ.ಎಚ್. ನಾಯಕ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಜಿ.ಎಚ್.ನಾಯಕ ಎಂದೇ ಹೆಸರಾಗಿದ್ದ ಗೋವಿಂದರಾಯ ಹಮ್ಮಣ್ಣ ನಾಯಕ (88) ಅವರು ಇಲ್ಲಿನ ಕುವೆಂಪುನಗರದ ತಮ್ಮ ಮನೆಯಲ್ಲಿ ತೀವ್ರ ಹೃದಯಾಘಾತದಿಂದ ಶುಕ್ರವಾರ ಮಧ್ಯಾಹ್ನ 1ರ ಸುಮಾರಿಗೆ ನಿಧನರಾದರು.

ಅವರಿಗೆ ಪತ್ನಿ, ಸಾಮಾಜಿಕ ಹೋರಾಟಗಾರ್ತಿ ಮೀರಾ ನಾಯಕ, ಪುತ್ರಿ ಕೀರ್ತಿ, ಅಳಿಯ ಹಾಗೂ ಮೊಮ್ಮಗಳು ಇದ್ದಾರೆ. ಮೊಮ್ಮಗಳು ಲಂಡನ್‌ನಿಂದ ಬರಬೇಕಿದೆ. ಅಂತ್ಯಕ್ರಿಯೆಯನ್ನು ಶನಿವಾರ (ಮೇ 27) ಮಧ್ಯಾಹ್ನ ಚಾಮುಂಡಿಬೆಟ್ಟ ತಪ್ಪಲಿನ ಚಿತಾಗಾರದಲ್ಲಿ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

5ನೇ ಪುಟ ನೋಡಿ

ಕಾಂಗ್ರೆಸ್ ಗ್ಯಾರಂಟಿ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಕರೆ

'ನಾನು ವಿದ್ಯುತ್ ಬಿಲ್ ಕಟ್ಟಲ್ಲ, ನೀವೂ ಕಟ್ಟಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಜನತೆ 200 ಯೂನಿಟ್‌ವರೆಗಿನ ವಿದ್ಯುತ್ ಬಿಲ್ ಪಾವತಿ ಮಾಡಬಾರದು. ಅದೇ ರೀತಿ, ಮಹಿಳೆಯರು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಟಿಕೆಟ್ ಖರೀದಿಸಬಾರದು' ಎಂದು ಬಿಜೆಪಿ ಶಾಸಕ ಆರ್.ಅಶೋಕ ಕರೆ ನೀಡಿದರು.

'ನಾನೂ ಸಹ 200 ಯೂನಿಟ್ ವರೆಗಿನ ವಿದ್ಯುತ್ ಬಿಲ್ ಕಟ್ಟುವುದಿಲ್ಲ. ನೀವೂ ಕಟ್ಟಬೇಡಿ. ಯಾರು ಫ್ಯೂಸ್ ತೆಗೆಯಲು ಬರುತ್ತಾರೋ ನೋಡೋಣ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸವಾಲು ಹಾಕಿದರು.

'ಸಿದ್ದರಾಮಯ್ಯ ಮತ್ತು ಡಿಕೆಶಿ ಅವರು ಗ್ಯಾರಂಟಿ ಕಾರ್ಡ್ ಬಿಡುಗಡೆ ಮಾಡಿ, ತಾವಿಬ್ಬರೂ ಬಿಲ್ ಕಟ್ಟುವುದಿಲ್ಲ, ಯಾರೂ ಪಾವತಿಸಬಾರದು. ಎಲ್ಲರಿಗೂ ಉಚಿತ ವಿದ್ಯುತ್ ಕೊಡುತ್ತೇವೆ ಎಂದು ಹೇಳಿದ್ದರು. ಅದೇ ಪ್ರಕಾರ ಅವರಿಬ್ಬರ ಮಾತಿಗೆ ಗೌರವ ನೀಡಿ ನಾನೂ ಬಿಲ್ ಪಾವತಿ ಮಾಡುವುದಿಲ್ಲ' ಎಂದರು.

'ಒಂದು ವೇಳೆ ವಿದ್ಯುತ್ ಬಿಲ್ ಕಟ್ಟಿದರೆ ಮತ್ತು ಬಸ್ ಟಿಕೆಟ್ ತೆಗೆದುಕೊಂಡರೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ಅವಮಾನ ಮಾಡಿದಂತಾಗುತ್ತದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ರಾಜ್ಯದಲ್ಲಿ ಆರು ತಂಡಗಳಲ್ಲಿ ಪ್ರವಾಸ ಮಾಡುತ್ತೇವೆ. ಒಂದು ವೇಳೆ ಸರ್ಕಾರ ಗ್ಯಾರಂಟಿಗಳ ಜಾರಿಗೆ ಷರತ್ತುಗಳನ್ನು ಒಡ್ಡುವುದು, ಜಾತಿ, ಧರ್ಮದ ಆಧಾರದಲ್ಲಿ ತಾರತಮ್ಯ ಮಾಡಿದರೆ ಅಲ್ಲಿಂದಲೇ ಹೋರಾಟ ಆರಂಭಿಸುವ ಮೂಲಕ ಸರ್ಕಾರದ ಚಳಿ ಜ್ವರ ಬಿಡಿಸುತ್ತೇವೆ' ಎಂದು ಅಶೋಕ ತಿಳಿಸಿದರು.

5ನೇ ಪುಟ ನೋಡಿ

'ಸಿ.ಎಂ ಸೈಲೆಂಟ್, ಡಿಸಿಎಂ ವಯಲೆಂಟ್'



'ಹೊಸ ಸರ್ಕಾರ ಬಂದಾಗ ಮುಖ್ಯಮಂತ್ರಿ ಖಡಕ್ ಆಗಿ ಮಾತನಾಡುವುದು ಪರಿಪಾಠ. ಆದರೆ, ಇಲ್ಲಿ ಸಿ.ಎಂ ಸೈಲೆಂಟ್, ಡಿಸಿಎಂ ವಯಲೆಂಟ್ ಆಗಿ ಮಾತಾಡ್ತಾ ಇದ್ದಾರೆ. ಅಧಿಕಾರಿಗಳು, ಪೊಲೀಸರು, ಹಿಂದೂ ಕಾರ್ಯಕರ್ತರಿಗೆ ಧಮ್ಕಿ ಹಾಕುತ್ತಿದ್ದಾರೆ. ಧಮ್ಕಿ ಹಾಕುವುದು ಅವರ ಹಣೆಬರಹ' ಎಂದು ಅಶೋಕ ಲೇವಡಿ ಮಾಡಿದರು.

ಬಿಪಿಎಲ್: ಜೂ.1ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದ್ಯತಾ ಕುಟುಂಬಗಳ (ಬಡತನ ರೇಖೆಗಿಂತ ಕೆಳಗಿರುವ– ಬಿಪಿಎಲ್) ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಲು ಜೂನ್ 1 ರಿಂದ ಅವಕಾಶ ಕಲ್ಪಿಸಲು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ತೀರ್ಮಾನಿಸಿದೆ.

ಚುನಾವಣಾ ನೀತಿ ಸಂಹಿತೆ ಕಾರಣದಿಂದ ರಾಜ್ಯದಲ್ಲಿ ಹೊಸ ಪಡಿತರ ಚೀಟಿಗಳಿಗೆ ಅರ್ಜಿ ಸಲ್ಲಿಕೆ ಮತ್ತು ಪಡಿತರ ಚೀಟಿಗಳ ವಿತರಣೆ ಸ್ಥಗಿತಗೊಳಿ-ಸಲಾಗಿತ್ತು. ವೆಬ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಕೆ ವಿಭಾಗವನ್ನು ಲಾಕ್ ಮಾಡಲಾಗಿತ್ತು. ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ನೀಡಿರುವ ಐದು ಗ್ಯಾರಂಟಿ ಭರವಸೆಗಳ ಅನುಷ್ಠಾನದಲ್ಲಿ ಫಲಾನುಭವಿಗಳನ್ನು ಗುರುತಿಸಲು ಬಿಪಿಎಲ್ ಪಡಿತರ ಚೀಟಿಯನ್ನೇ ಮಾನದಂಡವಾಗಿ ನಿಗದಿಪಡಿಸುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿ ಜನರು ಬಿಪಿಎಲ್ ಪಡಿತರ ಚೀಟಿಗಾಗಿ ಆಹಾರ ಇಲಾಖೆ ಕಚೇರಿಗಳಿಗೆ ಭೇಟಿ ನೀಡುತ್ತಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಜಿ. ಗ್ಯಾನೇಂದ್ರ ಕುಮಾರ್ ಗಂಗ್ವಾರ್, 'ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಪಡಿತರ ಚೀಟಿಗಳಿಗೆ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಲಾಗಿತ್ತು. ಈ ಹಿಂದೆಯೇ ಮಂಜೂರಾದ ಪಡಿತರ ಚೀಟಿಗಳ ವಿತರಣೆ ಪ್ರಗತಿಯಲ್ಲಿದೆ' ಎಂದರು.

7B ಪುಟ ನೋಡಿ

ಕಲುಷಿತ ನೀರು ಸೇವನೆ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು): ದೇವದುರ್ಗ ತಾಲ್ಲೂಕಿನ ರೇಕಲಮರಡಿಯಲ್ಲಿ ಕಲುಷಿತ ನೀರು ಸೇವಿಸಿ ಬಾಲಕ ಹನುಮಂತ ಈರಪ್ಪ (3) ಶುಕ್ರವಾರ ಮೃತಪಟ್ಟಿದ್ದು, 30 ಮಂದಿ ಅಸ್ವಸ್ಥಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಟ್ಯಾಂಕ್ ಸ್ವಚ್ಛಗೊಳಿಸದೇ ಇರುವುದು ಹಾಗೂ ಬಿರುಕುಬಿಟ್ಟ ಪೈಪ್‌ಲೈನ್‌ನಿಂದ ಕಲ್ಮಶ ಸೇರಿಕೊಂಡಿದ್ದರಿಂದ ಕುಡಿಯುವ ನೀರು ಕಲುಷಿತವಾಗಿದೆ. ವಾಂತಿ, ಭೇದಿಗೆ ಇದು ಕಾರಣ' ಎಂದು ತಹಶೀಲ್ದಾರ್ ಯಲ್ಲಪ್ಪ ಸುಬೇದಾರ ತಿಳಿಸಿದರು.

ಅಸ್ವಸ್ಥ ಬಾಲಕನನ್ನು ರಾಯಚೂರಿನ ರಿಮ್ಸ್‌ಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟನು ಎಂದು ಅಧಿಕಾರಿಗಳು ತಿಳಿಸಿದರು. ಆರೋಗ್ಯ, ಕಂದಾಯ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿದ್ದರು. ರೇಕಲಮರಡಿಯಲ್ಲಿ ಶುದ್ಧ ನೀರು ಪೂರೈಕೆಯಾಗದೆ ನಿವಾಸಿಗಳು ಆರ್ಸೆನಿಕ್ ನೀರು ಬಳಸುತ್ತಿದ್ದು, 50 ವರ್ಷ ಮೀರಿದವರಲ್ಲಿ ಹೆಚ್ಚಿನವರ ಆರೋಗ್ಯ ಹದಗೆಡುತ್ತಿರುವ ಕುರಿತು 2019 ಮೇ 27ರಂದು 'ಪ್ರಜಾವಾಣಿ' ವರದಿ ಮಾಡಿತ್ತು. ಆ ನಂತರ ಅಧಿಕಾರಿಗಳು ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಿದ್ದರು. ಈ ಘಟಕವು ಕೆಲ ತಿಂಗಳಿನಿಂದ ಸ್ಥಗಿತಗೊಂಡಿದೆ.

'ವಾಂತಿ, ಭೇದಿ ಸುದ್ದಿ ತಲುಪುತ್ತಿದ್ದಂತೆ ಗ್ರಾಮಕ್ಕೆ ಆರೋಗ್ಯ ಇಲಾಖೆ ತಂಡ ಕಳುಹಿಸಲಾಗಿತ್ತು. ಅಸ್ವಸ್ಥರಿಗೆಲ್ಲ ಚಿಕಿತ್ಸೆ ನೀಡಲಾಗುತ್ತಿದೆ. ಗ್ರಾಮದಲ್ಲಿ ನೀರಿನ ನಿರ್ವಹಣೆ ಸಮರ್ಪಕವಾಗಿಲ್ಲ ಎಂಬುದು ಕಂಡುಬಂದಿದೆ. ಸದ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುರೇಂದ್ರಬಾಬು ಹೇಳಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಯುಪಿಎಸ್‌ಸಿ: ಭಾನುವಾರ ಬೆಳಿಗ್ಗೆ 6ರಿಂದಲೇ ಮೆಟ್ರೊ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪೂರ್ವಭಾವಿ ಪರೀಕ್ಷೆ ಮೇ 28 ರಂದು (ಭಾನುವಾರ) ನಡೆಯುತ್ತಿದ್ದು, ಅಂದು ಮೆಟ್ರೊ ರೈಲುಗಳ ಸಂಚಾರ ಬೆಳಿಗ್ಗೆ 6ರಿಂದಲೇ ಆರಂಭವಾಗಲಿವೆ.

ಪ್ರತಿ ಭಾನುವಾರ ಬೆಳಿಗ್ಗೆ 7 ಗಂಟೆಯಿಂದ ಸಂಚಾರ ಆರಂಭವಾಗುತ್ತಿತ್ತು. ಪರೀಕ್ಷೆಗೆ ಬರುವ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಒಂದು ಗಂಟೆ ಮುಂಚಿತವಾಗಿ ರೈಲುಗಳ ಸಂಚಾರ ಆರಂಭಿಸಲಾಗುತ್ತಿದೆ. ನಾಗಸಂದ್ರ, ರೇಷ್ಮೆ ಸಂಸ್ಥೆ, ಕೆಂಗೇರಿ, ಬೈಯಪ್ಪನಹಳ್ಳಿ, ಕೆ.ಆರ್.ಪುರ ಮತ್ತು ವೈಟ್‌ಫೀಲ್ಡ್ ನಿಲ್ದಾಣಗಳಿಂದ ಮೊದಲ ರೈಲುಗಳು ಬೆಳಿಗ್ಗೆ 6 ಗಂಟೆಗೆ ಹೊರಡಲಿವೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಕಾಂಗ್ರೆಸ್ ವಿರುದ್ಧ ನಳಿನ್‌ಕುಮಾರ್ ಕಟೀಲ್ ವಾಗ್ದಾಳಿ

‘ಆರೆಸ್ಸೆಸ್ ನಿಷೇಧಿಸುವ ಹಕ್ಕು ನಿಮಗಿಲ್ಲ’

ಪ್ರಜಾವಾಣಿ ವಾರ್ತೆ



ಮಂಗಳೂರು: ‘ತಾಕತ್ತಿದ್ದರೆ ಸಿದ್ದರಾಮಯ್ಯ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ಅವರು ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದವರನ್ನು ಬಂಧಿಸಲಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಇಲ್ಲಿ ಸವಾಲು ಹಾಕಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆರೆಸ್ಸೆಸ್ ರಾಷ್ಟ್ರಭಕ್ತಿಯನ್ನು ಕಲಿಸಿದೆ. ಪ್ರಧಾನಿ ಮೋದಿ ಆರೆಸ್ಸೆಸ್ ಸ್ವಯಂಸೇವಕರು. ನೆಹರೂ, ಇಂದಿರಾಗಾಂಧಿ ಎಲ್ಲರೂ ಹಿಂದೆ ನಿಷೇಧಕ್ಕೆ ಯತ್ನಿಸಿ ಕೈ ಸುಟ್ಟುಕೊಂಡಿದ್ದಾರೆ’ ಎಂದರು.

ರಾಜಕೀಯ ಹತ್ಯೆ ತನಿಖೆಗೆ ಆಗ್ರಹ



ಮಂಗಳೂರು: ‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಮತೀಯ ಸಂಘಟನೆಗಳ ಕುಮ್ಮಕ್ಕಿನಿಂದ ಹತ್ಯೆಗಳು ನಡೆದಿವೆ. ಇದರ ಹಿಂದಿರುವ ವ್ಯಕ್ತಿಗಳು ಯಾರು ಎಂಬ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆದು ಸತ್ಯ ಹೊರಬಂದರೆ ಜಿಲ್ಲೆಯಲ್ಲಿ ರಾಜಕೀಯ ಹತ್ಯೆಗಳು ನಿಂತು ಸಾಮರಸ್ಯ ಉಳಿಯುತ್ತದೆ’ ಎಂದು ಕೆಪಿಸಿಸಿ ಉಪಾಧ್ಯಕ್ಷ ರಮಾನಾಥ ರೈ ಪ್ರತಿಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜಿಲ್ಲೆಯಲ್ಲಿ ನಡೆದ ಧರ್ಮಾಧಾರಿತ ಹತ್ಯೆಗಳಲ್ಲಿ ಶರತ್ ಮಡಿವಾಳ, ಅಶ್ರಫ್, ಜಲೀಲ್, ಮಸೂದ್, ಪ್ರವೀಣ್ ನೆಟ್ಟಾರು ಸೇರಿ ಅನೇಕ ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಹತ್ಯೆಯಲ್ಲಿ ಭಾಗಿಯಾದವರಲ್ಲಿ ಬಿಜೆಪಿ, ಎಸ್‌ಡಿಪಿಐ ಕಾರ್ಯಕರ್ತರು ಇರಬಹುದು. ಒಬ್ಬ ಕಾಂಗ್ರೆಸ್ ಕಾರ್ಯಕರ್ತ ಇಲ್ಲ ಎಂದು ಅನೇಕ ಬಾರಿ ಹೇಳಿದ್ದೇನೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ’ ಎಂದರು.

‘ಪ್ರಿಯಾಂಕ್ ಖರ್ಗೆ ಅವರು ನಾಲಿಗೆ ಹಿಡಿತದಲ್ಲಿಟ್ಟು ಮಾತನಾಡಲಿ. ಬಜರಂಗ ದಳ, ಆರೆಸ್ಸೆಸ್ ನಿಷೇಧ ಮಾಡಲು ನಿಮಗೆ ಹಕ್ಕಿಲ್ಲ. ನಾವು ಪಿಎಫ್‌ಐ ನಿಷೇಧಿಸಿದ್ದೇವೆ. ನೀವು ಮತ್ತೆ ಏನು ನಿಷೇಧ ಮಾಡುವುದಿದೆ’ ಎಂದು ಪ್ರಶ್ನಿಸಿದರು.

‘ಮಂತ್ರಿಮಂಡಲ ರಚನೆಯ ಗಲಾಟೆಯಲ್ಲೇ ಕಾಂಗ್ರೆಸ್ ವಿಭಜನೆ ಆಗುತ್ತದೆ. ಕಾಂಗ್ರೆಸ್ ಪಕ್ಷ ಒಳಜಗಳ ಹೊರ ಬರುವುದನ್ನು ತಡೆಯಲು ಮಾಡಿರುವ ಷಡ್ಯಂತ್ರದ ಭಾಗವಾಗಿ ಆರೆಸ್ಸೆಸ್ ಹೆಸರನ್ನು ಮುನ್ನೆಲೆಗೆ ತರಲಾಗಿದೆ’ ಎಂದು ಟೀಕಿಸಿದರು.

ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಐದು ಉಚಿತ ಗ್ಯಾರಂಟಿಗಳನ್ನು ನೀಡಿದೆ. ಅಧಿಕಾರಕ್ಕೆ ಬಂದು 20 ದಿನ ಕಳೆದರೂ ಆ ಬಗ್ಗೆ ಮಾತಿಲ್ಲ. ‘ಜನರು ವಿದ್ಯುತ್ ಬಿಲ್ ಪಾವತಿಸಬಾರದು ಅಂತ ನಾನೇ ಹೇಳ್ತೇನೆ. ಜನರ ಆಕ್ರೋಶ ಸಹಜ. ಜನರಿಗೆ ತೊಂದರೆಯಾದರೆ ನಾವು ಅವರ ಪರ ನಿಲ್ಲುತ್ತೇವೆ. ವಿದ್ಯುತ್ ಬಿಲ್ ನೀಡಲು ಬರುವ ನೌಕರರ ಮೇಲೆ ಹಲ್ಲೆಯಾದರೆ ಅದಕ್ಕೆ ಸರ್ಕಾರ ಹೊಣೆಯಾಗುತ್ತದೆ’ ಎಂದು ಎಚ್ಚರಿಸಿದರು.

ಆಟೊ ಚಾಲಕನಿಂದ ಅಂಗಾಂಗ ದಾನ

ಮನೆ ಮಹಡಿಯಿಂದ ಬಿದ್ದು ಗಾಯಗೊಂಡಿದ್ದ ವ್ಯಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ ಆಟೊ ಚಾಲಕರೊಬ್ಬರ ಹೃದಯವನ್ನು, ಅಂಗಾಂಗ ವೈಫಲ್ಯದಿಂದ ಒಳಲುತ್ತಿದ್ದ 59 ವರ್ಷದ ವ್ಯಕ್ತಿಗೆ ಕಸಿ ಮಾಡಲಾಗಿದೆ.

ಮಳೆ ನೀರು ಮನೆಯೊಳಗೆ ಬರದಂತೆ ತಡೆಯಲು ಮಹಡಿ ಮೇಲೆ ಹತ್ತಿದ 28 ವರ್ಷದ ಆಟೊ ಚಾಲಕ, ಬಿದ್ದು ಗಂಭೀರ ಗಾಯಗೊಂಡಿದ್ದರು. ಅವರನ್ನು ಜೆ.ಪಿ ನಗರದ ಆಸ್ಟರ್ ಆರ್‌ವಿ ಆಸ್ಪತ್ರೆಗೆ ಮೇ 21ರಂದು ದಾಖಲಿಸಲಾಗಿತ್ತು. ಮೇ 24ರಂದು ಅವರ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ವೈದ್ಯರು ಘೋಷಿಸಿದರು. ಅವರಿಗೆ ಪತ್ನಿ ಹಾಗೂ ಒಂದೂವರೆ ವರ್ಷದ ಮಗುವಿದೆ. ಕುಟುಂಬದವರು ಅಂಗಾಂಗ ದಾನಕ್ಕೆ ಸಮ್ಮತಿ ಸೂಚಿಸಿದ್ದರಿಂದ ಹೃದಯ ಪಡೆದು, ರಾಜರಾಜೇಶ್ವರಿ ನಗರದ ಸ್ಪರ್ಶ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗೆ ಮೇ 25ರಂದು ಕಸಿ ನಡೆಸಲಾಯಿತು.

ದಾನಿಯ ಯಕೃತ್ತು ಮತ್ತು ಒಂದು ಮೂತ್ರಪಿಂಡವನ್ನು ಆಸ್ಟರ್ ಆರ್‌ವಿ, ಮೇದೋಜೀರಕ ಗ್ರಂಥಿ ಮತ್ತು ಇನ್ನೊಂದು ಮೂತ್ರಪಿಂಡವನ್ನು ಬಿಜಿಎಸ್ ಗ್ಲೆನೆಗಲ್ಸ್ ಗ್ಲೋಬಲ್ ಆಸ್ಪತ್ರೆಗೆ, ಕಾರ್ನಿಯಾವನ್ನು ನಾರಾಯಣ ನೇತ್ರಾಲಯಕ್ಕೆ ನೀಡಲಾಗಿದೆ.

ಕಸಿಗೆ ಒಳಗಾದ 59 ವರ್ಷದ ವ್ಯಕ್ತಿ ‘ಇಸ್ಕೀಮಿಕ್ ಕಾರ್ಡಿಯೋಮಯೋಪಥಿ’ಯಿಂದ ಬಳಲುತ್ತಿದ್ದರು. ಅವರ ಹೃದಯವು ಪರಿಣಾಮಕಾರಿಯಾಗಿ ರಕ್ತವನ್ನು ಪಂಪ್ ಮಾಡುವ ಸಾಮರ್ಥ್ಯ ಕಳೆದುಕೊಂಡಿತ್ತು. ಇದರಿಂದಾಗಿ ಕಳೆದೊಂದು ವರ್ಷದಿಂದ ಅವರ ಆರೋಗ್ಯದ ಸ್ಥಿತಿ ಹದಗೆಟ್ಟಿತ್ತು. ಮೂರು ತಿಂಗಳ ಹಿಂದೆ ಜೀವಸಾರ್ಥಕತೆ ಅಡಿ ಅಂಗಾಂಗಕ್ಕೆ ಹೆಸರು ನೋಂದಾಯಿಸಲಾಗಿತ್ತು. ಹೃದಯ ಕಸಿಯಿಂದ ಅವರು ಚೇತರಿಸಿಕೊಂಡಿದ್ದಾರೆ ಎಂದು ಸ್ಪರ್ಶ್ ಆಸ್ಪತ್ರೆ ತಿಳಿಸಿದೆ.

‘ಕೆಲ ವರ್ಷಗಳಿಂದ ಅಂಗಾಂಗ ದಾನ ಮತ್ತು ಅಂಗಾಂಗ ಕಸಿ ರಾಜ್ಯದಲ್ಲಿ ಗಮನಾರ್ಹ ವೇಗ ಪಡೆದುಕೊಂಡಿದೆ. ಅಂಗಾಂಗ ದಾನದಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಅಂಗಾಂಗ ದಾನಕ್ಕೆ ಹೆಚ್ಚಿನ ಜನರು ಮುಂದೆ ಬರುವಂತೆ ಪ್ರೋತ್ಸಾಹಿಸಬೇಕು’ ಎಂದು ಸ್ಪರ್ಶ್ ಆಸ್ಪತ್ರೆ ಸಮೂಹದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಜೋಸೆಫ್ ಪಸಂಘ ಹೇಳಿದ್ದಾರೆ.

ವೆಂಕಟರಮಣಸ್ವಾಮಿ ರಥೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಶ್ರೀಕೋಟೆ ವೆಂಕಟರಮಣ ಸ್ವಾಮಿಯ ಬ್ರಹ್ಮ ರಥೋತ್ಸವ ಇದೇ 27 ರಂದು ವೈಭವದಿಂದ ನಡೆಯಲಿದೆ ಎಂದು ದೇವಸ್ಥಾನಗಳ ಅಭಿವೃದ್ಧಿ ಸೇವಾ ಟ್ರಸ್ಟ್ ಅಧ್ಯಕ್ಷ ಎಲ್. ಮುನಿಸ್ವಾಮಿ ತಿಳಿಸಿದರು.

ವಿಶೇಷ ಹೂವಿನ ಅಲಂಕಾರದೊಂದಿಗೆ ಶನಿವಾರ ಮಧ್ಯಾಹ್ನ 12.05ಕ್ಕೆ ಶಾಸಕ ಬೈರತಿ ಬಸವರಾಜ ಅವರು ಬ್ರಹ್ಮರಥೋತ್ಸವಕ್ಕೆ ವಿಶೇಷ ಪೂಜೆ ನೆರವೇರಿಸಲಿದ್ದಾರೆ.

ಇದೇ ದಿನ ರಾತ್ರಿ ಹತ್ತು ಗಂಟೆಗೆ ಪಲ್ಲಕ್ಕಿ ಉತ್ಸವಗಳಿಗೆ ಚಾಲನೆ ನೀಡಲಿದ್ದಾರೆ. ರಥೋತ್ಸವ ಪ್ರಯುಕ್ತ 30ರವರೆಗೂ ದೇವಾಲಯದಲ್ಲಿ ವಿಶೇಷ ಪೂಜೆ, ಅಭಿಷೇಕ, ಹೋಮಹವನ, ವಿವಿಧ ಧಾರ್ಮಿಕ ಕಾರ್ಯಗಳು ಹಾಗೂ ಮಹಾಮಂಗಳಾರತಿ ನಡೆಯಲಿದೆ.

GOKALDAS EXPORTS LIMITED

Corporate Identity Number (CIN) : L18101KA2004PLC033475

Regd. Office: No. 25, 2nd Cross, 3rd Main, Industrial Suburb, Yeshwanthpur, Bangalore-560022.

Tel: +91 80 68951000 Fax: +91 80 68951001 E-mail: info@gokaldasexports.com Website: www.gokaldasexports.com

Statement of audited standalone Ind AS financial results for the quarter and year ended March 31, 2023

(Regulation 47(1) (b) of the SEBI (LODR) Regualtions, 2015)

(in Rs. lakh, except earnings per share)

Sl. No.	Particulars	Standalone					Consolidated				
		Quarter Ended			Year ended		Quarter Ended			Year ended	
		Mar 31, 2023	Dec 31, 2022	Mar 31, 2022	Mar 31, 2023	Mar 31, 2022	Mar 31, 2023	Dec 31, 2022	Mar 31, 2022	Mar 31, 2023	Mar 31, 2022
		(Refer note 1)	Unaudited	(Refer note 1)	Audited	Audited	(Refer note 1)	Unaudited	(Refer note 1)	Audited	Audited
1	Total Income	53,200.78	52,932.57	58,781.28	2,25,165.13	1,80,003.49	53,012.18	52,809.53	58,795.47	2,24,722.93	1,80,100.34
2	Net profit/(Loss) before tax and exceptional items	5,285.11	4,941.92	5,227.87	20,377.33	11,672.97	5,076.55	4,775.19	5,237.71	19,833.93	11,703.13
3	Net profit/(Loss) before tax and after exceptional items	5,285.11	4,941.92	5,227.87	20,982.36	11,672.97	5,076.55	4,775.19	5,237.71	20,438.96	11,703.13
4	Net Profit/(Loss) after tax and exceptional items	4,927.82	4,224.82	6,076.15	17,840.04	11,672.97	4,719.26	4,058.09	6,090.99	17,296.64	11,708.13
5	Total Comprehensive Income for the period / year	8,182.61	4,671.23	5,301.01	15,606.52	12,381.87	7,924.58	4,563.55	5,313.18	15,074.20	12,416.61
6	Paid-up equity share capital (face value Rs 5 each, fully paid up)	3,028.90	3,028.90	2,948.85	3,028.90	2,948.85	3,028.90	3,028.90	2,948.85	3,028.90	2,948.85
7	Other equity as shown in the Audited Balance Sheet of the previous year	-	-	-	86,270.07	68,014.11	-	-	-	85,596.22	67,868.70
8	Earnings per equity share (EPS) face value (of Rs. 5 each)										
	Basic	8.13	6.97	10.30	29.50	23.01	7.79	6.70	10.33	28.60	23.08
	Diluted	7.75	6.63	10.00	28.05	22.07	7.42	6.37	10.02	27.20	22.14

Notes:

1. The figures for quarter ended March 31 of current and the previous years in the standalone and consolidated Ind AS financial results are the balancing figures between the audited figures in respect of the full financial years and the unaudited published year-to-date figures for nine months ended December 31 for respective years.
2. The above is an extract of the detailed format of Quarterly / Annual Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the financial results are available on the stock exchange websites www.bseindia.com and www.nseindia.com) and on the company's website (www.gokaldasexports.com)

For Gokaldas Exports Ltd.
Sd/-
Sivaramakrishnan Ganapathi
Vice Chairman and Managing Director
DIN: 07954560

Place: Bengaluru
Date: May 25, 2023

ದೈಹಿಕ ಅಂಗವಿಕಲ ವ್ಯಕ್ತಿಗಳ (ದಿವ್ಯಾಂಗಜನ) ಸಬಲೀಕರಣ ಇಲಾಖೆ ಅಡಿಯಲ್ಲಿನ ಪಂ. ದೀನದಯಾಳ್ ಉಪಾಧ್ಯಾಯ ರಾಷ್ಟ್ರೀಯ ದೈಹಿಕ ಅಂಗವಿಕಲ ವ್ಯಕ್ತಿಗಳ (ದಿವ್ಯಾಂಗಜನ) ಸಂಸ್ಥೆ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ

4, ವಿಷ್ಣು ದಿಗಂಬರ ಮಾರ್ಗ, ನವದೆಹಲಿ – 110002

ವೆಕನ್ಸಿ ಪ್ರಕಟಣೆ (ಜಾಹೀರಾತು ಸಂ. 2 /2023)

ದೈಹಿಕ ಅಂಗವಿಕಲ ವ್ಯಕ್ತಿಗಳ (ದಿವ್ಯಾಂಗಜನ) ಕೌಶಲ್ಯಾಭಿವೃದ್ಧಿ, ಪುನರ್ವಸತಿ ಹಾಗೂ ಸಬಲೀಕರಣಕ್ಕಾಗಿ ಲಕ್ನೌ (ಉತ್ತರ ಪ್ರದೇಶ) ಮತ್ತು ಶ್ರೀನಗರ (ಕೇಂ.ಪ್ರ ಜ&ಕಾ) ಗಳಲ್ಲಿ ಸ್ಥಾಪಿನೆಗೊಂಡಿರುವ ಸಂಯುಕ್ತ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕ ಹುದ್ದೆಗೆ, ಡೆಪ್ಯುಟೇಶನ್/ಗುತ್ತಿಗೆ ಆಧಾರದಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ	ವೇತನ ಶ್ರೇಣಿ ಹಂತ
1.	ನಿರ್ದೇಶಕ	ಎರಡು (02)	ಡೆಪ್ಯುಟೇಶನ್/ ಗುತ್ತಿಗೆ	**ಡೆಪ್ಯುಟೇಶನ್:** ಪಿ.ಎಂ.ಎಲ್.–12 **ಗುತ್ತಿಗೆ:** ಮಾಸಿಕ ಕ್ರೋಢಿಕೃತ ವೇತನ ರೂ. 90,000/– ಜೊತೆಗೆ ವಾರ್ಷಿಕ 3% ವೇತನ ಹೆಚ್ಚಳ ಸೌಲಭ್ಯ.

ಸದರಿ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್‌ಪೇಪರ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ 45 ದಿನಗಳು ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಸಲ್ಲಿಕೆಯಾಗುವ ಮತ್ತು ಅಪೂರ್ಣವಾಗಿ ಭರ್ತಿ ಮಾಡಲಾಗಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ನಮ್ಮ www.pdunippd.in ಮತ್ತು www.iphnewdelhi.in ವೆಬ್‌ಸೈಟ್‌ಗಳನ್ನು ಪರಿಶೀಲಿಸಬಹುದು. ಒಂದು ವೇಳೆ, ಯಾವುದೇ ತಿದ್ದುಪಡಿ ಉಂಟಾದಲ್ಲಿ, ಅಂತಹುದನ್ನು ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ನಿರ್ದೇಶಕರು
(ಪಿಡಿಯುಎನ್‌ಐಪಿಪಿಡಿ)

CBC 38103/12/0005/2324

PUBLIC NOTICE

This is to inform the general public that, my client Sri.D.Ravikumar S/o D.Hanumatha Rayudu, he was entered in the sale deed dated:15-06-2012 from the owner of the schedule property Smt.Radhamma and Sri.Sampangi.G,and he was acquired property through registered sale deed dated:15-06-2012, book No.1, stored in C.D.No.INRD38, Do.No.INR/1/01158/2012-13 in sub register office in Indranagar ,Bangalore. Hence if anybody having any title, interest and right in any manner over the above said document in respect of the schedule property may intimate the same in writing with documentary evidence to the undersigned with in **7 (Seven) days** from the date of this publication, failing which my client shall proceed with the loan transaction as not claimed. **SCHEDULE** : All the piece and parcel of the bearing **Site No. 4, HASB Katha No.55/1/24/1,** measuring **East to West: 25 feet** and **North to South: 20 feet, in all measuring 500 Sq feet**, situated at 1st Cross Road, Nanjareddy Colony, Murugeshpalya, Varthur Hobli, Bangalore East Taluk, Now comes under BBMP Jurisdiction, Bangalore, bounded as, **East By**: 10 feet Wide Road, **West By** : Property of Chikkamuni, **North By**: Property belongs to Yallama and **South By** : 4 feet Common passage .

Contact: S.H Singaiah Advocate
7th Main, Near S.B.I Bank, Sadashivanagara, Kunigal Road, Tumakuru. **Mob. 9844964791.**

ಶೇ 10ರಷ್ಟು ರಿಯಾಯಿತಿಯಲ್ಲಿ ಹಣ್ಣುಗಳ ಮಾರಾಟ ● ವಿವಿಧ ತಳಿಗಳ ಮಾವು ಲಭ್ಯ

ಮಾವು– ಹಲಸು ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ (ಹಾಪ್‌ಕಾಮ್ಸ್) ಹಮ್ಮಿಕೊಂಡಿರುವ ಮಾವು– ಹಲಸು ಮೇಳಕ್ಕೆ ಶುಕ್ರವಾರ ಚಾಲನೆ ದೊರೆತಿದ್ದು, ಹಾಪ್‌ಕಾಮ್ಸ್ ನಗರದ ಎಲ್ಲಾ ಮಾರಾಟ ಮಳಿಗೆಗಳಲ್ಲಿ ಪ್ರತಿ ಕೆ.ಜಿ.ಗೆ ಶೇ 10ರಷ್ಟು ರಿಯಾಯಿತಿ ನೀಡಲಾಗಿದೆ.

ನಗರದ ಲಾಲ್‌ಬಾಗ್ ಮುಖ್ಯರಸ್ತೆಯಲ್ಲಿರುವ ಹಾಪ್‌ಕಾಮ್ಸ್ ಕೇಂದ್ರ ಮಳಿಗೆಯಲ್ಲಿ ಮೇಳಕ್ಕೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಮೇಳ ಜೂನ್ 5ರವರೆಗೆ ನಡೆಯಲಿದೆ.

ಬಾದಾಮಿ, ಮಲ್ಲಿಕಾ, ರಸಪುರಿ, ಮಲಗೋವಾ ಸೇರಿ 15ಕ್ಕೂ ಅಧಿಕ ತಳಿಯ ಮಾವಿನ ಹಣ್ಣುಗಳನ್ನು ಮೇಳದಲ್ಲಿ ಇರಿಸಲಾಗಿದೆ. ವಿವಿಧ ಸ್ಥಳೀಯ ತಳಿಯ ಹಲಸು ಸಹ ಇದೆ. ಗ್ರಾಹಕರ ಅನುಕೂಲಕ್ಕೆ ತಕ್ಕಂತೆ ಮಾವಿನ ಹಣ್ಣು 3ಮತ್ತು 5 ಕೆ.ಜಿಗಳ ಪ್ಯಾಕಿಂಗ್‌ನಲ್ಲಿ ಮಾರಾಟ ವ್ಯವಸ್ಥೆ ಮಾಡಲಾಗಿದೆ. ಮೇಳಕ್ಕೆ ಬಂದವರಲ್ಲಿ ಹೆಚ್ಚಿನವರು 5 ಕೆ.ಜಿಗಳ ಬಾಕ್ಸ್‌ಗಳನ್ನು ಕೊಂಡೊಯ್ದರು. ಬಾದಾಮಿ, ಆಲ್ಫೋನ್ಸೊ ತಳಿಯ ಹಣ್ಣು ಖರೀದಿಗೆ ಗ್ರಾಹಕರು ಆಸಕ್ತಿ ತೋರಿದರು.

ಹೆಚ್ಚಿನ ಮಾರಾಟ ಗುರಿ: ಹಾಪ್‌ಕಾಮ್ಸ್ ಅಧ್ಯಕ್ಷ ದೇವರಾಜ್, 'ಈ ಬಾರಿಯ ಮೇಳದಲ್ಲಿ ಸುಮಾರು 1 ಸಾವಿರ ಟನ್ ಮಾವಿನ ಹಣ್ಣನ್ನು ಮಾರಾಟ ಮಾಡುವ ಗುರಿ ಹೊಂದಲಾಗಿದೆ. ಹಾಪ್‌ಕಾಮ್ಸ್ ವ್ಯಾಪ್ತಿಯಲ್ಲಿ ಸುಮಾರು 9 ಸಾವಿರ ರೈತರಿದ್ದಾರೆ. ರಾಮನಗರ, ಚನ್ನಪಟ್ಟಣ, ಕೋಲಾರ ಸೇರಿ ಬೆಂಗಳೂರು ಸುತ್ತ-ಮುತ್ತಲಿನ ಪ್ರದೇಶಗಳ ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳ ಮಾರಾಟ ಮಾಡಲಾಗುತ್ತಿದೆ' ಎಂದರು.

ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ ಶಂಕರ, 'ಮಾವು ಮತ್ತು ಹಲಸು ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸುವ ಜತೆಗೆ ಗ್ರಾಹಕರಿಗೆ ವಿವಿಧ ತಳಿಗಳ ರುಚಿಕರ ಹಣ್ಣುಗಳನ್ನು ರಿಯಾಯಿತಿ ದರದಲ್ಲಿ ಲಭ್ಯವಾಗುವಂತೆ ಮಾಡುವುದೇ ಈ ಮೇಳದ ಉದ್ದೇಶ. ರೈತರ ತೋಟದಿಂದ ಮಾವು ಮತ್ತು ಹಲಸಿನ ಹಣ್ಣುಗಳನ್ನು ಖರೀದಿಸಲಾಗುತ್ತದೆ. ಕಾರ್ಬೈಡ್ ರಹಿತವಾದ ರುಚಿಕರ ಹಾಗೂ ಆರೋಗ್ಯಕರ ಮಾವಿನ ಹಣ್ಣುಗಳು ನಮ್ಮ ಮಳಿಗೆಗಳಲ್ಲಿ ದೊರೆಯುತ್ತವೆ. ಆಯ್ದ 20 ಮಳಿಗೆಗಳಲ್ಲಿ ಆನ್‌ಲೈನ್ ಮೂಲಕ ಮಾರಾಟ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ' ಎಂದುರು.

'ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ದರ ಶೇ 5ರಷ್ಟು ಹೆಚ್ಚಿದೆ. ಮಳೆ ಮಾವಿಗೆ ಹಾನಿ ಮಾಡಿದ್ದು, ಫಸಲು ಕಡಿಮೆಯಿದೆ. ಆಲ್ಫೋನ್ಸೊ ಹಾಗೂ ಮಲ್ಲಿಕಾ ಖರೀದಿಗೆ ಗ್ರಾಹಕರು ಆಸಕ್ತಿ ತೋರುತ್ತಿದ್ದಾರೆ' ಎಂದು ಹಾಪ್‌ಕಾಮ್ಸ್ ಸಿಬ್ಬಂದಿ ಶಿವಣ್ಣ ಮಾಹಿತಿ ನೀಡಿದರು.

'ಉತ್ತಮ ಗುಣಮಟ್ಟದ ಹಾಗೂ ವಿವಿಧ ತಳಿಗಳ ಮಾವಿನ ಹಣ್ಣುಗಳು ಮೇಳದಲ್ಲಿ ಸಿಗುತ್ತಿವೆ. ರಾಸಾಯನಿಕ ಬಳಸದೆ ನೈಸರ್ಗಿಕವಾಗಿ ಮಾಗಿದ ಹಣ್ಣನ್ನು ಮಾರಾಟ ಮಾಡಲಾಗುತ್ತದೆ. ಇದರಿಂದ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಖರೀದಿಸುತ್ತೇವೆ' ಎಂದು ಮೇಳಕ್ಕೆ ಮೇಳಕ್ಕೆ ಬಂದಿದ್ದ ಗ್ರಾಹಕರು ಸಂತಸ ವ್ಯಕ್ತಪಡಿಸಿದರು.



ಹಾಪ್‌ಕಾಮ್ಸ್ ಮಾವು–ಹಲಸು ಮೇಳದಲ್ಲಿ ಗ್ರಾಹಕರು ಮಾವಿನ ಹಣ್ಣುಗಳನ್ನು ಖರೀದಿಸಿದರು –ಪ್ರಜಾವಾಣಿ ಚಿತ್ರ

'ಹಾಪ್‌ಕಾಮ್ಸ್‌ಗೆ ಹೆಚ್ಚಿನ ಅನುದಾನ'

'ಹಾಪ್‌ಕಾಮ್ಸ್‌ನಂತಹ ಸಂಸ್ಥೆಗಳಿಗೆ ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು. ಈ ಹಿಂದೆ ಸಚಿವನಾಗಿದ್ದಾಗ ಹಾಪ್‌ಕಾಮ್ಸ್‌ಗೆ ಹೆಚ್ಚಿನ ಅನುದಾನ ಕೊಡಿಸುವಲ್ಲಿ ಸಫಲನಾಗಿದ್ದೆ. ಮುಂದಿನ ದಿನಗಳಲ್ಲಿ ಕೂಡ ಈ ಕೆಲಸ ಮಾಡುತ್ತೇನೆ. ಹಿಂದಿನ ಸರ್ಕಾರ ₹ 12 ಕೋಟಿ ಬಡ್ಡಿರಹಿತ ಸಾಲ ನೀಡಲು ಮುಂದಾಗಿತ್ತು. ಅದನ್ನು ಈಗಿನ ಸರ್ಕಾರದಿಂದ ಕೊಡಿಸುವ ನಿಟ್ಟಿನಲ್ಲಿ ಹೆಜ್ಜೆ ಇಡುತ್ತೇನೆ' ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಶಾಸಕ ಉದಯ ಗರುಡಾಚಾರ್, 'ಹಾಪ್‌ಕಾಮ್ಸ್ ರೈತರು ಬೆಳೆದ ಬೆಳಗಳನ್ನು ನೇರವಾಗಿ ಖರೀದಿಸಿ, ಮಾರಾಟ ಮಾಡುತ್ತಿದೆ. ಈಗಾಗಲೇ ಹಾಪ್‌ಕಾಮ್ಸ್ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಕೊಡಿಸಿದ್ದೇನೆ. ಮುಂದಿನ ದಿನಗಳಲ್ಲಿ ಕೂಡ ಹಾಪ್‌ಕಾಮ್ಸ್ ಅಭಿವೃದ್ಧಿಗೆ ಅಗತ್ಯ ಸಹಾಯ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಹಾಪ್‌ಕಾಮ್ಸ್ ಮೇಳದ ದರ (ಮೇ 26)

ಮಾವು ತಳಿಗಳು	ಕೆ.ಜಿ.ಗೆ ದರ (₹ ಗಳಲ್ಲಿ)
ತೋತಾಪುರಿ	31
ನಾಟಿ ಮಾವು	36
ಬಾದಾಮಿ	132
ಆಲ್ಫೋನ್ಸೊ	139
ರಸಪುರಿ	112
ಸೆಂದೂರ	52
ಬೈಗಂಪಲ್ಲಿ	52
ಮಲಗೋವಾ	144
ಮಲ್ಲಿಕಾ	108
ದಶರಿ	126
ಕೇಸರ್	104
ಅಮರಪಲ್ಲಿ	126
ಸಕ್ಕರಗುತ್ತಿ	122
ಕಾಲಪಾಡು	139
ಇಮಾಮ್‌ಪಸಂದ್	149

ಮಾರ್ಗಸೂಚಿ ಸಿದ್ಧಪಡಿಸಲು ಮುಖ್ಯ ಆಯುಕ್ತರ ಸೂಚನೆ

ಬಿಲ್ ಪಾವತಿಗೂ ಮುನ್ನ ಮೌಲ್ಯಮಾಪನ

ಪ್ರಜಾವಾಣಿ ವಾರ್ತೆ



ತುಷಾರ್ ಗಿರಿನಾಥ್

ಬೆಂಗಳೂರು: ಬಿಲ್ ಪಾವತಿಸುವ ಮುನ್ನವೇ ಕಾಮಗಾರಿ ಮೌಲ್ಯಮಾಪನ ವ್ಯವಸ್ಥೆ ಜಾರಿಗೆ ತರಬೇಕು. ಈ ಸಂಬಂಧಿ ಮಾರ್ಗಸೂಚಿ ಸಿದ್ಧಪಡಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಹಣಕಾಸು ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆಯ ವಿವಿಧ ವಿಭಾಗದ ಪ್ರಗತಿ ಪರಿಶೀಲನೆ ನಡೆಸಿ, 'ಮಾರ್ಗಸೂಚಿ-ಯನ್ನು ಪಾಲಿಕೆಯ ಎಲ್ಲಾ ಕಚೇರಿಗಳಿಗೆ ರವಾನೆ ಮಾಡಬೇಕು' ಎಂದರು.

ಆಸ್ತಿ ತೆರಿಗೆ ಬಾಕಿ ವಸೂಲಿ ಕಾರ್ಯ ಚುರುಕುಗೊಳಿಸಬೇಕು. ಯಾವುದೇ ಕಾಗದ ವ್ಯವಹಾರ ಇಲ್ಲದಂತೆ ಇ-ಆಸ್ತಿ ತಂತ್ರಾಂಶವನ್ನು ಅಧಿಕೃತವಾಗಿ ಚಾಲನೆ ನೀಡಬೇಕು. ಇದು ತೆರಿಗೆ ಪಾವತಿ ಮಾಡುವವರಿಗೆ ಅನುಕೂಲ ಆಗಲಿದೆ. ಈ ವ್ಯವಸ್ಥೆ ಜಾರಿಗೆ ಬಾಕಿ ಇರುವ ಎಲ್ಲಾ ಕಾರ್ಯಗಳನ್ನು ಪೂರ್ಣಗೊ-ಳಿಸಬೇಕು, ಬಿ– ಖಾತೆಯಿಂದ ಎ– ಖಾತೆಗೆ ವರ್ಗಾವಣೆ ಆಗಿರುವ ಆಸ್ತಿಗಳ ಸಂಪೂರ್ಣ ವರದಿಯನ್ನು ನೀಡಬೇಕು. ವಲಯವಾರು ತಂಡ ರಚಿಸಿ ಕೆಲಸ ಮಾಡುವಂತೆ ತಿಳಿಸಿದರು.

ಎಲ್ಲಾ ಇಂದಿರಾ ಕ್ಯಾಂಟೀನ್‌ಗಳಿಗೂ ಬಣ್ಣ, ವಿದ್ಯುತ್ ದೀಪ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಅಳವಡಿಸಲು ತಕ್ಷಣಕ್ಕೆ ₹1 ಲಕ್ಷ ನೀಡಲಾಗುವುದು. ಚಾಲ್ತಿಯಲ್ಲಿ ಇಲ್ಲದ ಕ್ಯಾಂಟೀನ್ ಮತ್ತು ಸಂಚಾರಿ ಕ್ಯಾಂಟೀನ್‌ಗಳ ಮರು ಚಾಲನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಇ-ಆಡಳಿತ ಇಲಾಖೆಯ ಕಾರ್ಯದರ್ಶಿ ಪೊನ್ನುರಾಜ್, ವಿಶೇಷ ಆಯುಕ್ತರಾದ ಜಯರಾಮ ರಾಯಪುರ, ಆರ್.ಎಲ್. ದೀಪಕ್, ತ್ರಿಲೋಕ್ ಚಂದ್ರ, ಕೆ. ಹರೀಶ್‌ಕುಮಾರ್, ಪ್ರೀತಿ ಗೆಹ್ಲೋಟ್, ರವೀಂದ್ರ, ರೆಡ್ಡಿ ಶಂಕರ್ ಬಾಬು ಇದ್ದರು.

ಮುಂಗಾರು: ನೋಡಲ್ ಅಧಿಕಾರಿಗಳ ನೇಮಕಕ್ಕೆ ನಿರ್ದೇಶನ

ಜೂನ್‌ನಲ್ಲಿ ಮುಂಗಾರು ಮಳೆ ಆರಂಭವಾಗುತ್ತಿದ್ದು, ಪೂರ್ವ ತಯಾರಿಗೆ ಸಂಬಂಧಿಸಿದಂತೆ ಎಂಟು ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು ಎಂದು ತುಷಾರ್ ಗಿರಿನಾಥ್ ನಿರ್ದೇಶಿಸಿದರು..

ವಲಯವಾರು ನೋಡಲ್ ಅಧಿಕಾರಿಗಳನ್ನು ನೇಮಿಸಿ ಚೆಸ್ಕಾಂ, ಜಲ ಮಂಡಲಿ, ಅಗ್ನಿ ಶಾಮಕ ದಳ, ಎನ್‌ಡಿಆರ್‌ಎಫ್ ಸಿಬ್ಬಂದಿ ಒಳಗೊಂಡಂತೆ ಪ್ರತ್ಯೇಕ ತಂಡ ರಚನೆ ಮಾಡಬೇಕು. ವಲಯವಾರು ಮಳೆ ಪ್ರವಾಹ ನಿಯಂತ್ರಿಸಲು ಬೇಕಾಗುವ ವಸ್ತುಗಳ(ನೀರಿನ ಪಂಪ್, ಮರ ಕತ್ತರಿಸುವ ಯಂತ್ರ, ಇತ್ಯಾದಿ) ಪಟ್ಟಿಯನ್ನು ನೀಡಬೇಕು. ಅರಣ್ಯ ವಿಭಾಗದವರು ಶಿಥಿಲವಾಗಿರುವ ಮರಗಳ ಬಗ್ಗೆ ಹೊಸದಾಗಿ ವರದಿ ನೀಡಬೇಕು ಎಂದರು.

ಇಬ್ಬರ ನಡುವಿನ ಜಗಳ ಬಿಡಿಸಲು ಬಂದ ವ್ಯಕ್ತಿಯ ಕೊಲೆ

ರಾಮನಗರ: ತಾಲ್ಲೂಕಿನ ಹುಚ್ಚಮ್ಮನ ದೊಡ್ಡಿ ಬಳಿ ಗುರುವಾರ ರಾತ್ರಿ ಇಬ್ಬರ ನಡುವಿನ ಜಗಳ ಬಿಡಿಸಲು ಬಂದ ವ್ಯಕ್ತಿಯೇ ಕೊಲೆ ಆಗಿದ್ದಾರೆ.

ಮದ್ದೂರಿನ ಮಂಜು (27) ಕೊಲೆಗೀಡಾದ ವ್ಯಕ್ತಿ. ಟಿಪ್ಪರ್ ಲಾರಿ ಮಾಲೀಕ ರಘು ಮತ್ತು ಚಾಲಕ ಮಂಜು (31) ಎಂಬುವರು ಸಂಬಂಧಿಕರಾಗಿದ್ದು, ರಾತ್ರಿ ಈ ಇಬ್ಬರ ನಡುವೆ ಗಲಾಟೆ ನಡೆದಿದೆ. ಈ ಇಬ್ಬರ ಜಗಳ ಬಿಡಿಸಲು ಬಂದ ಮದ್ದೂರಿನ ಮಂಜು ಹತ್ಯೆಗೀಡಾಗಿದ್ದಾರೆ. ಕೊಲೆಗೆ ಕಾರಣ ತಿಳಿದು ಬಂದಿಲ್ಲ. ಕೊಲೆ ಆರೋಪಿಗಳು ಪರಾರಿ ಆಗಿದ್ದಾರೆ. ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಂಡೀಪುರದಲ್ಲಿ ಮರಿಯಾನೆ ಸಾವು

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ವ್ಯಾಪ್ತಿಯ ಕೆಕ್ಕನಹಳ್ಳಿ ಬೀಟ್‌ನಲ್ಲಿ ಒಂದು ವರ್ಷದ ಗಂಡು ಮರಿಯಾನೆ ಮೃತಪಟ್ಟಿದೆ.

ಕಾಡಿನಿಂದ ಆಹಾರ ಅರಸಿ ತಾಯಿಯೊಂದಿಗೆ ಬಂದಿದ್ದ ಮರಿಯಾನೆ, ಹಿಂಡಿನಿಂದ ಬೇರ್ಪಟ್ಟಿದೆ. ಸರಿಯಾದ ಸಮಯಕ್ಕೆ ಆಹಾರ ಸಿಗದೆ ನಿತ್ರಾಣಗೊಂಡು ಎರಡು ದಿನದ ಹಿಂದೆ ಮೃತಪಟ್ಟಿದೆ ಎಂದು ಶಂಕಿಸ ಲಾಗಿದೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಅರಣ್ಯ ರಕ್ಷಕರು ಗಸ್ತು ತಿರುಗುವ ವೇಳೆ ಆನೆ ಮೃತಪಟ್ಟಿ-ರುವುದು ಗೊತ್ತಾಗಿದೆ. ತಕ್ಷಣವೇ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ.

ಎಸಿಎಫ್ ನವೀನ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪಶು ವೈದ್ಯಾಧಿಕಾರಿ ಡಾ.ಮೋಹನ್ ಕುಮಾರ್ ಮರಣೋತ್ತರ ಪರೀಕ್ಷೆ ನಡೆಸಿದರು.

ಇನ್ನೂ ಆನೆಯ ಅಂಗಾಂಗ ಮಾದರಿಯನ್ನು ವಿಧಿ ವಿಜ್ಞಾನ ಪ್ರಾ-ಯೋಗಾಲಯಕ್ಕೆ ಕಳುಹಿಸಲಾಗಿದ್ದು, ವರದಿ ಬಂದ ನಂತರವಷ್ಟೇ ಆನೆ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಪಶು ವೈದ್ಯಾಧಿಕಾರಿ ಡಾ.ಮೋಹನ್ ಕುಮಾರ್ ಮಾಹಿತಿ ನೀಡಿದ್ದಾರೆ.

ಕ್ರೈಸ್ತ ಪ್ರಾರ್ಥನಾ ಮಂದಿರ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಉಡುಪಿ: ಪುತ್ತೂರು ಗ್ರಾಮದ ಕೊಡಂಕೂರಿನಲ್ಲಿ ನಿರ್ಮಾಣ ಹಂತದಲ್ಲಿರುವ ಕ್ರೈಸ್ತ ಪ್ರಾರ್ಥನಾ ಮಂದಿರದ ವಿರುದ್ಧ ಸ್ಥಳೀಯರು ಹಾಗೂ ಹಿಂದುತ್ವವಾದಿ ಸಂಘಟನೆಗಳ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದ್ದಾರೆ.

ಮಂಗಳೂರು ಬಿಕರ್ನಕಟ್ಟೆಯ ಸಂಸ್ಥೆಯೊಂದು ಕೊಡಂಕೂರಿನ 1.73 ಎಕರೆ ಪ್ರದೇಶದಲ್ಲಿ ಪ್ರಾರ್ಥನಾ ಮಂದಿರದ ಕಟ್ಟಡ ನಿರ್ಮಿಸುತ್ತಿದೆ. ಇಲ್ಲಿ ಮತಾಂತರದ ಹುನ್ನಾರ ನಡೆದಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಸ್ಥಳಕ್ಕೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಭೇಟಿ ನೀಡಿ ಕಾಮಗಾರಿ ನಿಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ದಾಖಲೆಗಳನ್ನು ಪರೀಕ್ಷಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.


ನಗರದಲ್ಲಿ ಇಂದು

ಸಲ್ಲಾಪುರದಮ್ಮ ಅಕ್ಕ ತಂಗಿಯರ ಜೀರ್ಣೋದ್ಧಾರ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ: ಸಾಮೂಹಿಕ ಪ್ರಾರ್ಥನೆ, ಗಣಪತಿ ಪೂಜೆ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಸ್ಥಳ: ಸಲ್ಲಾಪುರದಮ್ಮ ದೇವಸ್ಥಾನ, ಸುಂಕದಕಟ್ಟೆ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 8 ಹಾಗೂ ಸಂಜೆ 6ರಿಂದ

ಬೃಹತ್ ರಕ್ತ ಹಾಗೂ ಅಂಗಾಂಗ ದಾನ ಜಾಗೃತಿ ಶಿಬಿರ: ಉದ್ಘಾಟನೆ: ರಂದೀಪ್ ಡಿ., ಡಿ.ವಿ. ಗುರುಪ್ರಸಾದ್, ಗೌರವ ಅತಿಥಿ: ಅಶೋಕ್ ಹಾರನಹಳ್ಳಿ, ಡಾ. ಮುರಳೀಧರ್, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಂಘ, ಸ್ಥಳ: ಗಾಯತ್ರಿ ಭವನ, 9ನೇ ಮುಖ್ಯ ರಸ್ತೆ, ಸಿದ್ದಣ್ಣ ಲೇಔಟ್, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತ್ಯುತ್ಸವ: ಉದ್ಘಾಟನೆ: ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಮುಖ್ಯ ಅತಿಥಿಗಳು: ಎನ್. ನಾಗಾಂಬಿಕಾ ದೇವಿ, ರಂದೀಪ್ ಡಿ., ಶಾಂತಾ ಹೊಸಮನಿ, ಅಭಿನಂದನೆ ಸ್ವೀಕರಿಸುವವರು: ಚಂದ್ರಕಾಂತ್ ಶಿವಕೇರಿ, ಅಪ್ಪಗೆರೆ ತಿಮ್ಮರಾಜು, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ–ಎಸ್ಟಿ ನೌಕರರ ಸಮನ್ವಯ ಸಮಿತಿ, ಸ್ಥಳ: ಚನ್ನಬಸಪ್ಪ ಸಭಾಂಗಣ, ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಜಾಕಿಯಾ ಶಂಕರ್ ಪಾಠಕ್ ಪ್ರಶಸ್ತಿ ಪ್ರದಾನ: ಮುಖ್ಯ ಅತಿಥಿ: ಚಿರಂಜೀವಿ ಸಿಂಗ್, ಗೌರವ ಅತಿಥಿ: ಕೆ.ಆರ್. ನರಸಿಂಹ ಮೂರ್ತಿ, ಪ್ರಶಸ್ತಿ ಪುರಸ್ಕೃತರು: ವನಮಾಲಾ ವಿಶ್ವನಾಥ್, ಎಚ್.ಎಂ. ವನಿತಾ, ಪ್ರಿನ್ಸಿ ಬಿಲ್ಲಾ, ಆಯೋಜನೆ ಹಾಗೂ ಸ್ಥಳ: ಭಾರತೀಯ ವಿದ್ಯಾ ಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 11



ಎಂ.ಎ. ಸಲೀಂ

'ಡಿಜಿಟಲ್ ತಂತ್ರಜ್ಞಾನದ ಮೂಲಕ ರಸ್ತೆ ಸುರಕ್ಷತೆ' ವಿಚಾರಸಂಕಿರಣ: ಮುಖ್ಯ ಅತಿಥಿಗಳು: ಎಂ.ಎ. ಸಲೀಂ, ಎಂ. ಲಕ್ಷ್ಮಣ, ಅಲೋಕನಾಥ್, ಕೆ.ಆರ್. ರೇಖಾ, ಎ.ಬಿ. ರಾಜೇಂದ್ರ, ಎಂಟಿ ರಂಗಾರೆಡ್ಡಿ, ಆಯೋಜನೆ: ಭಾರತೀಯ ಎಂಜಿನಿಯರ್‌ಗಳ ಸಂಸ್ಥೆ, ಸ್ಥಳ: ಸರ್.ಎಂ.ವಿ. ಆಡಿಟೋರಿಯಂ, ನಂ.3, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಕಲಾಕೀರ್ತಿ ಸಮಾವೇಶ: ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ, ಆಯೋಜನೆ: ಹೆರಿಟೇಜ್ ಫೌಂಡೇಷನ್ ಆಫ್ ಆರ್ಟ್ ಆ್ಯಂಡ್ ಕಲ್ಚರ್, ಸ್ಥಳ: ಬಾಲ ಭವನ, ಕಬ್ಬನ್ ಉದ್ಯಾನ, ಮಧ್ಯಾಹ್ನ 3

'ಕಲಾ ಕುಸುಮಾಂಜಲಿ' ಕೆ.ಬಿ. ಫೌಂಡೇಷನ್ ದ್ವಿತೀಯ ವಾರ್ಷಿಕೋತ್ಸವ: ಉದ್ಘಾಟನೆ: ವೂಡೇ ಪಿ.ಕೃಷ್ಣ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಆಯೋಜನೆ: ಕೃಷ್ಣಮೂರ್ತಿ ಬಸಪ್ಪ ಫೌಂಡೇಷನ್, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 4

ಊಂಜಲ್ ಸಂಗೀತೋತ್ಸವ: ಗಾಯನ: ರಮ್ಯಾ ಸುಧೀರ್, ಕೀ-ಬೋರ್ಡ್: ಬಿ.ಆರ್. ಪ್ರಕಾಶ್, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವಯ್ಯಾಲಿಕಾವಲ್, ಸಂಜೆ 6

ದೀಕ್ಷಿತರ ಆರಾಧನೆ–ನೃತ್ಯ ಕಾರ್ಯಕ್ರಮ: ರಕ್ಷಾ ಕಾರ್ತಿಕ್ ಮತ್ತು ಶಿಷ್ಯರಿಂದ, ಮುಖ್ಯ ಅತಿಥಿ: ಪ್ರೊ.ಎಸ್. ಸಡಗೋಪನ್, ಗೌರವ ಅತಿಥಿ: ಪ್ರವೀಣ್ ಕೆ.ಎಸ್., ಆರ್. ವಿ. ರಾಘವೇಂದ್ರ, ಎಂ.ಎಸ್. ಶ್ರೀಲಕ್ಷ್ಮಿ, ಉದಯ್ ಕುಮಾರ್ ಭಾಸ್ಕರ, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್, ಸ್ಥಳ: ಯುವಕ ಸಂಘ, ಜಯನಗರ 4ನೇ ಹಂತ, ಸಂಜೆ 5.30

ಕೆ.ಎನ್. ಕೃಷ್ಣಮೂರ್ತಿ ಹಾಗೂ ಪಿ. ಭುವನೇಶ್ವರಯ್ಯ ಸ್ಮರಣಾರ್ಥ ಸಂಗೀತ ಕಛೇರಿ: ಎಂ.ಬಿ. ಹರಿಹರನ್, ಎಸ್. ಅಶೋಕ್, ಟಿ.ಎಸ್. ಕೃಷ್ಣಮೂರ್ತಿ, ಕೆ. ವಿಷ್ಣುವರ್ಧನ್, ಆರ್. ನರಸಿಂಹನ್, ಆಯೋಜನೆ: ವಿದ್ವಾನ್ ಕೆ.ಎನ್. ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಜಯಮಾರುತಿ ದೇವಸ್ಥಾನ, ಕಮಲಾ ನಗರ ಮುಖ್ಯರಸ್ತೆ, ಬಸವೇಶ್ವರನಗರ, ಸಂಜೆ 6

ಪಿಎಸ್‌ಐ ಮನೆಗೆ ಬೆಂಕಿ ಇಟ್ಟ ಕಿಡಿಗೇಡಿಗಳು

ಪ್ರಜಾವಾಣಿ ವಾರ್ತೆ

ಕೊಣನೂರು (ಹಾಸನ ಜಿಲ್ಲೆ): ಇಲ್ಲಿನ ಪಿಎಸ್‌ಐ ಶೋಭಾ ಅವರ ಬಾಡಿಗೆ ಮನೆಯ ಕೋಣೆಯೊಂದರ ಕಿಟಕಿ ಒಡೆದು ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ್ದು, ₹2.15 ಲಕ್ಷ ಬೆಲೆಯ ವಸ್ತುಗಳು ಸುಟ್ಟಿವೆ.

ಬುಧವಾರ ರಾತ್ರಿ ಘಟನೆ ನಡೆದಿದ್ದು, ರಜೆ ಮೇಲೆ ತೆರಳಿದ್ದ ಅಧಿಕಾರಿಯು ಶುಕ್ರವಾರ ವಾಪಸಾದ ಬಳಿಕ ಗೊತ್ತಾಗಿದೆ.

₹ 80 ಸಾವಿರ ಮೌಲ್ಯದ ಲ್ಯಾಪ್‌ಟಾಪ್, ₹ 25 ಸಾವಿರ ಮೌಲ್ಯದ ಡ್ರೆಸ್ಸಿಂಗ್ ಟೇಬಲ್, ₹60 ಸಾವಿರ ಮೌಲ್ಯದ ಮಂಚ, ₹50 ಸಾವಿರ ಬೆಲೆಬಾಳುವ ಬಟ್ಟೆಗಳು ಮತ್ತು ಕೆಲ ಮೂಲ ದಾಖಲಾತಿಗಳು ಸುಟ್ಟಿವೆ.

ಡಿಎಸ್‌ಪಿ ಮುರಳೀಧರ್, ವೃತ್ತ ನಿರೀಕ್ಷಕ ರಘುಪತಿ ಸ್ಥಳಕ್ಕೆ ಭೇಟಿ ನೀಡಿದ್ದರು. ಶ್ವಾನದಳ ಮತ್ತು ಬೆರಳಚ್ಚು ತಜ್ಞರನ್ನು ಕರೆಸಲಾಗಿತ್ತು. ಪ್ರಕರಣ ದಾಖಲಾಗಿದೆ.



ಕೊಣನೂರು ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಮನೆಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದ ಹಿನ್ನೆಲೆ ಡಿಎಸ್ಪಿ ಮುರಳೀಧರ್ ಮತ್ತು ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು

ತಂಬಾಕು: ಪರ್ಯಾಯ ಬೆಳೆಗೆ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ತಂಬಾಕು ಮುಕ್ತ ಕರ್ನಾಟಕ ಒಕ್ಕೂಟವು ಇದೇ 31ರಂದು ಬೆಳಿಗ್ಗೆ 10 ಗಂಟೆಗೆ 'ಪರ್ಯಾಯ ಬೆಳೆಗಳ ಅನ್ವೇಷಣೆ: ಸವಾಲುಗಳು ಮತ್ತು ಅವಕಾಶಗಳು' ಎಂಬ ವಿಷಯದ ಮೇಲೆ ಸಮಾಲೋಚನಾ ಕಾರ್ಯಕ್ರಮವನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಆಯೋಜಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಚಾಲಕ ಎಸ್.ಜೆ. ಚಂದರ್, 'ಕಾರ್ಯಕ್ರಮದಲ್ಲಿ ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ, ಪರಿಸರವಾದಿ ಸುರೇಶ್ ಹೆಬ್ಳೀಕರ್, ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ. ಸುರೇಶ್ ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯದ ವಿವಿಧ ಭಾಗಗಳ ರೈತರು, ಕೃಷಿ ವಿಜ್ಞಾನಿಗಳು, ಸಾರ್ವಜನಿಕ ಆರೋಗ್ಯ ತಜ್ಞರು ಭಾಗವಹಿಸಲಿದ್ದಾರೆ. ಪರ್ಯಾಯ ಬೆಳೆಗಳಲ್ಲಿ ಅನುಭವ ಹೊಂದಿರುವ ಅರ್ಥಶಾಸ್ತ್ರಜ್ಞ ಮತ್ತು ಕೃಷಿ ವಿಜ್ಞಾನಿಗಳು ತಮ್ಮ ಅನುಭವವನ್ನು ಹಂಚಿಕೊಳ್ಳಲಿದ್ದಾರೆ. ಆರೋಗ್ಯ ತಜ್ಞರು ತಂಬಾಕಿನ ಹಾನಿಕಾರಕ ಪರಿಣಾಮಗಳ ಕುರಿತು ಮಾಹಿತಿ ನೀಡಲಿದ್ದಾರೆ' ಎಂದು ಹೇಳಿದರು.

ಒಕ್ಕೂಟದ ಅಧ್ಯಕ್ಷ ಡಾ. ರಮೇಶ್ ಬಿಳಿಮಗ್ಗ, 'ರಾಜ್ಯ ಸರ್ಕಾರವು ತಂಬಾಕು ಬೆಳೆಯಲು ನೀಡುತ್ತಿರುವ ಸಬ್ಸಿಡಿಯನ್ನು ಕ್ರಮೇಣ ಕಡಿಮೆಗೊಳಿಸಿ, ಪರ್ಯಾಯ ಬೆಳೆ ಬೆಳೆಯಲು ಪ್ರೋತ್ಸಾಹಿಸಬೇಕು. ತಂಬಾಕು ಬೆಳೆಯುವುದರಿಂದ ರೈತರು ಮತ್ತು ಸರ್ಕಾರಕ್ಕೆ ಯಾವುದೇ ಲಾಭವಿಲ್ಲ. ಇದನ್ನು ಬಳಸುವುದರಿಂದ ಅನಾರೋಗ್ಯಕ್ಕೆ ತುತ್ತಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅವರ ಚಿಕಿತ್ಸೆಗೆಂದು ಸರ್ಕಾರವು ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಉಪನಗರ ರೈಲು: 12 ನಿಲ್ದಾಣ ನಿರ್ಮಾಣಕ್ಕೆ ಟೆಂಡರ್



ಉಪನಗರ ರೈಲು ನಿಲ್ದಾಣಗಳ ವಿನ್ಯಾಸ

₹15,767 ಕೋಟಿ ಯೋಜನೆಯ ಒಟ್ಟು ಮೊತ್ತ

ಅಂಕಿ-ಅಂಶಗಳು

20:20:60 ಕೇಂದ್ರ, ರಾಜ್ಯ ಮತ್ತು ಬಾಹ್ಯ ಹಣಕಾಸು ಸಂಸ್ಥೆಗಳು ಭರಿಸುವ ಪಾಲು	**2020ರ ಅ.21** ಯೋಜನೆಗೆ ಅನುಮೋದನೆ ದೊರೆತ ದಿನಾಂಕ	**2,190** ಯೋಜನೆ ಪೂರ್ಣಗೊಳಿಸಲು ನಿಗದಿ ಮಾಡಿರುವ ದಿನಗಳು	**1,244** ಬಾಕಿ ಇರುವ ದಿನಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊನೆಗೂ ಉಪನಗರ ರೈಲು ಯೋಜನೆಯ ಕಾಮಗಾರಿ ಆರಂಭಿಸಲು ಕೆ-ರೈಡ್ (ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ) ಸಿದ್ಧತೆ ಚುರುಕುಗೊಳಿಸಿದೆ. ಮಲ್ಲಿಗೆ ಕಾರಿಡಾರ್‌ನಲ್ಲಿ(ಬೈಯಪ್ಪನಹಳ್ಳಿ- ಚಿಕ್ಕಬಾಣಾವರ) 12 ನಿಲ್ದಾಣಗಳ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಿದೆ.

ಬೆನ್ನಿಗಾನಹಳ್ಳಿ, ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕನಗರ, ಹೆಬ್ಬಾಳ, ಮತ್ತಿಕೆರೆ, ಯಶವಂತಪುರ, ಶೆಟ್ಟಿಹಳ್ಳಿ, ಮೈದರಹಳ್ಳಿ, ಚಿಕ್ಕಬಾಣಾವರ ನಿಲ್ದಾಣಗಳ ವಿನ್ಯಾಸ ಅಂತಿಮಗೊಳಿಸಿದೆ. ಕಾಮಗಾರಿ ಗುತ್ತಿಗೆ ನೀಡಲು ಟೆಂಡರ್ ಆಹ್ವಾನಿಸಿದೆ.

12 ನಿಲ್ದಾಣಗಳಲ್ಲಿ ಎರಡು ಎತ್ತರಿಸಿದ ನಿಲ್ದಾಣಗಳು, ಎರಡು ಎತ್ತರಿಸಿದ ಇಂಟರ್ ಚೇಂಜ್ ನಿಲ್ದಾಣಗಳು, ಎಂಟು ನೆಲಸ್ತರದ ನಿಲ್ದಾಣಗಳನ್ನು ನಿರ್ಮಾಣ ಮಾಡಲು ಮುಂದಾಗಿದೆ. ಎತ್ತರಿಸಿದ ಪಾದಚಾರಿ ಉಕ್ಕಿನ ಮಾರ್ಗ, ಮೇಲ್ಛಾವಣಿಗಳ ರಚನೆ, ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಬಿಡ್ ಸಲ್ಲಿಸಲು ಆಗಸ್ಟ್ 8 ಕೊನೆಯ ದಿನಾವಾಗಿದೆ ಎಂದು ಕೆ-ರೈಡ್ ವಿವರಿಸಿದೆ.

ಬೆಂಗಳೂರಿನಲ್ಲಿ ಉಪನಗರ ರೈಲು ಯೋಜನೆಯಡಿ ನಾಲ್ಕು ಕಾರಿಡಾರ್‌ಗಳು ನಿರ್ಮಾಣವಾಗುತ್ತಿವೆ. ಮೊದಲ ಹಂತದಲ್ಲಿ ಮಲ್ಲಿಗೆ ಕಾರಿಡಾರ್‌ನಲ್ಲಿ ಕಾಮಗಾರಿ ಆರಂಭವಾಗಿದೆ. ಬಾಕಿ ಮೂರು ಕಾರಿಡಾರ್‌ನಲ್ಲಿ ಕಾಮಗಾರಿ ಆರಂಭವಾಗಿಲ್ಲ.

ಕೆಎಸ್‌ಆರ್ ರೈಲು ನಿಲ್ದಾಣದಿಂದ ದೇವನಹಳ್ಳಿಗೆ ಸಂಪರ್ಕ ಕಲ್ಪಿಸುವ ಸಂಪಿಗೆ (ಕಾರಿಡಾರ್-1) ಕಾರಿಡಾರ್‌ಗೆ ಮೊದಲ ಆದ್ಯತೆ ನೀಡಬೇಕು ಎಂಬ ಒತ್ತಡ ಇತ್ತು. ಆದರೂ, ಕಾರಿಡಾರ್-2 ಕಾಮಗಾರಿ ಆರಂಭಿಸಲು ಕೆ-ರೈಡ್ ಉತ್ಸುಕತೆ ತೋರಿಸಿದೆ. ಆದ್ಯತಾ ಕಾರಿಡಾರ್ ಎಂದು ಹೇಳಿಕೊಂಡಿದೆ.

2019ರ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಯನ್ನು ಉಲ್ಲೇಖಿಸಲಾಯಿತು. 2020ರ ಅಕ್ಟೋಬರ್ 21ರಂದು ರೈಲ್ವೆ ಮಂಡಳಿಯಿಂದ ಇದಕ್ಕೆ ಅನುಮೋದನೆಯೂ ದೊರೆಯಿತು.

ಯೋಜನೆ ಅನುಷ್ಠಾನದ ಹೊಣೆ ಹೊತ್ತಿರುವ ಕೆ-ರೈಡ್, ಈ ಯೋಜನೆಯನ್ನು ನಾಲ್ಕು ಕಾರಿಡಾರ್‌ಗಳನ್ನಾಗಿ ವಿಂಗಡಿಸಿದೆ. 2,190 ದಿನಗಳ (6 ವರ್ಷ) ಕಾಲಮಿತಿ ನಿಗದಿ ಮಾಡಿಕೊಂಡಿದೆ. ಅದರಲ್ಲಿ ಈಗ ಶೇ 40ರಷ್ಟು ದಿನಗಳು ಪೂರ್ಣಗೊಂಡಿವೆ. ಆದರೆ, ಕಾಮಗಾರಿ ಭೌತಿಕವಾಗಿ ಶೇ1ರಷ್ಟು ಮಾತ್ರ ಪ್ರಗತಿ ಕಂಡಿದೆ ಎಂದು ರೈಲ್ವೆ ಹೋರಾಟಗಾರರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಕೃಷಿ ಕಾಯ್ದೆ ವಾಪಸ್‌ಗೆ ಒತ್ತಾಯ

ಅನ್ನದಾತರ ಸಮಸ್ಯೆಗಳಿಗೆ ಸ್ಪಂದಿಸಲು ಸರ್ಕಾರಕ್ಕೆ ರೈತ ಸಂಘ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ– ಸುಧಾರಣೆ, ಎಪಿಎಂಸಿ ತಿದ್ದುಪಡಿ, ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯ್ದೆಯನ್ನು ರಾಜ್ಯ ಸರ್ಕಾರ ವಾಪಸ್ ಪಡೆಯಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಸಕ ಬಿ.ಆರ್. ಪಾಟೀಲ, 'ರೈತರು ಅನುಭವಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ರೈತ ಮುಖಂಡರ ಜತೆ ಸಭೆ ನಡೆಸಿ, ಬಳಿಕ ಶಾಸಕಾಂಗ ಸಭೆಯಲ್ಲಿ ಚರ್ಚಿಸಲಾಗುತ್ತದೆ. ಆಗಲೂ ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ರೈತ ಸಂಘಟನೆಯೊಂದಿಗೆ ಹೋರಾಟದಲ್ಲಿ ಪಾಲ್ಗೊಳ್ಳಲಾಗುವುದು' ಎಂದು ತಿಳಿಸಿದರು.

ಕೃಷಿ ತಜ್ಞ ಪ್ರಕಾಶ್ ಕಮ್ಮರಡಿ, 'ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿತ್ತು. ಅಧಿಕಾರಕ್ಕೇರಿದ ಕಾಂಗ್ರೆಸ್, ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. ರೈತರು ಬೆಳೆದ ಬೆಳೆಗೆ ಸೂಕ್ತ ಬೆಂಬಲ ಬೆಲೆ ನಿಗದಿಪಡಿಸಬೇಕು. ಇದರಿಂದ ರೈತರಿಗೆ ಶೇ 50ರಷ್ಟು ಲಾಭವಾಗಬೇಕು. ರೈತರ ಹೆಸರಿನಲ್ಲಿಯೇ ಭೂಮಿ ಇರಬೇಕು. ಬೆಳೆದ ಬೆಳೆಯ ಸಂಪೂರ್ಣ ಲಾಭವನ್ನು ರೈತನೇ ಪಡೆಯಬೇಕು. ಈ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಬೇಕಾದ ಅಂಶಗಳ ಬಗ್ಗೆ ಸರ್ಕಾರದ ಜತೆಗೆ ಸಭೆ ನಡೆಸಲಾಗುತ್ತದೆ' ಎಂದು ಹೇಳಿದರು.

ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ, 'ಕಳೆದ ಬಿಜೆಪಿ ಸರ್ಕಾರವು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ತಿದ್ದುಪಡಿಗಳನ್ನು ತಂದು, ರೈತರಿಗೆ ನಾನಾ ಸಮಸ್ಯೆಗಳನ್ನು ತಂದೊಡ್ಡಿದೆ. ಇದರ ಪರಿಣಾಮ ರಾಜ್ಯದಾದ್ಯಂತ ರೈತ ಸಂಘಟನೆಗಳು ಚುನಾವಣೆಯಲ್ಲಿ ತಕ್ಕ ಉತ್ತರ ಕೊಟ್ಟಿವೆ. ಕಾಂಗ್ರೆಸ್ ಸರ್ಕಾರಕ್ಕೆ ರೈತರ ಸಮಸ್ಯೆಗಳ ಬಗ್ಗೆ ನೈತಿಕ ಸಲಹೆಗಳನ್ನು ನೀಡಲಾಗುತ್ತದೆ. ಕಾಯ್ದೆಗಳ ಬಗ್ಗೆ ಮುಂದಿನ ಸದನದಲ್ಲಿ ಚರ್ಚಿಸಿ, ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ವಿರೋಧ ಪಕ್ಷದ ರೀತಿಯಲ್ಲಿ ಹೋರಾಟ ಮಾಡಲಾಗುತ್ತದೆ' ಎಂದು ಎಚ್ಚರಿಸಿದರು.

ಸಿಪಿ ಡಿಪ್ಲೊಮಾಕ್ಕೆ ಅವಕಾಶ

ಬೆಂಗಳೂರು: ನಗರದ ಕೆ.ಆರ್. ವೃತ್ತದ ಎಸ್‌ಜೆಪಿ ಆವರಣದ ಸರ್ಕಾರಿ ಜಿ.ಆರ್. ಇನ್‌ಸ್ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್ ಪಾಲಿಟೆಕ್ನಿಕ್‌ನಲ್ಲಿ ನಾನ್ ಎಂಜಿನಿಯರಿಂಗ್ ಸಿಪಿ ಡಿಪ್ಲೊಮಾಗೆ ಕೆಲವೇ ಸೀಟ್‌ಗಳು ಉಳಿದಿದ್ದು ವಾಣಿಜ್ಯ ಶಿಕ್ಷಣ ಪಡೆಯಲು ಆಸಕ್ತರಾದ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳು ತಕ್ಷಣವೇ ಪ್ರವೇಶ ಪಡೆಯಬಹುದಾಗಿದೆ.

ಮೊದಲ ಬಂದವರಿಗೆ ಮೊದಲ ಅವಕಾಶ ನೀಡಲಾಗುವುದು. ಜೂನ್ 3 ಕೊನೆಯ ದಿನವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: ಮೊಬೈಲ್– 98800 39144

ಕೆರೆಯಲ್ಲಿ ಮುಳುಗಿ ಮಕ್ಕಳ ಸಾವು

ಕೆಜಿಎಫ್: ಸೂರಪಲ್ಲಿ ಗ್ರಾಮದ ಕೆರೆಯಲ್ಲಿ ಈಜಲು ಹೋಗಿದ್ದ ಇಬ್ಬರು ಮಕ್ಕಳು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಗೋಣಮಾಕನಹಳ್ಳಿ ಕಾರ್ತಿಕ್ (14) ಮತ್ತು ಲೋಕೇಶ್ವರಿ (11) ಮೃತರು. ಈಜಲು ಹೋಗಿದ್ದ ಮಕ್ಕಳು ಕೆರೆಯಲ್ಲಿ ತುಂಬಿದ್ದ ಕೆಸರಿನಲ್ಲಿ ಸಿಲುಕಿ ಮೃತಪಟ್ಟಿದ್ದಾರೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದ್ದಾರೆ.



ನಗರದ ಅರಮನೆ ಮೈದಾನದಲ್ಲಿ ಪ್ರಿಂಟ್ ಮತ್ತು ಪ್ಯಾಕ್ ಟೆಕ್ ವರ್ಲ್ಡ್ ಎಕ್ಸ್‌ಪೋ ಅನ್ನು ಸಚಿವ ರಾಮಲಿಂಗಾರೆಡ್ಡಿ ಉದ್ಘಾಟಿಸಿದರು. ರಾಜ್ಯ ಮುದ್ರಕರ ಸಂಘದ ಅಧ್ಯಕ್ಷ ಸಿ.ಆರ್. ಜನಾರ್ದನ, ಎಸ್‌ಐಸಿಸಿಐ ಮತ್ತು ಅಸೋಚಾಮ್ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಜಾಕೋಬ್ ಕ್ರಾಸ್ತಾ ಹಾಗೂ ಎಸ್‌ವಿಎಸ್ ಕೃಷ್ಣ ಇದ್ದರು

ಐಪಿಎಲ್ ಬೆಟ್ಟಿಂಗ್: ಯುವಕನ ಕೊಲೆ- 10 ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ಮದ್ದೂರು: ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಸ್ನೇಹಿತ ಗೆದ್ದಿದ್ದ ಹಣ ಕೊಡಿಸಲು ತೆರಳಿದ್ದ ಚಿಕ್ಕರಸಿನಕೆರೆಯ ಪುನೀತ್ (28) ಅವರನ್ನು ಗುಂಪೊಂದು ಸೌದೆಯಿಂದ ಹೊಡೆದು ಕೊಲೆ ಮಾಡಿದೆ.



ಪುನೀತ್

ತಾಲ್ಲೂಕಿನ ಬೋರಾಪುರ ಸಮೀಪದ ವಿ.ಸಿ ನಾಲೆ ಬಳಿ ಗುರುವಾರ ರಾತ್ರಿ ಈ ಘಟನೆ ನಡೆದಿದೆ. ಪೊಲೀಸರು ಕೃತ್ಯಕ್ಕೆ ಸಂಬಂಧಿಸಿದಂತೆ ಹತ್ತು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಚಿಕ್ಕರಸಿನಕೆರೆಯ ದರ್ಶನ್ ಹಾಗೂ ಬೋರಾಪುರದ ಶರತ್ ಐಪಿಎಲ್ ಋತು ಆರಂಭವಾದ ದಿನದಿಂದಲೂ ಬೆಟ್ಟಿಂಗ್ ಕಟ್ಟುತ್ತಿದ್ದರು. ಬೆಟ್ಟಿಂಗ್‌ನಲ್ಲಿ ದರ್ಶನ್ ಗೆದ್ದಿದ್ದರು. ಅವರಿಗೆ ಶರತ್ ₹11 ಸಾವಿರ ನೀಡಬೇಕಾಗಿತ್ತು.

ಹಲವು ಬಾರಿ ಕೇಳಿದ್ದರೂ ಶರತ್ ಹಣ ನೀಡಿರಲಿಲ್ಲ. ಹಣ ಕೊಡಿಸುವಂತೆ ತನ್ನ ಸ್ನೇಹಿತ, ಕೊಲೆಯಾದ ಪುನೀತ್‌ಗೆ ದರ್ಶನ್ ಕೇಳಿಕೊಂಡಿದ್ದರು.

ಪುನೀತ್, ಶರತ್‌ಗೆ ಕರೆ ಮಾಡಿ ಹಣ ನೀಡುವಂತೆ ಕೇಳಿದ್ದರು. ಆರೋಪಿಗಳು ಹುಲೆಗೆರೆಪುರ ರಸ್ತೆಯ ವಿ.ಸಿ ನಾಲೆ ಬಳಿಗೆ ಇಬ್ಬರನ್ನೂ ಕರೆಸಿಕೊಂಡಿತ್ತು.ಈ ವೇಳೆ ಜಗಳವಾಗಿದ್ದು, ಅದು ವಿಕೋಪಕ್ಕೆ ತಿರುಗಿತ್ತು. ಗುಂಪು ಇಬ್ಬರ ಮೇಲೂ ಹಲ್ಲೆ ನಡೆಸಿತ್ತು. ತೀವ್ರ ಗಾಯಗೊಂಡಿದ್ದ ಪುನೀತ್ ಬಳಿಕ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



DMart®
Daily Discounts Daily Savings
ಶಾಲೆ ಆರಂಭ,
ಹೊಸ ಪ್ರಾರಂಭ
ಈಗ ಆನ್‌ಲೈನ್‌ನಲ್ಲಿಯೂ ಸಹ ಖರೀದಿಸಿ
DMart ready
ಆ್ಯಪ್ ಅನ್ನು ಡೌನ್‌ಲೋಡ್ ಮಾಡಿ
ಅಥವಾ www.dmart.in ಗೆ ಭೇಟಿ ನೀಡಿ
ಸ್ಟೇಷನರಿ
ಎಂಆರ್‌ಪಿ ಮೇಲೆ 20%-30% ರಿಯಾಯಿತಿ ಬ್ರಾಂಡೆಡ್ ಲಾಂಗ್ ಬುಕ್‌ಗಳು ಮತ್ತು ನೋಟ್‌ಬುಕ್‌ಗಳು
ಎಂಆರ್‌ಪಿ ಮೇಲೆ ಕನಿಷ್ಠ 20% ರಿಯಾಯಿತಿ ಪೆನ್ನುಗಳು
ಎಂಆರ್‌ಪಿ ಮೇಲೆ ಕನಿಷ್ಠ 20% ರಿಯಾಯಿತಿ ಪೆನ್ಸಿಲ್‌ಗಳು
₹ 29* ಕ್ಕೆ ಮೇಲ್ಪಟ್ಟು ಪ್ಲಾಸ್ಟಿಕ್ ಪೆನ್ಸಿಲ್ ಪೆಟ್ಟಿಗೆಗಳು 1 ಕ್ಕೆ
₹ 275* ಮಾತ್ರ ಜೆಕೆ ಕಾಪಿಯರ್ ಪೇಪರ್ ಎ4 (21 ಸೆಂ x 29.7 ಸೆಂ) 70 ಜಿಎಸ್‌ಎಮ್ 500 ಶೀಟುಗಳು ಎಂಆರ್‌ಪಿ ₹ 350
ಎಂಆರ್‌ಪಿ ಮೇಲೆ ಕನಿಷ್ಠ 20% ರಿಯಾಯಿತಿ ಎಲ್ಲಾ ಪಿಡಿಲೈಟ್ ಉತ್ಪನ್ನಗಳ ಮೇಲೆ
ಎಂಆರ್‌ಪಿ ಮೇಲೆ ಕನಿಷ್ಠ 20% ರಿಯಾಯಿತಿ ಡ್ರಾಯಿಂಗ್ ಪರಿಕರಗಳು
₹ 25* ಕ್ಕೆ ಮೇಲ್ಪಟ್ಟು ಪೆನ್ಸಿಲ್ ಚೀಲಗಳು 1 ಕ್ಕೆ
₹ 139* ಕ್ಕೆ ಮೇಲ್ಪಟ್ಟು ಮೆಟಲ್ ಮತ್ತು ಮ್ಯಾಗ್ನೆಟಿಕ್ ಪೆನ್ಸಿಲ್ ಬಾಕ್ಸ್‌ಗಳು 1 ಕ್ಕೆ
₹ 179* ಮಾತ್ರ 12 ಫೋಲ್ಡರ್ ಎಕ್ಸಿಕ್ಯೂಟಿವ್ ಫೈಲ್ 1 ಕ್ಕೆ ಎಂಆರ್‌ಪಿ ₹ 250
₹ 21* ಕ್ಕೆ ಮೇಲ್ಪಟ್ಟು ಬುಕ್ ಲೇಬಲ್ ಸ್ಟಿಕರ್ 1 ಕ್ಕೆ
₹ 55* ಮಾತ್ರ ಬ್ರೌನ್ ಬುಕ್ ಕವರ್ 1 ಕ್ಕೆ ಎಂಆರ್‌ಪಿ ₹ 70
₹ 249* ಮಾತ್ರ ಕ್ಯಾಲ್ಕುಲೇಟರ್ 1 ಕ್ಕೆ ಎಂಆರ್‌ಪಿ ₹ 400
₹ 49* ಕ್ಕೆ ಮೇಲ್ಪಟ್ಟು ಕತ್ತರಿ 1 ಕ್ಕೆ
₹ 199* ಮಾತ್ರ ಕಾರ್ಯನಿರ್ವಾಹಕ ಫೋಲ್ಡರ್ 12 ಪಾಕೆಟ್ ಫೈಲ್ 1 ಕ್ಕೆ ಎಂಆರ್‌ಪಿ ₹ 310
ಎಂಆರ್‌ಪಿ ಮೇಲೆ 20% ರಿಯಾಯಿತಿ ಎಲ್ಲಾ ಕಾಂಗಾರೂ ಉತ್ಪನ್ನಗಳ ಮೇಲೆ
ಎಂಆರ್‌ಪಿ ಮೇಲೆ 20% ರಿಯಾಯಿತಿ ಅಪ್ಸರಾ ಎರೇಸರ್ ಮತ್ತು ಶಾರ್ಪನರ್
₹ 995* ಮಾತ್ರ ಸ್ಟಡಿ ಟೇಬಲ್ 1 ಕ್ಕೆ ಎಂಆರ್‌ಪಿ ₹ 1,110
ಬ್ಯಾಗ್‌ಗಳು, ಬಾಕ್ಸ್‌ಗಳು ಮತ್ತು ಇನ್ನಷ್ಟು
₹ 299* ಕ್ಕೆ ಮೇಲ್ಪಟ್ಟು Disney MARVEL ಶಾಲಾ ಬ್ಯಾಗ್‌ಗಳು 1 ಕ್ಕೆ
₹ 299* ಕ್ಕೆ ಮೇಲ್ಪಟ್ಟು ಶಾಲೆ/ಕಾಲೇಜು ಬ್ಯಾಗ್‌ಗಳು 1 ಕ್ಕೆ
₹ 149* ಕ್ಕೆ ಮೇಲ್ಪಟ್ಟು ಲಂಚ್ ಬಾಕ್ಸ್ + ವಾಟರ್ ಬಾಟಲ್ ಕಾಂಬೊ 1 ಕ್ಕೆ
₹ 99* ಮಾತ್ರ ಸ್ಟೀಲ್ ಫ್ಲೆಕ್ಸಿ 2 ಲೇಯರ್ ಲಂಚ್ ಬಾಕ್ಸ್ 1 ಕ್ಕೆ ಎಂಆರ್‌ಪಿ ₹ 399
₹ 59* ಕ್ಕೆ ಮೇಲ್ಪಟ್ಟು Disney ಲಂಚ್ ಬಾಕ್ಸ್ 1 ಕ್ಕೆ
₹ 79* ಕ್ಕೆ ಮೇಲ್ಪಟ್ಟು Disney ಬಾಟಲ್ 1 ಕ್ಕೆ
₹ 199* ಕ್ಕೆ ಮೇಲ್ಪಟ್ಟು ಸ್ಟೀಲ್ ಬಾಟಲ್ 1 ಕ್ಕೆ
₹ 349* ಮಾತ್ರ ಫುಟ್‌ಬಾಲ್ 1 ಕ್ಕೆ ಎಂಆರ್‌ಪಿ ₹ 470
₹ 149* ಕ್ಕೆ ಮೇಲ್ಪಟ್ಟು ಮಕ್ಕಳ ಬಿಕೆಗಳು 1 ಕ್ಕೆ
₹ 249* ಕ್ಕೆ ಮೇಲ್ಪಟ್ಟು Disney ಮಕ್ಕಳ ರೇನ್‌ಕೋಟ್ 1 ಕ್ಕೆ
₹ 199* ಕ್ಕೆ ಮೇಲ್ಪಟ್ಟು Disney ಮಕ್ಕಳ ಛತ್ರಿ 1 ಕ್ಕೆ
₹ 179* ಕ್ಕೆ ಮೇಲ್ಪಟ್ಟು ಶಾಲಾ ಶೂಗಳು 1 ಜೊತೆ
ಟಿಫಿನ್ ಸ್ನ್ಯಾಕ್ಸ್ ಮತ್ತು ಗ್ರೋಸರಿ
1 ಖರೀದಿಸಿ 1 ಉಚಿತವಾಗಿ ಪಡೆಯಿರಿ ಕ್ಯಾಡ್ಬರಿ ಫ್ಯೂಸ್ ಹೋಮ್ ಟ್ರೀಟ್ಸ್ 108.5 ಗ್ರಾಂ ಎಂಆರ್‌ಪಿ ₹ 120
₹ 185* ಮಾತ್ರ ಕಿಸ್ಸಾನ್ ಮಿಶ್ರ ಹಣ್ಣಿನ ಜಾಮ್ 700 ಗ್ರಾಂ ಎಂಆರ್‌ಪಿ ₹ 245
₹ 319* ಮಾತ್ರ ಬೂಸ್ಟ್ ರೀಫಿಲ್ ಪ್ಯಾಕ್ 750 ಗ್ರಾಂ ಎಂಆರ್‌ಪಿ ₹ 449
₹ 59* ಮಾತ್ರ ಸನ್‌ಫೀಸ್ಟ್ ಯಿಪ್ಪೀ ಮ್ಯಾಜಿಕ್ ಮಸಾಲಾ ನೂಡಲ್ಸ್ 360 ಗ್ರಾಂ ಎಂಆರ್‌ಪಿ ₹ 82
₹ 78* ಮಾತ್ರ ಮಾಜಾ ಟೆಟ್ರಾ ಪ್ಯಾಕ್ ಪ್ರತಿ 10x135 ಮಿಲೀ ಎಂಆರ್‌ಪಿ ₹ 100
₹ 52* ಮಾತ್ರ ಕೆಲ್ಲಾಗ್ ಚೋಕೋ ವೆರೈಟಿ ಪ್ಯಾಕ್ 156 ಗ್ರಾಂ ಎಂಆರ್‌ಪಿ ₹ 70
₹ 295* ಮಾತ್ರ ನುಟೆಲ್ಲಾ ಫೆರೆರೊ 350 ಗ್ರಾಂ ಎಂಆರ್‌ಪಿ ₹ 380
₹ 169* ಮಾತ್ರ ಹರ್ಷೀಸ್ ಚಾಕೊಲೇಟ್ ಸಿರಪ್ 623 ಗ್ರಾಂ ಎಂಆರ್‌ಪಿ ₹ 220
₹ 99* ಮಾತ್ರ ಫನ್ ಫುಡ್ ವೆಜ್ ಮೇಯನೇಸ್ 750 ಗ್ರಾಂ ಎಂಆರ್‌ಪಿ ₹ 179
₹ 75* ಮಾತ್ರ ಡೆಲ್ಮಾಂಟೆ ಟೊಮೆಟೊ ಕೆಚಪ್ ಪೌಚ್ 900 ಗ್ರಾಂ ಎಂಆರ್‌ಪಿ ₹ 130
₹ 30* ಮಾತ್ರ ಸನ್‌ಫೀಸ್ಟ್ ಡಾರ್ಕ್ ಫ್ಯಾಂಟಸಿ ಚೋಕೋ ಫಿಲ್ಸ್ 75 ಗ್ರಾಂ ಎಂಆರ್‌ಪಿ ₹ 40
₹ 95* ಮಾತ್ರ ಕ್ಯಾಡ್ಬರಿ ಓರಿಯೊ ವೆನಿಲ್ಲಾ ಜಂಬೋ ಪ್ಯಾಕ್ 481.25 ಗ್ರಾಂ ಎಂಆರ್‌ಪಿ ₹ 159
₹ 39* ಮಾತ್ರ ಲೂಸ್ ಸ್ಮಾಲ್ ಸಕ್ಕರೆ 1 ಕಿ.ಗ್ರಾಂ
₹ 29* ಮಾತ್ರ ಲೂಸ್ ಗೋಧಿ ಹಿಟ್ಟು 1 ಕಿ.ಗ್ರಾಂ
₹ 43* ಮಾತ್ರ ಲೂಸ್ ಸೋನಾ ಮಸೂರಿ ರಾಯಚೂರು ಸ್ಟೀಮ್ ಅಕ್ಕಿ 1 ಕಿ.ಗ್ರಾಂ
₹ 63* ಮಾತ್ರ ಲೂಸ್ ಕಡಲೆ ಬೇಳೆ 1 ಕಿ.ಗ್ರಾಂ
₹ 126* ಮಾತ್ರ ಲೂಸ್ ತೊಗರಿ ಬೇಳೆ 1 ಕಿ.ಗ್ರಾಂ
₹ 114* ಮಾತ್ರ ಲೂಸ್ ಉದ್ದಿನ ಕಾಳು 1 ಕಿ.ಗ್ರಾಂ
ಕನಿಷ್ಠ 6% ರಿಯಾಯಿತಿ
ಬೊಮ್ಮಸಂದ್ರ: 080-27834507 / 27834627 • ಕಿಯೋನಿಕ್ಸ್ (ಎಲೆಕ್ಟ್ರಾನಿಕ್ ಸಿಟಿ): 8028520303 • ಸರ್ಜಾಪುರ: 080-29600551 • ಸಿದ್ಧಾಪುರ: 6366211616 • ಹೊಂಗಸಂದ್ರ: 0806211616 • ಗೊಟ್ಟಿಗೆರೆ: 08025780499 • ಕಾರ್ಮೆಲಾರಂ: 08029915582 • ಕೋರಮಂಗಲ: 080-29901102
ನೆಲಮಂಗಲ: 8861794447/08029706074 • ಕಾಸಿಯಾ (ಮಾಗಡಿ): 080-23505620 • ಗರುಡ: 080-26636640/41 • ಕನಕಪುರ ರಸ್ತೆ: 080-28435555 • ಬನಶಂಕರಿ: 080-29901112 • ಶ್ರೀಗಂಧ ಕಾವಲ್: 080-29903061 • ಹೆಣ್ಣೂರು: 080-25444361 • ದೇವನಹಳ್ಳಿ: 080-29780111
ಯಲಹಂಕ: 080-29727160 • ರಾಮ್ ಮೂರ್ತಿ ನಗರ: 080-25667334 • ದೊಡ್ಡಬಳ್ಳಾಪುರ: 080-29500172 • ಆರ್.ಟಿ. ನಗರ: 080-29737813 • ಗೋಪಾಲನ್ ಮಾಲ್: 080-26758814 • ಬಂಡಮೀಡ-ಮದನಪಲ್ಲಿ: 8571351011 • ಬಜಾಜ್ ಮಾಲ್: 080-29609000 • ಹೈವೇ ಡೇರಿಬೈಲ್: 08242959760
ಅತ್ತಾವರ ರಸ್ತೆ: 08242951114/08242951115 • ಉಡುಪಿ: 08202003001 • ಸಿರಾ ತುಮಕೂರು: 8162956425
ಚಿತ್ರಗಳು ಪ್ರಾತಿನಿಧ್ಯ ಉದ್ದೇಶಗಳಿಗಾಗಿ ಮಾತ್ರ • ಉತ್ಪನ್ನದ ಕೊಡುಗೆಗಳು ಸ್ಟಾಕ್ಗಳ ಕೊನೆಯವರೆಗೂ ಮಾನ್ಯವಾಗಿರುತ್ತವೆ • ಬೆಲೆಗಳು ಮತ್ತು ಕೊಡುಗೆಗಳು ಸ್ಥಳಗಳ ಪ್ರಕಾರ ಬದಲಾಗಬಹುದು
• ಪ್ರದರ್ಶಿಸಲಾದ ಬ್ರ್ಯಾಂಡ್‌ಗಳು ಆಯಾ ಬ್ರ್ಯಾಂಡ್ ಮಾಲೀಕರ ಒಡೆತನದಲ್ಲಿದೆ • ^ ನಿರ್ವಹಣೆಯು ಬೆಲೆಗಳನ್ನು ಬದಲಾಯಿಸುವ ಮತ್ತು ಅದರ ವಿವೇಚನೆಗೆ ಉತ್ಪನ್ನಗಳನ್ನು ಮಾರಾಟ ಮಾಡುವ ಹಕ್ಕನ್ನು ಹೊಂದಿದೆ • ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ • *ಚಿಲ್ಲರೆ ಮಾರಾಟ ದರ
Impulse/05/23

2007ರಿಂದ 2012ರವರೆಗಿನ 9.85 ಲಕ್ಷ ಉದ್ಯೋಗ ಖಾತರಿ ಕಾಮಗಾರಿಗಳಲ್ಲಿ ಅವ್ಯವಹಾರ ಆರೋಪ

ಅಕ್ರಮ ತನಿಖೆಗೆ ಹಿಂದಿನ ಸರ್ಕಾರ ಬ್ರೇಕ್

● ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 2007ರಿಂದ 2012ರವರೆಗೆ ನಡೆದಿದೆ ಎನ್ನಲಾದ ಅವ್ಯವಹಾರ ಕುರಿತು ನಡೆಯುತ್ತಿದ್ದ ಲೋಕಾಯುಕ್ತ ತನಿಖೆಯನ್ನು ಚುನಾವಣೆ ಘೋಷಣೆಗೂ ಒಂದು ದಿನ ಮೊದಲು ಆಗ ಇದ್ದ ಸರ್ಕಾರವು ಹಿಂದಕ್ಕೆ ಪಡೆದಿದೆ.

ಇದರಿಂದಾಗಿ ಈ ಅವಧಿಯಲ್ಲಿ ರಾಜ್ಯದ ಆರು ಸಾವಿರ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿನ 9.85 ಲಕ್ಷ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ 9 ವರ್ಷಗಳ ನಂತರ ತನಿಖೆಯೇ ನಡೆಯದೆ ಕೊನೆಗೊಂಡಂತಾಗಿದೆ.

ರಾಜ್ಯದಲ್ಲಿ 2005ರಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಬಂದಿದ್ದ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ

ಮುಖ್ಯಾಂಶಗಳು

- ಸಿಎಜಿ ವರದಿಯಲ್ಲಿ ಅಕ್ರಮದ ಉಲ್ಲೇಖ
- ಸಿಎಜಿ ವರದಿ ಆಧರಿಸಿ ಲೋಕಾಯುಕ್ತಕ್ಕೆ ಹಸ್ತಾಂತರ
- 2023ರ ಮಾರ್ಚ್ 28ರಂದು ಪ್ರಕರಣ ವಾಪಸ್

ಯೋಜನೆ (ನರೇಗಾ) ಕುರಿತಂತೆ 2007ರಿಂದ ಐದು ವರ್ಷಗಳ ಲೆಕ್ಕಪರಿಶೋಧನೆಯನ್ನು ಮಹಾಲೇಖ ಪಾಲರ (ಸಿಎಜಿ) ಕಚೇರಿಯು 2013ರಲ್ಲಿ ನಡೆಸಿತ್ತು.

ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಗದಗ, ಹಾಸನ ರಾಯಚೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಬಹಳಷ್ಟು ಅವ್ಯವಹಾರ ಮತ್ತು ಹಣ ದುರುಪಯೋಗ ನಡೆದಿರುವ ಕುರಿತು ವರದಿಯಲ್ಲಿ ಉಲ್ಲೇಖ

> ತನಿಖೆ ಪ್ರಗತಿಯಲ್ಲಿತ್ತು. ರಾಜ್ಯ ಸರ್ಕಾರ ಇದರ ಎಲ್ಲಾ ಪ್ರಕರಣಗಳನ್ನು ಹಿಂಪಡೆದಿರುವುದರಿಂದ ತನಿಖೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಮುಂದೆ ಏನಾಗುತ್ತದೋ ನೋಡಬೇಕು
>
> **ನ್ಯಾಯಮೂರ್ತಿ ಬಿ.ಎಸ್.ಪಾಟೀಲ,** ಲೋಕಾಯುಕ್ತ

ಆಗಿತ್ತು.

ನರೇಗಾ ಅಡಿಯಲ್ಲಿ ಕೂಲಿಕಾರರ ಹೆಸರಿನಲ್ಲಿ ಹಣ ತೆಗೆದಿರುವ, ಹಣ ದುರ್ಬಳಕೆ, ಯಂತ್ರಗಳನ್ನು ಉಪಯೋಗಿಸಿ ನಡೆಸಿದ ಕಾಮಗಾರಿಗಳಿಗೆ ಉದ್ಯೋಗ ಖಾತ್ರಿ ಮೂಲಕ ಬಿಲ್ ಪಾವತಿಸಿರುವ ಹಾಗೂ 60:40ರ ಅನುಪಾತದಲ್ಲಿ ಕಾಮಗಾರಿ ನಡೆಸದಿರುವ ಕುರಿತು ವಿವರಗಳಿದ್ದವು.

ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಸರ್ಕಾರ, 2014ರಲ್ಲಿ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಿತ್ತು. ಇಡೀ ರಾಜ್ಯದಲ್ಲಿ ಇಂಥ ಪ್ರಕರಣಗಳು ನಡೆದಿರುವ ಸಾಧ್ಯತೆ ಇದ್ದು, ಸಮಗ್ರ ತನಿಖೆಗೆ ಸೂಚಿಸಿತ್ತು. ಕೂಡಲೇ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯ-ನಿರ್ವಾಹಕ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದ್ದ ಲೋಕಾಯುಕ್ತ ಪೊಲೀಸ್, ತಮ್ಮ ವ್ಯಾಪ್ತಿಯ ಪಿಡಿಒಗಳಿಂದ ಮಾಹಿತಿ ಸಂಗ್ರಹಿಸಿ ನೀಡುವಂತೆ ಸೂಚಿಸಿತ್ತು.

ಆ ನಂತರ ತನಿಖೆಯಲ್ಲಿ ಪ್ರಗತಿ ಕಂಡುಬಂದಿರಲಿಲ್ಲ. 2020ರ ಡಿಸೆಂಬರ್‌ನಲ್ಲಿ ಲೋಕಾಯುಕ್ತ ಹೆಚ್ಚುವರಿ ಮಹಾನಿರ್ದೇಶಕರ ಸೂಚನೆ ಮೇರೆಗೆ ಮತ್ತೆ ನೋಟಿಸ್ ಜಾರಿಯಾಗಿತ್ತು. ಆಗಲೂ ಈ ಕುರಿತು ಯಾವುದೇ ವರದಿಗಳನ್ನು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಸಲ್ಲಿಸಿರಲಿಲ್ಲ.

2021ರ ಜನವರಿಯಲ್ಲಿ ಹುಬ್ಬಳ್ಳಿಯಲ್ಲಿ ನಡೆದ ರಾಜ್ಯ ಪಿಡಿಒಗಳ ಸಮಾವೇಶದಲ್ಲಿ 'ಲೋಕಾಯುಕ್ತದ ಅನವಶ್ಯಕ ತನಿಖೆಯಿಂದ ಪಿಡಿಒಗಳನ್ನು ರಕ್ಷಿಸಲು ಸರ್ಕಾರ ಮುಂದಾಗಬೇಕು' ಎಂದು ಸಂಘದ ಪದಾಧಿಕಾರಿಗಳು ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಒತ್ತಾಯಿಸಿದ್ದರು.

ಕಳೆದ ಮಾರ್ಚ್ 28ರಂದು ರಾಜ್ಯ ಸರ್ಕಾರ ಪ್ರಕರಣವನ್ನು ಹಿಂದಕ್ಕೆ ಪಡೆದಿದೆ. ಇದಕ್ಕೆ ಕಾರಣ ನೀಡಿರುವ ಸರ್ಕಾರ, ಜಾಬ್‌ಕಾರ್ಡ್‌ಗಳು 10ರಿಂದ 15 ವರ್ಷ ಹಳೆಯದಾಗಿದ್ದು, ವ್ಯಕ್ತಿಗಳ ಮರಣ, ಮದುವೆ, ಜೀವನೋ-ಪಾಯಕ್ಕಾಗಿ ವಲಸೆ ಹೋಗಿರುವ ಸಾಧ್ಯತೆ ಇರುವುದರಿಂದ ಪರಿಶೀಲನೆ ಸಾಧ್ಯವಿಲ್ಲ. ಬಹಳಷ್ಟು ಕಾಮಗಾರಿಗಳು ತಮ್ಮ ಮೂಲಸ್ವರೂಪ ಕಳೆದುಕೊಂಡಿವೆ. ಈ ಅವಧಿಯಲ್ಲಿ ಎಂಐಎಸ್ ವ್ಯವಸ್ಥೆ ಜಾರಿಯಲ್ಲಿರಲಿಲ್ಲ. ಕೂಲಿಕಾರರು ಹಿಂದಿನ ಘಟನೆಯನ್ನು ನೆನಪು ಮಾಡಿ ಹೇಳಲು ಸಾಧ್ಯವಿಲ್ಲ. ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳಲ್ಲಿ ಹೆಚ್ಚಿನವರು ನಿವೃತ್ತರಾಗಿದ್ದಾರೆ. ಹೀಗಾಗಿ ತನಿಖೆ ನಡೆಸುವುದು ಅಸಾಧ್ಯ' ಎಂದು ಸರ್ಕಾರ ಕಾರಣ ನೀಡಿದೆ.

'ಹಲವಾರು ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಗೆ ಈ ಐದು ವರ್ಷಗಳ ಕಾಮಗಾರಿ ಪರಿಶೀಲನೆ ಸಾಧ್ಯವಾ-ಗುವುದಿಲ್ಲ. 30 ಜಿಲ್ಲೆಗಳಲ್ಲಿ ಐದು ವರ್ಷ ನಡೆಸಲಾದ 9.85 ಲಕ್ಷ ಕಾಮ-ಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಲು ಬಹಳ ಸಮಯ ಬೇಕಾಗುತ್ತದೆ' ಎಂದು ಸರ್ಕಾರ ಪ್ರಕರಣ ವಾಪಸ್ ಪಡೆಯುತ್ತಿರುವುದಕ್ಕೆ ಕಾರಣ ನೀಡಿದೆ.

'ಮಠಗಳಿಂದ ನಡೆಯದ ಬಸವತತ್ವ ಪ್ರಸಾರ'

ಪ್ರಜಾವಾಣಿ ವಾರ್ತೆ



ಬಸವರಾಜ ಹೊರಟ್ಟಿ

ಹುಬ್ಬಳ್ಳಿ: 'ಮಠ-ಮಂದಿರಗಳ ಮುಖಾಂತರ ಜಗತ್ತಿಗೆ ಬಸವ ತತ್ವವನ್ನು ಸಾರುವ ಕೆಲಸ ಆಗಬೇಕಿದೆ. ಇತ್ತೀಚೆಗೆ ಯಾವ ಮಠವೂ ಬಸವತತ್ವ ಸಂದೇಶ ಸಾರುವ ದೊಡ್ಡ ಕಾರ್ಯಕ್ರಮವ-ನ್ನು ಮಾಡಿರುವ ನಿದರ್ಶನ ಇಲ್ಲ. ಮಠಾಧೀಶರು ತಪ್ಪು ತಿಳಿದರೂ ನನಗೇನೂ ಬೇಜಾರಿಲ್ಲ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶುಕ್ರವಾರ ಹೇಳಿದರು.

ನಗರದ ಮೂರುಸಾವಿರ ಮಠದ ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆದ ಗಂಗಾಧರ ರಾಜಯೋಗೀಂದ್ರ ಸ್ವಾಮೀಜಿ ಅವರ 20ನೇ ಪುಣ್ಯಸ್ಮರಣೋತ್ಸವ ಹಾಗೂ ಡಾ.ಮೂಜಗಂ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪ್ರಸ್ತುತ ದಿನಗಳಲ್ಲಿ ಜಾತಿಯೇ ಎಲ್ಲಕ್ಕಿಂತ ಮುಖ್ಯವಾಗಿದೆ. ಬಸವಣ್ಣ ಅವರನ್ನೂ ಒಂದು ಸಮಾಜಕ್ಕೆ ಸೀಮಿತ ಮಾಡಲಾಗಿದೆ. ಈಗ ಪ್ರತಿ-ಯೊಂದರಲ್ಲೂ ಜಾತಿ ನೋಡಿ ಮಣೆ ಹಾಕಲಾಗುತ್ತದೆ. ಸ್ವಾಮೀಜಿಗಳೂ ಜಾಣರಾಗಿದ್ದು, ಜಾತಿಗೊಂದು ಮಠ ಕಟ್ಟಿಕೊಂಡು ಅಧಿಕಾರ ಚಲಾಯಿ-ಸುತ್ತಿದ್ದಾರೆ. ರಾಜಕೀಯದಲ್ಲೂ ಜಾತಿ ನೋಡಿ ಟಿಕೆಟ್ ನೀಡಲಾಗುತ್ತಿದೆ. ಬಸವಣ್ಣ ಈ ಎಲ್ಲವನ್ನೂ ವಿರೋಧಿಸಿ, ವಚನಗಳ ಮೂಲಕ ಸಮಾಜದ ಸುಧಾರಣೆಗೆ ಮುಂದಾಗಿದ್ದರು. ಅವರ ತತ್ವಸಿದ್ಧಾಂತಗಳನ್ನು ಸರಿ ಯಾಗಿ ಅರ್ಥ ಮಾಡಿಕೊಳ್ಳಬೇಕಿದೆ' ಎಂದು ಅಭಿಪ್ರಾಯಪಟ್ಟರು.



ಗೀಜಗನ ಗೂಡು ದಾವಣಗೆರೆಯ ಹೊರವಲಯದಲ್ಲಿ ಸಂತಾನ ವೃದ್ಧಿಗಾಗಿ ಗೀಜಗ ಪಕ್ಷಿ ಮರದ ರೆಂಬೆಯ ತುದಿಯಲ್ಲಿ ಸಂಗಾತಿಯೊಂದಿಗೆ ಗೂಡು ಕಟ್ಟುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಅತ್ಯಾಚಾರ, ಕೊಲೆ ಒಬ್ಬನ ಬಂಧನ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ವಿವಾಹಿತ ಮಹಿಳೆಯೊಬ್ಬರ ಮೇಲೆ ನಾಲ್ವರು ದುಷ್ಕರ್ಮಿಗಳು ಸಾಮೂಹಿಕವಾಗಿ ಅತ್ಯಾಚಾರ ನಡೆಸಿ, ಕೊಲೆ ಮಾಡಿದ್ದು, ಆರೋಪಿಗಳಲ್ಲಿ ಒಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂರುಮೈಲ್ ಕ್ಯಾಂಪಿನ ಮಾಳಪ್ಪ ಗೌಡಪ್ಪ (ಬಂಧಿತ) ಸೇರಿ ನಾಲ್ವರು ಮೇ 24ರಂದು ಸಂಜೆ ನಾಲ್ಕುಮೈಲ್ ಕ್ಯಾಂಪಿನ ಹೊರವಲಯ-ದಲ್ಲಿ 46 ವರ್ಷದ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ವೇಳೆ ಮಹಿಳೆ ಪ್ರತಿರೋಧ ಒಡ್ಡಿದಾಗ ಆಕೆ ಮೇಲೆ ತೀವ್ರ ಹಲ್ಲೆ ನಡೆಸಿ ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ ಎನ್ನಲಾಗಿದೆ.

ನಂತರ ಆಕೆಯನ್ನು ಗಮನಿಸಿದ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಆಕೆಯನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೇಳಿಕೆ ಪಡೆದಿದ್ದರು. ಸಿಂಧನೂರು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚುನಾವಣೆ 'ಗಿಫ್ಟ್' ಕುಕ್ಕರ್ ಸಿಡಿದು ಬಾಲಕಿಗೆ ಗಾಯ

ಪ್ರಜಾವಾಣಿ ವಾರ್ತೆ



ಗಾಯಗೊಂಡ ಬಾಲಕಿ

ರಾಮನಗರ: ತಾಲ್ಲೂಕಿನ ಕೂನಮು-ದ್ದನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಅಡುಗೆ ಮಾಡುವಾಗ ಕುಕ್ಕರ್ ಸಿಡಿದಿದ್ದು, ಬಾಲಕಿ ಮಹಾಲಕ್ಷ್ಮಿ (17) ಗಾಯಗೊಂಡಿದ್ದಾರೆ.

ಬೆಳಿಗ್ಗೆ ಅಡುಗೆ ಮಾಡುವಾಗ ಕುಕ್ಕರ್ ಸಿಡಿದಿದ್ದು, ಮುಖಕ್ಕೆ ಗಾಯಗಳಾಗಿವೆ. ಜಿಲ್ಲಾ ಆಸ್ಪತ್ರೆಯಲ್ಲಿ ಆಕೆಗೆ ಚಿಕಿತ್ಸೆ ನೀಡಲಾಗಿದೆ.

ಈಚೆಗೆ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮಾಗಡಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್.ಸಿ.ಬಾಲಕೃಷ್ಣ ಅವರ ಬೆಂಬಲಿಗರು ಮತದಾರರಿಗೆ ಹಂಚಿದ್ದ ಕುಕ್ಕರ್ ಇದಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಗಾಯಗೊಂಡಿರುವ ಮಹಾಲಕ್ಷ್ಮಿ ಅವರ ಕುಟುಂಬದವರೂ ಇದು ಚುನಾವಣೆ ವೇಳೆಯಲ್ಲಿ ಹಂಚಿದ್ದ ಕುಕ್ಕರ್ ಎಂಬುದನ್ನು ದೃಢ ಪಡಿಸಿದ್ದಾರೆ.

ಕುಕ್ಕರ್ ಎಸೆದು ಆಕ್ರೋಶ: ಅವಘಡ ತಿಳಿಯುತ್ತಲೇ ಗ್ರಾಮಸ್ಥರು ಚುನಾವಣೆಯ ಸಂದರ್ಭದಲ್ಲಿ ಹಂಚಿದ್ದ ಕುಕ್ಕರ್‌ಗಳನ್ನು ಬೀದಿಗೆ ಎಸೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಅಭಿವೃದ್ಧಿಗಿಂತಲೂ ಸೇಡಿನ ರಾಜಕಾರಣವೇ ಮುಖ್ಯವೇ– ಕಾಂಗ್ರೆಸ್‌ನವರಿಗೆ ಪ್ರಶ್ನೆ

ದ್ವೇಷದ ಆಡಳಿತಕ್ಕೆ ಅಲ್ಪ ಆಯಸ್ಸು: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ದುರಹಂಕಾರ ಮತ್ತು ದ್ವೇಷದ ಆಡಳಿತದ ಆಯಸ್ಸು ಲೋಕಸಭಾ ಚುನಾವಣೆವರೆಗೆ ಮಾತ್ರ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ನೂತನ ಸರ್ಕಾರದ ಸಚಿವರು ಮಾತನಾಡುವು-ದನ್ನು ನೋಡಿದರೆ ದ್ವೇಷದ, ಸೇಡಿನ ರಾಜಕಾರಣ ಮಾಡಲು ಪ್ರಾರಂಭ ಮಾಡಿದ್ದಾರೆ. ಅವರಿಗೆ ರಾಜ್ಯದ ಅಭಿವೃದ್ಧಿಗಿಂತ ಸೇಡಿನ ರಾಜಕಾರಣ ಮುಖ್ಯವಾಗಿದೆ ಎಂದು ಟೀಕಿಸಿದರು.



ಬಸವರಾಜ ಬೊಮ್ಮಾಯಿ

'ಕಾಂಗ್ರೆಸ್ ಸರ್ಕಾರ ಏನೇ ಮಾಡಿದರೂ ಅದನ್ನು ಎದುರಿಸಲು ಸಿದ್ಧರಿದ್ದೇವೆ ಮತ್ತು ಅವರ ವಿಚಾರಗಳನ್ನು ನಾವು ಹಿಮ್ಮೆಟ್ಟಿಸುತ್ತೇವೆ. ಚುನಾಯಿತ ಸರ್ಕಾರದ ಮುಂದೆ ಜನರ ಸಮಸ್ಯೆಗಳಿವೆ. ಸಮಸ್ಯೆಗಳನ್ನು ಬಗೆಹರಿಸಲು ತುರ್ತಾದ ನಿರ್ಣಯಗಳು ಆಗುತ್ತಿಲ್ಲ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ದೊಡ್ಡದಾಗಿದೆ. ಅದನ್ನು ಬಗೆಹರಿಸುವ ಬಗ್ಗೆ ಗಮನಕೊಡದೇ. ಕೇವಲ ಸೂಚನೆಗಳನ್ನು ಕೊಡುವುದರಲ್ಲಿ ಕಾಲ ಕಳೆಯುತ್ತಿದ್ದಾರೆ' ಎಂದರು.

> ಬಜರಂಗ ದಳ, ಆರ್‌ಎಸ್‌ಎಸ್ ನಿಷೇಧಕ್ಕೆ ಕೈ ಹಾಕಿದರೆ ಕಾಂಗ್ರೆಸ್ ಪಕ್ಷ ಇರುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯವೂ ಮುಗಿಯುತ್ತದೆ
>
> **ನಳಿನ್‌ಕುಮಾರ್ ಕಟೀಲ್,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ನಡೆದಿರುವ ಧರ್ಮಾಧಾರಿತವಾದ ಎಲ್ಲ ರಾಜಕೀಯ ಹತ್ಯೆಗಳ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ದಳ ರಚಿಸಬೇಕು
>
> **ರಮಾನಾಥ ರೈ,** ಕೆಪಿಸಿಸಿ ಉಪಾಧ್ಯಕ್ಷ

'ಬರಪೀಡಿತ ತಾಲ್ಲೂಕುಗಳು, ಕುಡಿಯುವ ನೀರಿನ ಕೊರತೆ ಇರುವ ತಾಲ್ಲೂಕುಗಳನ್ನು ಪಟ್ಟಿ ಮಾಡಿಲ್ಲ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಸಾಕಷ್ಟು ಹಣ ಇದೆ. ಅದನ್ನು ಬಳಸಿಕೊಂಡು ಸಮಸ್ಯೆ ಬಗೆಹರಿಸಿ ಎಂಬ ಸೂಚನೆಯೂ ಮುಖ್ಯಮಂತ್ರಿ ಅವರಿಂದ ಹೋಗಿಲ್ಲ' ಎಂದರು.

ಭಯಪಡಿಸುವ ಆಡಳಿತ: 'ಸಂವಿಧಾನ ಪ್ರತಿಯೊಬ್ಬರಿಗೂ ವಾಕ್ ಸ್ವಾತಂತ್ರ್ಯ ನೀಡಿದೆ. ಆದರೆ, ಇವರು ರಾಜಕೀಯ ಟೀಕೆ ಮಾಡಿದರೆ ಎಫ್‌ಐಆರ್ ಹಾಕುತ್ತೇವೆ ಎನ್ನುತ್ತಿದ್ದಾರೆ. ಶಾಸಕರಾದ ಡಾ.ಅಶ್ವತ್ಥನಾರಾಯಣ, ಹರಿಶ್ ಪೂಂಜಾ ಮೇಲೆ ಎಫ್‌ಐಆರ್ ಹಾಕಿದ್ದಾರೆ. ಇದು ದುರಹಂಕಾರ ಮತ್ತು ದ್ವೇಷದ ಆಡಳಿತ. ಪ್ರಾರಂಭದಲ್ಲೇ ಜನರನ್ನು ಭಯಪಡಿಸಿ ಆಡಳಿತ ಮಾಡುವ ಭ್ರಮೆ ಇವರಲ್ಲಿದೆ' ಎಂದು ಬೊಮ್ಮಾಯಿ ಹರಿಹಾಯ್ದರು.

'ಆರ್‌ಎಸ್‌ಎಸ್, ಬಜರಂಗದಳ ನಿಷೇಧ ಮಾಡುತ್ತೇವೆ ಎಂದು ಹೇಳುತ್ತಾರೆ. ದಯವಿಟ್ಟು ನಿಷೇಧ ಮಾಡಿ ತೋರಿಸಲಿ. ಯಾವುದೇ ಸಂಘ–ಸಂಸ್ಥೆಯನ್ನು ನಿಷೇಧಿಸುವ ಅಧಿಕಾರ ಇವರಿಗಿಲ್ಲ. ಅದನ್ನು ಮಾಡುವುದು ಕೇಂದ್ರ ಸರ್ಕಾರ. ಇವೆಲ್ಲ ಗೊತ್ತಿದ್ದರೂ ತುಷ್ಟೀಕರಣ ರಾಜಕಾರಣ ಮಾಡಲು ಹೊರಟಿದ್ದಾರೆ. ಯಾರನ್ನು ತುಷ್ಟೀಕರಣ ಮಾಡುತ್ತಿದ್ದಾರೋ ಅವರ ದಾರಿ ತಪ್ಪಿ-ಸುತ್ತಿದ್ದಾರೆ. ಈ ಬಗ್ಗೆ ಸಿದ್ದರಾಮಯ್ಯ ಮಾತನಾಡಲಿ' ಎಂದು ತಿಳಿಸಿದರು.

ಕೆಲಸ ಕಳೆದುಕೊಂಡ ಪ್ರವೀಣ್ ನೆಟ್ಟಾರು ಪತ್ನಿ

ಪ್ರಜಾವಾಣಿ ವಾರ್ತೆ

ಮಂಗಳೂರು: ದುಷ್ಕರ್ಮಿಗಳಿಂದ ಹತ್ಯೆಯಾಗಿದ್ದ ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಅವರ ಪತ್ನಿ ನೂತನ ಕುಮಾರಿ ಅವರಿಗೆ ಮುಖ್ಯಮಂತ್ರಿ ಅವರ ಸಚಿವಾಲಯದಲ್ಲಿ ನೀಡಿದ್ದ ಗುತ್ತಿಗೆ ಆಧಾರಿತ ಉದ್ಯೋಗಕ್ಕೆ ಕುತ್ತು ಬಂದಿದೆ.

ಈ ಹಿಂದೆ ಬಿಜೆಪಿ ಸರ್ಕಾರ ಆಡಳಿತದಲ್ಲಿದ್ದಾಗ ಪ್ರವೀಣ್ ಪತ್ನಿಗೆ ಮಾನವೀಯ ನೆಲೆಯಲ್ಲಿ ಮುಖ್ಯಮಂತ್ರಿ ವಿಶೇಷಾಧಿಕಾರ ಬಳಸಿ, ಕೆಲಸ ಕೊಡಿಸುವುದಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಭರವಸೆ ನೀಡಿದ್ದರು. ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಚಿವಾಲಯದಲ್ಲಿ ಹಿರಿಯ ಸಹಾಯಕಿ (ಗ್ರೂಪ್ ಸಿ) ಹುದ್ದೆಗೆ ಗುತ್ತಿಗೆ ಆಧಾರದಲ್ಲಿ 2022ರ ಸೆ. 22ರಂದು ನೇಮಿಸಲಾಗಿತ್ತು. ಈಗ ಕೆಲಸದಿಂದ ಬಿಡುಗಡೆಗೊಳಿಸಿರುವ ಆದೇಶ ಅವರ ಕೈ ತಲುಪಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಈ ಮುಖ್ಯಮಂತ್ರಿ ಅಧಿಕಾರ ಇರುವ ತನಕ ಅಥವಾ ಮುಂದಿನ ಆದೇಶವರೆಗೆ ಎಂದು ನೇಮಕಾತಿ ಆದೇಶದಲ್ಲಿ ನಮೂದಿಸಲಾಗಿ-ತ್ತು. ನೂತನ ಕುಮಾರಿ ಅವರ ವಿನಂತಿ ಮೇರೆಗೆ ಅವರಿಗೆ ಸ್ಥಳೀಯವಾಗಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೆಲಸ ನೀಡಲಾಗಿತ್ತು. ಅವರು ಅಕ್ಟೋಬರ್ 14ರಂದು ಕರ್ತವ್ಯಕ್ಕೆ ಹಾಜರಾಗಿದ್ದರು.

ನೂತನಕುಮಾರಿ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಅಂಡರ್ ಪಾಸ್‌ನಲ್ಲಿ ಕಾರು ಮುಳುಗಿ, ಯುವತಿ ಸಾವು ಪ್ರಕರಣ

ಲೋಕಾಯುಕ್ತ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾನುವಾರ ಮಳೆಯಿಂದ ಜಲಾವೃತಗೊಂಡಿದ್ದ ನಗರದ ಕೆ.ಆರ್. ವೃತ್ತದ ಅಂಡರ್ ಪಾಸ್‌ನಲ್ಲಿ ಕಾರು ಮುಳುಗಿ ಯುವತಿಯೊಬ್ಬರು ಮೃತಪಟ್ಟ ಘಟನೆ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತರು, ದುರ್ಘಟನೆಗೆ ಕಾರಣವಾದ ಅಂಶಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಂಸ್ಥೆಯ ಪೊಲೀಸ್ ವಿಭಾಗಕ್ಕೆ ನಿರ್ದೇಶನ ನೀಡಿದ್ದಾರೆ.

'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಸೋಮವಾರದ ಸಂಚಿಕೆಯಲ್ಲಿ ಪ್ರಕಟ-ವಾಗಿದ್ದ ವರದಿ ಆಧರಿಸಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಅಂಡರ್‌ಪಾಸ್‌ನಲ್ಲಿ ನಿಂತಿದ್ದ ಮಳೆಯ ನೀರಿನಲ್ಲಿ ಸಿಲುಕಿ ಭಾನುರೇಖಾ ಎಂಬ ಯುವತಿ ಸಾವಿಗೀಡಾದ ಘಟನೆ ಕುರಿತು ಲೋಕಾಯುಕ್ತರು ವಿಚಾರಣೆ ಆರಂಭಿಸಿದ್ದಾರೆ. ಬಿಬಿಎಂಪಿಯ ಮುಖ್ಯ ಆಯುಕ್ತರು, ಉತ್ತರ ವಲಯ ಆಯುಕ್ತರು, ಶಿವಾಜಿನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್, ಸಂಪಂಗಿರಾಮನಗರ ವಾರ್ಡ್‌ನ ಸಹಾಯಕ ಕಾರ್ಯನಿ-ರ್ವಾಹಕ ಎಂಜಿನಿಯರ್, ಸಹಾಯಕ ಎಂಜಿನಿಯರ್, ಬಿಬಿಎಂಪಿ ಮಳೆ ನೀರು ಕಾಲುವೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್, ಸಹಾಯಕ ಕಾರ್ಯ-ನಿರ್ವಾಹಕ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್ ಅವರನ್ನು ಪ್ರಕರಣದಲ್ಲಿ ಪ್ರತಿವಾದಿಗಳೆಂದು ಹೆಸರಿಸಲಾಗಿದೆ.

'ಕಾಲುವೆಗಳಲ್ಲಿ ನೀರು ಸರಾಗವಾಗಿ ಹರಿಯುವಂತೆ ನಿರ್ವಹಣೆ ಮಾಡುವುದು ಬಿಬಿಎಂಪಿ ಜವಾಬ್ದಾರಿ. ಈ ಪ್ರಕರಣ-ದಲ್ಲಿ ಮಳೆ ನೀರು ಕಾಲುವೆ ವಿಭಾಗದ ಅಧಿಕಾರಿಗಳು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ' ಎಂದು ಲೋಕಾಯುಕ್ತರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಘಟನೆಗೆ ಕಾರಣವಾದ ಅಂಶಗಳ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತ ಐಜಿಪಿಗೆ ನಿರ್ದೇಶನ ನೀಡಲಾಗಿದೆ. ಮುಂದಿನ ವಿಚಾರಣೆ ಜೂನ್ 15ಕ್ಕೆ ನಿಗದಿಯಾಗಿದೆ.

ಗೃಹಲಕ್ಷ್ಮಿ ಯೋಜನೆಗೆ ಆಧಾರ್ ಲಿಂಕ್: ಸುಳ್ಳು ಸುದ್ದಿ ತಡೆಗೆ ಜಿಲ್ಲಾಡಳಿತ ಕ್ರಮ

ಸೈಬರ್ ಕೇಂದ್ರಗಳ ಮೇಲೆ ದಾಳಿ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕೆಜಿಎಫ್ (ಕೋಲಾರ ಜಿಲ್ಲೆ): ಸರ್ಕಾರದ ಆದೇಶವಿಲ್ಲದೆ ಇದ್ದರೂ 'ಗೃಹಲಕ್ಷ್ಮಿ' ಯೋಜನೆಯಡಿ ಹಣ ಪಡೆಯಲು ಮೇ 31ರೊಳಗೆ ಬಿಪಿಎಲ್ ಪಡಿತರ ಚೀಟಿಗೆ ಆಧಾರ್ ಮತ್ತು ಬ್ಯಾಂಕ್ ಖಾತೆ ಜೋಡಣೆಯಾಗಬೇಕು ಎಂದು ಕರಪತ್ರಗಳ ಮೂಲಕ ಸಾರ್ವಜನಿಕರ-ನ್ನು ವಂಚಿಸಿದ ಆರೋಪದಡಿ ಮೂರು ಸೈಬರ್ ಕೇಂದ್ರಗಳ ಮಾಲೀಕರ ವಿರುದ್ಧ ರಾಬರ್ಟಸನ್‌ಪೇಟೆ ಠಾಣೆ ಪೊಲೀಸರು ಶುಕ್ರವಾರ ಪ್ರಕರಣ ದಾಖಲಿಸಿದ್ದಾರೆ.

ನಗರದ ಸೈಬರ್ ಕೇಂದ್ರಗಳಲ್ಲಿ 'ಗೃಹಲಕ್ಷ್ಮಿ' ಯೋಜನೆ ಹೆಸರಲ್ಲಿ ಮಹಿಳೆಯರಿಗೆ ವಂಚನೆ ಮಾಡುತ್ತಿರುವ ಬಗ್ಗೆ 'ಪ್ರಜಾವಾಣಿ'ಯಲ್ಲಿ ಶುಕ್ರವಾರ ವರದಿ ಪ್ರಕಟವಾಗಿತ್ತು. ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಕೂಡಲೇ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಾಬರ್ಟಸನ್‌ಪೇಟೆ 3ನೇ



ಕ್ರಾಸ್‌ನ ಜೆಪಿ ನೆಟ್ ಕಮ್ಯುನಿಕೇಷನ್, ಊರಿಗಾಂಪೇಟೆಯ ಮಿನಿ ಇಬ್ರಾಹಿಂ ರಸ್ತೆಯ ರಾಜಾ ನೆಟ್‌ವರ್ಕ್ ಕಮ್ಯುನಿಕೇಷನ್, ಮೋಹಿನ್ ಅಸೋಸಿಯೇಟ್ಸ್ ಕೇಂದ್ರಗಳಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಕಂದಾಯ ಇಲಾಖೆ ಸಿಬ್ಬಂದಿ ಮತ್ತು ಪೊಲೀಸರು ದಾಖಲೆ ಪರಿಶೀಲಿಸಿದರು.

'ಬಿಪಿಎಲ್ ಪಡಿತರ ಚೀಟಿಗಳಿಗೆ ಬ್ಯಾಂಕ್ ಖಾತೆ ಮತ್ತು ಆಧಾರ್ ಸಂಖ್ಯೆ ಜೋಡಿಸಬೇಕು. ಪಡಿತರ ಚೀಟಿಯಲ್ಲಿ ಮಹಿಳೆಯರನ್ನು ಮುಖ್ಯಸ್ಥರನ್ನಾಗಿ ಮಾಡಬೇಕು' ಎಂಬ ಜಾಹೀರಾತು ನೀಡಿದ ಸೈಬರ್ ಕೇಂದ್ರದ ಮಾಲೀಕರಾದ ಜಯಪ್ರಕಾಶ್, ಮೋಹಿನ್ ಅಸೋಸಿಯೇಟ್ಸ್ ಮತ್ತು ರಾಜ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ತಹಶೀಲ್ದಾರ್, ಆಹಾರ ನಿರೀಕ್ಷಕರು ಆರೋಪಿಗಳ ವಿರುದ್ಧ ದೂರು ಸಲ್ಲಿಸಿದ್ದರು.

ಬ್ಯಾಂಕ್ ಖಾತೆ, ಆಧಾರ್ ಜೋಡಣೆ ಮಾಡಿಸಲು ₹250ರಂತೆ ಹಣ ನೀಡುವಂತೆ ಜಾಹೀರಾತು ಪ್ರಕಟಿಸಿ ಸುಳ್ಳು ಸುದ್ದಿ ಹರಡಿದ್ದಾರೆ ಎಂದು ಇಂಥ ಸೈಬರ್ ಕೇಂದ್ರಗಳ ವಿರುದ್ಧ ಕೆಜಿಎಫ್ ತಹಶೀಲ್ದಾರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

'ಗೃಹಲಕ್ಷ್ಮಿ ಅಥವಾ ಇತರ ಯಾವುದೇ ಹೊಸ ಯೋಜನೆಗಳ ಬಗ್ಗೆ ಸರ್ಕಾರದಿಂದ ಯಾವುದೇ ಮಾರ್ಗಸೂಚಿ ಇದುವರೆಗೂ ಅಧಿಕೃತವಾಗಿ ಆದೇಶವಾಗಿರುವುದಿಲ್ಲ. ಸಾರ್ವಜನಿಕರು ವದಂತಿ ನಂಬಬಾರದು. ಗೃಹಲಕ್ಷ್ಮಿ ಅಥವಾ ಯಾವುದೇ ಯೋಜನೆಗಳ ಬಗ್ಗೆ ಮುಂಬರುವ ದಿನಗಳಲ್ಲಿ ನೀಡುವ ಮಾರ್ಗಸೂಚಿಯ ಅನ್ವಯ ಕ್ರಮಕೈಗೊಳ್ಳಲಾಗುತ್ತದೆ' ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಿಮಿನಲ್ ಪ್ರಕರಣದ ಎಚ್ಚರಿಕೆ

'ಗೃಹಲಕ್ಷ್ಮಿ ಯೋಜನೆಯಡಿ ₹ 250ವಸೂಲಿ ಮಾಡುತ್ತಿರುವ ಸೈಬರ್ ಕೇಂದ್ರಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಗುವುದು. ಸಾರ್ವಜನಿಕರನ್ನು ವಂಚಿಸಲು ಹೀಗೆ ಮಾಡಲಾಗುತ್ತಿದೆ. ಇಲಾಖೆಯೇ ಪಡಿತರ ಚೀಟಿಯಲ್ಲಿ ಮನೆಯ ಹಿರಿಯ ಸದಸ್ಯೆಯನ್ನೇ ಕುಟುಂಬದ ಮುಖ್ಯಸ್ಥೆಯಾಗಿ ಆಯ್ಕೆ ಮಾಡಲಾಗಿದೆ' ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆ ತಿಳಿಸಿದ್ದಾರೆ.

₹10.25 ಲಕ್ಷಕ್ಕೆ ಎತ್ತು ಮಾರಾಟ


ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ಪಾಲಹಳ್ಳಿಯ ವಿನು ಎಂಬವರ ಹಳ್ಳಿಕಾರ್ ತಳಿಯ ಒಂಟಿ ಎತ್ತನ್ನು ಶುಕ್ರವಾರ ₹10.25 ಲಕ್ಷ ದಾಖಲೆ ಬೆಲೆಗೆ ಚಿಕ್ಕಮಗಳೂರು ತಾಲ್ಲೂಕು ತೇಗೂರಿನ ಮಂಜಣ್ಣ ಎಂಬವವರು ಖರೀದಿಸಿದ್ದಾರೆ.

ಹಾಸನ, ಚಿಕ್ಕಮಗಳೂರು, ತರೀಕೆರೆ, ತೇಗೂರು ಸೇರಿದಂತೆ ಹತ್ತಕ್ಕೂ ಹೆಚ್ಚು ಕಡೆಗಳಲ್ಲಿ ಓಟದ ಸ್ಪರ್ಧೆಗಳಲ್ಲಿ ಎತ್ತು ಬಹುಮಾನಗಳನ್ನು ಪಡೆದಿತ್ತು. ಗಾಳಿ ವೇಗದಲ್ಲಿ ನುಗ್ಗುವ ಎತ್ತಿಗೆ 'ಬ್ರ್ಯಾಂಡ್ ಅಣ್ಣಪ್ಪ' ಎಂದು ವಿನು ಹೆಸರು ಇಟ್ಟಿದ್ದರು.

ಅವರು ಒಂದೂವರೆ ವರ್ಷದ ಹಿಂದೆ 'ಗಗನ್' ಎಂಬ ಹೆಸರಿನ ಮತ್ತೊಂದು ಎತ್ತನ್ನು ₹7.68 ಲಕ್ಷಕ್ಕೆ ಮಾರಿದ್ದರು. ಅದನ್ನೂ ತೇಗೂರಿನ ಮಂಜಣ್ಣ ಅವರೇ ಖರೀದಿಸಿದ್ದರು.

'ನನ್ನ ಬಳಿ ಎತ್ತಿನ ಗಾಡಿ ಓಟದ ಸ್ಪರ್ಧೆಗಾಗಿ ಸಾಕಿರುವ ಮತ್ತೊಂದು ಎತ್ತು ಇದೆ. ಅದಕ್ಕೆ 'ಅಣ್ಣಪ್ಪ' ಎಂದು ಹೆಸರಿಟ್ಟಿದ್ದೇನೆ. ಚಿತ್ರ ನಟ ದರ್ಶನ್ ಖರೀದಿಗೆ ಕೇಳಿದ್ದಾರೆ. ಇದು ನನಗೆ ಪ್ರಿಯವಾದ ಎತ್ತಾಗಿದ್ದು, ಮಾರುವುದಿಲ್ಲ' ಎಂದು ವಿನು 'ಪ್ರಜಾವಾಣಿ'ಗೆ ತಿಳಿಸಿದರು.



ಶ್ರೀರಂಗಪಟ್ಟಣ ತಾಲ್ಲೂಕಿನ ಪಾಲಹಳ್ಳಿಯ ವಿನು ಅವರ ಹಳ್ಳಿಕಾರ್ ತಳಿಯ ಎತ್ತು

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಪುಸ್ತಕ ಖರೀದಿಸಿದೆ



ಪ್ರಥಮ ಪಿಯು ಕಾಲೇಜಿನ ಶುಲ್ಕ ಕಟ್ಟಲು 'ಪ್ರಜಾವಾಣಿ' ಕೊಟ್ಟಿರುವ ವಿದ್ಯಾರ್ಥಿವೇತನ ಬಳಸಿಕೊಂಡಿದ್ದೇನೆ. ಉಳಿದ ಹಣದಲ್ಲಿ ವಿದ್ಯಾಭ್ಯಾಸಕ್ಕೆ ಬೇಕಾದ ಪುಸ್ತಕ ಕೊಂಡುಕೊಂಡಿದ್ದೇನೆ. ವಿದ್ಯಾರ್ಥಿಗಳ ಭವಿಷ್ಯವನ್ನು ಮುಂದಿಟ್ಟುಕೊಂಡು 'ಪ್ರಜಾವಾಣಿ'ಯು ವಿದ್ಯಾರ್ಥಿ ವೇತನವನ್ನು ನೀಡುತ್ತಿದ್ದು, ಈ ಉತ್ತಮ ಕಾರ್ಯ ಇತರರಿಗೂ ಮಾದರಿಯಾಗಿದೆ.

–**ಸ್ವಾತಿ,** ಉಡುಪಿ

ಕಾಲೇಜಿನ ಶುಲ್ಕ ಕಟ್ಟಲು ಬಳಸಿದೆ



ವಿದ್ಯಾರ್ಥಿ ವೇತನವನ್ನು ಪ್ರಥಮ ಪಿಯುಸಿ ಕೋರ್ಸ್‌ನ ಶುಲ್ಕ ಕಟ್ಟಲು ಬಳಸಿದೆ. ಕಷ್ಟದಲ್ಲಿದ್ದಾಗ 'ಪ್ರಜಾವಾಣಿ' ನೀಡಿದ ನೆರವು ಕೈಹಿಡಿಯಿತು. ಪತ್ರಿಕಾ ಬಳಗಕ್ಕೆ ಕೃತಜ್ಞತೆಗಳು. ಈ ಸಮಾಜಮುಖಿ ಕಾರ್ಯ ಮುಂದುವರೆಯಲಿ ಎಂದು ಆಶಿಸುತ್ತೇನೆ.

-**ಗೌತಮಿ,** ಚಿಕ್ಕಮಗಳೂರು

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ರಾಜೇಶ್ ಎಸ್. ಕಲ್ಲಾಜೆ,** ಇನ್‌ಸ್ಟಿಟ್ಯೂಟ್ ಆಫ್ ವುಡ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಮಲ್ಲೇಶ್ವರಂ	20,000
2	**ಕೆ.ಎನ್. ನಾಗೇಂದ್ರಪ್ರಸಾದ್.,** ನಂ.763, ಶ್ರೀಲಕ್ಷ್ಮಿ ನಿವಾಸ, 1ನೇ ಕ್ರಾಸ್, 13ನೇ ಮುಖ್ಯರಸ್ತೆ, ಎಚ್‌ಎಎಲ್ 3ನೇ ಹಂತ, ಕೋಡಿಹಳ್ಳಿ	10,116
3	**ಸರ್ವೋತ್ತಮ್ ಅಂಬೇಕರ್.,** ನಂ.51, ಅನುಶ್ರೀ, 3ನೇ ಕ್ರಾಸ್, ಜಯನಗರ, ಧಾರವಾಡ	10,000
4	**ವಿ. ಬುಧ್ಯ.,** ಇನ್‌ಸ್ಪೆಕ್ಷನ್ ಬಂಗಲೆ ಹತ್ತಿರ, 1ನೇ ಕ್ರಾಸ್, ವಿಶ್ವೇಶ್ವರಯ್ಯ ರಸ್ತೆ, ಉಡುಪಿ	10,000
5	**ಸರಸ್ವತಿ**	10,000
6	**ಕೆ.ಆರ್.ನಾರಾಯಣ ಶೆಟ್ಟಿ.,** 6/ಸಿ, 1ನೇ 'ಎ' ಮುಖ್ಯರಸ್ತೆ, ಮೇಟಗಳ್ಳಿ, ಮೈಸೂರು	10,000
7	**ಎಸ್.ಪಿ. ಶ್ಯಾನ್‌ಭಾಗ್.,** ಲಂಡಕನಹಳ್ಳಿ, ಶಿರಸಿ	10,000
8	**ಸಿ.ಎನ್. ಯಶವಂತ.,** ಒಜಿ4, 1ನೇ ಗೇಟ್, ಇಶಾಮಿಸ್ಟ್ರಿಗ್ರೀನ್, ದೊಡ್ಡ ವಾಟರ್ ಟ್ಯಾಂಕ್ ಹತ್ತಿರ, ಚನ್ನಸಂದ್ರ, ಕಾಡುಗುಡಿ	10,000
9	**ಕೆ.ಲಕ್ಷ್ಮಿರಾಮಸ್ವಾಮಿ.,** ಶ್ಯಾಮ್‌ರಾವ್ ಕಾಂಪೌಂಡ್, ಓಲ್ಡ್ ಬಾರ್ ಲೈನ್ ರಸ್ತೆ, ಶಿವಮೊಗ್ಗ	10,000
10	**ಲಕ್ಷ್ಮೀ ನಾರಾಯಣ ಹೆಗಡೆ.,** 241, ಮೊದಲ ತಿರುವು, ಟಿ.ಜಿ.ಎನ್ ಬಾರನ್‌ಗೇ, ಮೀನಾಕ್ಷಿ ಭವನದ ಹಿಂಭಾಗ	10,000
11	**ಗುಪ್ತ ಎಸ್.ಎ.ಎಲ್.,** ಫ್ರೆಂಚ್ ಫಾಮ್, 5ನೇ ಕ್ರಾಸ್, ಮಲ್ಲೇಶ್ವರಂ ಸರ್ಕಲ್, ಮಲ್ಲೇಶ್ವರಂ	10,000
12	**ರಘುನಾಥ್ ಎಂ.ಎಸ್.,** ಎಚ್‌ಐಜಿ 40, 6ನೇ ಮೇನ್, ಕೆ.ಎಚ್.ಬಿ ಕಾಲೊನಿ, 2ನೇ ಹಂತ, ಬಸವೇಶ್ವರ ನಗರ, ಬೆಂಗಳೂರು	6,000
13	**ಅಶೋಕ್ ಸುಂಕದ್.,** ನಂ. ಜಿ2, ಫೈನ್ ರಿಡ್ಜ್ ಅಪಾರ್ಟ್‌ಮೆಂಟ್, 19ನೇ ಕ್ರಾಸ್, ಜಕ್ಕೂರು ಲೇಔಟ್, ಎಸ್‌ಬಿಐ ಜ್ಞಾನಜ್ಯೋತಿ ಹತ್ತಿರ	5,001
14	**ಎಂ.ನಿಂಗಯ್ಯ.,** ನಂ.525, 11ನೇ ಕ್ರಾಸ್, 5ನೇ ಮುಖ್ಯರಸ್ತೆ, ಎನ್‌ಜಿಇಎಫ್ ಲೇಔಟ್, ಮಲ್ಲತ್ತಹಳ್ಳಿ	5,000
15	**ಚಂದ್ರಶೇಖರಯ್ಯ.,** ನಂ. 914ಎ, 13ನೇ ಕ್ರಾಸ್, 17ಎ ಮುಖ್ಯರಸ್ತೆ, ಬಿಟಿಎಂ 4ನೇ ಹಂತ, 2ನೇ ಬ್ಲಾಕ್, ದೇವರಚಿಕ್ಕನಹಳ್ಳಿ	5,000
16	**ಬಸವರಾಜು ಎಚ್.ಆರ್.,** 310ಬಿ, ಪರಿವಾರ್ ಪೆಂಡೆಂಟ್ ಅಪಾರ್ಟ್‌ಮೆಂಟ್, 1ನೇ ಎ ಕ್ರಾಸ್, 1ನೇ ಮೇನ್, ಸುಪ್ರೀಂ ರೆಸಿಡೆನ್ಸಿ ಲೇಔಟ್, ಕೋಡಿಚಿಕ್ಕನಹಳ್ಳಿ	5,000
17	**ಎಚ್.ಯು. ಅನಂತಸುಬ್ಬರಾವ್.,** ನಂ.37, 16ನೇ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ	3,000
18	**ಆರ್.ವಿ. ಶ್ರೀನಿವಾಸನ್.,** ನಂ. 233, 1ನೇ ಮುಖ್ಯರಸ್ತೆ, 2ನೇ ಮೇನ್ ರೋಡ್, ಕಸ್ತೂರಿ ನಗರ, ಎನ್‌ಜಿಇಎಫ್ ಪೂರ್ವ ಬಡಾವಣೆ	2,000
19	**ಎ. ಸುವೇಲಾ.,** ಸುರೇಶ್ ಸ್ಟೋರ್ ಮುಖ್ಯರಸ್ತೆ, ತುಂಗಭದ್ರಾ ಸ್ಕೂಲ್, ವಿಜಯನಗರ ಜಿಲ್ಲೆ	2,000
20	**ಜಿ. ಮೃತ್ಯುಂಜಯ.,** 7047, ಪ್ರೆಸ್ಟೀಜ್ ಬಾಗಮನೆ, ಟೆಂಪಲ್ ಬೆಲ್ಸ್, ಆರ್.ಆರ್. ನಗರ, ಬೆಂಗಳೂರು	2,000
21	**ದಿಲೀಪ್ ಪಿ.ಆರ್.,** ನಂ. 92, 1ನೇ ಮೇನ್, ಜೆ.ಪಿ. ನಗರ 7ನೇ ಹಂತ, ಎನ್.ಟಿ. ನಗರ	1,200
22	**ಎ.ವಿ. ಮಂಜುನಾಥ್.,** ಫ್ಲಾಟ್ ನಂ. ಎಫ್‌ಎಫ್06, ಶ್ರೀಸಾಯಿ ಗಂಗಾ ಅಪಾರ್ಟ್‌ಮೆಂಟ್, ಗಾಂಧಿನಗರ, ಧಾರವಾಡ	1,011
23	**ಮುರುಗೇಶ್ ಹನಗೋಡಿಮಠ.,** ನಂ. 179, 1ನೇ ಮೇನ್, ಲಕ್ಷ್ಮಿನಗರ, ಗೋಕುಲ ರಸ್ತೆ, ಕೆನರಾ ಬ್ಯಾಂಕ್ ಹತ್ತಿರ	1,002
24	**ಟಿ.ಸಿ.ಸಾತ್ಪುತೆ., ಎಸ್.ಆರ್. ಕಾಲೊನಿ, ಜಲನಗರ, ವಿಜಯಪುರ**	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ	1,59,330

ಟಿಕೆಟ್ ರಹಿತ ರೈಲು ಪ್ರಯಾಣ: ₹ 2,200 ಕೋಟಿ ದಂಡ ವಸೂಲಿ

ನವದೆಹಲಿ (ಪಿಟಿಐ): ಟಿಕೆಟ್ ಪಡೆಯದೇ ರೈಲುಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ನಾಗಾಲೋಟದತ್ತ ಜಿಗಿಯುತ್ತಿದೆ. 2022–23ನೇ ಸಾಲಿನಲ್ಲಿ ಸುಮಾರು 3.6 ಕೋಟಿ ಪ್ರಯಾಣಿಕರು ಟಿಕೆಟ್ ಇಲ್ಲದೆ ಪ್ರಯಾಣಿಸಿದ್ದು ಇವರಿಂದ ₹2,200 ಕೋಟಿ ದಂಡ ವಸೂಲಿ ಮಾಡಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ. ಮಧ್ಯಪ್ರದೇಶದ ಆರ್‌ಟಿಐ ಕಾರ್ಯಕರ್ತ ಚಂದ್ರಶೇಖರ್ ಗೌರ್ ಅವರು ಆರ್‌ಟಿಐ ಅಡಿ ಸಲ್ಲಿಸಿದ್ದ ಅರ್ಜಿಗೆ, ಕಳೆದ ಮೂರು ವರ್ಷಗಳ ಅವಧಿಯಲ್ಲಿನ ಟಿಕೆಟ್‌ರಹಿತ ಪ್ರಯಾಣಿಕರ ಸಂಖ್ಯೆ ಮತ್ತು ಅವರಿಂದ ವಸೂಲಿ ಮಾಡಿದ ದಂಡದ ಮೊತ್ತದ ಮಾಹಿತಿಯನ್ನು ರೈಲ್ವೆ ಇಲಾಖೆಯು ಒದಗಿಸಿದೆ.

ಇಂಗ್ಲಿಷ್ ಅನ್ನು ಮಕ್ಕಳಿಗೆ ಭಾಷೆಯಾಗಷ್ಟೇ ಕಲಿಸಬೇಕು, ಮಾಧ್ಯಮವಾಗಿ ಬೇಡ ಎಂಬ ಸ್ಪಷ್ಟ ನಿಲುವು ಹೊಂದಿದ್ದ ಅವರು ಎಲ್ಲೆಡೆ ಅದನ್ನು ಪ್ರತಿಪಾದಿಸುತ್ತಿದ್ದರು. ಅವರ ಮಗಳನ್ನೂ ಕನ್ನಡ ಮಾಧ್ಯಮದಲ್ಲೇ ಓದಿಸಿದರು. ಖಚಿತ ನಿಲುವಿನ ವಿಷಯದಲ್ಲಿ ಅವರಿಗೆ ಅವರೇ ಸಾಟಿ

ವೈಚಾರಿಕ ಚಿಂತನೆಯ ಪ್ರೇರಕ ಶಕ್ತಿ

ನುಡಿ ನಮನ

● ಪ್ರೊ.ಪಂಡಿತಾರಾಧ್ಯ

ಗುರುಗಳಾದ ಜಿ.ಎಚ್.ನಾಯಕರದ್ದು ಸ್ವಾತಂತ್ರ್ಯ ಹೋರಾಟಗಾರರ ಮನೆತನ.ಪಿಯುಸಿಯಿಂದ ಮೈಸೂರಿನಲ್ಲೇ ಓದಿದ ಅವರು, ಇಲ್ಲೇ ಬದುಕು ರೂಪಿಸಿಕೊಂಡಿದ್ದರು. ಮಹಾರಾಜ ಕಾಲೇಜಿನಲ್ಲಿ 1969ರಲ್ಲಿ ನನಗೆ ಮೇಷ್ಟ್ರಾಗಿದ್ದರು. ಅದಕ್ಕಿಂತ ಮುಂಚೆ ಯುವರಾಜ ಕಾಲೇಜಿನಲ್ಲಿದ್ದರು. ಬಳಿಕ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಬಂದರು. ಅವರು ನಮ್ಮ ಮೇಷ್ಟ್ರೆಂಬುದು ಹೆಮ್ಮೆ. ಎಲ್ಲ ರೀತಿಯಲ್ಲೂ ಯೋಚಿಸಲು ಕಲಿಸಿದವರು.

ಮೈಸೂರಿನಲ್ಲಿ ಸಾರ್ವಜನಿಕ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಓದಿದವರು. ಯು.ಆರ್. ಅನಂತಮೂರ್ತಿ ಅವರನ್ನು ಗುರುಗಳು ಎಂದು ಕರೆಯುತ್ತಿದ್ದರು. ಅವರು ಮಹಾರಾಜ ಕಾಲೇಜಿಗೆ ಬಂದಾಗ, ನಮ್ಮದು ಐಚ್ಛಿಕ ಕನ್ನಡ ಕೋರ್ಸ್‌ನ ಮೊದಲ ಬ್ಯಾಚ್. 'ನಮ್ಮ ಮನೆಯ ಹಿರಿಯರು' ಎಂಬ ಆತ್ಮೀಯತೆ ಮೂಡುವಂತೆ ನಮ್ಮೊಂದಿಗೆ ಇರುತ್ತಿದ್ದರು. ವಿದ್ಯಾರ್ಥಿಗಳೊಂದಿಗೆ ನಿರಂತರವಾದ ಸಂಪರ್ಕವಿತ್ತು. ಅವರು ಮಾನಸ ಗಂಗೋತ್ರಿಗೆ ಬಂದಾಗ, ನಾನು ಅಧ್ಯಾಪಕನಾಗಿ ಮಂಗಳ ಗಂಗೋತ್ರಿಗೆ ಆಯ್ಕೆಯಾದೆ.

ಕಾಲೇಜಿನಲ್ಲಿ ಅವರು ಡಾ.ಬಿ.ಆರ್.ಅಂಬೇಡ್ಕರ್ - ಮಹಾತ್ಮ ಗಾಂಧೀಜಿ ಸಂಬಂಧಾಂತರದ ಬಗ್ಗೆ ಹೇಳುತ್ತಿದ್ದರು. ಅಲ್ಲಿವರೆಗೆ ಮೇಷ್ಟ್ರೊಬ್ಬರು ಅಂಥ ವಿಷಯವನ್ನು ಮಾತನಾಡಿದ್ದನ್ನು ನಾನು ಕೇಳಿರಲಿಲ್ಲ. ಪಠ್ಯವನ್ನಷ್ಟೆ ಬೋಧಿಸದೆ ಬದುಕಿನ ಸಂಗತಿಗಳನ್ನೂ ಹೇಳುತ್ತಾ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಚಿಂತನೆಯ ಅರಿವು ಮೂಡಿಸಿದವರು. ಸ್ವಂತ ಯೋಚನೆ ಮಾಡುವುದನ್ನು ಕಲಿಸಿಕೊಟ್ಟವರು.

1974ರಲ್ಲಿ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ 'ಜಾತಿ ವಿನಾಶ ಸಮ್ಮೇಳನ' ನಡೆದಾಗ ಪ್ರಮುಖ ಪಾತ್ರ ವಹಿಸಿದ್ದರು.

ಸಾಹಿತ್ಯದಲ್ಲಿ ಅವರ ಸಾಧನೆ ಬಹಳ ಎತ್ತರದ್ದು. ಕನ್ನಡ ವಿಮರ್ಶಕರಾಗಿ ಬಹಳ ದೊಡ್ಡ ಹೆಸರು ಮಾಡಿದವರು. ಅಪ್ಪಟ ಪ್ರಾಮಾಣಿಕ. ಗಾಂಧಿ, ಅಂಬೇಡ್ಕರ್ ಚಿಂತನೆಗಳನ್ನು ಮೈಗೂಡಿಸಿಕೊಂಡವರು. ತಮ್ಮ ಬಳಿ ಕಲಿತ ಹಾಗೂ ತಮ್ಮ ಸಂಪರ್ಕಕ್ಕೆ ಬಂದ ಸಾವಿರಾರು ವಿದ್ಯಾರ್ಥಿಗಳನ್ನು ಆ ಚಿಂತನೆಗೆ ಹಚ್ಚಿದವರು. ತೀರಾ ಇತ್ತೀಚಿನವರೆಗೂ ಅವರೊಂದಿಗೆ ಚರ್ಚಿಸಿ ಅವರ ಸಲಹೆಗಳನ್ನು ಪಡೆದುಕೊಂಡೇ ಪ್ರಗತಿಪರ ಹೋರಾಟಗಳನ್ನು ನಡೆಸುತ್ತಿದ್ದೆವು. ಆಗಾಗ, ಅವರ ಮನೆಯೇ ಚರ್ಚೆಯ ಕೇಂದ್ರವಾಗುತ್ತಿತ್ತು.

ಇಂಗ್ಲಿಷ್ ಅನ್ನು ಮಕ್ಕಳಿಗೆ ಭಾಷೆಯಾಗಷ್ಟೇ ಕಲಿಸಬೇಕು, ಮಾಧ್ಯಮವಾಗಿ ಬೇಡ ಎಂಬ ಸ್ಪಷ್ಟ ನಿಲುವು ಹೊಂದಿದ್ದ ಅವರು ಎಲ್ಲೆಡೆ ಅದನ್ನು ಪ್ರತಿಪಾದಿಸುತ್ತಿದ್ದರು. ಅವರ ಮಗಳನ್ನೂ ಕನ್ನಡ ಮಾಧ್ಯಮದಲ್ಲೇ ಓದಿಸಿದರು. ಖಚಿತ ನಿಲುವಿನ ವಿಷಯದಲ್ಲಿ ಅವರಿಗೆ ಅವರೇ ಸಾಟಿ.

ಅವರ ವಿದ್ಯಾರ್ಥಿಗಳಲ್ಲಿ ಬಹುತೇಕರು ಪ್ರಗತಿಪರ ಚಿಂತನೆಯನ್ನು ಮೈಗೂಡಿಸಿಕೊಂಡವರೇ ಆಗಿದ್ದಾರೆ. ಅವರು ಯಾವುದೇ ಹಬ್ಬ-ಹರಿದಿನ ಅಥವಾ ಧಾರ್ಮಿಕ ಆಚರಣೆಗಳನ್ನು ಮಾಡಿದವರಲ್ಲ. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವದಂಥ ರಾಷ್ಟ್ರೀಯ ಹಬ್ಬಗಳನ್ನಷ್ಟೇ ಆಚರಿಸುತ್ತಿದ್ದರು.

ತಾವು ಕಟ್ಟಿಸಿದ ಮನೆಗೆ ಅವರು ಗಣರಾಜ್ಯೋತ್ಸವದ ದಿನವೇ ಬಂದರು. ಆದರೆ, ಗೃಹಪ್ರವೇಶದ ರೀತಿ ಕಾರ್ಯಕ್ರಮ ಮಾಡಲಿಲ್ಲ. ಅವರ ಮನೆಯಲ್ಲಿ ದೇವರ ಮನೆ ಎನ್ನುವುದೇ ಇಲ್ಲ. ಬಹಳಷ್ಟು ಪುಸ್ತಕಗಳ ಸಂಗ್ರಹವಿದೆ. ನಾವು ಗಣರಾಜ್ಯೋತ್ಸವದಂದು ಮನೆಗೆ ಬಂದು ಮೇಷ್ಟ್ರ ಜೊತೆ ಮಾತನಾಡಿ, ಕಾಫಿ ಕುಡಿದು ಹೋಗುತ್ತಿದ್ದೆವು.



ಚಿತ್ರ: ಮೀರಾ ಅವರೊಂದಿಗೆ ಜಿ.ಎಚ್. ನಾಯಕ

ಅವರ ಬದುಕೂ ಸರಳ. ಕಂಪ್ಯೂಟರ್ ಅಥವಾ ಮೊಬೈಲ್ ಫೋನ್ ಗೊಡವೆಗೆ ಹೋಗಲಿಲ್ಲ. ಸಂವಹನಕ್ಕೆ ಲ್ಯಾಂಡ್‌ಲೈನ್ ಫೋನ್ ಬಳಸುತ್ತಿದ್ದರು. ಸಾಂಗತ್ಯವೇನಿದ್ದರೂ ಪುಸ್ತಕಗಳ ಜೊತೆಗೇ.

ಹೃದಯಾಘಾತಕ್ಕೆ ಒಳಗಾದ ನಂತರ, ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಯಾವುದೇ ವಿಷಯವಾಗಲಿ ಸಮಗ್ರವಾಗಿ ಯೋಚಿಸಬೇಕು ಎಂಬುದು ಅವರ ಸಲಹೆ, ಪ್ರತಿಪಾದನೆಯಾಗಿರುತ್ತಿತ್ತು. ಹಾಗೆಯೇ ಬಾಳಿದರು ಕೂಡ.

ಕೊನೆವರೆಗೂ ಜಾತಿ ವ್ಯವಸ್ಥೆಯ ವಿರುದ್ಧವೇ ಇದ್ದರು. ಸಮಾನತೆ ಹಾಗೂ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುತ್ತಿದ್ದರು. ರಂಗಾಯಣವನ್ನು ಮೈಸೂರಿನಲ್ಲಿ ಉಳಿಸುವ ದಿಸೆಯಲ್ಲಿ ಮೇಷ್ಟ್ರ ವಹಿಸಿದ ಪಾತ್ರ ಪ್ರಮುಖವಾಗಿತ್ತು.

ಅವರ ನಡೆಯೆಲ್ಲವೂ ಮಾದರಿಯಾಗಿದ್ದವು. ಅಡ್ಡದಾರಿಗಳಲ್ಲಿ ಹೋಗಬಾರದು, ನೇರ ದಾರಿಯನ್ನು ಕಂಡುಕೊಳ್ಳಬೇಕು ಎಂಬುದನ್ನು ಕಲಿಸಿಕೊಟ್ಟವರು. ಅಂತರ್ಜಾತಿ ವಿವಾಹ ಹಾಗೂ ಸರಳ ಮದುವೆಯನ್ನು ಬೆಂಬಲಿಸುತ್ತಿದ್ದ ಅವರು, ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಸರಳವಾಗಿ ಮಗಳ ಮದುವೆ ಮಾಡಿದ್ದರು. ಯಾವುದೇ ಅಂಧಶ್ರದ್ಧೆಗಳನ್ನು ಅನುಸರಿಸಿದವರಲ್ಲ. ವೈಚಾರಿಕತೆಯ ಹಾದಿಯಲ್ಲೇ ಸಾಗಿದವರು.

'ನಿಮ್ಮ ಮಗ ನಾಯಕರ ಸಹವಾಸ ಮಾಡುತ್ತಿದ್ದಾನೆ, ಹಾಳಾಗಿ ಹೋಗುತ್ತಾನೆ, ಎಚ್ಚರಿಕೆಯಿಂದ ನೋಡಿಕೊಳ್ಳಿ' ಎಂದು ಕೆಲವರು ನಮ್ಮ ತಂದೆ ಬಳಿ ದೂರು ಹೇಳಿದ್ದರು. ಈ ವಿಷಯ ನನ್ನ ಕಿವಿಗೆ ಬಿತ್ತು. ಒಂದು ದಿನ ತಂದೆಗೆ ಮೇಷ್ಟ್ರನ್ನು ಪರಿಚಯಿಸಿದ್ದೆ. ಅವರೊಂದಿಗೆ ಮಾತನಾಡಿದ ನಂತರ ಹಾಗೂ ಅವರ ಬಗ್ಗೆ ತಿಳಿದ ಬಳಿಕ ನನ್ನ ತಂದೆ, 'ಮಾಡಿದರೆ ಇಂಥವರ ಸಹವಾಸ ಮಾಡಬೇಕು, ಆಗ ಬೆಳೆಯುತ್ತೀಯಾ' ಎಂದು ಸಲಹೆ ನೀಡಿದ್ದರು!

ತಮ್ಮೊಂದಿಗೆ ಸಂಪರ್ಕಕ್ಕೆ ಬಂದವರನ್ನು ಪ್ರಭಾವಿಸಿ ವೈಚಾರಿಕ ಚಿಂತನೆಗಳಿಗೆ ಮನಸ್ಸು ತೆರೆಯುವಂತೆ ಮಾಡಿದವರು. ಹಂಪಿ ವಿಶ್ವವಿದ್ಯಾಲಯದಲ್ಲೂ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಹೋದಲ್ಲೆಲ್ಲ ವಿದ್ಯಾರ್ಥಿಗಳು ಹಾಗೂ ಒಡನಾಡಿಗಳು ಸಾಹಿತ್ಯಿಕವಾಗಿ ಮಾತ್ರವಲ್ಲದೆ ಸಾಮಾಜಿಕ ಚಟುವಟಿಕೆಗಳಲ್ಲೂ ಪಾಲ್ಗೊಳ್ಳಲು ಪ್ರೇರಕ ಶಕ್ತಿಯಾಗಿದ್ದರು.

ಪ್ರೊ.ಜಿ.ಎಚ್. ನಾಯಕ ಇನ್ನಿಲ್ಲ

ಒಂದನೇ ಪುಟದಿಂದ....

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಸೂರ್ವೆಯಲ್ಲಿ 1935ರ ಸೆ.18ರಂದು ಜನಿಸಿದ್ದ ನಾಯಕ, ಉನ್ನತ ಶಿಕ್ಷಣ ಪಡೆಯಲು ಮೈಸೂರಿಗೆ ಬಂದರು. ತಾವು ಓದಿದ್ದ ಮೈಸೂರು ವಿಶ್ವವಿದ್ಯಾಲಯದಲ್ಲೇ ಕನ್ನಡ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ವೈಚಾರಿಕ ಹಾಗೂ ಪ್ರಗತಿಪರ ಚಿಂತಕರಾಗಿದ್ದ ಅವರು ಜನಪರ ಚಳವಳಿಗಳಲ್ಲೂ ಪಾಲ್ಗೊಳ್ಳುತ್ತಿದ್ದರು. ಹಲವು ಹೋರಾಟಗಳಿಗೆ ಪ್ರೇರಕ ಶಕ್ತಿಯೂ ಆಗಿದ್ದರು. ದಿಟ್ಟ ನಿಲುವು ಹಾಗೂ ಖಚಿತ ಅಭಿಪ್ರಾಯಕ್ಕೆ ಹೆಸರಾಗಿದ್ದರು. ವಿದ್ಯಾರ್ಥಿಗಳ ನೆಚ್ಚಿನ ಅಧ್ಯಾಪಕರಾಗಿದ್ದರು. ಕವಿ ಹಾಗೂ ಬರಹಗಾರರಾಗಿಯೂ ಗುರುತಿಸಿಕೊಂಡಿದ್ದರು.

'ಸಮಕಾಲೀನ', 'ಅನಿವಾರ್ಯ', 'ನಿರಪೇಕ್ಷೆ', 'ನಿಜದನಿ', 'ವಿನಯ ವಿಮರ್ಶೆ', 'ಸಕಾಲಿಕ', 'ಗುಣ ಗೌರವ', 'ಹರಿಶ್ಚಂದ್ರ ಕಾವ್ಯ ಓದು-ವಿಮರ್ಶೆ', 'ಕೃತಿ ಸಾಕ್ಷಿ', 'ಸ್ಥಿತಿ ಪ್ರಜ್ಞೆ', 'ಮತ್ತೆ ಮತ್ತೆ ಪಂಪ', 'ಸಾಹಿತ್ಯ ಸಮೀಕ್ಷೆ', 'ಉತ್ತರಾರ್ಧ' ಅವರ ಪ್ರಮುಖ ಕೃತಿಗಳು. 'ಕನ್ನಡ ಸಣ್ಣಕಥೆಗಳು', 'ಹೊಸಗನ್ನಡ ಕವಿತೆಗಳು', 'ಸಂವೇದನೆ' (ಅಡಿಗರ ಗೌರವ ಗ್ರಂಥ), 'ಶ್ರೀರಾಮಾಯಣ ದರ್ಶನಂ ಕುವೆಂಪು ಸ್ವಹಸ್ತಾಕ್ಷರ ಪ್ರತಿ', 'ಶತಮಾನದ ಕನ್ನಡ ಸಾಹಿತ್ಯ' (ಸಂಪುಟ - 1,2) ಕೃತಿಗಳನ್ನು ಸಂಪಾದಿಸಿದ್ದರು. 'ಬಾಳು' ಅವರ ಆತ್ಮಕಥನ.

'ಉತ್ತರಾರ್ಧ' ಕೃತಿಗೆ 2014ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ನಿರಪೇಕ್ಷ' ವಿಮರ್ಶಾ ಕೃತಿಗೆ 'ಕರ್ನಾಟಕ ಸಾಹಿತ್ಯ ಅಕಾಡೆಮಿ'ಯ ಪ್ರಶಸ್ತಿ ಪಡೆದಿದ್ದರು. 'ನಿಜದನಿ' ವಿಮರ್ಶಾ ಕೃತಿಗೆ 'ವಿ.ಎಂ.ಇನಾಂದಾರ ಸ್ಮಾರಕ ಬಹುಮಾನ' ಲಭಿಸಿತ್ತು. ಪಂಪ ಪ್ರಶಸ್ತಿ ಪುರಸ್ಕೃತರಾಗಿದ್ದರು.

ಕನ್ನಡ ಸಾಹಿತ್ಯದಲ್ಲಿ 'ವಿನಯ ವಿಮರ್ಶೆ' ಎಂಬ ಪರಿಭಾಷೆಯನ್ನು ಪರಿಚಯಿಸಿದ್ದರು. ಕುವೆಂಪು ಅವರ ಸಾಹಿತ್ಯವನ್ನು ಕಟುವಾಗಿ ವಿಮರ್ಶಿಸಿದ್ದರು.

ನಾನು ವಿದ್ಯುತ್ ಬಿಲ್ ಕಟ್ಟಲ್ಲ, ನೀವೂ ಕಟ್ಟಬೇಡಿ: ಅಶೋಕ

ಒಂದನೇ ಪುಟದಿಂದ....

'ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಎಂದು ಭರವಸೆ ನೀಡಿದ್ದಾರೆ. ಮಾವನ ಮನೆಗೆ ಹೋಗುವವರಿಗೆ, ಸೊಸೆ ಕರೆದುಕೊಂಡು ಬರಲು ಅತ್ತೆ ಹೋದರೆ ಫ್ರೀ, ಹೀಗೆ ಯಾವುದೇ ಉದ್ದೇಶದಿಂದ ಬಸ್ಸಿನಲ್ಲಿ ಮಹಿಳೆಯರು ಪ್ರಯಾಣ ಮಾಡಿದರೂ ಟಿಕೆಟ್ ತೆಗೆದುಕೊಳ್ಳಬಾರದು ಎಂದು ಶಿವಕುಮಾರ್ ಹೇಳಿದ್ದರು. ಈಗ ಅವರು ದಾರಿಯಲ್ಲಿ ಹೋಗುವವರಿಗೆಲ್ಲ ಗ್ಯಾರಂಟಿ ಕೊಡಲು ಸಾಧ್ಯವೇ ಎಂದು ಪ್ರಶ್ನಿಸುತ್ತಿದ್ದಾರೆ. ಇವರು ದಾರಿಯಲ್ಲಿ ಹೋಗುವವರಿಂದ ಮತ ಹಾಕಿಸಿಕೊಂಡಿಲ್ಲವೇ? ಗ್ಯಾರಂಟಿ ಆಶ್ವಾಸನೆ ನೀಡಿ ಈಗ ಅಪಮಾನ ಮಾಡುತ್ತಿದ್ದಾರೆ. ನಾಚಿಕೆ ಆಗುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಜನರು ಗ್ಯಾರಂಟಿ ವಿಚಾರ ಪ್ರಸ್ತಾಪಿಸುತ್ತಿರುವುದರಿಂದ ಗಮನ ಬೇರೆಡೆ ಸೆಳೆಯಲು ಆರ್‌ಎಸ್‌ಎಸ್ ನಿಷೇಧದ ವಿಚಾರವನ್ನು ಮುನ್ನಲೆಗೆ ತಂದಿದ್ದಾರೆ. ನೀವು ಬಿಡಿ, ನಿಮ್ಮಪ್ಪ, ನಿಮ್ಮಜ್ಜಿ, ಮುತ್ತಾತನಿಗೇ ನಿಷೇಧ ಮಾಡಲು ಆಗಲಿಲ್ಲ. ಸಂಸತ್ತಿನಲ್ಲಿ ಬಹುಮತ ಇದ್ದಾಗಲೇ ಅವರ ಬೇಳೆ ಬೇಯಲಿಲ್ಲ. ತಾಕತ್ತಿದ್ದರೆ ನಿಷೇಧ ಮಾಡಿ' ಎಂದು ಸವಾಲು ಹಾಕಿದರು.

ಇಂದು ಸಂಪುಟ ವಿಸ್ತರಣೆ

ಒಂದನೇ ಪುಟದಿಂದ...

ಹಿರಿಯ ಶಾಸಕ ಎಚ್.ಕೆ.ಪಾಟೀಲ ಬದಲು ಎನ್.ಎಚ್.ಕೋನರಡ್ಡಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಸಿದ್ದರಾಮಯ್ಯ ಒಲವು ತೋರಿದ್ದರು. ಆದರೆ, ಹೈಕಮಾಂಡ್ ಎಚ್.ಕೆ. ಪಾಟೀಲಗೆ ಅವಕಾಶ ನೀಡಿದೆ.

ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಹೊಸಬರಿಗೆ ಅವಕಾಶ ನೀಡಬೇಕು ಎಂದು ಸಿದ್ದರಾಮಯ್ಯ ವಾದಿಸಿದರು. ಆದರೆ, ಇದಕ್ಕೆ ಹೈಕಮಾಂಡ್ ಪೂರ್ಣ ಸಮ್ಮತಿ ಸೂಚಿಸಿಲ್ಲ. ಹೊಸಬರ ಜೊತೆಗೆ ಹಳಬರಿಗೂ ಅವಕಾಶ ನೀಡಲಾಗಿದೆ.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ವಿಶೇಷ ವಿಮಾನದಲ್ಲಿ ಶುಕ್ರವಾರ ರಾತ್ರಿ ಬೆಂಗಳೂರಿಗೆ ಮರಳಿದರು. ಬಳಿಕ ಸಂಪುಟಕ್ಕೆ ಸೇರ್ಪಡೆಯಾಗುವ ಶಾಸಕರಿಗೆ ಕರೆ ಮಾಡಿ ಮಾಹಿತಿ ನೀಡಿದರು.

ಬಿ.ಕೆ. ಹರಿಪ್ರಸಾದ್ ರಾಜೀನಾಮೆ?

ಒಂದನೇ ಪುಟದಿಂದ...

ಮಾಜಿ ಶಾಸಕ ಎನ್.ಎಸ್.ಬೋಸರಾಜು ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಕುರಿತು ತೀರ್ಮಾನ ತೆಗೆದುಕೊಳ್ಳಲಾಗಿದೆ. 'ಹೈಕಮಾಂಡ್‌ನಿಂದ ನನಗೆ ಯಾವುದೇ ಕರೆ ಬಂದಿಲ್ಲ. ತಡ ರಾತ್ರಿ ಕರೆ ಬಂದರೂ ಬರಬಹುದು' ಎಂದು ಬೋಸರಾಜು ತಿಳಿಸಿದರು.

ಪರಿಷತ್‌ನ ಮಾಜಿ ಸದಸ್ಯರೂ ಆಗಿರುವ ಬೋಸರಾಜು ಅವರು ಈ ಸಲ ಟಿಕೆಟ್ ಆಕಾಂಕ್ಷಿಯಾಗಿದ್ದರು. 'ನಿಮಗೆ ಟಿಕೆಟ್ ನೀಡುವುದಿಲ್ಲ. ಎರಡು ವರ್ಷಗಳ ಅವಧಿಗೆ ಸಚಿವರನ್ನಾಗಿ ಮಾಡುತ್ತೇವೆ. ಪರಿಷತ್ ಸದಸ್ಯರನ್ನಾಗಿ ಮಾಡುತ್ತೇವೆ' ಎಂದು ರಾಜ್ಯ ನಾಯಕರು ಬೋಸರಾಜು ಅವರಿಗೆ ವಾಗ್ದಾನ ನೀಡಿದ್ದರು. ಹೀಗಾಗಿ, ಅವರಿಗೆ ಈಗ ಅವಕಾಶ ನೀಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಹರಿಪ್ರಸಾದ್ ಅವರಿಗೆ ಯಾವುದೇ ಕಾರಣಕ್ಕೆ ಸಚಿವ ಸ್ಥಾನ ನೀಡಬಾರದು ಎಂದು ಹಟಕ್ಕೆ ಬಿದ್ದಿರುವ ಸಿದ್ದರಾಮಯ್ಯ ಅವರು ಬೋಸರಾಜು ಹೆಸರನ್ನು ಮುನ್ನೆಲೆಗೆ ತಂದಿದ್ದಾರೆ ಎಂದೂ ಮೂಲಗಳು ಹೇಳಿವೆ.

ಚುನಾವಣೆಯ ಸಂದರ್ಭದಲ್ಲಿ ಬೋಸರಾಜು ಅವರು ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆ ಎಂದು ಆರೋಪಿಸಿ ರಾಯಚೂರಿನ ಕೆಲವು ಮುಖಂಡರು ಹೈಕಮಾಂಡ್‌ಗೆ ದೂರು ಸಲ್ಲಿಸಿದ್ದರು.

ಬಿಪಿಎಲ್: ಜೂ.1 ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ

ಒಂದನೇ ಪುಟದಿಂದ...

'ಆದ್ದರಿಂದ ಜೂನ್ 1ರಿಂದ ಹೊಸ ಪಡಿತರ ಚೀಟಿಗಳಿಗೆ ಅರ್ಜಿ ಸ್ವೀಕರಿಸಲಾಗುವುದು' ಎಂದು ಹೇಳಿದರು.

2021ರ ನವೆಂಬರ್‌ನಲ್ಲಿ 2.76 ಲಕ್ಷ ಹೊಸ ಬಿಪಿಎಲ್ ಪಡಿತರ ಚೀಟಿಗಳ ವಿತರಣೆಗೆ ಸರ್ಕಾರ ಮಂಜೂರಾತಿ ನೀಡಿತ್ತು. 2022 ರ ನವೆಂಬರ್‌ನಲ್ಲಿ 1.55 ಲಕ್ಷ ಪಡಿತರ ಚೀಟಿಗಳ ವಿತರಣೆಗೆ ಮಂಜೂರಾತಿ ನೀಡಲಾಗಿತ್ತು. ಈಗ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆಯನ್ನು ಆಧರಿಸಿ ಹೊಸ ಪಡಿತರ ಚೀಟಿಗಳ ಮಂಜೂರಾತಿಗೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಈಗ 1.3 ಕೋಟಿ ಬಿಪಿಎಲ್ ಪಡಿತರ ಚೀಟಿಗಳಿವೆ. ಸುಮಾರು 4.30 ಕೋಟಿ ಜನರು ಪಡಿತರ ಚೀಟಿಗಳ ವ್ಯಾಪ್ತಿಯಲ್ಲಿದ್ದಾರೆ. ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ ಹತ್ತು ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸುವುದಾಗಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ 'ಗ್ಯಾರಂಟಿ' ರೂಪದ ಭರವಸೆ ನೀಡಿತ್ತು. ಇದರಿಂದಾಗಿ ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿಗಳಿಗೆ ಬೇಡಿಕೆ ಹೆಚ್ಚಿದೆ.

'ಕೈ' ಅಕ್ರಮ ನಡೆಸಿ ಗೆದ್ದಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಳ್ಳು ಗ್ಯಾರಂಟಿಗಳ ಜತೆಗೆ ಅಕ್ರಮವಾಗಿ ₹ 5,000 ಮೌಲ್ಯದ ಉಡುಗೊರೆ ಭರವಸೆಯ ಕೂಪನ್‌ಗಳನ್ನು ಹಂಚಿ ಕಾಂಗ್ರೆಸ್ ಪಕ್ಷವು 40 ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.



ಕುಮಾರಸ್ವಾಮಿ

ಪಕ್ಷದ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '₹ 3,000 ಮತ್ತು ₹ 2,000 ಮೌಲ್ಯದ ಉಡುಗೊರೆ ಭರವಸೆಯ ಕ್ಯೂಆರ್ ಕೋಡ್ ಇದ್ದ ಕೂಪನ್‌ಗಳನ್ನು ಮತದಾನಕ್ಕೆ ಕೆಲವೇ ಗಂಟೆಗಳ ಮೊದಲು ವಿತರಿಸಲಾಗಿತ್ತು. ರಾಮನಗರ, ಮಾಗಡಿ, ರಾಜರಾಜೇಶ್ವರಿನಗರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಈ ರೀತಿ ಮಾಡಲಾಗಿದೆ' ಎಂದು ಕೂಪನ್‌ಗಳನ್ನು ಪ್ರದರ್ಶಿಸಿದರು.

'ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳ ಸೋಲಿಗೆ ಕಾಂಗ್ರೆಸ್ ಪಕ್ಷ ವಿತರಿಸಿದ ಕೂಪನ್‌ಗಳೇ ಕಾರಣ. ಮಿಸ್ಟರ್ ಸಿದ್ದರಾಮಯ್ಯ ಅವರೇ ಈ ಬಗ್ಗೆ ತನಿಖೆ ನಡೆಸುತ್ತೀರಾ' ಎಂದು ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದರು.

'ಬಿಲ್ ಕಟ್ಟಬೇಡಿ, ಟಿಕೆಟ್ ತಗೋಬೇಡಿ'

'ಎಲ್ಲರಿಗೂ ಉಚಿತವಾಗಿ ಗ್ಯಾರಂಟಿ ಯೋಜನೆಗಳ ಸೌಲಭ್ಯ ನೀಡುವುದಾಗಿ ಕಾಂಗ್ರೆಸ್ ನಾಯಕರು ಚುನಾವಣೆಯಲ್ಲಿ ಭರವಸೆ ನೀಡಿದ್ದರು. ಈಗ ಷರತ್ತು ವಿಧಿಸಲು ಹೊರಟಿದ್ದಾರೆ. 200 ಯೂನಿಟ್‌ಗಳವರೆಗಿನ ವಿದ್ಯುತ್ ಬಿಲ್ ಕಟ್ಟಬೇಡಿ, ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಟಿಕೆಟ್ ತೆಗೆದುಕೊಳ್ಳಬೇಡಿ' ಎಂದು ಕುಮಾರಸ್ವಾಮಿ ಹೇಳಿದರು.

42 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಈ ರೀತಿ ಉಡುಗೊರೆ ಕೂಪನ್ ಹಂಚಿದ್ದಾರೆ. ಚುನಾವಣಾ ಫಲಿತಾಂಶದ ಬಳಿಕ ನಿಗದಿತ ಮಾಲ್‌ಗಳಲ್ಲಿ ಖರೀದಿಗೆ ಅವಕಾಶ ಇದೆ ಎಂದು ಹೇಳಲಾಗಿತ್ತು ಎಂದು ದೂರಿದರು.

ಚುನಾವಣೆಯಲ್ಲಿ ಸೋತಿದ್ದಕ್ಕೆ ಜೆಡಿಎಸ್ ಪಕ್ಷವನ್ನು ಯಾವಾಗ ವಿಸರ್ಜಿಸುತ್ತೀರಿ ಎಂದು ಕಾಂಗ್ರೆಸ್ ಪಕ್ಷ ಕೇಳಿದೆ. ಪೂರ್ಣ ಬಹುಮತ ಬಂದು, ಪಂಚರತ್ನ ಯೋಜನೆಗಳನ್ನು ಜಾರಿ ಮಾಡದಿದ್ದರೆ ಪಕ್ಷ ವಿಸರ್ಜಿಸುವುದಾಗಿ ಹೇಳಿದ್ದೆ ಎಂದರು.

'ಸಿ.ಎಂ. ಇಬ್ರಾಹಿಂ ಮತ್ತು ನಿಖಿಲ್ ಕುಮಾರಸ್ವಾಮಿ ಅವರ ರಾಜೀನಾಮೆ ಅಂಗೀಕರಿಸುವುದಿಲ್ಲ' ಎಂದರು.

ಪ್ರಜಾಪ್ರಭುತ್ವ ಉಳಿವಿಗಾಗಿ ದುಡಿದವರಿಗೆ ಅಭಿನಂದನಾ ಸಮಾವೇಶ

‘ದ್ವೇಷ ಬಿತ್ತಿದವರಿಗೆ ತಕ್ಕ ಪಾಠ ಕಲಿಸಿದ ರಾಜ್ಯದ ಮತದಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಜಾಬ್, ಹಲಾಲ್, ಉರೀಗೌಡ–ನಂಜೇಗೌಡ, ಟಿಪ್ಪು ಸುಲ್ತಾನ್... ಹೆಸರಿನಲ್ಲಿ ದ್ವೇಷ ಬಿತ್ತಿದವರಿಗೆ ರಾಜ್ಯದ ಜನರೇ ತಕ್ಕಪಾಠ ಕಲಿಸಿದ್ದಾರೆ. ದ್ವೇಷ ಅಳಿಸಿ ಹಾಕಿ ರಾಜ್ಯದಲ್ಲಿ ಪ್ರೀತಿ ಮೂಡಿಸಿದ್ದಾರೆ’ ಎಂದು ಚಿಂತಕ ಯೋಗೇಂದ್ರ ಯಾದವ್ ಅಭಿಪ್ರಾಯಪಟ್ಟರು.

ನಗರದಲ್ಲಿ ಶುಕ್ರವಾರ ‘ಎದ್ದೇಳು ಕರ್ನಾಟಕ’ ಸಂಘಟನೆ ಆಯೋಜಿಸಿದ್ದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿವಿಗಾಗಿ ದುಡಿದ ಕಾರ್ಯಕರ್ತರಿಗೆ ಅಭಿನಂದನಾ ಸಮಾವೇಶ ಹಾಗೂ ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಎಚ್.ಎಸ್. ದೊರೆಸ್ವಾಮಿ ಅವರಿಗೆ ನುಡಿನಮನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ರಾಜ್ಯದ ಚುನಾವಣೆ ಬರೀ ಚುನಾವಣೆಯಾಗಿರದೆ ಮುಂದಿನ ದಿಕ್ಸೂಚಿಯೂ ಆಗಿತ್ತು. ಈಗ ಸರಿಯಾದ ಮೇಲ್ಸೇತುವೆ ಏರಿದ್ದೇವೆ. ಮಧ್ಯದಲ್ಲಿಯೇ ವಾಪಸ್ಸಾಗದೆ ಗುರಿ ತಲುಪಬೇಕಿದೆ. ಉತ್ತಮ ನಿರ್ಧಾರ, ದೃಢಸಂಕಲ್ಪ ಮಾಡಬೇಕಿದೆ’ ಎಂದು ವಿಶ್ಲೇಷಿಸಿದರು.

‘ಎದ್ದೇಳು ಕರ್ನಾಟಕವು ರಾಜ್ಯದ 102 ನಿರ್ಣಾಯಕ ಕ್ಷೇತ್ರಗಳಲ್ಲಿ ಕೆಲಸ ಮಾಡಿತ್ತು. ಅದರಲ್ಲಿ 69 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿದೆ. ಅಲ್ಲದೇ ಮತ ಗಳಿಕೆ ಪ್ರಮಾಣವು ಹೆಚ್ಚಿದೆ’ ಎಂದರು.

‘ರಾಜ್ಯದಲ್ಲಿ ದಲಿತ, ಸಾಹಿತ್ಯ ಹಾಗೂ ರೈತ ಚಳವಳಿಗೆ ಇತಿಹಾಸವಿದ್ದು, ಆ ಕ್ಷೇತ್ರಗಳ ಹೋರಾಟದ ಪರಿಣಾಮವೇ ಬದಲಾವಣೆ ಪರ್ವ ಆರಂಭವಾಗಿದೆ. ಲೋಕಸಭಾ ಚುನಾವಣೆ ತನಕವೂ ಬದಲಾವಣೆಗಾಗಿ ಹೋರಾಟ ಇರಬೇಕು’ ಎಂದು ಸಲಹೆ ನೀಡಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿ ಭಾವನೆಗಳಿಲ್ಲದ ಭವನ ನಿರ್ಮಿಸಿದ್ದಾರೆ. ಇದೇ 28ರಂದು ಅದರ ಉದ್ಘಾಟನೆಗೆ ಪೈಪೋಟಿಗೆ ಬಿದ್ದಿದ್ದಾರೆ’ ಎಂದು ಹೇಳಿದರು.

ಜಮಾತೆ ಇಸ್ಲಾಮಿ ಹಿಂದ್ ಕರ್ನಾಟಕದ ಉಪಾಧ್ಯಕ್ಷ ಯೂಸುಫ್ ಕನ್ನಿ ಮಾತನಾಡಿ, ‘ರಾಜ್ಯದಲ್ಲಿ ಬಿಜೆಪಿ ಶಾಂತಿ ಕದಡಿ, ಸೌಹಾರ್ದತೆಯಲ್ಲಿ ಬಿರುಕು ಮೂಡಿಸಿ ಪ್ರೀತಿಗೆ ಬೆಂಕಿ ಇಟ್ಟಿತ್ತು. ಬಸವಣ್ಣ, ಅಂಬೇಡ್ಕರ್ ತತ್ವಗಳಿಗೆ ವಿರುದ್ಧವಾಗಿ ನಡೆದುಕೊಂಡಿತ್ತು. ಸಂವಿಧಾನ, ಪ್ರಜಾಪ್ರಭುತ್ವದ ಆಶಯಗಳನ್ನೇ ಗಾಳಿ ತೂರಿತ್ತು’ ಎಂದರು.

‘ಮಹಾರಾಷ್ಟ್ರ, ತೆಲಂಗಾಣ, ರಾಜಸ್ಥಾನದಲ್ಲಿ ಚುನಾವಣೆಗಳು ನಡೆಯಲಿವೆ. ರಾಜ್ಯದಲ್ಲಿ ಆಗಿರುವ ಬದಲಾವಣೆ ಅಲ್ಲಿಯೂ ಪುನರಾವರ್ತನೆ ಆಗಲಿವೆ’ ಎಂದು ಹೇಳಿದರು.

ಎದ್ದೇಳು ಕರ್ನಾಟಕದ ಮುಖಂಡ, ಫಾದರ್ ಜೆರಾಲ್ಡ್ ಡಿಸೋಜ ಮಾತನಾಡಿ, ‘ಬಿಜೆಪಿ ರಾಜ್ಯವನ್ನು ಪ್ರಯೋಗ ಶಾಲೆ ಮಾಡಿಕೊಂಡಿತ್ತು. ಕೋಮು ದ್ವೇಷವನ್ನು ರಾಷ್ಟ್ರದಾದ್ಯಂತ ಹರಡಲು ಆರಂಭಿಸಿತ್ತು. ಇದಕ್ಕೆ ರಾಜ್ಯದಿಂದಲೇ ಕಡಿವಾಣ ಬಿದ್ದಿದ್ದು, ಭಾರತಕ್ಕೆ ಹೊಸದಾದ ದಾರಿ ಸಿಕ್ಕಿದೆ’ ಎಂದು ಹೇಳಿದರು.

‘ರಾಜಕೀಯದಲ್ಲಿ ಸಂಘಟನೆಗಳು ತಟಸ್ಥವಾಗಿರಲಿವೆ ಎಂದೇ ಭಾವಿಸಲಾಗಿತ್ತು. ಆದರೆ, ಎದ್ದೇಳು ಕರ್ನಾಟಕ ಸೇರಿದಂತೆ ಹತ್ತಾರು ಸಂಘಟನೆಗಳು ಪ್ರಜಾಪ್ರಭುತ್ವ ಉಳಿಸಲು ಸಂಘಟಿತವಾಗಿ ಕೆಲಸ ಮಾಡಿದವು’ ಎಂದು ಹೇಳಿದರು.

ಸಂಘಟನೆಯ ತಾರಾರಾವ್ ಮಾತನಾಡಿ, ‘ಸಂಘಟಿತ ಧ್ವನಿಯ ಪ್ರಾಮುಖ್ಯತೆ ರಾಜ್ಯದ ಚುನಾವಣೆ ಫಲಿತಾಂಶದಿಂದ ಗೊತ್ತಾಗಿದೆ. ಪ್ರಜಾಪ್ರಭುತ್ವ ಉಳಿಸಲು ಸಂಘಟನೆ ಸ್ವಯಂ ಪ್ರೇರಣೆಯಿಂದ ಕ್ಷೇತ್ರ ಕಾರ್ಯ ನಡೆಸಿತ್ತು’ ಎಂದರು.

ವಿವಿಧ ನಿರ್ಣಾಯಕ ಕ್ಷೇತ್ರದಲ್ಲಿ ದುಡಿದ ಸಂಘಟಕರಿಗೆ ಜಿಲ್ಲಾವಾರು ಅಭಿನಂದನೆ ಸಲ್ಲಿಸಲಾಯಿತು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಆಳಂದ ಶಾಸಕ ಬಿ.ಆರ್. ಪಾಟೀಲ, ಸಾಹಿತಿ ಡಾ.ವಿಜಯಾ, ಸಮಾನ ಮನಸ್ಕರ ವೇದಿಕೆ ಎಲ್.ಎನ್.ಮುಕುಂದರಾಜ್, ಅಕ್ಬರ್ ಅಲಿ, ಚಾಮರಸ ಮಾಲಿ ಪಾಟೀಲ್ ಇದ್ದರು.



ಬೆಂಗಳೂರಿನಲ್ಲಿ ಶುಕ್ರವಾರ ‘ಎದ್ದೇಳು ಕರ್ನಾಟಕ’ ಸಂಘಟನೆ ಆಯೋಜಿಸಿದ್ದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ ದುಡಿದ ಕಾರ್ಯಕರ್ತರಿಗೆ ಅಭಿನಂದನಾ ಸಮಾವೇಶದಲ್ಲಿ ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಎಚ್.ಎಸ್.ದೊರೆಸ್ವಾಮಿ ಅವರ ಭಾವಚಿತ್ರಕ್ಕೆ ಸಾಹಿತಿ ಡಾ.ವಿಜಯಾ, ಭಾಷಾ ತಜ್ಞರು ಡಾ.ಗಣೇಶ್ ದೇವಿ, ಚಿಂತಕ ಯೋಗೇಂದ್ರ ಯಾದವ್ ಮತ್ತು ಸಂಘದ ಸದಸ್ಯರು ಪುಷ್ಪನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಉದ್ದೇಶ ಈಡೇರಿಕೆ: ಪ್ರಯತ್ನಗಳು ಇರಲಿ– ಸಿ.ಎಂ

ಬೆಂಗಳೂರು: ‘ದೇಶದಲ್ಲಿ ಈಗ ನಡೆಯುತ್ತಿರುವುದು ಸಂವಿಧಾನ ಉಳಿಸಿಕೊಳ್ಳುವ ಹೋರಾಟ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸಮಾರಂಭಕ್ಕೆ ಗೈರಾಗಿದ್ದ ಅವರು, ಲಿಖಿತ ಸಂದೇಶ ಕಳುಹಿಸಿದ್ದರು. ‘ಬರೀ ಬಿಜೆಪಿ- ಕಾಂಗ್ರೆಸ್ ನಡುವಿನ ಪೈಪೋಟಿ ಅಲ್ಲ. ಇದು ದೇಶವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುತ್ತಿರುವ ಶಕ್ತಿಗಳ ವಿರುದ್ಧದ ಹೋರಾಟವಾಗಿದೆ’ ಎಂದು ಹೇಳಿದ್ದಾರೆ.

‘ಬಸವಣ್ಣ, ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್ ಯಾವ ಉದ್ದೇಶಗಳನ್ನು ಆಧರಿಸಿ ಹೋರಾಟ ನಡೆಸಿದ್ದಾರೆಯೋ ಆ ಉದ್ದೇಶಗಳು, ಆಶಯಗಳು ಇಂದಿಗೂ ಜೀವಂತವಾಗಿವೆ. ಅವುಗಳನ್ನು ಈಡೇರಿಸಲು ನಾವೆಲ್ಲರೂ ನಿರಂತರವಾದ ಪ್ರಯತ್ನಗಳನ್ನು ಮಾಡುತ್ತಲೇ ಇರಬೇಕು’ ಎಂದಿದ್ದಾರೆ.

ಜಿ.ಪಂ., ತಾ.ಪಂ. ಚುನಾವಣೆ: ಆಯೋಗ ಸುತ್ತೋಲೆ

‘ಮತದಾರರ ಪಟ್ಟಿ ಸಿದ್ಧಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಗೆ ಸಿದ್ಧತೆ ಆರಂಭಿಸಿರುವ ರಾಜ್ಯ ಚುನಾವಣಾ ಆಯೋಗ, ಮತದಾರರ ಪಟ್ಟಿ ಸಿದ್ಧಪಡಿಸುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಶುಕ್ರವಾರ ಸುತ್ತೋಲೆ ಹೊರಡಿಸಿದೆ.

ವಿಧಾನಸಭಾ ಚುನಾವಣೆಗೆ ಸಿದ್ಧಪಡಿಸಿರುವ ಮತದಾರರ ಪಟ್ಟಿಯ ದತ್ತಾಂಶವನ್ನು ಬಳಸಿಕೊಂಡು ಇದೇ 29ರಿಂದ ಮತದಾರರ ಪಟ್ಟಿ ಪರಿಷ್ಕರಣೆಗೆ ಸೂಚಿಸಲಾಗಿದೆ. ಜೂನ್ 27ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಣೆ ನಡೆಯಲಿದೆ.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮತ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಎಲ್ಲ ಮತದಾರರನ್ನು ಗುರುತಿಸಿ, ಪಟ್ಟಿ ಪರಿಷ್ಕರಿಸಬೇಕು. ಮತ ಕ್ಷೇತ್ರಗಳ ಗಡಿ ಭಾಗದಲ್ಲಿನ ಮನೆಗಳಿಗೆ ಭೇಟಿನೀಡಿ ಮತದಾರರನ್ನು ಗುರುತಿಸಬೇಕು. ಮತದಾರರ ಪಟ್ಟಿಯ ಪರಿಷ್ಕರಣೆಗೆ ಅಧಿಕಾರಿಗಳನ್ನು ನೇಮಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಕರಡು ಮತದಾರರ ಪಟ್ಟಿ ಸಿದ್ಧವಾದ ಬಳಿಕ ಅದನ್ನು ಮುದ್ರಿಸಬೇಕು. ನಂತರ ಕರಡು ಮತದಾರರ ಪಟ್ಟಿ ಪರಿಶೀಲನೆ ನಡೆಸಬೇಕು. ಗ್ರಾಮ ಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರು ಸಂಪೂರ್ಣ ಮತದಾರರ ಪಟ್ಟಿಗಳನ್ನು ಪರಿಶೀಲಿಸಬೇಕು. ಆ ಬಳಿಕವೇ ಮತದಾರರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಬೇಕು. ಅನುಮೋದನೆಯ ಬಳಿಕ ಮತದಾರರ ಅಂತಿಮ ಪಟ್ಟಿಯನ್ನು ಮುದ್ರಿಸಬೇಕು ಎಂದು ಆಯೋಗ ಸೂಚನೆ ನೀಡಿದೆ.


ಮತಗಟ್ಟೆಗಳನ್ನು ಗುರುತಿಸುವುದು: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತಗಟ್ಟೆಗಳನ್ನು ಗುರುತಿಸುವ ಪ್ರಕ್ರಿಯೆಯನ್ನೂ ನಡೆಸಬೇಕು. ಹೆಚ್ಚಿನ ಸಂಖ್ಯೆಯ ಮತದಾರರು ಇರುವ ಗ್ರಾಮಗಳಲ್ಲಿ ಹೆಚ್ಚುವರಿ ಮತಗಟ್ಟೆಗಳನ್ನೂ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದೆ.

ಮತದಾರರ ಪಟ್ಟಿ ಪರಿಷ್ಕರಣೆ ವೇಳಾಪಟ್ಟಿ

ಕ್ಷೇತ್ರದ ವ್ಯಾಪ್ತಿಯ ಮತದಾರರನ್ನು ಗುರುತಿಸುವುದು	ಮೇ 29ರಿಂದ ಜೂನ್ 4
ಮತದಾರರ ಪಟ್ಟಿಯ ಮೊದಲ ಹಂತದ ಪರಿಶೀಲನೆ	ಜೂನ್ 5ರಿಂದ 13
ಕರಡು ಮತದಾರರ ಪಟ್ಟಿ ಪ್ರಟಕಣೆ	ಜೂನ್ 14
ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನ	ಜೂನ್ 19
ಆಕ್ಷೇಪಣೆ ಇತ್ಯರ್ಥಕ್ಕೆ ಕೊನೆಯ ದಿನ	ಜೂನ್ 22
ಮತದಾರರ ಪಟ್ಟಿಯ ಎರಡನೇ ಹಂತದ ಪರಿಶೀಲನೆ	ಜೂನ್ 25
ಅಂತಿಮ ಮತದಾರರ ಪಟ್ಟಿ ಪ್ರಕಟಣೆ	ಜೂನ್ 27

ಮುಖ್ಯಾಂಶಗಳು

- ಎಲ್ಲ ಮತದಾರರ ಗುರುತಿಸಿ, ಪಟ್ಟಿ ಪರಿಷ್ಕರಿಸಲು ಸೂಚನೆ
- ಅಗತ್ಯ ಆಧರಿಸಿ ಹೆಚ್ಚುವರಿ ಮತಗಟ್ಟೆಗಳ ಸ್ಥಾಪನೆಗೆ ಸಲಹೆ
- ಜೂನ್ 27ರಂದು ಮತದಾರರ ಅಂತಿಮ ಪಟ್ಟಿ ಪ್ರಕಟ



ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ: ನೋಂದಣಿಗೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಜರಾತಿ ಕೊರತೆಯಿಂದ ಎಸ್ಸೆಸ್ಸೆಲ್ಸಿ ಮುಖ್ಯ ಪರೀಕ್ಷೆಯಿಂದ ವಂಚಿತವಾಗಿದ್ದ ವಿದ್ಯಾರ್ಥಿಗಳಿಗೆ ಮತ್ತೊಂದು ಅವಕಾಶ ಕಲ್ಪಿಸಲಾಗಿದ್ದು, ಹೆಸರು ನೋಂದಣಿಗೆ ಮೇ 29ರ ಸಂಜೆ 5.30ರ ತನಕ ಅವಕಾಶ ನೀಡಲಾಗಿದೆ.

2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಮುಖ್ಯ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದ 26,500 ವಿದ್ಯಾರ್ಥಿಗಳಿಗೆ ಹಾಜರಾತಿ ಕೊರತೆಯಿಂದ ಪರೀಕ್ಷೆ ಬರೆಯಲು ಸಾಧ್ಯವಾಗಿರಲಿಲ್ಲ. ಖಾಸಗಿ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಹೆಸರು ನೋಂದಣಿಗೆ ಮೇ 26ರ ತನಕ ಅವಕಾಶ ನೀಡಲಾ ಗಿತ್ತು.



ವಿದ್ಯಾರ್ಥಿಗಳು ಹಾಗೂ ಪೋಷಕರ ಮನವಿ ಮೇರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಶಾಲಾ ಮತ್ತು ಮೌಲ್ಯನಿರ್ಣಯ ಮಂಡಳಿಯ ನಿರ್ದೇಶಕ (ಪರೀಕ್ಷೆ) ಎಚ್.ಎನ್. ಗೋಪಾಲಕೃಷ್ಣ ತಿಳಿಸಿದ್ದಾರೆ.

ನಾಮ ನಿರ್ದೇಶನ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಧಾರ್ಮಿಕ ಪರಿಷತ್ತು, ಜಿಲ್ಲಾ ಧಾರ್ಮಿಕ ಪರಿಷತ್ತು, ಆರಾಧನಾ ಸಮಿತಿ, ಮಲೆ ಮಹದೇಶ್ವರಸ್ವಾಮಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಾಮ ನಿರ್ದೇಶಕರ ಸದಸ್ಯತ್ವವನ್ನು ರದ್ದುಪಡಿಸಿ ಆದೇಶ ಹೊರಡಿಸಲಾಗಿದೆ.

ಅಲ್ಲದೇ, ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಬರುವ ವಿವಿಧ ನಿಗಮ, ಮಂಡಳಿ, ಸ್ವಾಯತ್ತ ಸಂಸ್ಥೆಗಳು ಮತ್ತು ಇತರೆ ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳ ಅಧ್ಯಕ್ಷ, ನಿರ್ದೇಶಕರು ಮತ್ತು ಸದಸ್ಯರ ನಾಮ ನಿರ್ದೇಶನ ರದ್ದು ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಆರೋಪಿ ಖುಲಾಸೆ– ಸಂತ್ರಸ್ತೆ ಅಳಲು

ಜೈಪುರ (ಪಿಟಿಐ): 'ರಾಜಸ್ಥಾನದ ಅಲ್ವಾರ್‌ನಲ್ಲಿ ನಡೆದ ಗುಂಪು ಹಲ್ಲೆ ಪ್ರಕರಣದ ಪ್ರಮುಖ ಆರೋಪಿಯಾದ ವಿಎಚ್‌ಪಿ ನಾಯಕ ನವಲ್ ಕಿಶೋರ್ ಅವರನ್ನು ನ್ಯಾಯಾಲಯವು ಖುಲಾಸೆಗೊಳಿಸಿರುವುರಿಂದ ನನಗೆ ಇನ್ನೂ ನ್ಯಾಯ ದೊರಕಿಲ್ಲ' ಎಂದು ಮೃತನ ಪತ್ನಿ ಅಸ್ಮಿನಾ ಶುಕ್ರವಾರ ದೂರಿದ್ದಾರೆ.

ದನಗಳನ್ನು ಸಾಗಿಸುತ್ತಿದ್ದ ರಕ್ಬರ್ ಖಾನ್ ಅವರನ್ನು ಹತ್ಯೆ ಮಾಡಲಾಗಿದೆ ಎನ್ನುವ ಆರೋಪ ಹೊತ್ತಿದ್ದ ಧರ್ಮೇಂದ್ರ ಯಾದವ್, ವಿಜಯ್ ಕುಮಾರ್, ಪರಮಜೀತ್ ಸಿಂಗ್ ಮತ್ತು ನರೇಶ್ ಕುಮಾರ್ ಅವರಿಗೆ ಅಲ್ವಾರ್ ನ್ಯಾಯಾಲಯವು ಗುರುವಾರ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಆದರೆ, ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ವಿಎಚ್‌ಪಿ ನಾಯಕ ನವಲ್ ಕಿಶೋರ್ ಅವರನ್ನು ಖುಲಾಸೆಗೊಳಿಸಿದೆ.

'ನಮಗಿನ್ನೂ ನ್ಯಾಯ ದೊರೆತಿಲ್ಲ. ಅವರು ನನ್ನ ಗಂಡನನ್ನು ಹತ್ಯೆ ಮಾಡಿದ್ದಾರೆ. ಪ್ರಮುಖ ಆರೋಪಿ ನವಲ್ ಕಿಶೋರ್ ಖುಲಾಸೆಯಾಗಿದ್ದಾರೆ. ಉಳಿದ ನಾಲ್ವರಿಗೆ ಕಡಿಮೆ ಪ್ರಮಾಣದ ಶಿಕ್ಷೆಯಾಗಿದೆ. ಅವರಿಗೆ ಕಠಿಣ ಶಿಕ್ಷೆಯಾಗಬೇಕಿತ್ತು' ಎಂದು ಅಸ್ಮಿನಾ ಹೇಳಿದ್ದಾರೆ.

ವಿಚಾರಣಾ ನ್ಯಾಯಾಲಯದ ಆದೇಶವನ್ನು ರಾಜಸ್ಥಾನ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ಖಾನ್ ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪ್ರಧಾನಿ ಮೋದಿ, ಆದಿತ್ಯನಾಥ ವಿರುದ್ಧ ಘೋಷಣೆ'

ಬಲರಾಮಪುರ (ಉತ್ತರಪ್ರದೇಶ) (ಪಿಟಿಐ): 'ನನ್ನ ವಿರುದ್ಧ ನಡೆಸಲಾಗುತ್ತಿರುವ ಪ್ರತಿಭಟನೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ವಿರುದ್ಧ ಘೋಷಣೆಗಳನ್ನು ಕೂಗಲಾಗುತ್ತಿದೆ' ಎಂದು ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಶುಕ್ರವಾರ ಹೇಳಿದ್ದಾರೆ.

'ಈ ಆಂದೋಲನವು ದೆಹಲಿಯಿಂದ ಪಂಜಾಬ್ ಹಾಗೂ ಖಾಲಿಸ್ತಾನದತ್ತ ಸಾಗುತ್ತಿದೆ. ಬಜರಂಗ್ ಪೂನಿಯಾ ಅವರು ಮತ್ತೊಬ್ಬರ ಪರವಾಗಿ ಮಾತನಾಡುತ್ತಿದ್ದಾರೆ' ಎಂದ ಅವರು, ಹೆಚ್ಚಿನ ವಿವರ ನೀಡಲಿಲ್ಲ.

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪವನ್ನು ಬ್ರಿಜ್‌ಭೂಷಣ್ ಸಿಂಗ್ ಎದುರಿಸುತ್ತಿದ್ದು, ಅವರ ವಿರುದ್ಧ ಕುಸ್ತಿಪಟುಗಳು ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ. ವಿನೇಶಾ ಫೋಗಟ್, ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್ ಸೇರಿದಂತೆ ಖ್ಯಾತ ಕುಸ್ತಿಪಟುಗಳು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು, ಬ್ರಿಜ್‌ಭೂಷಣ್ ಸಿಂಗ್ ಅವರ ಬಂಧನಕ್ಕೆ ಒತ್ತಾಯಿಸುತ್ತಿದ್ದಾರೆ.

ಪೋಕ್ಸೊ ಕಾಯ್ದೆ ದುರ್ಬಳಕೆಯಾಗುತ್ತಿದೆ ಎಂದು ಆರೋಪಿಸಿದ್ದ ಅವರು, ಕಾಯ್ದೆಯ ತಿದ್ದುಪಡಿಗೆ ಒತ್ತಾಯಿಸಿ ಮಠಾಧೀಶರ ನೇತೃತ್ವದಲ್ಲಿ ಅಯೋಧ್ಯೆಯಲ್ಲಿ ಜೂನ್ 5ರಂದು ರ್‍ಯಾಲಿ ನಡೆಸುವುದಾಗಿ ಹೇಳಿದ್ದರು. ಅದರ ಸಿದ್ಧತೆಗಾಗಿ ಅವರು ಬಲರಾಮಪುರಕ್ಕೆ ಬಂದಿದ್ದರು.

ನೂತನ ಸಂಸತ್ ಭವನ ಉದ್ಘಾಟನಾ ಸಮಾರಂಭ ಸುತ್ತ ವಿವಾದ • 20 ವಿಪಕ್ಷಗಳಿಂದ ಕಾರ್ಯಕ್ರಮಕ್ಕೆ ಬಹಿಷ್ಕಾರ

ರಾಜಕಾರಣಕ್ಕೂ ಮಿತಿ ಇರಲಿ: ಜೈಶಂಕರ್

ರಾಜಪಿಪ್ಲ (ಗುಜರಾತ್)(ಪಿಟಿಐ): ಕೆಲ ವಿರೋಧ ಪಕ್ಷಗಳು ನೂತನ ಸಂಸತ್ ಭವನ ಉದ್ಘಾಟನಾ ಸಮಾರಂಭವನ್ನು ಬಹಿಷ್ಕರಿಸಲು ನಿರ್ಧರಿಸಿರುವುದು ದುರದೃಷ್ಟಕರ ಎಂದಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್, ರಾಜಕಾರಣ ಮಾಡುವುದಕ್ಕೂ ಒಂದು ಮಿತಿ ಇರುತ್ತದೆ ಎಂದು ಶುಕ್ರವಾರ ಹೇಳಿದರು.

ನರ್ಮದಾ ಜಿಲ್ಲೆಯ ರಾಜಪಿಪ್ಲದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಈ ವಿಚಾರವಾಗಿ ಕೆಲವರು ವಿವಾದ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಆದರೆ, ರಾಜಕಾರಣ ಮಾಡುವುದಕ್ಕೂ ಒಂದು ಮಿತಿ ಇರುತ್ತದೆ. ಅದರಲ್ಲೂ, ಇಂಥ ಸಂದರ್ಭದಲ್ಲಿಯಾದರೂ ಇಡೀ ದೇಶವೇ ಒಂದಾಗಿ ಸಂಭ್ರಮಿಸುವುದು ಅಗತ್ಯ' ಎಂದು ಪ್ರತಿಪಾದಿಸಿದರು.

ನೂತನ ಸಂಸತ್ ಭವನದ ಉದ್ಘಾಟನಾ ಸಮಾರಂಭ ಬಹಿಷ್ಕರಿಸುವುದಾಗಿ ಕನಿಷ್ಠ 20 ವಿರೋಧ ಪಕ್ಷಗಳು ಘೋಷಿಸಿವೆ. ಬಿಜೆಪಿ ನೇತೃತ್ವದ ಎನ್‌ಡಿಎ ಮಿತ್ರ ಪಕ್ಷಗಳು ಸೇರಿದಂತೆ 25ಕ್ಕೂ ಅಧಿಕ ಪಕ್ಷಗಳು ಈ ಸಮಾರಂಭದಲ್ಲಿ ಪಾಲ್ಗೊಳ್ಳುವುದಾಗಿ ಹೇಳಿವೆ.

ಹರ್ದೀಪ್ ಸಿಂಗ್ ವಾಗ್ದಾಳಿ (ನವದೆಹಲಿವರದಿ): ನೂತನ ಸಂಸತ್ ಭವನವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಿರುವ ಕಾಂಗ್ರೆಸ್ ಹಾಗೂ ಇತರ ಪಕ್ಷಗಳ ವಿರುದ್ಧ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಶುಕ್ರವಾರ ವಾಗ್ದಾಳಿ ನಡೆಸಿದ್ದಾರೆ.

'ಈ 'ಬಾಯ್ಕಾಟ್ ಗ್ಯಾಂಗ್' ತಮ್ಮ ನಾಯಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರನ್ನು ಅವಮಾನಿಸುತ್ತಿದೆ' ಎಂದು ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್‌ಗಳನ್ನು ಮಾಡಿರುವ ಅವರು, 1947ರಲ್ಲಿ ಟೈಮ್ ನಿಯತಕಾಲಿಕದಲ್ಲಿ ಪ್ರಕಟವಾಗಿದ್ದ ಲೇಖನವನ್ನು ಹಂಚಿಕೊಂಡಿದ್ದಾರೆ.

'ದೇಶವು ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಹಿಂದೂ ಧಾರ್ಮಿಕ ವಿಧಿಗಳನ್ನು ಅನುಸರಿಸಲಾಗಿತ್ತು. ಹಿಂದೂ ವಿಧಿವಿಧಾನಗಳನ್ನು ನೆರವೇರಿಸಿದ ನಂತರ ನೆಹರೂ ಅವರು ಸೆಂಗೋಲ್ ಅನ್ನು ಸ್ವೀಕರಿಸಿದ್ದರು ಎಂದು ಈ ಲೇಖನದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.

ಈಗ ಇದನ್ನು ಬೇರೆ ರೀತಿಯಲ್ಲಿ ಅರ್ಥೈಸುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಪಟ್ಟದಕಲ್ಲಿನ ಕೆತ್ತನೆಯಲ್ಲಿ 'ಸೆಂಗೋಲ್'

ಬಾಗಲಕೋಟೆ: ನೂತನ ಸಂಸತ್ ಭವನದಲ್ಲಿ ಪ್ರತಿಷ್ಠಾಪಿಸಲಾಗುತ್ತಿರುವ 'ಸೆಂಗೋಲ್' ಪ್ರತಿರೂಪ ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಗೋಡೆ ಮೇಲೆ ಕೆತ್ತಲಾಗಿರುವ ಶಿವ ಮೂರ್ತಿಯ ಕೈಯಲ್ಲಿದೆ.



ವೀರೂಪಾಕ್ಷ ದೇವಾಲಯದ ಗೋಡೆ ಮೇಲಿರುವ ಶಿವ ಮೂರ್ತಿಯ ಎಡಗೈಯಲ್ಲಿ ಸೆಂಗೋಲ್ ಕಾಣಬಹುದು

ವಿರೂಪಾಕ್ಷ ದೇವಾಲಯದ ಎಡಭಾಗದಲ್ಲಿ 'ಸೆಂಗೋಲ್' ಹಿಡಿದಿರುವ ಶಿವನ ಮೂರ್ತಿಯನ್ನು ಕಾಣಬಹುದಾಗಿದೆ. ಶಿವನ ಮೂರ್ತಿಯು ಇಲ್ಲಿ ಚತುರ್ಭುಜನಾಗಿದ್ದು, ಅಜ್ಞಾನದ ಸಂಕೇತವಾಗಿರುವ ಮೂರ್ತಿಯೊಂದನ್ನು ತುಳಿದು ನಟರಾಜನ ಭಂಗಿಯಲ್ಲಿ ನೃತ್ಯ ಮಾಡುತ್ತಿರುವ ರೂಪದಲ್ಲಿದೆ. ಎಡಗೈಯಲ್ಲಿ 'ಸೆಂಗೋಲ್' ಹಿಡಿದುಕೊಂಡಿದ್ದು ಕಂಡುಬರುತ್ತದೆ.

ವಿರೂಪಾಕ್ಷ ದೇವಾಲಯವು ಕ್ರಿ.ಶ 742ರಲ್ಲಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. 'ಸೆಂಗೋಲ್' ಶಿವನು ಹಿಡಿದುಕೊಂಡಿರುತ್ತಿದ್ದ ದಂಡವಾಗಿದೆ. ಅದರ ಮೇಲೆ ಶಿವನ ವಾಹನ ನಂದಿಯೂ ಇರುತ್ತಿತ್ತು. ಅದನ್ನೇ ಕಲಾವಿದ ತನ್ನ ಕಲೆಯಲ್ಲಿ ಅರಳಿಸಿದ್ದಾನೆ ಎನ್ನಲಾಗುತ್ತಿದೆ. ಚೋಳ ರಾಜರು ಮುಂದಿನ ತಲೆಮಾರಿಗೆ ಅಧಿಕಾರ ಹಸ್ತಾಂತರ ಮಾಡುವುದರ ಸಂಕೇತವಾಗಿ 'ಸೆಂಗೋಲ್' ನೀಡುತ್ತಿದ್ದರು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಚಾಲುಕ್ಯರ ಕಾಲದಲ್ಲೂ ಇದು ಬಳಕೆಯಲ್ಲಿತ್ತು ಎಂಬುದು ಪಟ್ಟದ ಕಲ್ಲಿನಲ್ಲಿ ನೋಡಿದಾಗ ಗೊತ್ತಾಗುತ್ತದೆ.

ವಿಡಿಯೊ ಹಂಚಿಕೊಂಡ ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ನೂತನ ಸಂಸತ್ ಭವನವು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡೆವಂತೆ ಮಾಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಸಂಸತ್ ಭವನ ಸಂಕೀರ್ಣಕ್ಕೆ ಸಂಬಂಧಿಸಿದ ವಿಡಿಯೊವೊಂದನ್ನು ಅವರು ಹಂಚಿಕೊಂಡಿದ್ದಾರೆ. ಈ ವಿಡಿಯೊವನ್ನು 'ಮೈಪಾರ್ಲಿಮೆಂಟ್‌ಮೈಪ್ರೈಡ್' (ನನ್ನ ಸಂಸತ್ ನನ್ನ ಹೆಮ್ಮೆ) ಎಂಬ ಹ್ಯಾಷ್‌ಟ್ಯಾಗ್‌ನೊಂದಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವಂತೆ ಅವರು ಜನತೆಗೆ ಒತ್ತಾಯಿಸಿದ್ದಾರೆ.

'ಸಾಂಪ್ರದಾಯಿಕವಾಗಿ ನಿರ್ಮಿಸಿರುವ, ಸುಂದರವಾದ ಸಂಸತ್ ಭವನ ಕಟ್ಟಡ ಕುರಿತ ಒಂದು ನೋಟ ಈ ವಿಡಿಯೊದಲ್ಲಿದೆ. ಈ ಕಟ್ಟಡ ಕುರಿತ ನಿಮ್ಮ ವಿಚಾರಗಳನ್ನು ತಿಳಿಸಿ. ನಿಮ್ಮದೇ ಧ್ವನಿಯಲ್ಲಿ ವಿವರಣೆಯೊಂದಿಗೆ (ವಾಯ್ಸ್‌ಓವರ್) ವಿಡಿಯೊ ಹಂಚಿಕೊಳ್ಳಿ. ಅವುಗಳ ಪೈಕಿ ಕೆಲವನ್ನು ನಾನು ಮರು ಟ್ವೀಟ್ ಮಾಡುವೆ' ಎಂದಿದ್ದಾರೆ.

64,500 ಚದರ ಕಿ.ಮೀ. ಪ್ರದೇಶದಲ್ಲಿ ತ್ರಿಕೋನಾಕಾರದಲ್ಲಿ ನಿರ್ಮಿಸಿರುವ ಭವ್ಯವಾದ ಸಂಸತ್ ಭವನ ನಾಲ್ಕು ಅಂತಸ್ತುಗಳನ್ನು ಹೊಂದಿದೆ. ಮೂರು ಮುಖ್ಯ ದ್ವಾರಗಳನ್ನು ನಿರ್ಮಿಸಲಾಗಿದ್ದು, ಜ್ಞಾನ ದ್ವಾರ, ಶಕ್ತಿ ದ್ವಾರ ಹಾಗೂ ಕರ್ಮ ದ್ವಾರ ಎಂದು ಹೆಸರಿಡಲಾಗಿದೆ.

ಅಧಿಕಾರ ಹಸ್ತಾಂತರದ ಸಂಕೇತವಾಗಿದ್ದಕ್ಕೆ ಪುರಾವೆ ಇಲ್ಲ– ಕಾಂಗ್ರೆಸ್

ನವದೆಹಲಿ (ಪಿಟಿಐ): ಅಧಿಕಾರ ಹಸ್ತಾಂತರ ಮಾಡಿದ್ದರ ಸಂಕೇತವಾಗಿ ನೆಹರೂ ಅವರಿಗೆ ಬ್ರಿಟಿಷರು 'ಸೆಂಗೋಲ್' ನೀಡಿದ್ದರು ಎಂಬುದಕ್ಕೆ ಯಾವುದೇ ದಾಖಲಿಸಲಾದ ಪುರಾವೆಗಳು ಇಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಶುಕ್ರವಾರ ಹೇಳಿದ್ದಾರೆ.

ತಮಿಳುನಾಡಿನಲ್ಲಿ ರಾಜಕೀಯ ಲಾಭ ಗಳಿಸುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಬೆಂಬಲಿಗರು ಸೆಂಗೋಲ್ ಅನ್ನು ಬಳಸಿಕೊಳ್ಳುತ್ತಿದ್ದಾರೆ ಎಂದೂ ಅವರು ಆರೋಪಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, 'ತಮ್ಮ ಗುರಿ ಸಾಧನೆಗಾಗಿ ಇಂಥ ಕಪೋಲಕಲ್ಪಿತ ವಿಷಯಗಳನ್ನು ಹಬ್ಬಿಸುವುದು ಇವರ ಚಾಳಿ. ಆದರೆ, ನೂತನ ಸಂಸತ್ ಭವನ ಉದ್ಘಾಟನೆ ನೆರವೇರಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಏಕೆ ಅವಕಾಶ ನೀಡುತ್ತಿಲ್ಲ ಎಂಬುದೇ ಇಲ್ಲಿರುವ ಪ್ರಶ್ನೆ' ಎಂದಿದ್ದಾರೆ.

> **ನಾವು ನೂತನ ಸಂಸತ್ ಭವನದ ಉದ್ಘಾಟನೆಯನ್ನು ವಿರೋಧಿಸುತ್ತಿಲ್ಲ. ಈ ಸಮಾರಂಭಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಏಕೆ ಆಹ್ವಾನಿಸಿಲ್ಲ ಎಂಬುದನ್ನು ತಿಳಿಯಲು ಬಯಸುತ್ತೇವೆ**
> **ಸಂಜಯ್ ರಾವುತ್,** ಶಿವಸೇನಾ (ಯುಬಿಟಿ)ದ ರಾಜ್ಯಸಭಾ ಸದಸ್ಯ

ಪಿಐಎಲ್ ವಜಾಗೊಳಿಸಿದ ಸುಪ್ರೀಂ

ನವದೆಹಲಿ: ರಾಷ್ಟ್ರಪತಿಯಿಂದಲೇ ನೂತನ ಸಂಸತ್ ಭವನದ ಉದ್ಘಾಟನೆ ಮಾಡಿಸಲು ಲೋಕಸಭೆ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಶುಕ್ರವಾರ ನಿರಾಕರಿಸಿತು.

ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಹಾಗೂ ಪಿ.ಎಸ್.ನರಸಿಂಹ ಅವರಿದ್ದ ನ್ಯಾಯಪೀಠವು, ಪಿಐಎಲ್ ಹಿಂಪಡೆಯಲು ಅರ್ಜಿದಾರರೂ ಆದ ವಕೀಲ ಸಿ.ಆರ್.ಜಯ ಸುಕಿನ್ ಅವರಿಗೆ ಅನುಮತಿ ನೀಡಿತು.

ರಾಷ್ಟ್ರಪತಿ ಸಂಸತ್‌ನ ಮುಖ್ಯಸ್ಥರು. ಹೀಗಾಗಿ, ನೂತನ ಸಂಸತ್ ಭವನವನ್ನು ಅವರಿಂದಲೇ ಉದ್ಘಾಟನೆ ಮಾಡಿಸಬೇಕು ಎಂದು ವಾದಿಸಿದ್ದ ಅರ್ಜಿದಾರ, ರಾಷ್ಟ್ರಪತಿಯವರ ಪಾತ್ರ, ಕಾರ್ಯಗಳಿಗೆ ಸಂಬಂಧಿಸಿ ಸಂವಿಧಾನದ ಹಲವು ವಿಧಿಗಳನ್ನು ಉಲ್ಲೇಖಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನೂತನ ಸಂಸತ್ ಭವನದ ಉದ್ಘಾಟನೆಗೂ, ಸಂವಿಧಾನದ ಈ ವಿಧಿಗಳಿಗೂ ಏನು ಸಂಬಂಧ' ಎಂದು ಪ್ರಶ್ನಿಸಿತು.

'ಅರ್ಜಿದಾರರ ವಾದ ಒಪ್ಪಲಾಗದು. ಹೀಗಾಗಿ, ಸಂವಿಧಾನದ 32ನೇ ವಿಧಿಯಡಿ ಸಲ್ಲಿಸಿರುವ ಪಿಐಎಲ್‌ಅನ್ನು ಅರ್ಜಿದಾರರು ಹಿಂಪಡೆದಿದ್ದಾರೆ ಎಂದು ಪರಿಗಣಿಸಿ, ಇದನ್ನು ವಜಾಗೊಳಿಸಲಾಗಿದೆ' ಎಂದು ಹೇಳಿತು.

ಚೀತಾ ಯೋಜನೆಯ ಪರಿಶೀಲನೆಗೆ ಸಮಿತಿ

ನವದೆಹಲಿ (ಪಿಟಿಐ): ಭಾರತದಲ್ಲಿ ಚೀತಾವನ್ನು ಮರುಪರಿಚಯಿಸುವ ಯೋಜನೆಯ ಪ್ರಗತಿ ಪರಿಶೀಲನೆ, ಮೇಲ್ವಿಚಾರಣೆಗಾಗಿ 11 ಸದಸ್ಯರ ಉನ್ನತಾಧಿಕಾರ ಸಮಿತಿಯನ್ನು ಕೇಂದ್ರ ಸರ್ಕಾರ ಶುಕ್ರವಾರ ರಚಿಸಿದೆ. ಪರಿಸರ ಪ್ರವಾಸೋದ್ಯಮದ ಭಾಗವಾಗಿ ಚೀತಾ ವಸತಿ ವಲಯವನ್ನು ಮುಕ್ತಗೊಳಿಸುವ ಬಗ್ಗೆಯೂ ಸಲಹೆ ನೀಡಲು ಸೂಚಿಸಿದೆ.

ಗ್ಲೋಬಲ್ ಟೈಗರ್ ಫೋರಂನ ಪ್ರಧಾನ ಕಾರ್ಯದರ್ಶಿ ರಾಜೇಶ್ ಗೋಪಾಲ್ ಅವರು ಸಮಿತಿಯ ನೇತೃತ್ವ ವಹಿಸುವರು. ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಗುರುವಾರವಷ್ಟೇ ಚೀತಾದ ಇನ್ನೂ ಎರಡು ಮರಿಗಳು ಮೃತಪಟ್ಟಿದ್ದವು. ಇದರ ಬೆನ್ನಲ್ಲೇ ಉನ್ನತಾಧಿಕಾರ ಸಮಿತಿಯನ್ನು ರಚಿಸುವ ಕೇಂದ್ರದ ತೀರ್ಮಾನ ಹೊರಬಿದ್ದಿದೆ.

ಕುನೊ ಉದ್ಯಾನದಲ್ಲಿ ಚೀತಾ ಇತ್ತೀಚೆಗೆ ಜನ್ಮನೀಡಿದ್ದ ನಾಲ್ಕರಲ್ಲಿ ಮೂರು ಮರಿಗಳು ಮತ್ತು ಎರಡು ವಯಸ್ಕ ಚೀತಾಗಳು ಕಳೆದ ಎರಡು ತಿಂಗಳಲ್ಲಿ ಮೃತಪಟ್ಟಿದ್ದವು. ಈ ಬೆಳವಣಿಗೆಯ ಹಿಂದೆಯೇ ಚೀತಾಗಳಿಗೆ ಸಂಬಂಧಿಸಿದಂತೆ ವಸತಿ ವಲಯ ಮತ್ತು ವನ್ಯಜೀವಿಗಳನಿರ್ವಹಣೆ ಕುರಿತಂತೆ ಹಲವು ಪರಿಣತರು ಪ್ರಶ್ನೆಗಳನ್ನು ಎತ್ತಿದ್ದರು.

ರಾಜಸ್ಥಾನ ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಆರ್.ಎನ್.ಮೆಹರೋತ್ರಾ, ಭಾರತದ ವನ್ಯಜೀವಿ ಸಂಸ್ಥೆಯ (ಡಬ್ಲ್ಯುಐಐ) ಮಾಜಿ ನಿರ್ದೇಶಕ ಪಿ.ಆರ್.ಸಿನ್ಹಾ, ಆಂಧ್ರಪ್ರದೇಶದ ಮಾಜಿ ಸಿಸಿಎಫ್ ಎಚ್.ಎಸ್.ನೇಗಿ, ಡಬ್ಲ್ಯುಐಐನ ಪ್ರಾಧ್ಯಾಪಕರಾಗಿದ್ದ ಪಿ.ಕೆ.ಮಲ್ಲಿಕ್, ಡಬ್ಲ್ಯುಐಐನ ಮಾಜಿ ಡೀನ್ ಜಿ.ಎಸ್. ರಾವತ್, ಅಹಮದಾಬಾದ್ ಮೂಲದ ಸಮಾಜ ಸೇವಕ ಮಿಟ್ಟಲ್ ಪಟೇಲ್, ಡಬ್ಲ್ಯುಐಐ ವಿಜ್ಞಾನಿ ಮತ್ತು ಎನ್‌ಟಿಸಿಎ ಇನ್‌ಸ್ಪೆಕ್ಟರ್ ಜನರಲ್ ಖಮರ್ ಖುರೇಶಿ ಅವರು ಉನ್ನತಾಧಿಕಾರ ಸಮಿತಿಯಲ್ಲಿದ್ದಾರೆ.

ವನ್ಯಜೀವಿಗಳ ಪರಿಣತರಾದ ದಕ್ಷಿಣ ಆಫ್ರಿಕಾದ ಆಂಡ್ರಿಯಾನ್ ಟೋರ್ಡಿಫೆ, ನಮಿಬೀಯಾದ ಚೀತಾ ಕನ್ಸರ್ವೇಷನ್ ಫಂಡ್‌ನ ಲೌರಿ ಮಾರ್ಕರ್ ಅವರನ್ನು ಒಳಗೊಂಡ ಅಂತರರಾಷ್ಟ್ರೀಯ ಚೀತಾ ಪರಿಣತರ ತಂಡವು ಈ ಉನ್ನತಾಧಿಕಾರ ಸಮಿತಿಗೆ ಅಗತ್ಯ ಸಲಹೆ ನೀಡಲಿದೆ.

ಸಮಿತಿ ರಚನೆ ಕುರಿತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು (ಎನ್‌ಟಿಸಿಎ) ಸುತ್ತೋಲೆ ಹೊರಡಿಸಿದೆ. ಚೀತಾಗಳನ್ನು ದೇಶದಲ್ಲಿ ಮರುಪರಿ ಚಯಿಸುವುದರ ಯೋಜನೆಯ ಪ್ರಗತಿ, ನಿರ್ವಹಣೆ ಮತ್ತು ಪರಿಶೀಲನೆಗೆ ಪೂರಕ ಸಲಹೆಗಳನ್ನು ನೀಡಲು ಸಮಿತಿ ರಚಿಸಲಾಗಿದೆ ಎಂದು ತಿಳಿಸಿದೆ.

ಕೇಂದ್ರ ಸರ್ಕಾರಕ್ಕೆ 9 ವರ್ಷ • ನಂಬಿಕೆ ದ್ರೋಹ: ಜನರ ಕ್ಷಮೆಯಾಚಿಸುವಂತೆ ಪ್ರಧಾನಿಗೆ ಒತ್ತಾಯ

ಮೋದಿಗೆ 9 ಪ್ರಶ್ನೆ ಕೇಳಿದ ಕಾಂಗ್ರೆಸ್

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಒಂಬತ್ತು ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷವು ಅವರಿಗೆ ಬೆಲೆ ಏರಿಕೆ, ನಿರುದ್ಯೋಗ, ರೈತರ ಆದಾಯಕ್ಕೆ ಸಂಬಂಧಿಸಿದ ಒಂಬತ್ತು ಪ್ರಶ್ನೆಗಳನ್ನು ಕೇಳಿದ್ದು, ಜನರಿಗೆ 'ನಂಬಿಕೆ ದ್ರೋಹ' ಮಾಡಿದ ಕಾರಣಕ್ಕೆ ಕ್ಷಮೆಯಾಚಿಸುವಂತೆ ಒತ್ತಾಯಿಸಿದೆ.

ಕೇಂದ್ರ ಸರ್ಕಾರವು ಮೇ 26 ಅನ್ನು 'ಕ್ಷಮೆಯ ದಿನ'ವಾಗಿ (ಮಾಫಿ ದಿವಸ್) ಆಚರಿಸಬೇಕೆಂದೂ ಕಾಂಗ್ರೆಸ್ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್, 'ಭಾರತ್ ಜೋಡೊ ಯಾತ್ರೆ ಸಮಯದಲ್ಲಿ ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರು ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದರು. ಈ ಒಂಬತ್ತು ಪ್ರಶ್ನೆಗಳು ಈ ವಿಷಯವನ್ನು ಆಧರಿಸಿವೆ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ರಮೇಶ್ ಅವರು '9 ವರ್ಷ, 9 ಸವಾಲು' (ನೌ ಸಾಲ್, ನೌ ಸವಾಲ್) ಕೃತಿಯನ್ನು ಬಿಡುಗಡೆ ಮಾಡಿದರು. ಮೋದಿ ಅವರು ಪ್ರಧಾನಿಯಾಗಿ 9 ವರ್ಷಗಳಾದವು. ಹಾಗಾಗಿ, ಪಕ್ಷವು ಅವರಿಗೆ 9 ಪ್ರಶ್ನೆಗಳನ್ನು ಕೇಳಬಯಸುತ್ತದೆ. ಪ್ರಧಾನಿ ಅವರು ಈ 9 ಪ್ರಶ್ನೆಗಳಿಗೆ ತಮ್ಮ ಮೌನ ಮುರಿದು ಉತ್ತರಿಸಬೇಕು' ಎಂದು ಒತ್ತಾಯಿಸಿದ್ದಾರೆ.



ನವದೆಹಲಿಯಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಅವರು '9 ವರ್ಷ, 9 ಸವಾಲು' ಕೃತಿ ಬಿಡುಗಡೆ ಮಾಡಿದರು. ಪಕ್ಷದ ನಾಯಕರಾದ ಸುಪ್ರಿಯಾ ಶ್ರೀನಾಥೆ, ಪವನ್ ಖೇರಾ ಉಪಸ್ಥಿತರಿದ್ದರು –ಪಿಟಿಐ ಚಿತ್ರ

'ದೇಶದಲ್ಲಿ ಹಣದುಬ್ಬರ ಮತ್ತು ನಿರುದ್ಯೋಗ ಗಗನಕ್ಕೆ ಏರುತ್ತಿರುವುದು ಏಕೆ? ಶ್ರೀಮಂತರು ಶ್ರೀಮಂತರಾಗಿ, ಬಡವರು ಬಡವರಾಗಿಯೇ ಏಕೆ ಉಳಿಯುತ್ತಿದ್ದಾರೆ? ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದ್ದರೂ ಸಾರ್ವಜನಿಕ ಆಸ್ತಿಯನ್ನು ಪ್ರಧಾನಿ ಮೋದಿಯವರ ಸ್ನೇಹಿತರಿಗೆ ಏಕೆ ಮಾರಾಟ ಮಾಡಲಾಗುತ್ತಿದೆ? ಕೃಷಿ ಕಾನೂನುಗಳನ್ನು ರದ್ದಪಡಿಸುವಾಗ ರೈತರೊಂದಿಗೆ ಮಾಡಿಕೊಂಡ ಒಪ್ಪಂದ ಗಳನ್ನು ಏಕೆ ಜಾರಿ ಮಾಡಿಲ್ಲ. ಕನಿಷ್ಠ ಬೆಂಬಲ ಬೆಲೆಯನ್ನು ಏಕೆ ಖಾತ್ರಿಪಡಿಸಿಲ್ಲ. ಕಳೆದ 9 ವರ್ಷಗಳಿಂದ ರೈತರು ಆದಾಯ ದ್ವಿಗುಣವಾಗಿಲ್ಲ ಏಕೆ' ಎಂದು ಪ್ರಶ್ನಿಸಿದ್ದಾರೆ.

'ಕಳ್ಳರನ್ನು ತಪ್ಪಿಸಿಕೊಳ್ಳಲು ಏಕೆ ಬಿಡುತ್ತಿದ್ದೀರಿ? ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿನ ವ್ಯಾಪಕವಾದ ಭ್ರಷ್ಟಾಚಾರದ ಬಗ್ಗೆ ನೀವು ಏಕೆ ಮೌನವಾಗಿದ್ದೀರಿ ಮತ್ತು ಭಾರತೀಯರನ್ನು ಏಕೆ ಕಷ್ಟದಲ್ಲಿ ಸಿಲುಕಿಸಿದ್ದೀರಿ' ಎಂದೂ ಕೇಳಿದ್ದಾರೆ.

ರಾಷ್ಟ್ರೀಯ ಭದ್ರತೆಯ ವಿಚಾರಕ್ಕೆ ಸಂಬಂಧಿಸಿದಂತೆ 2020ರಲ್ಲಿ ಚೀನಾಕ್ಕೆ ಕ್ಲೀನ್ ಚಿಟ್ ಕೊಟ್ಟರೂ, ಅದು ಏಕೆ ಭಾರತದ ಭೂಪ್ರದೇಶವನ್ನು ಆಕ್ರಮಿಸಿಕೊಳ್ಳುವುದನ್ನು ಮುಂದುವರಿಸಿದೆ. ಚುನಾವಣಾ ಲಾಭಕ್ಕಾಗಿ ಉದ್ದೇಶಪೂರ್ವಕವಾಗಿ 'ದ್ವೇಷದ ರಾಜಕೀಯ'ವನ್ನು ಏಕೆ ಬಳಸಲಾಗುತ್ತಿದೆ?' ಎಂದು ಪ್ರಶ್ನಿಸಿದರು.

'ಮಹಿಳೆಯರ, ದಲಿತರ, ಪರಿಶಿಷ್ಟರ, ಇತರ ಹಿಂದುಳಿದವರ ಹಾಗೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳಿಗೆ ನೀವು ಏಕೆ ಮೌನ ವಹಿಸಿದ್ದೀರಿ? ಜಾತಿಗಣತಿಯನ್ನು ಏಕೆ ನಿರ್ಲಕ್ಷ್ಯ ಮಾಡುತ್ತಿರುವಿರಿ' ಎಂದು ಪ್ರಶ್ನಿಸಿದ ಜೈರಾಂ ರಮೇಶ್, 'ಒಂಬತ್ತು ವರ್ಷಗಳಲ್ಲಿ ನಮ್ಮ ಸಾಂವಿಧಾನಿಕ ಮೌಲ್ಯಗಳು ಮತ್ತು ಸಂಸ್ಥೆಗಳನ್ನು ದುರ್ಬಲಗೊಳಿಸಲಾಗಿದೆ' ಎಂದು ಆರೋಪಿಸಿದರು. ಕಾಂಗ್ರೆಸ್ ಮುಖಂಡ ಪವನ್ ಖೇರಾ ಮಾತನಾಡಿ, 'ಒಂಬತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ನೀಡಿರುವ ಭರವಸೆಗಳು ವಾಸ್ತವದಿಂದ ದೂರವಾಗಿವೆ' ಎಂದರು.

'ಪ್ರಧಾನಿಗಳೇ ನಿಮ್ಮಿಂದ ಉತ್ತರ ಕೇಳಿದಾಗ ನಮ್ಮನ್ನು 900 ವರ್ಷಗಳ ಹಿಂದಕ್ಕೆ ಕರೆದೊಯ್ಯಬೇಡಿ. ಈ 9 ವರ್ಷಗಳಲ್ಲಿ ನೀವು ಏನು ಮಾಡಿದ್ದೀರಿ ಎಂಬುದನ್ನು ತಿಳಿಯಲು ಎಲ್ಲರೂ ಬಯಸುತ್ತಾರೆ' ಎಂದು ಹೇಳಿದ ಖೇರಾ, 'ಜನರ ನಂಬಿಕೆಗೆ ದ್ರೋಹ ಎಸಗಿದ ಪ್ರಧಾನಿ ಅವರನ್ನು ಕ್ಷಮೆಯಾಚಿಸಲು ಒತ್ತಾಯಿಸುತ್ತೇವೆ' ಎಂದರು.

ಪವರ್ ಪಾಯಿಂಟ್ ಮೂಲಕ ಮೋದಿ ಸಾಧನೆ ಬಿಂಬಿಸಿದ ಬಿಜೆಪಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸುವ ಒಂದು ದಿನ ಮುನ್ನವೇ (ಗುರುವಾರ) ಬಿಜೆಪಿ ಮೋದಿ ನೇತೃತ್ವದ ಸರ್ಕಾರ ಸಾಧನೆಗಳನ್ನು ಪವರ್ ಪಾಯಿಂಟ್ ಮೂಲಕ ಬಿಂಬಿಸಿದೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮೋದಿ ನೇತೃತ್ವದ 9 ವರ್ಷಗಳ ಸರ್ಕಾರದ ಸಾಧನೆಗಳಿಗೆ ಹೋಲಿಸಿದರೆ ಯುಪಿಎ ಸರ್ಕಾರದ ಹತ್ತು ವರ್ಷಗಳು 'ಕಳೆದುಹೋದ ದಶಕ' ಎಂದು ಹೇಳಿದ್ದಾರೆ.

ಗುರುವಾರ ಸಂಜೆ ಮಾಧ್ಯಮಗಳೊಂದಿಗೆ ನಡೆಸಿದ ಸಂವಾದದಲ್ಲಿ ಸಚಿವ ರಾಜೀವ್ ಚಂದ್ರಶೇಖರ್ ಅವರು ಯುಪಿಎ ಅವಧಿಯ ಹತ್ತು ವರ್ಷಗಳೊಂದಿಗೆ ಪ್ರಧಾನಿ ಮೋದಿ ಅವರ 9 ವರ್ಷಗಳನ್ನು ಹೋಲಿಸುವ ಸಾಧನೆಗಳನ್ನು ಪಾತ್ಯಕ್ಷಿಕೆ ಮೂಲಕ ಬಿಂಬಿಸಿದರು.

ಈ ಸಂದರ್ಭದಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್ ಕೂಡಾ ಮಾಧ್ಯಮಗಳೊಂದಿಗೆ ಸಂವಾದ ನಡೆಸಿದರು.

ಯುಪಿಎಸ್‌ಸಿ: ವಂಚನೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಪಾಸಾಗಿದ್ದೇವೆ ಎಂದು ಇಬ್ಬರು ಅಭ್ಯರ್ಥಿಗಳು ಸುಳ್ಳು ಹೇಳುತ್ತಿದ್ದಾರೆ. ಇಬ್ಬರೂ ಅಭ್ಯರ್ಥಿಗಳು ತಮ್ಮ ದಾಖಲಾತಿಗಳನ್ನು ತಿದ್ದಿ, ವಂಚಿಸಲು ಯತ್ನಿಸಿದ್ದಾರೆ ಯುಪಿಎಸ್‌ಸಿ ಹೇಳಿದೆ.

ಈಚೆಗೆ ಪ್ರಕಟವಾದ ಯುಪಿಎಸ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ತಾನು ಪಾಸಾಗಿದ್ದೇನೆ ಎಂದು ಮಧ್ಯಪ್ರದೇಶದ ಐಶಾ ಮಕ್ರಾನಿ ಎಂಬವರು ಹೇಳಿಕೊಂಡಿದ್ದರು. ಐಶಾ ತಮ್ಮ ನೋಂದಣಿ ಸಂಖ್ಯೆ 7811744 ಎಂದು ಹೇಳಿಕೊಂಡಿದ್ದರು. ಆದರೆ, ಅದೇ ಸಂಖ್ಯೆಯ ಐಶಾ ಫಾತಿಮಾ ಎಂಬವರೂ ತಾನು ಈ ಪರೀಕ್ಷೆಯಲ್ಲಿ ಪಾಸಾಗಿದ್ದೇನೆ ಎಂದು ಹೇಳಿಕೊಂಡಿದ್ದರು.

ಇದೇ ರೀತಿ ಹರಿಯಾಣದ ತುಷಾರ್ ಎಂಬವರು ತಾನು ಈ ಪರೀಕ್ಷೆಯಲ್ಲಿ ಪಾಸಾಗಿದ್ದೇನೆ ಎಂದು ಹೇಳಿಕೊಂಡಿದ್ದರು. ಅವರು ತಮ್ಮ ನೋಂದಣಿ ಸಂಖ್ಯೆ 1521306 ಎಂದು ಹೇಳಿಕೊಂಡಿದ್ದರು. ಆದರೆ, ಬಿಹಾರದ ತುಷಾರ್ ಕುಮಾರ್ ಅವರು ಈ ನೋಂದಣಿ ಸಂಖ್ಯೆ ತನ್ನದೆಂದು ಹೇಳಿದ್ದರು.

> **ಇಬ್ಬರಿಗೇ ಒಂದೇ ನೋಂದಣಿ ಸಂಖ್ಯೆ ನೀಡುವಷ್ಟು ಯುಪಿಎಸ್‌ಸಿ ವ್ಯವಸ್ಥೆ ದುರ್ಬಲವಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ, ನಮ್ಮ ವ್ಯವಸ್ಥೆ ಸರಿಯಾಗಿಯೇ ಇದೆ**
> **ಯುಪಿಎಸ್‌ಸಿ ಪ್ರಕಟಣೆ**

ಈ ಎರಡೂ ಪ್ರಕರಣಗಳ ಬಗ್ಗೆ ತನಿಖೆ ನಡೆಸಿದ ಯುಪಿಎಸ್‌ಸಿ ಶುಕ್ರವಾರ ವರದಿ ನೀಡಿದೆ. ಐಶಾ ಮಕ್ರಾನಿ ಅವರ ನಿಜವಾದ ನೋಂದಣಿ ಸಂಖ್ಯೆ 7895064 ಆಗಿದ್ದು, ಅವರು ಈ ಪರೀಕ್ಷೆಯ ಎರಡೂ ಪತ್ರಿಕೆಗಳಲ್ಲಿ ಅನುತ್ತೀರ್ಣರಾಗಿದ್ದಾರೆ. ಅದೇ ರೀತಿ ಹರಿಯಾಣದ ತುಷಾರ್ ಅವರ ನಿಜವಾದ ನೋಂದಣಿ ಸಂಖ್ಯೆ 2208860 ಆಗಿದ್ದು, ಎರಡೂ ಪತ್ರಿಕೆಗಳಲ್ಲಿ ಅವರು ಅನುತ್ತೀರ್ಣರಾಗಿದ್ದಾರೆ. ಆದರೆ, ಈ ಇಬ್ಬರೂ ತಮ್ಮದೇ ಹೆಸರಿನ ಇತರ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ತಮ್ಮದೆಂದು ಹೇಳಿಕೊಂಡಿದ್ದಾರೆ. ಜತೆಗೆ, ಅದನ್ನು ಸಾಬೀತು ಮಾಡಲು ತಮ್ಮ ದಾಖಲೆ ಪತ್ರಗಳನ್ನು ತಿದ್ದಿದ್ದಾರೆ ಎಂದು ಯುಪಿಎಸ್‌ಸಿ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ದಾಖಲೆ ಪತ್ರಗಳನ್ನು ತಿದ್ದಿ ವಂಚನೆ ಎಸಗಲು ಯತ್ನಿಸಿದ ಮಧ್ಯಪ್ರದೇಶದ ಐಶಾ ಮಕ್ರಾನಿ ಮತ್ತು ಹರಿಯಾಣದ ತುಷಾರ್ ವಿರುದ್ಧ ಪರೀಕ್ಷಾ ನಿಯಮಗಳ ಉಲ್ಲಂಘನೆ ಸೆಕ್ಷನ್‌ಗಳ ಅಡಿಯಲ್ಲಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತದೆ. ಜತೆಗೆ ಅಪರಾಧ ಕಾನೂನುಗಳ ಅನ್ವಯವೂ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಯುಪಿಎಸ್‌ಸಿ ತಿಳಿಸಿದೆ.

ತೆರಿಗೆ ಲೆಕ್ಕಾಚಾರ ವರ್ಗಾವಣೆ: ಸೋನಿಯಾ ಅರ್ಜಿ ವಜಾ

ನವದೆಹಲಿ (ಪಿಟಿಐ): ಆದಾಯ ತೆರಿಗೆಯ ಸಾಮಾನ್ಯ ಲೆಕ್ಕಾಚಾರದ ಬದಲು, ಈ ಪ್ರಕ್ರಿಯೆಯನ್ನು ಕೇಂದ್ರ ವೃತ್ತಕ್ಕೆ ವರ್ಗಾಯಿಸಿದ್ದ ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಕಾಂಗ್ರೆಸ್ ಮುಖಂಡರಾದ ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಪ್ರಿಯಾಂಕಾ ಗಾಂಧಿ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಶುಕ್ರವಾರ ವಜಾ ಮಾಡಿತು.

ಶಸ್ತ್ರಾಸ್ತ್ರಗಳ ವಿತರಕ ಸಂಜಯ್ ಭಂಡಾರಿ ಅವರಿಗೆ ಸಂಬಂಧಿತ ಪ್ರಕರಣಕ್ಕೂ ತಮಗೂ ಸಂಬಂಧವಿಲ್ಲ ಎಂದು ಅರ್ಜಿದಾರರು ಪ್ರತಿಪಾದಿಸಿದ್ದು, ಈ ಸಂಬಂಧ ತೆರಿಗೆಯ ಲೆಕ್ಕಾಚಾರವನ್ನು ಕೇಂದ್ರ ವೃತ್ತಕ್ಕೆ ವರ್ಗಾಯಿಸಿದ್ದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು.

ಇಂತಹುದೇ ಆಕ್ಷೇಪಗಳಿಗೆ ಸಂಬಂಧಿಸಿದಂತೆ ಸಂಜಯ್ ಗಾಂಧಿ ಸ್ಮಾರಕ ಟ್ರಸ್ಟ್, ಜವಾಹರ್ ಭವನ್ ಟ್ರಸ್ಟ್, ರಾಜೀವ್‌ಗಾಂಧಿ ಪ್ರತಿಷ್ಠಾನ, ರಾಜೀವ್ ಗಾಂಧಿ ಚಾರಿಟಬಲ್ ಟ್ರಸ್ಟ್, ಯಂಗ್ ಇಂಡಿಯನ್ ಮತ್ತು ಆಮ್ ಆದ್ಮಿ ಪಾರ್ಟಿ ಸಲ್ಲಿಸಿದ್ದ ಅರ್ಜಿಗಳನ್ನೂ ಕೋರ್ಟ್ ವಜಾ ಮಾಡಿತು. 2018–19ನೇ ಹಣಕಾಸು ವರ್ಷದ ಆದಾಯ ತೆರಿಗೆ ಲೆಕ್ಕಾಚಾರಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ಕೇಂದ್ರ ವೃತ್ತಕ್ಕೆ ವರ್ಗಾಯಿಸಿ ಇಲಾಖೆಯ ಪ್ರಧಾನ ಆಯುಕ್ತರು ಆದೇಶಿಸಿದ್ದರು. ತೆರಿಗೆ ವಂಚನೆ ಸಾಧ್ಯತೆ ಕುರಿತಂತೆ ಕೇಂದ್ರ ವೃತ್ತವು ಪರಿಶೀಲನೆ ನಡೆಸಲಿದೆ.

'ನಿಸ್ಸಂದೇಹವಾಗಿ ಪರಸ್ಪರ ಸಂಬಂಧ ಅಥವಾ ಸಹಭಾಗಿತ್ವ ಇಲ್ಲದಿರಬಹುದು. ಆದರೆ, ಈ ಪ್ರಕರಣದಲ್ಲಿ ಲೆಕ್ಕಾಚಾರ ಪ್ರಕ್ರಿಯೆಯನ್ನು ತನಿಖೆಗೆ ಪೂರಕವಾಗಿ ವರ್ಗಾಯಿಸಲಾಗಿದೆ' ಎಂದು ಅರ್ಜಿಯನ್ನು ವಜಾ ಮಾಡಿದ ನ್ಯಾಯಮೂರ್ತಿಗಳಾದ ಮನ್‌ಮೋಹನ್ ಮತ್ತು ದಿನೇಶ್ ಕುಮಾರ್ ಶರ್ಮಾ ಅವರಿದ್ದ ಪೀಠ ತಿಳಿಸಿತು.



ಬಿಸಿಲ ತಾಪ

ಡೆಹ್ರಾಡೂನ್‌ನಲ್ಲಿ ಬಿಸಿಲ ತಾಪ ಹೆಚ್ಚಾಗಿರುವುದರಿಂದ ಕೊಡೆ ಹಿಡಿದು ಹೊರಟಿರುವ ಯುವತಿಯರು –ಪಿಟಿಐ ಚಿತ್ರ

ನೀರಿಗೆ ಬಿದ್ದ ಮೊಬೈಲ್ ತೆಗೆಯುವ ಯತ್ನ: ಛತ್ತೀಸಗಢದ ಅಧಿಕಾರಿ ಅಮಾನತು

ಫೋನ್‌ಗಾಗಿ 41 ಲಕ್ಷ ಲೀಟರ್ ನೀರು ಖಾಲಿ!

ಕಾಂಕೆರ್ (ಪಿಟಿಐ): ಜಲಾಶಯದಲ್ಲಿ ಬಿದ್ದ ತನ್ನ ₹95 ಸಾವಿರ ಬೆಲೆಯ ಮೊಬೈಲ್ ಅನ್ನು ಪಡೆದುಕೊಳ್ಳುವುದಕ್ಕಾಗಿ ಆಹಾರ ನಿರೀಕ್ಷಕ ರಾಜೇಶ್ ವಿಶ್ವಾಸ್ ಎಂಬುವರು ಪರಲ್‌ಕೋಟ್ ಜಲಾಶಯದಿಂದ 41 ಲಕ್ಷ ಲೀಟರ್ ನೀರನ್ನು ಖಾಲಿ ಮಾಡಿಸಿದ್ದಾರೆ.

ರಾಜೇಶ್ ಅವರು ಕಾಂಕೆರ್ ಜಿಲ್ಲೆಯ ಪಖಾಂಜುರ ಪ್ರದೇಶದಲ್ಲಿ ಆಹಾರ ನಿರೀಕ್ಷಕರಾಗಿದ್ದರು.

'ಜಲಾಶಯದಲ್ಲಿ ಸಂಗ್ರಹವಾಗಿದ್ದ ನೀರನ್ನು ಇಂಥ ಬಿರುಬೇಸಿಗೆಯ ಕಾಲದಲ್ಲಿ ಖಾಲಿ ಮಾಡಿಸಿದ್ದಕ್ಕಾಗಿ ರಾಜೇಶ್ ಅವರನ್ನು ಅಮಾನತು ಮಾಡಲಾಗಿದೆ' ಎಂದು ಇಲ್ಲಿನ ಜಿಲ್ಲಾಧಿಕಾರಿ ಪ್ರಿಯಾಂಕಾ ಶುಕ್ಲಾ ಅವರು ಶುಕ್ರವಾರ ಹೊರಡಿಸಿದ ಆದೇಶದಲ್ಲಿ ಹೇಳಲಾಗಿದೆ.

> **ಈ ನೀರನ್ನು ಯಾರೂ ಬಳಸುತ್ತಿರಲಿಲ್ಲ. ಖಾಲಿ ಮಾಡಿದ ನೀರು ಅಕ್ಕಪಕ್ಕದ ಕೆರೆಗಳಿಗೆ ಹರಿದು ಹೋಗಿದೆ. ನೀರು ವ್ಯರ್ಥವಾಗಿಲ್ಲ**
> **ರಾಜೇಶ್ ವಿಶ್ವಾಸ್**
> ಅಮಾನತುಗೊಂಡ ಆಹಾರ ನಿರೀಕ್ಷಕ

ಇದರೊಂದಿಗೆ, ಜಲಾಶಯದ ನೀರು ಖಾಲಿ ಮಾಡಲು ಮೌಖಿಕ ಒಪ್ಪಿಗೆ ನೀಡಿದ ಜಲ ಸಂಪನ್ಮೂಲ ಇಲಾಖೆಯ ಉಪವಿಭಾಗಾಧಿಕಾರಿ ಆರ್.ಸಿ. ದಿವರ್ ಅವರಿಗೆ ಶೋಕಾಸ್ ನೋಟಿಸ್ ನೀಡಿದ್ದಾರೆ. ದಿವರ್ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

> **ಕುಡಿಯುವ ನೀರಿನ ಸಮಸ್ಯೆಗೆ ಸರ್ಕಾರ ವ್ಯವಸ್ಥೆ ಮಾಡಿಲ್ಲ. ಇಂಥ ವೇಳೆ 1500 ಎಕರೆ ಭೂಮಿಗೆ ಉಪಯೋಗವಾಗಬಹುದಾಗಿದ್ದ ನೀರನ್ನು ಖಾಲಿ ಮಾಡಿಸಿದ್ದಾರೆ**
> **ರಮಣ್ ಸಿಂಗ್,** ಮಾಜಿ ಮುಖ್ಯಮಂತ್ರಿ, ಬಿಜೆಪಿ ಹಿರಿಯ ನಾಯಕ

ಏನಾಗಿತ್ತು?: ರಾಜೇಶ್ ಅವರು ತಮ್ಮ ಸ್ನೇಹಿತರೊಂದಿಗೆ ಕಳೆದ ಭಾನುವಾರ (ಮೇ 21) ಜಲಾಶಯಕ್ಕೆ ತೆರಳಿದ್ದರು. ಈ ವೇಳೆ ಸ್ನೇಹಿತರೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ರಾಜೇಶ್ ಮುಂದಾದರು. ಆಗ ಅವರ ಸ್ಯಾಮ್ಸಂಗ್ ಗ್ಯಾಲಕ್ಸಿ ಎಸ್‌23 ಮಾಡೆಲ್ ಫೋನು ಜಲಾಶಯಕ್ಕೆ ಬಿದ್ದಿತು.

'ಈಜು ಗೊತ್ತಿದ್ದ ನನ್ನ ಸ್ನೇಹಿತರು ಹಾಗೂ ಕೆಲವು ಸ್ಥಳೀಯರು ಮೊಬೈಲ್ ಹುಡುಕಲು ಹಲವು ಬಾರಿ ಪ್ರಯತ್ನ ನಡೆಸಿದರು. ಆದರೂ, ಫೋನ್ ದೊರಕಲಿಲ್ಲ. ನಂತರ 'ಜಲಾಶಯವು 10 ಅಡಿ ಇದೆ. ಒಂದು ವೇಳೆ 3–4 ಅಡಿಗಳಷ್ಟು ನೀರು ಖಾಲಿ ಮಾಡಿಸುವಂತಾದರೆ ಮೊಬೈಲ್ ಹುಡುಕಲು ಅನುಕೂಲವಾಗುತ್ತದೆ' ಎಂದು ಸ್ಥಳೀಯರು ಹೇಳಿದರು. ಆದ್ದರಿಂದ ನಾನು ದಿವರ್ ಅವರ ಬಳಿ ಮಾತನಾಡಿದೆ. ಅವರು ಮೌಖಿಕ ಆದೇಶ ನೀಡಿದರು' ಎಂದು ರಾಜೇಶ್ ಅವರು ಪಿಟಿಐಗೆ ಹೇಳಿದ್ದಾರೆ.

ಜಲಾಶಯದ ನೀರನ್ನು ಖಾಲಿ ಮಾಡಿಸಲು 30 ಎಚ್‌ಪಿ ಡೀಸೆಲ್ ಪಂಪುಗಳನ್ನು ರಾಜೇಶ್ ಅವರು ತರಿಸಿದರು. ಇಷ್ಟು ದೊಡ್ಡ ಪ್ರಮಾಣದ ನೀರನ್ನು ಖಾಲಿ ಮಾಡಿಸುವುದಕ್ಕಾಗಿ ಸೋಮವಾರ ಸಂಜೆಯಿಂದ ಗುರುವಾರದ ವರೆಗೂ ಪಂಪ್‌ಗಳನ್ನು ಚಾಲನೆ ಮಾಡಿಸಿ ತಮ್ಮ ಸ್ವಂತ ಹಣದಲ್ಲಿ ನೀರು ಖಾಲಿ ಮಾಡಿಸಿದ್ದಾರೆ. ನಂತರ ಅವರ ಫೋನ್ ಸಿಕ್ಕಿದೆ. ಫೋನ್ ಸಿಕ್ಕಿತಾದರೂ ಅದು ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಲ್ಲ'

ನವದೆಹಲಿ (ಪಿಟಿಐ): ದೆಹಲಿ ಸೇವಾ ವಿಷಯಗಳ ಮೇಲಿನ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ ಹಿನ್ನೆಲೆಯಲ್ಲಿ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಮೇ 11 ರಂದು ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ಆಧಾರದ ಮೇಲೆ ಸೇವಾ ವಿಷಯದ ಮೇಲಿನ ನಿಯಂತ್ರಣವನ್ನು ದೆಹಲಿ ಸರ್ಕಾರಕ್ಕೆ ನೀಡಲಾಗಿತ್ತು. ಆದರೆ ಕೇಂದ್ರ ಸರ್ಕಾರ ಅದನ್ನು ಹಿಂಪಡೆದಿತ್ತು. ಪಂಜಾಬ್ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಗಳಾದ ಭಗವಂತ್ ಮಾನ್, ಮಮತಾ ಬ್ಯಾನರ್ಜಿ ಅವರೂ ಸಭೆಗೆ ಹಾಜರಾಗುತ್ತಿಲ್ಲ.

ತಮಿಳುನಾಡು: ಸಚಿವ ಸೇಂಥಿಲ್, ಆಪ್ತರ ನಿವಾಸಗಳಲ್ಲಿ ಐಟಿ ಶೋಧ

ಚೆನ್ನೈ (ಪಿಟಿಐ): ತಮಿಳುನಾಡಿನ ಇಂಧನ ಸಚಿವ ವಿ.ಸೇಂಥಿಲ್ ಬಾಲಾಜಿ, ಅವರ ಸಹೋದರ, ಸಂಬಂಧಿಗಳು ಮತ್ತು ಸ್ನೇಹಿತರಿಗೆ ಸೇರಿದ ವಿವಿಧ ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶುಕ್ರವಾರ ಶೋಧ ಕಾರ್ಯ ನಡೆಸಿದರು.

'ಆದಾಯ ತೆರಿಗೆ ಇಲಾಖೆ ಸೇರಿದಂತೆ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಬಿಜೆಪಿಯು, ವಿರೋಧ ಪಕ್ಷಗಳ ವಿರುದ್ಧ ಪ್ರತೀಕಾರಕ್ಕೆ ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಆಡಳಿತಾರೂಢ ಡಿಎಂಕೆ ಆರೋಪಿಸಿದೆ.

'ರಾಜ್ಯದಲ್ಲಿ ಡಿಎಂಕೆ ನೇತೃತ್ವದ ಸರ್ಕಾರದ ಜನಪ್ರಿಯತೆಯನ್ನು ಸಹಿಸಲಾರದೆ ಬಿಜೆಪಿ ಈ ರೀತಿ ಮಾಡುತ್ತಿದೆ' ಎಂದು ಪಕ್ಷದ ಕಾರ್ಯದರ್ಶಿ ಮತ್ತು ಮಾಜಿ ಸಂಸದ ಆರ್.ಎಸ್.ಭಾರತಿ ದೂರಿದ್ದಾರೆ.


ಸುದ್ದಿಗಾರರೊಂದಿಗೆ ಮಾತನಾಡಿದ ಬಾಲಾಜಿ ಅವರು, 'ನಮ್ಮ ನಿವಾಸದಲ್ಲಿ ಅಧಿಕಾರಿಗಳು ಶೋಧ ನಡೆಸಿಲ್ಲ. ಒಂದು ವೇಳೆ ಅವರು ಶೋಧ ನಡೆಸಿದರೂ, ಅದನ್ನು ಎದುರಿಸಲು ನಾನು ಸಿದ್ಧ. 2021ರ ವಿಧಾನಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲೂ ಈ ರೀತಿಯ ಶೋಧಗಳು ನಡೆದಿವೆ. ಶೋಧ ಕಾರ್ಯ ನಡೆಸಿದ ಸ್ಥಳಗಳಿಗೆ ಸಂಬಂಧಿಸಿದ ವ್ಯಕ್ತಿಗಳು ಈಗಾಗಲೇ ತೆರಿಗೆ ಪಾವತಿಸಿದ್ದಾರೆ' ಎಂದು ಹೇಳಿದರು.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಸಿಂಗಪುರ ಮತ್ತು ಜಪಾನ್‌ಗೆ ಭೇಟಿ ನೀಡಿರುವಾಗಲೇ ಈ ಶೋಧ ಕಾರ್ಯ ನಡೆದಿದೆ.

ಹಣ ಉಳಿಕೆಗೆ 'ಟೆಲಿ ಮೆಡಿಸಿನ್' ಮೊರೆ

ಖಾಸಗಿ ಆಸ್ಪತ್ರೆಗಳಲ್ಲಿ ಟೆಲಿ–ವಿಡಿಯೊ ಸಮಾಲೋಚನೆಗೆ ಹೆಚ್ಚಿದ ಸ್ಪಂದನೆ • ವೆಚ್ಚ ಕಡಿತಗೊಳಿಸಲು ಆನ್‌ಲೈನ್ ಚಿಕಿತ್ಸೆ ಆಯ್ಕೆ

• ವರುಣ ಹೆಗಡೆ



ಬೆಂಗಳೂರು: ಸರದಿಯಲ್ಲಿ ಕಾಯುವಿಕೆ, ದುಬಾರಿ ವೈದ್ಯಕೀಯ ಶುಲ್ಕದ ಕಾರಣ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ 'ಟೆಲಿ ಮೆಡಿಸಿನ್' ವ್ಯವಸ್ಥೆಯಡಿ ವೈದ್ಯರ ಸಮಾಲೋಚನೆಗೆ ಒಳಪಡುವವರ ಸಂಖ್ಯೆ ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಳವಾಗಿದೆ.

ಕೋವಿಡ್ ಕಾಣಿಸಿಕೊಂಡ ಬಳಿಕ ವಿಡಿಯೊ ಹಾಗೂ ಟೆಲಿ ಸಮಾಲೋಚನೆ ಮುನ್ನೆಲೆಗೆ ಬಂದಿದೆ. ಕರ್ನಾಟಕ ವೈದ್ಯಕೀಯ ಮಂಡಳಿಯು (ಕೆಎಂಸಿ) ನೋಂದಾಯಿತ ಖಾಸಗಿ ವೈದ್ಯರಿಗೆ ಆನ್‌ಲೈನ್ ಸಮಾಲೋಚನೆ ಹಾಗೂ ಟೆಲಿ ಮೆಡಿಸಿನ್ ವ್ಯವಸ್ಥೆಯ ಮೂಲಕ ಚಿಕಿತ್ಸೆ ನೀಡಲು ಅನುವು ಮಾಡಿಕೊಟ್ಟಿದೆ. ಇದರಿಂದಾಗಿ ಪ್ರಮುಖ ಖಾಸಗಿ ಆಸ್ಪತ್ರೆಗಳ ವೈದ್ಯರು ನಿಗದಿತ ಜಾಲತಾಣ ಹಾಗೂ ಆ್ಯಪ್‌ಗಳ ಮೂಲಕ ಮುಂಚಿತವಾಗಿ ನೋಂದಾಯಿಸಿಕೊಂಡವರಿಗೆ ಸಮಾಲೋಚನೆ ನಡೆಸಿ, ಔಷಧ ಸೂಚಿಸುತ್ತಿದ್ದಾರೆ. ಇದಕ್ಕಾಗಿ ದಿನದ ಕೆಲ ಅವಧಿಯನ್ನು ಮೀಸಲಿಡುತ್ತಿದ್ದಾರೆ.

ವೈದ್ಯರು, ಆರೋಗ್ಯ ಸಿಬ್ಬಂದಿಯ ಕೊರತೆ ಕಾರಣ ನಗರದ ಕೆ.ಸಿ.ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ, ವಿಕ್ಟೋರಿಯಾ, ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಸೇರಿ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ನಿರ್ವಹಣೆ ಸವಾಲಾಗಿ ಪರಿಣಮಿಸಿದೆ. ಈ ಆಸ್ಪತ್ರೆಗಳಿಗೆ ಹೊರ ಜಿಲ್ಲೆಗಳಿಂದಲೂ ರೋಗಿಗಳು ಬರುತ್ತಿದ್ದು, ರೋಗಿಗಳ ದಟ್ಟಣೆ ಹೆಚ್ಚುತ್ತಿದೆ. ಇದರಿಂದಾಗಿ ಹಲವರು ಖಾಸಗಿ ಆಸ್ಪತ್ರೆಗಳು ಹಾಗೂ ಕ್ಲಿನಿಕ್‌ಗಳನ್ನು ಅವಲಂಬಿಸಿದ್ದಾರೆ. ಕೋವಿಡ್ ಕಾಣಿಸಿಕೊಂಡ ಬಳಿಕ ಖಾಸಗಿ ಆಸ್ಪತ್ರೆಗಳು ವೈದ್ಯರ ಸಮಾಲೋಚನೆ ಸೇರಿ ವಿವಿಧ ಶುಲ್ಕಗಳನ್ನು ಹೆಚ್ಚಳಮಾಡಿವೆ.

ಕೋವಿಡ್ ಬಳಿಕ ಮುನ್ನೆಲೆಗೆ: ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳು ಜ್ವರ, ಕೆಮ್ಮು ಸೇರಿ ವಿವಿಧ ಸಾಮಾನ್ಯ ಅನಾರೋಗ್ಯ ಸಮಸ್ಯೆಗಳಿಗೂ ₹ 500ರಿಂದ ₹ 2 ಸಾವಿರದವರೆಗೂ ಶುಲ್ಕ ಪಡೆಯುತ್ತಿವೆ. ಔಷಧವನ್ನು ಪ್ರತ್ಯೇಕವಾಗಿ ನೀಡಲಾಗುತ್ತಿದೆ. ಟೆಲಿ ಹಾಗೂ ವಿಡಿಯೊ ಸಮಾಲೋಚನೆಯಲ್ಲಿ ₹ 200ರಿಂದ ₹ 500ರವರೆಗೆ ಪಡೆಯಲಾಗುತ್ತಿದೆ. ವೈದ್ಯರು ಹಾಗೂ ಸಮಾಲೋಚನೆ ವಿಧಾನದ ಆಧಾರದ ಮೇಲೆ ದರ ನಿಗದಿ ಮಾಡಲಾಗುತ್ತಿದೆ. ಇದರಿಂದಾಗಿ ಮಣಿಪಾಲ್, ನಾರಾಯಣ ಹೆಲ್ತ್, ಆಸ್ಟರ್, ಅಪೋಲೊ, ಫೋರ್ಟಿಸ್, ಸ್ಪರ್ಶ್ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಬಳಿಕ 'ಟೆಲಿ ಮೆಡಿಸಿನ್' ವ್ಯವಸ್ಥೆ ಮುಂಚೂಣಿಗೆ ಬಂದಿದೆ. ಜ್ವರ, ಕೆಮ್ಮಿನಂತಹ ಸಾಮಾನ್ಯ ಸಮಸ್ಯೆಗಳ ಜತೆಗೆ, ಮಧುಮೇಹ, ಅಧಿಕ ರಕ್ತದೊತ್ತಡದಂತಹ ದೀರ್ಘಾವಧಿ ಸಮಸ್ಯೆಗಳಿಗೂ ಈ ವ್ಯವಸ್ಥೆಯಡಿ ಚಿಕಿತ್ಸೆ ಪಡೆಯಲಾಗುತ್ತಿದೆ.

'ಟೆಲಿ, ವಿಡಿಯೊ ಸಮಾಲೋಚನೆಗೆ ಒಳಪಡುವವರ ಸಂಖ್ಯೆ ಕೋವಿಡ್ ಬಳಿಕ ಹೆಚ್ಚಳವಾಗಿದೆ. ಹಿಂದಿನ ವೈದ್ಯಕೀಯ ಇತಿಹಾಸದ ಮಾಹಿತಿಯನ್ನು ಪಡೆದುಕೊಂಡು, ಅಗತ್ಯ ಸಲಹೆಗಳನ್ನು ನೀಡಲಾಗುತ್ತದೆ. ರೋಗಿಯನ್ನು ಪರೀಕ್ಷೆ ಮಾಡುವ ಅಗತ್ಯ ಇರದಿದ್ದಲ್ಲಿ ಮಾತ್ರ ಈ ವ್ಯವಸ್ಥೆಯಡಿ ಸೇವೆ ಒದಗಿಸಲಾಗುತ್ತದೆ. ಔಷಧದ ವಿವರವನ್ನು ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುತ್ತದೆ' ಎಂದು ನಾರಾಯಣ ಹೆಲ್ತ್ ಸಿಟಿಯ ಡಾ. ರವಿಚಂದ್ರ ಎಂ.ಆರ್.ಕೆ ತಿಳಿಸಿದರು.

'ಕೋವಿಡ್ ಕಾಣಿಸಿಕೊಂಡಾಗ ದಿನಕ್ಕೆ ಸರಾಸರಿ 600 ಮಂದಿ ಆನ್‌ಲೈನ್ ಮೂಲಕ ಸಮಾಲೋಚನೆಗೆ ಒಳಪಡುತ್ತಿದ್ದರು. ಈಗ ಆ ಸಂಖ್ಯೆ ನೂರಕ್ಕೆ ಇಳಿದಿದೆ. ಕೋವಿಡ್ ಪೂರ್ವಕ್ಕೆ ಹೋಲಿಸಿದಲ್ಲಿ ಆನ್‌ಲೈನ್ ಸಮಾಲೋಚನೆ ಹೆಚ್ಚಿದೆ' ಎಂದು ಆಸ್ಟರ್ ಆಸ್ಪತ್ರೆಯ ಪ್ರತಿನಿಧಿ ಹೇಳಿದರು.

ಮಧುಮೇಹ, ಬಿ.ಪಿಯಂಥ ದೀರ್ಘಾವಧಿ ಸಮಸ್ಯೆಗಳಿಗೂ ಆನ್‌ಲೈನ್ ಸಮಾಲೋಚನೆ ಹೆಚ್ಚಿದೆ. ತಂತ್ರಜ್ಞಾನ ಪ್ರಗತಿಯಿಂದ ಇದು ಜನಪ್ರಿಯ ಆಗುತ್ತಿದೆ.
ವಿನಾಯಕ್ ಚಕ್ರವರ್ತಿ
ಅಪೋಲೊ ಸ್ಪೆಕ್ಟ್ರಾ ಆಸ್ಪತ್ರೆ ವ್ಯವಹಾರ ಮುಖ್ಯಸ್ಥ

ಕೋವಿಡ್ ಕಾಣಿಸಿಕೊಂಡಾಗ ಆನ್‌ಲೈನ್ ಸಮಾಲೋಚನೆ ಮುನ್ನೆಲೆಗೆ ಬಂದಿತು. ಚಿಕಿತ್ಸೆ ಪಡೆದು ತೆರಳಿದವರು, ಹೊರ ರಾಜ್ಯದವರೂ ಆನ್‌ಲೈನ್ ಸಮಾಲೋಚನೆಗೆ ಒಳಗಾಗುತ್ತಿದ್ದಾರೆ.
ಡಾ. ಪ್ರಮೋದ್ ವಿ. ಸತ್ಯ
ಮಣಿಪಾಲ್ ಆಸ್ಪತ್ರೆ

ಟೆಲಿಮೆಡಿಸಿನ್ ವ್ಯವಸ್ಥೆಯಿಂದ ರೋಗಿಗಳಿಗೆ ವೈದ್ಯಕೀಯ ಸೇವೆ ಸುಲಭವಾಗಿದೆ. ವಿವಿಧ ಆ್ಯಪ್‌ಗಳ ನೆರವಿನಿಂದ ವೈದ್ಯಕೀಯ ಇತಿಹಾಸ ತರಿಸಿಕೊಳ್ಳಲಾಗುತ್ತದೆ.
ಡಾ. ಅಕ್ಷಯ್ ಪಿ. ಜಾಧವ್
ಬೆಲೆನಸ್ ಚಾಂಪಿಯನ್ ಆಸ್ಪತ್ರೆ

ಮನೋರೋಗಕ್ಕೆ 'ಟೆಲಿ ಮನಸ್'

ಕೋವಿಡ್ ಕಾಣಿಸಿಕೊಂಡ ಬಳಿಕ ಮನೋರೋಗಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ದೂರವಾಣಿ ಮೂಲಕ ಸಮಾಲೋಚನೆ ನಡೆಸುವ 'ಟೆಲಿ ಮನಸ್' ಸಹಾಯವಾಣಿ ಪ್ರಾರಂಭಿಸಿತ್ತು. ಅದನ್ನು ಮುಂದುವರಿಸಿದ್ದು, ಈವರೆಗೆ 3 ಸಾವಿರಕ್ಕೂ ಅಧಿಕ ದೂರವಾಣಿ ಕರೆ ಸ್ವೀಕರಿಸಲಾಗಿದೆ. ಖಾಸಗಿ ಸಹಭಾಗಿತ್ವದಡಿ ಈ ಸೇವೆಯನ್ನು ಈಗ ವಿಸ್ತರಿಸಲಾಗುತ್ತಿದೆ.

ವ್ಯಥೆಗೆ ಒಳಪಟ್ಟವರು, ಪರೀಕ್ಷಾ ಒತ್ತಡಕ್ಕೆ ಒಳಗಾದವರು, ಮಾದಕ ವಸ್ತು ವ್ಯಸನಕ್ಕೆ ಒಳಗಾದವರು, ಆರ್ಥಿಕ ಒತ್ತಡಕ್ಕೆ ಸಿಲುಕಿದವರು ಸೇರಿ ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆಗೆ ಒಳಗಾದವರಿಗೆ ತಜ್ಞರಿಂದ ಸಲಹೆ ನೀಡಲಾಗುತ್ತಿದೆ. 14416 ಶುಲ್ಕ ರಹಿತ ದೂರವಾಣಿ ಸಂಖ್ಯೆಯಾಗಿದೆ.

ಮುಖ್ಯಾಂಶಗಳು

- ವೈದ್ಯರು, ಆರೋಗ್ಯ ಸಿಬ್ಬಂದಿಯ ಕೊರತೆ ಹಿನ್ನೆಲೆಯಲ್ಲಿ ನಗರದ ಹಲವು ಆಸ್ಪತ್ರೆಗಳಲ್ಲಿ 'ಟೆಲಿ ಮೆಡಿಸಿನ್' ಮಾರ್ಗ ಬಳಕೆ
- ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ದಿನಕ್ಕೆ ಸರಾಸರಿ 600 ಮಂದಿಯಿಂದ ಸಮಾಲೋಚನೆ
- ರೋಗಿಯ ಪರೀಕ್ಷೆ ಮಾಡುವ ಅಗತ್ಯ ಇಲ್ಲದಿದ್ದರೆ ಈ ಮಾರ್ಗ ಉಪಕಾರಿ

ಸುದ್ದಿ 2 ನಿಮಿಷ

ಚೀತಾ ಜಾಡು ಅರಸಿ ಹೊರಟ ಅರಣ್ಯ ಸಿಬ್ಬಂದಿ ಮೇಲೆ ದಾಳಿ

ಶಿವಪುರಿ (ಮಧ್ಯಪ್ರದೇಶ, ಪಿಟಿಐ): ಕುನೊ ರಾಷ್ಟ್ರೀಯ ಉದ್ಯಾನದಿಂದ ಹೊರಗೆ ಬಂದಿದ್ದ ಚೀತಾದ ಜಾಡು ಅರಸುತ್ತಿದ್ದ ಮಧ್ಯಪ್ರದೇಶ ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಡಕಾಯಿತರೆಂದು ತಪ್ಪಾಗಿ ಭಾವಿಸಿ ಸ್ಥಳೀಯ ಗ್ರಾಮಸ್ಥರು ಥಳಿಸಿರುವ ಘಟನೆ ಶುಕ್ರವಾರ ನಡೆದಿದೆ.

ಇಲ್ಲಿನ ಬುರಖೇಡಾ ಗ್ರಾಮದ ಬಳಿ ನಸುಕಿನ 4 ಗಂಟೆಯ ವೇಳೆಗೆ ಈ ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಕಳೆದ ಸೆಪ್ಟೆಂಬರ್‌ನಲ್ಲಿ ನಮೀಬಿಯಾದಿಂದ ತರಲಾದ 'ಆಶಾ' ಹೆಸರಿನ ಚೀತಾ ಹೆಜ್ಜೆ ಜಾಡು ಹಿಡಿದು, ಅದನ್ನು ಪತ್ತೆ ಹಚ್ಚಲು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ಕೈಗೊಂಡಿದ್ದರು. ಇವರನ್ನು ಗೋವು ಕದಿಯಲು ಬಂದಿರುವ ಡಕಾಯಿತರೆಂದು ಭಾವಿಸಿದ ಗ್ರಾಮಸ್ಥರು ಗಾಳಿಯಲ್ಲಿ ಗುಂಡು ಹಾರಿಸಿದ್ದರು. ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದು, ಈ ವೇಳೆ ಮೂವರು ಸಿಬ್ಬಂದಿ ಗಾಯಗೊಂಡಿದ್ದಾರೆ. ಪೋಹ್ರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ' ಎಂದು ಕುನೊ ರಾಷ್ಟ್ರೀಯ ಉದ್ಯಾನದ ವಿಭಾಗೀಯ ಅರಣ್ಯಾಧಿಕಾರಿ ಪಿ.ಕೆ. ವರ್ಮಾ ತಿಳಿಸಿದ್ದಾರೆ.



ಕಂಪ್ಯೂಟರ್‌ಗಳಲ್ಲಿ ತಾಂತ್ರಿಕ ದೋಷ ವಿಮಾನ ಸಂಚಾರ ರದ್ದು

ಲಂಡನ್ (ಎಪಿ): ಕಂಪ್ಯೂಟರ್‌ಗಳಲ್ಲಿ ಕಾಣಿಸಿಕೊಂಡ ದೋಷದ ಕಾರಣ ಬ್ರಿಟಿಷ್ ವಿಮಾನಯಾನ ಸಂಸ್ಥೆಯ ಹಲವು ವಿಮಾನಗಳ ಸಂಚಾರವನ್ನು ರದ್ದುಪಡಿಸಲಾಗಿದೆ. ಇದರಿಂದಾಗಿ ಸಾವಿರಾರು ಪ್ರಯಾಣಿಕರಿಗೆ ತೊಂದರೆಯಾಯಿತು.

ಕಂಪ್ಯೂಟರ್‌ಗಳಲ್ಲಿ ಗುರುವಾರದಿಂದ ದೋಷ ಕಾಣಿಸಿಕೊಂಡಿದೆ. ಯುರೋಪ್‌ನಲ್ಲಿ ಅತಿ ಹೆಚ್ಚು ಪ್ರಯಾಣಿಕರ ದಟ್ಟಣೆ ಹೊಂದಿರುವ ಹೀಥ್ರೂ ವಿಮಾನ ನಿಲ್ದಾಣದಿಂದ ನಿರ್ಗಮಿಸುವ/ಆಗಮಿಸುವ ಅಲ್ಪಅಂತರದ ಸುಮಾರು 42 ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಯಿತು.

ಆನ್‌ಲೈನ್‌ನಲ್ಲಿ ಟಿಕೆಟ್ ಖರೀದಿಯು ಸಾಧ್ಯವಾಗದ ಕಾರಣ ಇತರ ವಿಮಾನಗಳೂ ನಿಗದಿತ ಸಮಯಕ್ಕಿಂತ ವಿಳಂಬವಾಗಿ ಹಾರಾಟ ಆರಂಭಿಸಿದವು. 'ತಾಂತ್ರಿಕ ದೋಷ ಸರಿಪಡಿಸಲಾಗುತ್ತಿದೆ' ಎಂದು ಸಂಸ್ಥೆ ತಿಳಿಸಿದೆ.

ನೋಂದಣಾಧಿಕಾರಿ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ಚುನಾವಣಾ ಸಾಮಗ್ರಿ ಪೂರೈಕೆಗೆ ಅಕ್ರಮ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ಅಗತ್ಯವಿದ್ದ ಸಾಮಗ್ರಿ ಪೂರೈಕೆಯ ಟೆಂಡರ್‌ನಲ್ಲಿ ಅಕ್ರಮ ನಡೆದಿದ್ದು, ಈ ಸಂಬಂಧ ಮೂವರು ಮತದಾರರ ನೋಂದಣಾಧಿಕಾರಿಗಳು ಸೇರಿ ನಾಲ್ವರ ವಿರುದ್ಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಾರ್ಚ್ 10ರಿಂದ ಮೇ 20ರವರೆಗಿನ ಅವಧಿಯಲ್ಲಿ ನಡೆದಿರುವ ಅಕ್ರಮ ಸಂಬಂಧ ಜಿಲ್ಲಾ ಚುನಾವಣಾಧಿಕಾರಿ (ದಕ್ಷಿಣ) ಜಗದೀಶ್ ನಾಯ್ಕ ಅವರು ದೂರು ನೀಡಿದ್ದಾರೆ. ಮೈ ಹೋಮ್ಸ್ ಇವೆಂಟ್ಸ್ ಕಂಪನಿಯ ಮಾಲೀಕ ಚಂದ್ರಕುಮಾರ್, ಮತದಾರರ ನೋಂದಣಾಧಿಕಾರಿಗಳಾದ ಎನ್. ನಾಗಭೂಷಣ, ಸುರೇಶ್ ಹಾಗೂ ನಾಗರಾಜ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗೋವಿಂದರಾಜನಗರ, ವಿಜಯ ನಗರ ಹಾಗೂ ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳ ಚುನಾವಣೆ ತಯಾರಿ ಹೊಣೆಯನ್ನು ಮತದಾರರ ನೋಂದಣಾಧಿಕಾರಿಗಳಿಗೆ ವಹಿಸಲಾಗಿತ್ತು. ತರಬೇತಿ ವೇಳೆ ಆಹಾರ ಸರಬರಾಜು, ಮಸ್ಟರಿಂಗ್ ಹಾಗೂ ಡಿ–ಮಸ್ಟರಿಂಗ್ ಸಂದರ್ಭದಲ್ಲಿ ಅಗತ್ಯವಿರುವ ವಸ್ತುಗಳ ಪೂರೈಕೆ, ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ, ಚೆಕ್‌ಪೋಸ್ಟ್ ನಿರ್ಮಾಣ, ಮತ ಎಣಿಕೆ ಕೇಂದ್ರಗಳ ನಿರ್ಮಾಣ ಸೇರಿದಂತೆ ವಿವಿಧ ಕೆಲಸ ನಿರ್ವಹಣೆಗಾಗಿ ಟೆಂಡರ್ ಆಹ್ವಾನಿಸಲಾಗಿತ್ತು.'

'ಮೈ ಹೋಮ್ಸ್ ಇವೆಂಟ್ಸ್ ಕಂಪನಿ ಮಾಲೀಕ ಚಂದ್ರಕುಮಾರ್, ಟೆಂಡರ್‌ನಲ್ಲಿ ಭಾಗಿಯಾಗಿದ್ದರು. ಮತದಾರರ ನೋಂದಣಾಧಿಕಾರಿಗಳ ಮೂಲಕ ಕಾರ್ಯಾದೇಶವನ್ನೂ ಪಡೆದಿದ್ದರು. ಆದರೆ, ಇತ್ತೀಚೆಗೆ ಕಂಪನಿಯ ದಾಖಲೆಗಳನ್ನು ಪರಿಶೀಲಿಸಿದಾಗ ಅಕ್ರಮ ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಂಪನಿಯು ಬಿಬಿಎಂಪಿಯಿಂದ ಉದ್ದಿಮೆ ಪರವಾನಗಿ ಪಡೆದಿಲ್ಲ. ಜೊತೆಗೆ, ನಗರದ ಎಲ್ಲಿಯೂ ಕಂಪನಿ ಕಚೇರಿ ಇಲ್ಲ. ಖೊಟ್ಟಿ ದಾಖಲೆ ಸೃಷ್ಟಿಸಿದ್ದ ಮಾಲೀಕ ಚಂದ್ರಕುಮಾರ್, ಕಮಿಷನ್ ನೀಡಿ ಟೆಂಡರ್ ತಮ್ಮದಾಗಿಸಿಕೊಂಡಿದ್ದರು. ಕೃತ್ಯದಲ್ಲಿ ಮತದಾರರ ನೋಂದಣಾಧಿಕಾರಿಗಳೂ ಶಾಮೀಲಾಗಿರುವುದಕ್ಕೆ ಪುರಾವೆಗಳು ಸಿಕ್ಕಿವೆ. ಎಲ್ಲರೂ ಸೇರಿ ಸರ್ಕಾರವನ್ನು ವಂಚಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದಾಗಿ ದೂರುದಾರರು ತಿಳಿಸಿದ್ದಾರೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿಗಳು

ಯುವತಿಗೆ ಕಿರುಕುಳ ಆರೋಪ: ದೂರು

ಬಂಟ್ವಾಳ (ದಕ್ಷಿಣ ಕನ್ನಡ): ಬಸ್‌ನಲ್ಲಿ ಯುವತಿಯ ಜಡೆಗೆ ಕೈ ಹಾಕಿ ಕಿರುಕುಳ ನೀಡಿದ ದೂರಿನ ಹಿನ್ನೆಲೆಯಲ್ಲಿ ಆರೋಪಿಯ ವಿರುದ್ಧ ನಗರ ಠಾಣೆ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ.

ಮಂಗಳೂರು–ಧರ್ಮಸ್ಥಳ ನಡುವೆ ಸಂಚರಿಸುವ ಬಸ್ ಗುರುವಾರ ಇಲ್ಲಿನ ರಾಷ್ಟ್ರೀಯ ಹೆದ್ದಾರಿಯ ಜಕ್ರಿಬೆಟ್ಟು ತಲುಪುತ್ತಿದ್ದಂತೆ ನಾವೂರು ಗ್ರಾಮದ ಪಲ್ಲಿಗುಡ್ಡೆ ನಿವಾಸಿ ಹಮೀದ್, ಮುಂದಿನ ಸೀಟ್‌ನಲ್ಲಿ ಕುಳಿತಿದ್ದ ಯುವತಿಯ ಜಡೆಗೆ ಕೈ ಹಾಕಿ ಬೆನ್ನು ಸ್ಪರ್ಶಿಸಿ ದೌರ್ಜನ್ಯ ಎಸಗಿರುವುದಾಗಿ ತಿರುಲೇಶ್ ಬೆಳ್ಳೂರು ಎಂಬವರು ದೂರು ನೀಡಿದ್ದರು.

ಯುವತಿಯ ಜಡೆಯನ್ನು ಬೆರಳುಗಳಿಂದ ತೀಡುತ್ತಿರುವ ದೃಶ್ಯವನ್ನು ಬಸ್‌ನಲ್ಲಿದ್ದವರು ಯಾರೋ ಚಿತ್ರೀಕರಿಸಿದ್ದರು. ಈ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದೆ.

ರೈಸ್ ಪುಲ್ಲಿಂಗ್: ₹2 ಕೋಟಿ ವಂಚನೆ ಯತ್ನ- ದೂರು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಸಿಡಿಲು ಬಡಿದ ತಾಮ್ರದ ಚೊಂಬು ಕೊಡುವುದಾಗಿ ಹೇಳಿ ರೈಸ್ ಪುಲ್ಲಿಂಗ್ ವಂಚಕರ ಜಾಲಕ್ಕೆ ಸೇರಿದ ಕರ್ನಾಟಕದ ನಾಲ್ವರು ₹2 ಕೋಟಿ ವಂಚಿಸಲು ಯತ್ನಿಸಿದ್ದಾರೆ ಎಂದು ಆರೋಪಿಸಿ ಹೈದರಾಬಾದ್‌ನ ರಿಯಲ್ ಎಸ್ಟೇಟ್ ಉದ್ಯಮಿ ಚಿಕ್ಕಸುರೇಂದ್ರ ಕುಮಾರ್ ಎಂಬುವರು ಇಲ್ಲಿನ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರಿನ ಬಿಟಿಎಂ ಲೇಔಟ್ ನಿವಾಸಿ ಜಾಫರ್ ಮತ್ತು ಪಾದರಾಯನಪುರದ ಫಯಾಜ್ ಪಾಷಾ, ಚಿಂತಾಮಣಿ ತಾಲ್ಲೂಕಿನ ವೆಂಕಟಚಲಪತಿ ಮತ್ತು ಲಕ್ಷ್ಮಪ್ಪ ಎಂಬುವರು ತಾಮ್ರದ ಚೊಂಬು ನೀಡುವುದಾಗಿ ವಂಚನೆಗೆ ಯತ್ನಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಚಿಕ್ಕಬಳ್ಳಾಪುರದ ಚಿಂತಾಮಣಿ ತಾಲ್ಲೂಕಿನ ವೆಂಕಟಚಲಪತಿ ಮತ್ತು ಲಕ್ಷ್ಮಪ್ಪ ಎಂಬುವರ ಬಳಿ ರೈಸ್ ಪುಲ್ಲಿಂಗ್ ಚೊಂಬು ಇದೆ ಎಂದು ಬೆಂಗಳೂರು ಮೂಲದ ಫಯಾಜ್ ಪಾಷಾ ಮತ್ತು ಜಾಫರ್ ಎಂಬುವರು ಮಾಹಿತಿ ನೀಡಿದ್ದಾರೆ. ಈ ಚೊಂಬು ₹2 ಕೋಟಿಗೆ ಮಾರಾಟಕ್ಕಿದೆ ಎಂದು ನಮಗೆ ಪರಿಚಯವಿರುವ ಗುಂಟೂರು ಜಿಲ್ಲೆಯ ಅಮೀನಾಬಾದ್ ಬೇವಲೂರಿ ಪಾಡು ನಿವಾಸಿ ಷೇಕ್ ಕರೀಂಮುಲ್ಲಾ ನಾಲ್ಕು ದಿನಗಳ ಹಿಂದೆ ಫೋನ್ ಮಾಡಿ ಹೇಳಿದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿರುವ ಸ್ನೇಹಿತರಾದ ಕಾಕಿನಾಡದ ಶ್ರೀಹರಿ ಪೇರ್ಲ ಮತ್ತು ವಿಶಾಖಪಟ್ಟಣದ ಪಿ. ವೆಂಕಟದುರ್ಗಾರಾವ್ ಮತ್ತು ನನ್ನನ್ನು ರೈಸ್ ಪುಲ್ಲಿಂಗ್ ಚೊಂಬು ಇರುವವರ ಬಳಿಗೆ ಕರೆದೊಯ್ಯಲು ಆರೋಪಿಗಳು ₹5 ಸಾವಿರ ಮುಂಗಡ ಹಣ ಪಡೆದಿದ್ದರು.

ರೈಸ್ ಪುಲ್ಲಿಂಗ್ ಚೊಂಬು ತೋರಿಸದೆ ₹2 ಕೋಟಿ ಕೊಡುವಂತೆ ಒತ್ತಾಯಿಸಿದರು. ಚೊಂಬು ಕೊಟ್ಟರೆ ಮಾತ್ರ ಹಣ ಕೊಡುವುದಾಗಿ ಹೇಳಿದೆವು. ಮುಂಗಡವಾಗಿ ಪಡೆದಿದ್ದ ₹5 ಸಾವಿರ ವಾಪಸ್ ಕೇಳಿದಾಗ ಆರೋಪಿಗಳು ನಮ್ಮ ಮೇಲೆ ಹಲ್ಲೆಗೆ ಮುಂದಾದರು. ನಾಲ್ವರು ಆರೋಪಿಗಳು ರೈಸ್ ಪುಲ್ಲಿಂಗ್ ಚೊಂಬಿನ ಹೆಸರಿನಲ್ಲಿ ಹಣ ಲಪಟಾಯಿಸಲು ಯತ್ನಿಸಿದ್ದು, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸುರೇಂದ್ರ ಕುಮಾರ್ ದೂರಿನಲ್ಲಿ ಮನವಿ ಮಾಡಿದ್ದಾರೆ.

ಮನೆ ಬಾಡಿಗೆ ನೆಪ: ಮಾಲೀಕರ ತಲೆಗೆ ಹೊಡೆದು ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲಗ್ಗೆರೆ ಬಳಿಯ ಪಾರ್ವತಿ ನಗರದಲ್ಲಿ ಮನೆ ಮಾಲೀಕರೊಬ್ಬರ ತಲೆಗೆ ಕಟ್ಟಿಗೆಯಿಂದ ಹೊಡೆದು ಚಿನ್ನಾಭರಣ ಕಿತ್ತೊಯ್ಯಲಾಗಿದ್ದು, ಈ ಸಂಬಂಧ ನಂದಿನಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮನೆ ಬಾಡಿಗೆ ಕೇಳುವ ನೆಪದಲ್ಲಿ ಮಾಲೀಕರಾದ ಶಾಂತಮ್ಮ ಎಂಬುವರ ಬಳಿ ಹೋಗಿದ್ದ ಇಬ್ಬರು ಮಹಿಳೆಯರು ಕೃತ್ಯ ಎಸಗಿ ಪರಾರಿಯಾಗಿದ್ದಾರೆ. ಘಟನೆಯಲ್ಲಿ ಶಾಂತಮ್ಮ ತಲೆಗೆ ಪೆಟ್ಟಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ನಾಲ್ಕು ಬಾಡಿಗೆ ಮನೆಯ ಮಾಲೀಕರಾಗಿರುವ ಶಾಂತಮ್ಮ ಅವರ ಪತಿ ಹಲವು ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಹೀಗಾಗಿ, ಅವರೊಬ್ಬರೇ ಮನೆಯಲ್ಲಿ ವಾಸವಿದ್ದಾರೆ. ಮನೆ ಬಾಡಿಗೆ ಕೇಳುವ ನೆಪದಲ್ಲಿ ಇಬ್ಬರು ಮಹಿಳೆಯರು ಶಾಂತಮ್ಮ ಬಳಿ ಶುಕ್ರವಾರ ಬಂದಿದ್ದರು. ಮನೆ ತೋರಿಸುತ್ತಿದ್ದ ವೇಳೆಯಲ್ಲೇ ಅವರಿಬ್ಬರು, ಶಾಂತಮ್ಮ ತಲೆಗೆ ಕಟ್ಟಿಗೆಯಿಂದ ಹೊಡೆದಿದ್ದರು. ನಂತರ, ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ' ಎಂದು ತಿಳಿಸಿದರು.

₹20 ಲಕ್ಷ ಪಡೆದು ನಕಲಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ಕಿರಿಯ ಎಂಜಿನಿಯರ್ ಹುದ್ದೆ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ ನೀಡಿ ಅಭ್ಯರ್ಥಿಯೊಬ್ಬರಿಂದ ₹ 20 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ಪಿ. ಸೋಮಶೇಖರ್ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳಾದ ವೈಭವ್ ಕುಲಕರ್ಣಿ, ಶಿವಪ್ರಸಾದ್, ವಿಜಯಕುಮಾರ್ ಚನ್ನಣ್ಣನವರ, ಪ್ರದೀಪ್ ಹಾಗೂ ಪುರುಷೋತ್ತಮ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಬೆಳಗಾವಿಯ ಟಿಳಕವಾಡಿಯ ನಿವಾಸಿ ವೈಭವ್, ಮೇ 22ರಂದು ಬೆಸ್ಕಾಂ ಕಚೇರಿಗೆ ಬಂದಿದ್ದರು. ಕಿರಿಯ ಎಂಜಿನಿಯರ್ ಹುದ್ದೆಗೆ ನೇಮಕವಾಗಿರುವ ಆದೇಶ ಪ್ರತಿ ತೋರಿಸಿದ್ದ ವೈಭವ್, ಕೆಲಸಕ್ಕೆ ವರದಿ ಮಾಡಿಕೊಳ್ಳಲು ಬಂದಿರುವುದಾಗಿ ತಿಳಿಸಿದ್ದರು. ಪ್ರತಿ ಪರಿಶೀಲಿಸಿದ್ದ ಅಧಿಕಾರಿಗಳು, ಇದೊಂದು ನಕಲಿ ಆದೇಶವೆಂದು ಹೇಳಿದ್ದರು. ನಂತರ, ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು' ಎಂದು ತಿಳಿಸಿದರು.

'ಅಧಿಕಾರಿಗಳ ಸಹಿ ಹಾಗೂ ಶೀಲ್ ಎಲ್ಲವೂ ನಕಲಿ ಆಗಿತ್ತು. ಆದೇಶ ಪ್ರತಿ ಬಗ್ಗೆ ವೈಭವ್ ಅವರನ್ನು ವಿಚಾರಿಸಿದಾಗ, 'ಶಿವಪ್ರಸಾದ್ ಹಾಗೂ ಇತರರು, ಕೆಲಸ ಕೊಡಿಸುವ ಆಮಿಷವೊಡ್ಡಿ ₹ 20 ಲಕ್ಷ ಹಣ ಪಡೆದು ಆದೇಶ ಪ್ರತಿ ನೀಡಿದ್ದಾರೆ' ಎಂದಿದ್ದರು.'

'ಕೆಲಸದ ಹೆಸರಿನಲ್ಲಿ ವಂಚಿಸುವ ಜಾಲದ ಕೃತ್ಯ ಅರಿತ ಅಧಿಕಾರಿಗಳು, ಠಾಣೆಗೆ ದೂರು ನೀಡಿದ್ದಾರೆ. ವೈಭವ್ ಅವರನ್ನು ವಿಚಾರಣೆ ನಡೆಸಿ ಮಾಹಿತಿ ಪಡೆದುಕೊಳ್ಳಲಾಗಿದೆ. ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಮದುವೆ ಆಮಿಷ: ₹1 ಲಕ್ಷ ಕಿತ್ತ ಡೇಟಿಂಗ್ ಆ್ಯಪ್ ಸ್ನೇಹಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೇಟಿಂಗ್ ಆ್ಯಪ್‌ವೊಂದರಲ್ಲಿ ಸ್ನೇಹಿತನಾಗಿದ್ದ ವ್ಯಕ್ತಿಯೊಬ್ಬ ಮದುವೆ ಆಮಿಷವೊಡ್ಡಿ ನಗರದ ಯುವತಿಯೊಬ್ಬರಿಂದ ₹ 1 ಲಕ್ಷ ಪಡೆದು ವಂಚಿಸಿದ್ದು, ಈ ಸಂಬಂಧ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿಯಾಗಿರುವ 33 ವರ್ಷದ ಯುವತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. 38 ವರ್ಷದ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಖಾಸಗಿ ಕಂಪನಿ ಉದ್ಯೋಗಿಯಾದ ಯುವತಿ, ಡೇಟಿಂಗ್ ಆ್ಯಪ್‌ನಲ್ಲಿ ಖಾತೆ ತೆರೆದಿದ್ದರು. ಅಲ್ಲಿಯೇ ಅವರಿಗೆ ಆರೋಪಿ ಪರಿಚಯವಾಗಿತ್ತು. ಇಬ್ಬರೂ ನಿತ್ಯವೂ ಚಾಟಿಂಗ್ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಆರೋಪಿ, ಮದುವೆ ಆಗುವುದಾಗಿ ಹೇಳಿ ಸಲುಗೆಯಿಂದ ಮಾತನಾಡಲು ಆರಂಭಿಸಿದ್ದ. 2022ರ ಜುಲೈ 22ರಂದು ಇಬ್ಬರೂ ನಗರದ ಹೋಟೆಲ್‌ವೊಂದರಲ್ಲಿ ಭೇಟಿಯಾಗಿದ್ದರು. ಪುನಃ ಮದುವೆ ಪ್ರಸ್ತಾಪ ಮಾಡಿದ್ದ ಆರೋಪಿ, ಯುವತಿ ಜೊತೆ ಖಾಸಗಿ ಕ್ಷಣ ಕಳೆದಿದ್ದ. ಅದಾದ ನಂತರ ಹಲವು ಬಾರಿ ಯುವತಿಯನ್ನು ಭೇಟಿಯಾಗಿ ಅತ್ಯಾಚಾರ ಎಸಗಿದ್ದ. ಮದುವೆಯಾಗುವುದಾಗಿ ಹೇಳಿ ದಿನ ಕಳೆಯುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ತನ್ನ ತಾಯಿಗೆ ಹುಷಾರಿಲ್ಲವೆಂದು ಹೇಳಿದ್ದ ಆರೋಪಿ, ಚಿಕಿತ್ಸೆಗೆಂದು ಯುವತಿಯಿಂದ ₹ 1 ಲಕ್ಷ ಪಡೆದಿದ್ದ. ಇದಾದ ನಂತರ ಆರೋಪಿ ನಾಪತ್ತೆಯಾಗಿದ್ದ. ಯುವತಿಯೇ ಆರೋಪಿ ಬಗ್ಗೆ ಪರಿಚಯಸ್ಥರ ಬಳಿ ವಿಚಾರಿಸಿದಾಗ, ಆತನಿಗೆ ಮದುವೆಯಾಗಿರುವುದು ಗೊತ್ತಾಗಿದೆ. ಬಳಿಕವೇ ಯುವತಿ ಠಾಣೆಗೆ ದೂರು ನೀಡಿದ್ದಾರೆ' ಎಂದು ಹೇಳಿದರು.

ಬುದ್ಧಿವಾದ ಹೇಳಿದ್ದಕ್ಕೆ ಬೆದರಿಕೆ ರೌಡಿಯನ್ನು ಕೊಂದ ಸ್ನೇಹಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯಲ್ಲಿ ರೌಡಿ ರೇಣು ಅಲಿಯಾಸ್ ರೇಣುಕುಮಾರ್ (26) ಎಂಬಾತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಮೂವರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಪ್ರಶಾಂತ್ ಅಲಿಯಾಸ್ ಚೋಟು, ಶ್ರೀಕಾಂತ್ ಅಲಿಯಾಸ್ ರಾಕಿ ಹಾಗೂ ವಸಂತ್‌ಕುಮಾರ್ ಬಂಧಿತರು. ಸ್ಥಳೀಯ ರಂಗನಾಥ್ ಕಾಲೊನಿ ನಿವಾಸಿ ರೇಣುನನ್ನು ಗುರುವಾರ ರಾತ್ರಿ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು. ಕೆಲ ಪುರಾವೆಗಳನ್ನು ಆಧರಿಸಿ ಮೂವರನ್ನೂ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಹದೇವಪುರ ಠಾಣೆಯ ರೌಡಿ ಪಟ್ಟಿಯಲ್ಲಿ ರೇಣು ಹೆಸರಿತ್ತು. ಕೊಲೆ ಯತ್ನ, ಸುಲಿಗೆ ಸೇರಿದಂತೆ 8 ಪ್ರಕರಣಗಳಲ್ಲಿ ರೇಣು ಆರೋಪಿಯಾಗಿದ್ದ. ಸ್ಥಳೀಯವಾಗಿ ಜನರನ್ನು ಬೆದರಿಸಿ, ಸುಲಿಗೆ ಮಾಡುತ್ತಿದ್ದ' ಎಂದರು.

'ಅಪರಾಧ ಕೃತ್ಯದಿಂದ ದೂರ ಉಳಿಯುವಂತೆ ಸ್ನೇಹಿತರಾದ ಪ್ರಶಾಂತ್, ಶ್ರೀಕಾಂತ್ ಹಾಗೂ ವಸಂತ್‌ಕುಮಾರ್ ಅವರು ರೇಣುಗೆ ಬುದ್ಧಿವಾದ ಹೇಳಿದ್ದರು. ಪುನಃ ಅಪರಾಧ ಕೃತ್ಯಗಳಲ್ಲಿ ಭಾಗಿಯಾದರೆ, ಸ್ನೇಹ ಕಳೆದುಕೊಳ್ಳುವುದಾಗಿ ಎಚ್ಚರಿಸಿದ್ದರು. ಅಷ್ಟಕ್ಕೆ ಸಿಟ್ಟಾಗಿದ್ದ ರೇಣು, ತನ್ನ ಅಪರಾಧ ಕೃತ್ಯಗಳಿಗೆ ಸಹಕರಿಸದಿದ್ದರೆ ಕೊಲೆ ಮಾಡುವುದಾಗಿ ಸ್ನೇಹಿತರಿಗೆ ಬೆದರಿಕೆಯೊಡ್ಡಿದ್ದ' ಎಂದರು.

ಅನೈತಿಕ ಪೊಲೀಸ್‌ಗಿರಿ ಇಬ್ಬರು ಯುವಕರ ಸೆರೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ಚಾಟ್ಸ್ ಸೆಂಟರ್‌ವೊಂದಕ್ಕೆ ಬುಧವಾರ ಸಂಜೆ ಹಿಂದೂ ಯುವಕನ ಜೊತೆ ಬಂದಿದ್ದ ಮುಸ್ಲಿಂ ಯುವತಿಗೆ ಬೆದರಿಕೆ ಒಡ್ಡಿದ್ದ ಯುವಕರಲ್ಲಿ ಇಬ್ಬರನ್ನು ನಗರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ವಾಯಿದ್ (20) ಮತ್ತು ಸದ್ದಾಂ (20) ಬಂಧಿತರು. ಮತ್ತೊಬ್ಬನ ಬಂಧನಕ್ಕೆ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಈ ಮೂವರೂ ಮಾಂಸದ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ.

ಅನೈತಿಕ ಪೊಲೀಸ್‌ಗಿರಿ ನಡೆಸಿದ ಯುವಕರ ವಿರುದ್ಧ ಯುವತಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪಿಎಸ್‌ಐ ಚೇತನ್ ನೇತೃತ್ವದಲ್ಲಿ ಆರೋಪಿಗಳ ಬಂಧನಕ್ಕೆ ತಂಡ ರಚಿಸಲಾಗಿತ್ತು.

'ಯುವತಿ ಮತ್ತು ಆಕೆಗೆ ಬೆದರಿಕೆ ಒಡ್ಡಿದ್ದ ಯುವಕರಿಗೆ ಸಂಬಂಧ ಅಥವಾ ಪರಿಚಯ ಇಲ್ಲ. ಬುರ್ಖಾ ಧರಿಸಿದ್ದ ಯುವತಿ ಹಿಂದೂ ಯುವಕನ ಜೊತೆ ಚಾಟ್ಸ್ ಸೆಂಟರ್‌ಗೆ ಬಂದಿರುವ ಒಂದೇ ಕಾರಣಕ್ಕೆ ಜಗಳ ತೆಗೆದಿದ್ದಾರೆ. ನಂತರ ಆರೋಪಿಗಳು ಯುವತಿ ಮನೆಗೂ ಹೋಗಿ ಒತ್ತಡ ಹೇರಿ ಕ್ಷಮಾಪಣೆ ವಿಡಿಯೊ ಮಾಡಿಸಿದ್ದರು' ಎಂದು ಪಿಎಸ್‌ಐ ಚೇತನ್ ತಿಳಿಸಿದ್ದಾರೆ.

ಚಾಟ್ಸ್ ಸೆಂಟರ್‌ನಲ್ಲಿ ಕುಳಿತಿದ್ದಾಗ ಯುವಕ ಮತ್ತು ಯುವತಿ ಬಳಿಗೆ ಬಂದಿದ್ದ ಯುವಕರ ಗುಂಪು, ಮತ್ತೆ ಒಟ್ಟಿಗೆ ಕಾಣಿಸಿಕೊಳ್ಳದಂತೆ ಇಬ್ಬರಿಗೂ ಎಚ್ಚರಿಕೆ ನೀಡಿ ತೆರಳಿತ್ತು. ಅದಾದ ಸ್ವಲ್ಪ ಸಮಯದ ಬಳಿಕ ಚಾಟ್ ಸೆಂಟರ್‌ನಿಂದ ಹೊರಬಂದ ಯುವಕ–ಯುವತಿಯನ್ನು ಅಡ್ಡಗಟ್ಟಿದ ಅದೇ ಗುಂಪು ಜಗಳ ತೆಗೆದಿತ್ತು. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಆಸ್ಪತ್ರೆಗೆ ಜೆಡಿಎಸ್ ಮಾಜಿ ಶಾಸಕ ಎ. ಮಂಜುನಾಥ್ ಭೇಟಿ

ಕಾರ್ಯಕರ್ತರ ಮೇಲೆ ಹಲ್ಲೆ ಆರೋಪ

ಪ್ರಜಾವಾಣಿ ವಾರ್ತೆ

ಮಾಗಡಿ: ಪಟ್ಟಣದ ಜ್ಯೋತಿ ನಗರದಲ್ಲಿ ಗುರುವಾರ ರಾತ್ರಿ ಹಳೆ ದ್ವೇಷದ ಹಿನ್ನೆಲೆಯಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಇದೀಗ ರಾಜಕೀಯ ಬಣ್ಣ ಪಡೆದುಕೊಂಡಿದೆ. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ.

ಜೆಡಿಎಸ್ ಕಾರ್ಯಕರ್ತರಾದ ಹನುಮಂತರಾಜು (40) ಹಾಗೂ ಅಚ್ಯುತ್ ರಾವ್ (24) ಗಾಯಗೊಂಡವರು. ಕಾಂಗ್ರೆಸ್ ಕಾರ್ಯಕರ್ತರಾದ ಬಿಡದಿ ಬ್ಲಾಕ್ ಯೂತ್ ಕಾಂಗ್ರೆಸ್ ಅಧ್ಯಕ್ಷ ಪ್ರವೀಣ್ ಹಾಗೂ ಸಹಚರರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

'ಗುರುವಾರ ರಾತ್ರಿ 9.30ಕ್ಕೆ ಸ್ಟ್ಯಾನ್ಲಿ ಎಂಬುವರ ಸ್ನೇಹಿತರೊಬ್ಬರು ಮಾತುಕತೆಗೆ ಕರೆದಿದ್ದರು. ಅವರು ಹೇಳಿದ ಸ್ಥಳಕ್ಕೆ ಹೋಗಿ ಮಾತನಾಡುತ್ತಿದ್ದ ವೇಳೆ ಜ್ಯೋತಿಪಾಳ್ಯದ ಪ್ರವೀಣ್, ಆತನ ಅಣ್ಣ ನವೀನ್, ಕಿರಣ್, ನೆಲಮಂಗಲದ ಶರತ್‌ಕುಮಾರ್ ಮತ್ತಿತರರು ಅಲ್ಲಿಗೆ ಬಂದು ಏಕಾಏಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದರು. ನನ್ನ ನೆರವಿಗೆ ಧಾವಿಸಿದ ಹನುಮಂತ ಎಂಬುವರ ಮೇಲೂ ದುಷ್ಕರ್ಮಿಗಳು ಕಬ್ಬಿಣದ ರಾಡ್‌ನಿಂದ ತಲೆಗೆ ಹಲ್ಲೆ ನಡೆಸಿದರು. ಕೊಲೆ ಬೆದರಿಕೆವೊಡ್ಡಿ ಅಲ್ಲಿಂದ ಪರಾರಿಯಾದರು' ಎಂದು ಅಚ್ಯುತ ರಾವ್ ಮಾಗಡಿ ಠಾಣೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ.

ಸದ್ಯ ಪೊಲೀಸರು ಒಬ್ಬ ಆರೋಪಿಯನ್ನು ವಶಕ್ಕೆ ಪಡೆದಿದ್ದು, ಉಳಿದವರಿಗಾಗಿ ಹುಡುಕಾಟ ನಡೆಸಿದ್ದಾರೆ.

ಮಾಜಿ ಶಾಸಕರ ಭೇಟಿ: ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ಮಾಗಡಿ ತಾಲ್ಲೂಕು ಆಸ್ಪತ್ರೆಗೆ ಮಾಜಿ ಶಾಸಕ ಎ. ಮಂಜುನಾಥ್ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.



ಮಾಗಡಿ ಮಾಜಿ ಶಾಸಕ ಎ. ಮಂಜುನಾಥ್ ಶುಕ್ರವಾರ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಆರೋಗ್ಯ ವಿಚಾರಿಸಿದರು

ಅಧ್ಯಕ್ಷ ಸ್ಥಾನದಿಂದ ವಜಾ

ಹಲ್ಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಪ್ರವೀಣ್ ಅವರನ್ನು ಬಿಡದಿ ಬ್ಲಾಕ್ ಯೂತ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿದೆ. ' ಕಾಂಗ್ರೆಸ್ ಸಿದ್ಧಾಂತಕ್ಕೆ ಗೌರವ ಕೊಡದೇ, ಕಾನೂನಿನ ವಿರುದ್ಧದ ಕೆಲವು ಘಟನೆಗಳಲ್ಲಿ ಭಾಗಿಯಾಗಿದ್ದರಿಂದ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾ ಮಾಡಲಾಗಿದೆ' ಎಂದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಅನಿಲ್ ಜೋಗೇಂದರ್ ತಿಳಿಸಿದ್ದಾರೆ.

ದೂರು ರದ್ದು ಕೋರಿ ಡಿ.ಕೆ. ಶಿವಕುಮಾರ್ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆ ಜಾರಿಗೆ ಆಗ್ರಹಿಸಿ ಪಾದಯಾತ್ರೆ ನಡೆಸಿದ ಸಂದರ್ಭದಲ್ಲಿ ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ ಮತ್ತು ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾಖಲಿಸಲಾಗಿರುವ ಎಂಟು ದೂರುಗಳನ್ನು ರದ್ದುಪಡಿಸಬೇಕು' ಎಂದು ಕೋರಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಸಂಬಂಧ ಶಿವಕುಮಾರ್ ಪ್ರತ್ಯೇಕವಾಗಿ ಸಲ್ಲಿಸಿದ್ದ ಎಂಟು ಅರ್ಜಿಗಳು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಶುಕ್ರವಾರ ವಿಚಾರಣೆಗೆ ನಿಗದಿಯಾಗಿದ್ದವು.

ವಿಚಾರಣೆ ವೇಳೆ ಎಲ್ಲ ಅರ್ಜಿಗಳನ್ನೂ ಪರಿಶೀಲಿಸಿದ ನ್ಯಾಯಪೀಠವು, 'ಅರ್ಜಿಗಳಿಗೆ ಸಂಬಂಧಿಸಿದಂತೆ ಕಚೇರಿ ಆಕ್ಷೇಪಣೆ ಎತ್ತಿದೆ' ಎಂಬ ಅಂಶವನ್ನು ಪರಿಗಣಿಸಿ, 'ದಸ್ತಾವೇಜಿನ ಕಚೇರಿ ಆಕ್ಷೇಪಣೆಗಳನ್ನು ಸರಿಪಡಿಸಿ' ಎಂದು ಶಿವಕುಮಾರ್ ಪರ ವಕೀಲರಿಗೆ ಸೂಚಿಸಿತು. ವಿಚಾರಣೆಯನ್ನು ಒಂದು ವಾರದ ಕಾಲ ಮುಂದೂಡಿತು.

ಪ್ರಕರಣವೇನು?: ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ 2022ರ ಜನವರಿ 9ರಿಂದ 10 ದಿನಗಳ ಪಾದಯಾತ್ರೆ ಹಮ್ಮಿಕೊಂಡಿತ್ತು. 'ಪಾದಯಾತ್ರೆ ವೇಳೆ ಕೋವಿಡ್ ನಿಯಮ ಉಲ್ಲಂಘಿಸಲಾಗಿದೆ' ಎಂದು ಆರೋಪಿಸಿ ಡಿ.ಕೆ. ಶಿವಕುಮಾರ್ ವಿರುದ್ಧ ಸಾತನೂರು, ಉಪ್ಪಾರಪೇಟೆ, ಹಲಸೂರು ಗೇಟ್ ಮತ್ತು ಐಜೂರು ಪೊಲೀಸ್ ಠಾಣೆಗಳಲ್ಲಿ ಎಂಟು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿತ್ತು.

ತಡೆಯಾಜ್ಞೆ: ಮೇಕೆದಾಟು ಪಾದಯಾತ್ರೆಯಲ್ಲಿ ಕೊರೋನಾ ನಿಯಮಗಳನ್ನು ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಶಾಸಕ ಟಿ.ಬಿ.ಜಯಚಂದ್ರ ಸೇರಿದಂತೆ ಕಾಂಗ್ರೆಸ್‌ನ 31 ಮುಖಂಡರ ವಿರುದ್ಧ ರಾಮನಗರ ತಹಶೀಲ್ದಾರ್ ಜನವರಿ 13ರಂದು ರಾಮನಗರ ಗ್ರಾಮೀಣ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದರು.

ಅಂಗನವಾಡಿ ಕೇಂದ್ರಗಳಿಗೆ ಏಪ್ರಿಲ್, ಮೇ ತಿಂಗಳ ಅನುದಾನ ಬಿಡುಗಡೆ ವಿಳಂಬ

ಕಾರ್ಯಕರ್ತೆಯರಿಗೆ ಮೊಟ್ಟೆ ಸಾಲದ ಹೊರೆ

● ಇಮಾಮ್‌ಹುಸೇನ್ ಗೂಡುನವರ



ಬೆಳಗಾವಿ ಜಿಲ್ಲೆಯ ಕಾಗವಾಡದ ಅಂಗನವಾಡಿ ಕೇಂದ್ರದಲ್ಲಿ ಫಲಾನುಭವಿಗಳಿಗೆ ಮೊಟ್ಟೆ ವಿತರಿಸಲಾಯಿತು

ಬೆಳಗಾವಿ: ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಮೊಟ್ಟೆ ವಿತರಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಎರಡು ತಿಂಗಳಿಂದ ಅನುದಾನವೇ ಬಿಡುಗಡೆಯಾಗಿಲ್ಲ. ಹೀಗಾಗಿ, ಸಾಲದ ರೂಪದಲ್ಲಿ ಕಿರಾಣಿ ಅಂಗಡಿಗಳಿಂದ ಮೊಟ್ಟೆ ಖರೀದಿಸಿ ವಿತರಿಸಲಾಗುತ್ತಿದೆ.

ರಾಜ್ಯದಲ್ಲಿ 65,911 ಅಂಗನವಾಡಿ ಕೇಂದ್ರಗಳಿವೆ. ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಪೌಷ್ಟಿಕಾಂಶ ದೊರೆಯಲಿ ಎಂಬ ಉದ್ದೇಶದಿಂದ ಅಂಗನವಾಡಿ ಕೇಂದ್ರಗಳ ಮೂಲಕ ಮೊಟ್ಟೆ ನೀಡಲಾಗುತ್ತಿದೆ. ಸ್ಥಳೀಯವಾಗಿ ಮೊಟ್ಟೆ ಖರೀದಿಸಿ, ಫಲಾನುಭವಿಗಳಿಗೆ ವಿತರಿಸಲಾಗುತ್ತದೆ. ಇದಕ್ಕೆ ವೆಚ್ಚವಾದ ಹಣವನ್ನು ಅಂಗನವಾಡಿ ಕೇಂದ್ರಗಳ ಬಾಲ ವಿಕಾಸ ಸಲಹಾ ಸಮಿತಿ ಹಾಗೂ-ಕಾರ್ಯಕರ್ತೆಯರ ಜಂಟಿ ಖಾತೆಗೆ ನಿಯಮಿತವಾಗಿ ಜಮೆ ಮಾಡಲಾಗುತ್ತಿತ್ತು. ಕೆಲವೊಮ್ಮೆ ಮುಂಗಡವಾಗಿಯೇ ಹಣ ಕೈ ಸೇರುತ್ತಿತ್ತು. ಆದರೆ, ವಿಧಾನಸಭೆ ಚುನಾವಣೆ, ಮತ್ತಿತರ ಕಾರಣಗಳಿಂದಾಗಿ ಏಪ್ರಿಲ್ ಮತ್ತು ಮೇ ತಿಂಗಳ ಅನುದಾನ ಈವರೆಗೂ ಬಿಡುಗಡೆಯಾಗಿಲ್ಲ.

'ನಾವು ಕಿರಾಣಿ ಅಂಗಡಿಗಳಲ್ಲಿ ಸಾಲದ ರೂಪದಲ್ಲಿ ಮೊಟ್ಟೆಗಳನ್ನು ಖರೀದಿಸಿದ್ದೇವೆ. ಅಂಗಡಿಯವರು ಹಣ ಕೊಡುವಂತೆ ಕೇಳುತ್ತಿದ್ದಾರೆ. ಆದರೆ, ಸರ್ಕಾರದಿಂದ ಸಕಾಲಕ್ಕೆ ಅನುದಾನ ಬಾರದ್ದರಿಂದ ತೊಂದರೆ ಆಗಿದೆ' ಎಂದು ಬೆಳಗಾವಿಯ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಗರ್ಭಿಣಿಯರು, ಬಾಣಂತಿಯರಿಗೆ ವಾರದಲ್ಲಿ 6 ದಿನ, ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ವಾರದಲ್ಲಿ 5 ದಿನ ಹಾಗೂ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ. ಪ್ರತಿ ಮೊಟ್ಟೆಗೆ ₹6 ದರ ನಿಗದಿಪಡಿಸಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ 6 ತಿಂಗಳಿಂದ 6 ವರ್ಷದೊಳಗಿನ 3.81 ಲಕ್ಷ ಸಾಮಾನ್ಯ ಮಕ್ಕಳು, 20,022 ಅಪೌಷ್ಟಿಕ, 639 ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು, 84,521 ಗರ್ಭಿಣಿಯರು ಮತ್ತು ಬಾಣಂತಿಯರಿದ್ದಾರೆ. ಬೆಳಗಾವಿ ಜಿಲ್ಲೆಯೊಂದಕ್ಕೆ ಸುಮಾರು ₹6.72 ಕೋಟಿ (ಎರಡು ತಿಂಗಳ ಅನುದಾನ) ಬರಬೇಕಿದೆ ಎಂದು ಹೇಳಿದರು.

ಸರ್ಕಾರದಿಂದ ಅನುದಾನ ಶೀಘ್ರ ಬಿಡುಗಡೆಯಾಗಲಿದ್ದು, ಅಂಗನವಾಡಿ ಕೇಂದ್ರದ ಜಂಟಿ ಖಾತೆಗೆ ಜಮೆ ಮಾಡಲಾಗುವುದು

ಎ.ಎಂ.ಬಸವರಾಜ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ

ಮೊಟ್ಟೆ ವಿತರಿಸದಿದ್ದರೆ ಫಲಾನುಭವಿಗಳು ಗಲಾಟೆ ಮಾಡುತ್ತಾರೆ. ಸಾಲದ ರೂಪದಲ್ಲಿ ಅಂಗಡಿಗಳಿಂದ ತಂದರೆ, ಸರ್ಕಾರ ಬೇಗ ಅನುದಾನ ಕೊಡುವುದಿಲ್ಲ

ಜಿ.ಎಂ.ಜೈನೇಖಾನ್, ಜಿಲ್ಲಾ ಘಟಕದ ಕಾರ್ಯದರ್ಶಿ, ಸಿಐಟಿಯು, ಬೆಳಗಾವಿ

65,911
ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳು

ಫಲಾನುಭವಿಗಳು	
4.76 ಲಕ್ಷ	ಗರ್ಭಿಣಿಯರು
4.72 ಲಕ್ಷ	ಬಾಣಂತಿಯರು
22.61 ಲಕ್ಷ	6 ತಿಂಗಳಿಂದ 3 ವರ್ಷದೊಳಗಿನ ಮಕ್ಕಳು
20.30 ಲಕ್ಷ	3ರಿಂದ 6 ವರ್ಷದೊಳಗಿನ ಸಾಮಾನ್ಯ ಮಕ್ಕಳು
5,000+	ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ

'ಮದುವೆ ಸಿಂಧುತ್ವ ತೀರ್ಮಾನ ಸಲ್ಲ'

ಬೆಂಗಳೂರು: 'ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದಾಗ ವಿಚಾರಣಾ ನ್ಯಾಯಾಲಯಗಳು ಅಂತಹ ಪ್ರಕರಣಗಳಲ್ಲಿನ ಮದುವೆಯ ಸಿಂಧುತ್ವದ ಬಗ್ಗೆ ತೀರ್ಮಾನ ಕೈಗೊಳ್ಳುವಂತಿಲ್ಲ' ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಈ ಸಂಬಂಧ ಮಹಿಳೆಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ಕಲಬುರಗಿ ಪೀಠದಲ್ಲಿನ ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ ಪ್ರಕರಣಗಳಲ್ಲಿ ನ್ಯಾಯಾಲಯಗಳು ಮದುವೆ ಸಿಂಧುತ್ವದ ಬಗ್ಗೆ ಪರಿಶೀಲನೆ ನಡೆಸುವಂತಿಲ್ಲ. ಪತ್ನಿಯು, ಪತಿಯಿಂದ ಜೀವನಾಂಶ ಪಡೆಯಲು ಅರ್ಹಳೇ ಅಲ್ಲವೇ ಎಂಬುದರ ಕುರಿತು ಆಕೆಯ ಸಾಕ್ಷ್ಯವನ್ನು ಪರಿಶೀಲನೆ ಮಾಡಲು ಮಾತ್ರವೇ ಸೆಷನ್ಸ್ ಕೋರ್ಟ್‌ಗೆ ಅವಕಾಶವಿರುತ್ತದೆ' ಎಂದು ಹೇಳಿದೆ.

'ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಕಾಯ್ದೆ-2005 ರ ಕಲಂ 12 ಅಥವಾ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ-1973ರ ಕಲಂ 125ರ ಅಡಿ ಜೀವನಾಂಶವನ್ನು ನಿರ್ವಹಿಸುವಾಗ, ನ್ಯಾಯಾಲಯಗಳು ಮದುವೆಯ ಸಿಂಧುತ್ವಕ್ಕೆ ಹೋಗಬಾರದು. ಮದುವೆಯ ಸಿಂಧುತ್ವದ ಬಗ್ಗೆ ಅರ್ಜಿ ಸಲ್ಲಿಸಿದ್ದರೆ ಮಾತ್ರ ಆ ಕುರಿತಂತೆ ಸೆಷನ್ಸ್ ನ್ಯಾಯಾಲಯ ಪರಿಶೀಲನೆ ನಡೆಸಿ, ಮುಂದಿನ ಆದೇಶ ಹೊರಡಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಒಂದೊಮ್ಮೆ ವಿಚಾರಣಾ ನ್ಯಾಯಾಲಯ (ಜೆಎಂಎಫ್‌ಸಿ) ಜೀವನಾಂಶ ನೀಡುವ ಬಗ್ಗೆ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಆದೇಶ ಪ್ರಕಟಿಸಿದಾಗ, ಪತ್ನಿಯು ಸ್ವತಃ ಜೀವನ ನಿರ್ವಹಣೆ ಮಾಡಿಕೊಂಡು ಹೋಗಲು ಸಮರ್ಥಳಾಗಿದ್ದಾಳೆ ಎಂಬುದು ಸಾಬೀತಾದರೆ; ಜೀವನಾಂಶ ನೀಡಲು ಸೂಚಿಸಿ ಹೊರಡಿಸಿದ ಆದೇಶವನ್ನು ಮೇಲ್ಮನವಿ ನ್ಯಾಯಾಲಯವು (ಸೆಷನ್ಸ್) ತಿದ್ದುಪಡಿ ಮಾಡಬಹುದು, ಇಲ್ಲವೇ ರದ್ದುಪಡಿಸಬಹುದು. ಆದರೆ, ಮದುವೆಯ ಸಿಂಧುತ್ವದ ಬಗ್ಗೆ ಯಾವುದೇ ಆದೇಶ ಪ್ರಕಟಿಸಿದರೆ, ಅದು ತನ್ನ ಅಧಿಕಾರ ವ್ಯಾಪ್ತಿ ಮೀರಿ ನಡೆದುಕೊಂಡಂತಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಮಣಿಪುರ: ಶಾಂತಿ ಮಾತುಕತೆ ಆರಂಭಿಸಿದ ಸರ್ಕಾರ

ಗುವಾಹಟಿ: ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದ್ದು, ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್, ಶಾಂತಿ ಪುನಃಸ್ಥಾಪನೆಗೆ ಸರ್ಕಾರದ ಪ್ರಯತ್ನದ ಭಾಗವಾಗಿ ರಾಜ್ಯದಲ್ಲಿ ನಾಗರಿಕ ಸಮಾಜದ ಕೆಲವು ಸಂಘ ಸಂಸ್ಥೆಗಳೊಂದಿಗೆ ಶುಕ್ರವಾರ ಮಾತುಕತೆ ಆರಂಭಿಸಿದ್ದಾರೆ. ರಾಜ್ಯದ ಹಲವೆಡೆ ದುಷ್ಕರ್ಮಿಗಳು ಹಿಂಸಾಚಾರ ಮುಂದುವರಿಸಿದ್ದರಿಂದ ಸಚಿವ ರೈ ಅವರು, ಹಲವು ಸಂಘ ಸಂಸ್ಥೆಗಳ ಪ್ರಮುಖರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೇ 29ರಿಂದ ಮಣಿಪುರಕ್ಕೆ ಮೂರು ದಿನಗಳ ಕಾಲ ಭೇಟಿ ನೀಡಲಿದ್ದು, ಶಾಂತಿ ಸ್ಥಾಪನೆಗಾಗಿ ಪ್ರಮುಖರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಗುರುವಾರ ರಾತ್ರಿ ದುಷ್ಕರ್ಮಿಗಳು ಕೇಂದ್ರ ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಆರ್.ಕೆ. ರಂಜನ್ ಅವರ ನಿವಾಸಕ್ಕೆ ನುಗ್ಗಿ ದಾಂದಲೆ ನಡೆಸಿದ್ದಾರೆ. ಮಣಿಪುರ ಸರ್ಕಾರದ ಹಿರಿಯ ಸಚಿವ, ಬಿಜೆಪಿಯ ಬಿಸ್ವಜಿತ್ ಸಿಂಗ್ ಅವರ ಮನೆ ಮೇಲೂ ದಾಳಿ ಯತ್ನ ನಡೆದಿದ್ದು, ಕೇಂದ್ರ ಭದ್ರತಾ ಪಡೆಗಳು ಸ್ಥಳಕ್ಕೆ ಧಾವಿಸಿದ್ದು, ದಾಳಿ ತಡೆದಿದ್ದಾರೆ.

ಬಹುಸಂಖ್ಯಾತ ಮೈತೇಯಿ ಸಮುದಾಯ ಮತ್ತು ಕೂಕಿ ಬುಡಕಟ್ಟು ಸಮುದಾಯದ ನಡುವೆ ಸಂಘರ್ಷ ಉದ್ಭವಿಸಿದ ನಂತರ ಮೇ 3ರಿಂದಲೂ ಮಣಿಪುರದಲ್ಲಿ ಭದ್ರತಾ ಪರಿಸ್ಥಿತಿ ಕಳವಳಕಾರಿಯಾಗಿಯೇ ಇದೆ. ರಾಜ್ಯದಲ್ಲಿ ಹಿಂಸಾಚಾರದಿಂದಾಗಿ ಈವರೆಗೆ 74 ಮಂದಿ ಸಾವನ್ನಪ್ಪಿದ್ದು, 35,000 ಮಂದಿ ಸ್ಥಳಾಂತರಗೊಂಡಿದ್ದಾರೆ. ಸುಮಾರು 2 ಸಾವಿರ ಮನೆಗಳು ಬೆಂಕಿಗೆ ಆಹುತಿಯಾಗಿವೆ. ಸೇನೆ ಮತ್ತು ಕೇಂದ್ರೀಯ ಅರೆಸೇನಾ ಪಡೆಗಳು ಪರಿಸ್ಥಿತಿಯನ್ನು ನಿಯಂತ್ರಿಸುತ್ತಿವೆ. ಆದಾಗ್ಯೂ ಅಲ್ಲಲ್ಲಿ ದಾಳಿಗಳು, ಹಿಂಸಾಚಾರದ ಘಟನೆಗಳು ಮರುಕಳಿಸುತ್ತಿವೆ.

38 ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತಾಪಡೆ ನಿಯೋಜನೆ: ಮಣಿಪುರದಾದ್ಯಂತ 38 ಸೂಕ್ಷ್ಮ ಪ್ರದೇಶಗಳಲ್ಲಿ 34,000ಕ್ಕೂ ಹೆಚ್ಚು ಭದ್ರತಾ ಪಡೆ ಸಿಬ್ಬಂದಿ ನಿಯೋಜಿಸಲಾಗಿದೆ. ಇದರ ನಡುವೆ ಶಾಂತಿ ಪುನಃಸ್ಥಾಪನೆಗಾಗಿ ವಿವಿಧ ಸಂಘಟನೆಗಳ ಜತೆಗೆ ಮಾತುಕತೆ ನಡೆಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಶುಕ್ರವಾರ ಹೇಳಿದ್ದಾರೆ.

ಜಲಾಶಯ ನಿರ್ಮಾಣದ ವೇಳೆ ಹಾಗೇ ಬಿಟ್ಟಿದ್ದ ದೇಗುಲ

81 ಅಡಿಗೆ ಇಳಿದ ಕೆಆರ್‌ಎಸ್ ನೀರು: ದೇವಾಲಯ ಗೋಚರ

ಪ್ರಜಾವಾಣಿ ವಾರ್ತೆ


ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಮಟ್ಟ 81.3 ಅಡಿಗೆ ಕುಸಿದಿದ್ದು, ಜಲಾಶಯದಲ್ಲಿ ಮುಳುಗಿದ್ದ ಐತಿಹಾಸಿಕ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯ ಗೋಚರಿಸುತ್ತಿರುವುದು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 81.03 ಅಡಿಗೆ ಕುಸಿದಿದ್ದು, ಹಿನ್ನೀರಿನಲ್ಲಿ ಮುಳುಗಿದ್ದ ಐತಿಹಾಸಿಕ ಲಕ್ಷ್ಮಿ ನಾರಾಯಣಸ್ವಾಮಿ ದೇವಾಲಯ ಗೋಚರಿಸುತ್ತಿದೆ.

ಜಲಾಶಯ ನಿರ್ಮಾಣದ ವೇಳೆ ಸ್ಥಳಾಂತರಿಸದೆ ಹಾಗೇ ಬಿಟ್ಟಿದ್ದ ಶಿಲಾ ದೇಗುಲ ಸಂಪೂರ್ಣ ಗೋಚರಿಸುತ್ತಿದೆ. 2019ರ ನಂತರ ದೇವಾಲಯ ಮತ್ತೆ ಪೂರ್ಣ ಪ್ರಮಾಣದಲ್ಲಿ ಕಾಣುತ್ತಿದೆ.

ಮೈಸೂರು ತಾಲ್ಲೂಕಿನ ಆನಂದೂರು ಮತ್ತು ಮಲ್ಲೇಗೌಡನಕೊಪ್ಪಲು ವ್ಯಾಪ್ತಿಯಲ್ಲಿರುವ ದೇವಾಲಯವನ್ನು ಜನ ಕುತೂಹಲದಿಂದ ವೀಕ್ಷಿಸುತ್ತಿದ್ದಾರೆ. ದೇವಾಲಯದ ಬಳಿ ಸೆಲ್ಫಿ ತೆಗೆದುಕೊಳ್ಳುವುದು, ಸುತ್ತಲೂ ವಿಹರಿಸುವುದು ಸಾಮಾನ್ಯವಾಗಿದೆ.

ಜಲಾಶಯಕ್ಕೆ ಶುಕ್ರವಾರ 448 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ನದಿ ಮತ್ತು ನಾಲೆಗಳಿಗೆ 3,009 ಕ್ಯುಸೆಕ್ ನೀರು ಹರಿಸಲಾಗುತ್ತಿದೆ. 49 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 11.37 ಟಿಎಂಸಿ ಅಡಿಗಳಷ್ಟು ನೀರಿದೆ.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 104.8 ಅಡಿ ನೀರಿತ್ತು. 2,900 ಕ್ಯುಸೆಕ್ ಒಳ ಹರಿವು, 2,387 ಕ್ಯುಸೆಕ್ ಹೊರ ಹರಿವು ದಾಖಲಾಗಿತ್ತು. 26.81 ಟಿಎಂಸಿ ಅಡಿಗಳಷ್ಟು ನೀರಿ ಸಂಗ್ರಹ ಇತ್ತು. ಜಲಾಶಯದ ನೀರಿನ ಮಟ್ಟ 72 ಅಡಿಗೆ ಕುಸಿದರೆ ಹಿನ್ನೀರಿನಲ್ಲಿ ಮುಳುಗಿರುವ ಕಣ್ಣೇಶ್ವರ ದೇವಾಲಯ ಗೋಚರಿಸಲಿದೆ.

ಎಂಜಿನ್, ಬೋಗಿ ಸಂಪರ್ಕ ಕಡಿತ: ತಪ್ಪಿದ ಅನಾಹುತ

ಶಿವಮೊಗ್ಗ: ಭದ್ರಾವತಿ ತಾಲ್ಲೂಕಿನ ಕಡದಕಟ್ಟೆ ಪ್ರದೇಶದ ಕ್ರಾಸಿಂಗ್ ಸಮೀಪದ ಬಿಳಕಿ ಬಳಿ ಚಲಿಸುತ್ತಿದ್ದ ರೈಲಿನ ಎಂಜಿನ್ ತಾಂತ್ರಿಕದೋಷದಿಂದ ಬೇರ್ಪಟ್ಟ ಘಟನೆ ಶುಕ್ರವಾರ ನಡೆದಿದೆ. ಯಾವುದೇ ಅಪಾಯ ಸಂಭವಿಸಿಲ್ಲ.

ತಾಳಗುಪ್ಪ - ಬೆಂಗಳೂರು ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಎಂಜಿನ್ ಮತ್ತು ಬೋಗಿಗಳ ನಡುವಿನ ಸಂಪರ್ಕ ತಪ್ಪಿತ್ತು. ಬೋಗಿಯನ್ನು ಬಿಟ್ಟು ಎಂಜಿನ್ ಮುಂದಕ್ಕೆ ಚಲಿಸಿತ್ತು.

ಶಿವಮೊಗ್ಗದಿಂದ ಬೆಂಗಳೂರಿನತ್ತ ಹೋಗುತ್ತಿರುವಾಗ ಈ ಘಟನೆ ನಡೆದಿದ್ದು, ಸ್ವಲ್ಪ ದೂರ ಕ್ರಮಿಸಿದ ನಂತರ ಲೋಕೋ ಪೈಲೆಟ್ ಸಿಬ್ಬಂದಿ ಗಮನಿಸಿ ರೈಲು ನಿಲ್ಲಿಸಿದ್ದಾರೆ.

ವಿಷಯ ತಿಳಿದ ರೈಲ್ವೆ ಇಲಾಖೆಯ ಭದ್ರಾವತಿ ಹಾಗೂ ಶಿವಮೊಗ್ಗ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಎಂಜಿನ್ ಮತ್ತು ಬೋಗಿ ನಡುವೆ ಸಂಪರ್ಕ ಕಲ್ಪಿಸಿದರು. ರೈಲು 1 ಗಂಟೆ ತಡವಾಗಿ ಹೊರಟಿತು.

ರೈಲು ಎಂಜಿನ್ ಮತ್ತು ಬೋಗಿಗಳ ನಡುವೆ ಸಂಪರ್ಕ ತಪ್ಪುವುದು ತುಂಬಾ ಅಪರೂಪ. ತಾಂತ್ರಿಕ ಕಾರಣಗಳಿಂದ ಘಟನೆ ನಡೆದಿದೆ ಎಂದು ರೈಲ್ವೆ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.

'ಕೈ' ಅಕ್ರಮ ನಡೆಸಿ ಗೆದ್ದಿದೆ'

ಬೆಂಗಳೂರು: ಸುಳ್ಳು ಗ್ಯಾರಂಟಿಗಳ ಜತೆಗೆ ಅಕ್ರಮವಾಗಿ ₹ 5,000 ಮೌಲ್ಯದ ಉಡುಗೊರೆ ಭರವಸೆಯ ಕೂಪನ್‌ಗಳನ್ನು ಹಂಚಿ ಕಾಂಗ್ರೆಸ್ ಪಕ್ಷವು 40 ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಪಕ್ಷದ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '₹ 3,000 ಮತ್ತು ₹ 2,000 ಮೌಲ್ಯದ ಉಡುಗೊರೆ ಭರವಸೆಯ ಕ್ಯೂಆರ್ ಕೋಡ್ ಇದ್ದ ಕೂಪನ್‌ಗಳನ್ನು ಮತದಾನಕ್ಕೆ ಕೆಲವೇ ಗಂಟೆಗಳ ಮೊದಲು ವಿತರಿಸಲಾಗಿತ್ತು. ರಾಮನಗರ, ಮಾಗಡಿ, ರಾಜರಾಜೇಶ್ವರಿನಗರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಈ ರೀತಿ ಮಾಡಲಾಗಿದೆ' ಎಂದು ಕೂಪನ್‌ಗಳನ್ನು ಪ್ರದರ್ಶಿಸಿದರು.

'ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳ ಸೋಲಿಗೆ ಕಾಂಗ್ರೆಸ್ ಪಕ್ಷ ವಿತರಿಸಿದ ಕೂಪನ್‌ಗಳೇ ಕಾರಣ. ಮಿಸ್ಟರ್ ಸಿದ್ದರಾಮಯ್ಯ ಅವರೇ ಈ ಬಗ್ಗೆ ತನಿಖೆ ನಡೆಸುತ್ತೀರಾ' ಎಂದು ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದರು.

'ಬಿಲ್ ಕಟ್ಟಬೇಡಿ'

'ಎಲ್ಲರಿಗೂ ಉಚಿತವಾಗಿ ಗ್ಯಾರಂಟಿ ಯೋಜನೆಗಳ ಸೌಲಭ್ಯ ನೀಡುವುದಾಗಿ ಕಾಂಗ್ರೆಸ್ ನಾಯಕರು ಭರವಸೆ ನೀಡಿದ್ದರು. ಈಗ ಷರತ್ತು ವಿಧಿಸಲು ಹೊರಟಿದ್ದಾರೆ. 200 ಯೂನಿಟ್‌ಗಳವರೆಗಿನ ವಿದ್ಯುತ್ ಬಿಲ್ ಕಟ್ಟಬೇಡಿ, ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಟಿಕೆಟ್ ತೆಗೆದುಕೊಳ್ಳಬೇಡಿ' ಎಂದು ಕುಮಾರಸ್ವಾಮಿ ಹೇಳಿದರು.

42 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಈ ರೀತಿ ಉಡುಗೊರೆ ಕೂಪನ್ ಹಂಚಿದ್ದಾರೆ. ಚುನಾವಣೆಯಲ್ಲಿ ಸೋತಿದ್ದಕ್ಕೆ ಜೆಡಿಎಸ್ ಪಕ್ಷವನ್ನು ಯಾವಾಗ ವಿಸರ್ಜಿಸುತ್ತೀರಿ ಎಂದು ಕಾಂಗ್ರೆಸ್ ಪಕ್ಷ ಕೇಳಿದೆ. ಪೂರ್ಣ ಬಹುಮತ ಬಂದು, ಪಂಚರತ್ನ ಯೋಜನೆಗಳನ್ನು ಜಾರಿ ಮಾಡದಿದ್ದರೆ ಪಕ್ಷ ವಿಸರ್ಜಿಸುವುದಾಗಿ ಹೇಳಿದ್ದೆ ಎಂದರು.

'ಸಿ.ಎಂ. ಇಬ್ರಾಹಿಂ ಮತ್ತು ನಿಖಿಲ್ ಕುಮಾರಸ್ವಾಮಿ ಅವರ ರಾಜೀನಾಮೆ ಅಂಗೀಕರಿಸುವುದಿಲ್ಲ' ಎಂದರು.

ಕೆ.ಆರ್.ಪುರ: ಗೊಂದಲದಿಂದಾಗಿ ಪಕ್ಷಕ್ಕೆ ಹಿನ್ನಡೆ- ಡಿ.ಕೆ.ಮೋಹನ್

ಪ್ರಜಾವಾಣಿ ವಾರ್ತೆ


ಚುನಾವಣೆಯಲ್ಲಿ ಪರಾಭವಗೊಂಡಿರುವ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಮೋಹನ್ ಸಭೆಯಲ್ಲಿ ಮಾತನಾಡಿದರು

ಕೆ.ಆರ್.ಪುರ: 'ಕೆ.ಆರ್.ಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಲು ಪೂರಕ ವಾತಾವರಣವಿತ್ತು. ಆದರೆ, ಮಾಜಿ ಶಾಸಕ ನಂದೀಶ್ ರೆಡ್ಡಿ ಕಾಂಗ್ರೆಸ್‌ಗೆ ಬರುತ್ತಾರೆ ಎನ್ನುವ ಗೊಂದಲದಿಂದಾಗಿ ಪಕ್ಷಕ್ಕೆ ಹಿನ್ನಡೆಯಾಯಿತು' ಎಂದು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಿ.ಕೆ.ಮೋಹನ್ ಅಸಮಾಧಾನ ವ್ಯಕ್ತಪಡಿಸಿದರು.

ಕೆ.ಆರ್.ಪುರದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ ಆತ್ಮಾವಲೋಕನ ಸಭೆಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

'ಪಕ್ಷದ ಹಿರಿಯ ಮುಖಂಡರಾದ ರಾಮಲಿಂಗಾರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನನ್ನನ್ನು ಕೂರಿಸಿಕೊಂಡು ನಂದೀಶ್ ರೆಡ್ಡಿ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡುತ್ತಾರೆ. ಕಣದಿಂದ ಹಿಂದೆ ಸರಿಯುವಂತೆ ಮನವೊಲಿಸಿದ್ದರು. ಆದರೆ, ನಂದೀಶ್ ರೆಡ್ಡಿ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರದ ಕಾರಣ ಕಾರ್ಯಕರ್ತರು ಗೊಂದಲಕ್ಕೆ ಒಳಗಾಗಿದ್ದರು. ಅನಿವಾರ್ಯವಾಗಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಅಲ್ಪ ಮತಗಳಲ್ಲಿ ಪರಾಭವಗೊಂಡಿದ್ದೇನೆ' ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ನಾರಾಯಣಸ್ವಾಮಿ, ಮುಖಂಡರಾದ ಡಿ.ಎ.ಗೋಪಾಲ್, ಕೆಪಿಸಿಸಿ ಸದಸ್ಯ ನಾರಾಯಣಸ್ವಾಮಿ, ಅಗರ ಪ್ರಕಾಶ್, ಗಗನ್ ಯಾದವ್ ಇದ್ದರು.

ಬಿಪಿಎಲ್: ಜೂ.1 ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ

ಒಂದನೇ ಪುಟದಿಂದ...

'ಆದ್ದರಿಂದ ಜೂನ್ 1ರಿಂದ ಹೊಸ ಪಡಿತರ ಚೀಟಿಗಳಿಗೆ ಅರ್ಜಿ ಸ್ವೀಕರಿಸಲಾಗುವುದು' ಎಂದು ಹೇಳಿದರು.

2021ರ ನವೆಂಬರ್‌ನಲ್ಲಿ 2.76 ಲಕ್ಷ ಹೊಸ ಬಿಪಿಎಲ್ ಪಡಿತರ ಚೀಟಿಗಳ ವಿತರಣೆಗೆ ಸರ್ಕಾರ ಮಂಜೂರಾತಿ ನೀಡಿತ್ತು. 2022 ರ ನವೆಂಬರ್‌ನಲ್ಲಿ 1.55 ಲಕ್ಷ ಪಡಿತರ ಚೀಟಿಗಳ ವಿತರಣೆಗೆ ಮಂಜೂರಾತಿ ನೀಡಲಾಗಿತ್ತು. ಈಗ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆಯನ್ನು ಆಧರಿಸಿ ಹೊಸ ಪಡಿತರ ಚೀಟಿಗಳ ಮಂಜೂರಾತಿಗೆ ಪ್ರಸ್ತಾವ ಸಲ್ಲಿಸಲಾಗುವುದು ಎಂದರು. ರಾಜ್ಯದಲ್ಲಿ ಈಗ 1.3 ಕೋಟಿ ಬಿಪಿಎಲ್ ಪಡಿತರ ಚೀಟಿಗಳಿವೆ. ಸುಮಾರು 4.30 ಕೋಟಿ ಜನರು ಪಡಿತರ ಚೀಟಿಗಳ ವ್ಯಾಪ್ತಿಯಲ್ಲಿದ್ದಾರೆ. ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸುವುದಾಗಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ 'ಗ್ಯಾರಂಟಿ' ರೂಪದ ಭರವಸೆ ನೀಡಿತ್ತು. ಇದರಿಂದಾಗಿ ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿಗಳಿಗೆ ಬೇಡಿಕೆ ಹೆಚ್ಚಿದೆ.

'ಲೋಕಸಭೆ ಚುನಾವಣೆಗೆ ಸಿದ್ಧರಾಗಿ'

ಪ್ರಜಾವಾಣಿ ವಾರ್ತೆ


ಸಿಗೇಹಳ್ಳಿ ಗೇಟ್‌ನಲ್ಲಿ ಯಶವಂತಪುರ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರಿಗೆ, ಮತದಾರರಿಗೆ ಹಮ್ಮಿಕೊಂಡಿದ್ದ ಧನ್ಯತಾ ಸಮ್ಮಿಲನ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿದರು. ಯುವಮುಖಂಡ ಸಂತೋಷ್ ಜವರಾಯಿಗೌಡ, ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ್, ಜೆಡಿಎಸ್ ಮುಖಂಡ ಟಿ.ಎನ್‌.ಜವರಾಯಿಗೌಡ, ಬಮೂಲ್ ಮಾಜಿ ನಿರ್ದೇಶಕ ಪಂಚಲಿಂಗಯ್ಯ, ಜೆಡಿಎಸ್ ಮುಖಂಡ ಚಂದ್ರಪ್ಪ, ಪಾಲಿಕೆ ಮಾಜಿ ಸದಸ್ಯ ಎ.ಎಂ.ಹನುಮಂತೇಗೌಡ, ಚೇತನ್‌ಗೌಡ ಇದ್ದಾರೆ.

ರಾಜರಾಜೇಶ್ವರಿನಗರ: 'ಲೋಕಸಭೆ ಚುನಾವಣೆ ನಂತರ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗಬಹುದು ಅಥವಾ 2025ಕ್ಕೆ ವಿಧಾನಸಭೆ ಚುನಾವಣೆ ಬರಬಹುದು. ಈಗಿನಿಂದಲೇ ಕಾರ್ಯಕರ್ತರು, ಮುಖಂಡರು ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಚುನಾವಣೆ ಜತೆಗೆ ವಿಧಾನಸಭೆ ಚುನಾವಣೆಗೂ ಸಿದ್ಧರಾಗಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಮಾಗಡಿ ರಸ್ತೆಯ ಸಿಗೇಹಳ್ಳಿ ಗೇಟ್‌ನಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರಿಗೆ ಹಮ್ಮಿಕೊಂಡಿದ್ದ ಧನ್ಯತಾ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈ ಫಲಿತಾಂಶ ಶಾಶ್ವತವಲ್ಲ. ಅಕ್ರಮ ಹಣ, ವಂಚನೆ, ದಬ್ಬಾಳಿಕೆಯಿಂದ ಹಿನ್ನಡೆಯಾಗಿದೆ. ಯಾವುದೇ ಕಾರಣಕ್ಕೂ ದುಡುಕಬೇಡಿ' ಎಂದರು.

'ಕಾಂಗ್ರೆಸ್ ಪಕ್ಷವನ್ನು ಸೇರಬೇಡಿ. ನನ್ನ ಪುತ್ರ ನಿಖಿಲ್ ಸೋಲಿಗಿಂತ ಜವರಾಯಿಗೌಡರ ಸೋಲು ಆಘಾತವಾಗಿದೆ. ಮುಂದೆ ಈ ರೀತಿ ಆಗದಂತೆ ಎಚ್ಚರವಹಿಸುತ್ತೇನೆ. ಕಾಂಗ್ರೆಸ್‌ನ ಐದು ಗ್ಯಾರಂಟಿ ಯೋಜನೆ ಜಾರಿಯಾಗುವುದಿಲ್ಲ. ಜನರಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಟೋಪಿ ಹಾಕುವುದೇ ಕಾಯಕ ಮಾಡಿಕೊಂಡಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡರು.

'ಯಶವಂತಪುರ ಕ್ಷೇತ್ರದಲ್ಲಿ ಸ್ವಾಭಿಮಾನಿ ಮತದಾರರಿದ್ದಾರೆ. ಬಿಜೆಪಿ ಶಾಸಕ ಎಸ್‌.ಟಿ. ಸೋಮಶೇಖರ್ ನನ್ನ ನಗ್ಗೆ ಅಪಪ್ರಚಾರ ಮಾಡಿದರು. ಐದು ವರ್ಷಕ್ಕೊಮ್ಮೆ ಬರುವ ಅಭ್ಯರ್ಥಿ ಎಂದು ನಿರಂತರವಾಗಿ ಅಪಪ್ರಚಾರ ಮಾಡಿ, ಕೋಟ್ಯಂತರ ರೂಪಾಯಿ ಹಂಚುವ ಮೂಲಕ ವಾಮ ಮಾರ್ಗದಲ್ಲಿ ಗೆದ್ದಿದ್ದಾರೆ' ಎಂದು ಆರೋಪಿಸಿದರು.

ಜೆಡಿಎಸ್ ಕಾನೂನು ಘಟಕ ಅಧ್ಯಕ್ಷ ಎ.ಪಿ.ರಂಗನಾಥ್, ಪಾಲಿಕೆ ಮಾಜಿ ಸದಸ್ಯ ಎ.ಎಂ. ಹನುಮಂತೇಗೌಡ ಬಮೂಲ್ ಮಾಜಿ ನಿರ್ದೇಶಕ ಪಂಚಲಿಂಗಯ್ಯ, ಗಿರೀಶ್ ಜವರಾಯಿಗೌಡ, ಜಿ.ಪಂ.ಮಾಜಿ ಉಪಾಧ್ಯಕ್ಷೆ ಪಾರ್ವತಿ ಚಂದ್ರಪ್ಪ ಇದ್ದರು.

ಯುವಕನ ಮೇಲೆ ಹಲ್ಲೆ: ಆರೋಪ

ಮೂಡಿಗೆರೆ (ಚಿಕ್ಕಮಗಳೂರು): ಬಣಕಲ್ ಠಾಣಾ ವ್ಯಾಪ್ತಿಯಲ್ಲಿ ಹಿಂದುತ್ವ ಸಂಘಟನೆಗೆ ಸೇರಿದವನೆನ್ನಲಾದ ಯುವಕನ ಮೇಲೆ ಯುವಕರ ಗುಂಪೊಂದು ಗಂಭೀರ ಹಲ್ಲೆ ನಡೆಸಿರುವ ಕುರಿತು ಬಣಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ಹಲ್ಲೆಗೊಳಗಾದ ಯುವಕ ತಾನು ಹಿಂದುತ್ವ ಸಂಘಟನೆ ಕಾರ್ಯಕರ್ತನೆಂದು, ವೈಯುಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ ಎಂದು ಹೇಳಿಕೆ ನೀಡಿದ್ದು, ಹಲ್ಲೆ ನಡೆಸಿದ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಹಲ್ಲೆಗೊಳಗಾದ ಯುವಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಯುವಕನ ಮೇಲೆ ಹಲ್ಲೆಯಾಗಿರುವ ಸುದ್ದಿ ಎಲ್ಲೆಡೆ ಹರಡಿ ಬಣಕಲ್ ಪಟ್ಟಣದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿತ್ತು. ಬಣಕಲ್, ಮೂಡಿಗೆರೆಯಲ್ಲಿ ಹೆಚ್ಚುವರಿ ಪೊಲೀಸ್ ಭದ್ರತೆ ಕಲ್ಪಿಸಿ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದ್ದಾರೆ.

ಘಟನೆಗೆ ಸಂಬಂಧಿಸಿ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವಿಡಿಯೊ ಆಧರಿಸಿ, ಯುವಕನ ವಿರುದ್ಧವೇ ಠಾಣೆಗೆ ದೂರು ನೀಡಿದ್ದಾರೆ ಎನ್ನಲಾಗಿದೆ.

ಬೆಂಗಳೂರು ರೇಸ್

ಎಲ್ವೆನೋರ್ ಗೆಲ್ಲುವ ನಿರೀಕ್ಷೆ

ವಾರ್ ಹ್ಯಾಮರ್ ಮಿಲಿಯನ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಲ್ವೆನೋರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಅಮೇಜಿಂಗ್ ಅಟ್ರ್ಯಾಕ್ಷನ್ 8, ಫೋರ್ಟ್ ನೆಲ್ಸನ್ 3, ಬರ್ಮಿಸಿ 9
2ನೇ ರೇಸ್: ಸಾಲಿಡ್ ಪವರ್ 9, ಗ್ಲೋ ಇನ್ ದಿ ಡಾರ್ಕ್ 3, ರಿಂಗ್ ಮಾಸ್ಟರ್ 7
3ನೇ ರೇಸ್: ಕ್ರೌನ್ ಕನ್ಸಾರ್ಟ್ 9, ರೇಪಿಡಸ್ 10, ಹ್ಯೂಮಾನಿಟೇರಿಯನ್ 1
4ನೇ ರೇಸ್: ಇನ್ ದೈ ಲೈಟ್ 8, ಮೆರೋಪಿ 3, ಶೀ ಕ್ಯಾನ್ 6
5ನೇ ರೇಸ್: ಅಮ್ರೇಲಿ 9, ಲಾಸ್ಟ್ ವಿಶ್ 2, ಸೀರ್ಯುಕರೇಜಿಯಸ್ 1
6ನೇ ರೇಸ್: ಎಲ್ವೆನೋರ್ 1, ಆಸ್ಪೀಸಿಯಸ್ ಕ್ವೀನ್ 3, ವೈಕಿಕಿ 2
7ನೇ ರೇಸ್: ರೂಲಿಂಗ್ ಡೈನಾಸ್ಟಿ 2, ದಿ ಗಾಡ್‌ಫಾದರ್ 4, ಸೀ ದಿ ಸನ್ 3
8ನೇ ರೇಸ್: ಸಿಲ್ವರ್ ಕ್ಯಾನನ್ 3, ಆಲ್ವೇಸ್ ಹ್ಯಾಪಿ 1, ಡ್ರ್ಯಾಗನ್ಸ್ ಗೋಲ್ಡ್ 5

ಉತ್ತಮ ಬೆಟ್: ಅಮೇಜಿಂಗ್ ಅಟ್ರ್ಯಾಕ್ಷನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಠಾಣೆ ಮುಂದೆ ರೈತರ ಪ್ರತಿಭಟನೆ

ನಂಜನಗೂಡು: ಇಬ್ಬರು ಕಳ್ಳರನ್ನು ಹಿಡಿದು ಪೊಲೀಸರ ವಶಕ್ಕೆ ನೀಡಿದ್ದರೂ ಅವರನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ ಎಂದು ಆರೋಪಿಸಿ ತಾಲ್ಲೂಕಿನ ಹುಲ್ಲಹಳ್ಳಿ ಠಾಣೆ ಮುಂಭಾಗ ಶುಕ್ರವಾರ ರಾತ್ರಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ದುಗ್ಗಳ್ಳಿಯಲ್ಲಿ ಗುರುವಾರ ರಾತ್ರಿ 11ರ ಸಮಯದಲ್ಲಿ ಮಲ್ಲಪ್ಪ, ಕುಮಾರ, ಉಮೇಶ್ ಅವರ ಜಮೀನಿನಲ್ಲಿ ಮೋಟಾರ್ ಕೇಬಲ್, ಲ್ಯಾಟರ್ ವೈರ್ ಕದಿಯುತ್ತಿದ್ದಾಗ ರೈತರು ಕಳ್ಳರನ್ನು ಹಿಡಿದಿದ್ದಾರೆ.

ಆಪೇ ಆಟೊದೊಂದಿಗೆ ಇಬ್ಬರು ಕಳ್ಳರನ್ನು ಹುಲ್ಲಹಳ್ಳಿ ಠಾಣೆಗೆ ಕರೆ ತಂದ ಗ್ರಾಮಸ್ಥರು ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಆದರೆ, ಪೊಲೀಸರು ಯಾವುದೇ ಪ್ರಕರಣ ದಾಖಲಿಸದೆ ಕಳ್ಳರನ್ನು ಬಿಟ್ಟು, ದೂರು ದಾಖಲಿಸಿದ್ದ ರೈತರನ್ನೇ ಥಳಿಸಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕಳ್ಳರನ್ನು ಹಿಡಿಯಬೇಕಾದ ಪೊಲೀಸರೇ ಅಪರಾಧಿಗಳನ್ನು ರಕ್ಷಿಸುತ್ತಿದ್ದಾರೆ. ನ್ಯಾಯ ಕೇಳುವ ರೈತರ ಮೇಲೆ ದೌರ್ಜನ್ಯವೆಸಗಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ನಮಗೆ ನ್ಯಾಯ ಕೊಡಿಸಬೇಕು ಎಂದು ರೈತ ಮಂಜುನಾಥ್ ತಿಳಿಸಿದರು.

ಮಂಡಳಿಯಿಂದಲೇ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘಕ್ಕೆ ಅನುದಾನ

ಕೆಕೆಆರ್‌ಡಿಬಿ ಅಕ್ರಮಗಳ ತನಿಖೆಗೆ ಅಸ್ತು?

ಪ್ರಜಾವಾಣಿ ವಾರ್ತೆ


ಕಲಬುರಗಿಯ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಾರ್ಯಾಲಯ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಡಿ.ಎಂ.ನಂಜುಂಡಪ್ಪ ವರದಿಯ ಶಿಫಾರಸಿನ ಮೇರೆಗೆ ರಚನೆಯಾಗಿರುವ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಯಲ್ಲಿ ಕಳೆದ ಮೂರೂವರೆ ವರ್ಷಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು ತನಿಖೆ ನಡೆಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದೆ.

ಈ ಬಗ್ಗೆ ಖುದ್ದು ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ಹೇರಿದ್ದು, ವಿವಿಧ ಕಾಮಗಾರಿಗಳಿಗೆ ಮಾಡಿದ ವೆಚ್ಚ, ಅವುಗಳ ಗುಣಮಟ್ಟ, ಅವಕಾಶ ಇಲ್ಲದಿದ್ದರೂ ಮಂಡಳಿಯಿಂದ ಹತ್ತಾರು ಕೋಟಿ ವ್ಯಯಿಸಿ ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ಮಾಡಿರುವುದರ ಔಚಿತ್ಯದ ಬಗ್ಗೆ ತನಿಖೆ ನಡೆಯುವ ಸಾಧ್ಯತೆ ಇದೆ. ಪ್ರಿಯಾಂಕ್ ಅವರ ಮನವಿಗೆ ಸಿದ್ದರಾಮಯ್ಯ ಅವರು ಒಪ್ಪಿದ್ದಾರೆ ಎನ್ನಲಾಗಿದೆ.

ಯಡಿಯೂರಪ್ಪ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಜಿಲ್ಲೆಗೆ ಸಚಿವ ಸ್ಥಾನ ಕೊಡಲಿಲ್ಲ. ಅದರ ಬದಲಾಗಿ ಮಂಡಳಿಯ ಅಧ್ಯಕ್ಷರು ಸಂಪುಟ ದರ್ಜೆ ಸಚಿವರಾಗಿರಬೇಕೆಂಬ ನಿಯಮವನ್ನು ಬದಲಾಯಿಸಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರಿಗೆ ಅಧ್ಯಕ್ಷ ಸ್ಥಾನ ನೀಡಲಾಯಿತು. ಮಂಡಳಿಗೆ ಬರುತ್ತಿದ್ದ ₹ 1500 ಕೋಟಿ ಅನುದಾನವನ್ನು ಯಡಿಯೂರಪ್ಪ ಅವರು ₹ 3 ಸಾವಿರ ಕೋಟಿಗೆ ಹೆಚ್ಚಿಸಿದರು.

ಮಂಡಳಿಯು ಮೈಕ್ರೊ ಹಾಗೂ ಮ್ಯಾಕ್ರೊ ಎಂಬ ಎರಡು ವಿಭಾಗಗಳಲ್ಲಿ ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಮೂಲಸೌಕರ್ಯ ಅಭಿವೃದ್ಧಿ, ಶಿಕ್ಷಣ, ಆರೋಗ್ಯದಂತಹ ಅವಶ್ಯಕತೆಗಳಿಗೆ ಅನುದಾನವನ್ನು ನೀಡುತ್ತದೆ. ಇದಕ್ಕಾಗಿ ಆಯಾ ಕ್ಷೇತ್ರಗಳ ಶಾಸಕರು ಜಿಲ್ಲಾಧಿಕಾರಿಗಳ ಮೂಲಕ ಮಂಡಳಿಗೆ ಕ್ರಿಯಾ ಯೋಜನೆಗಳನ್ನು ಸಲ್ಲಿಸಬೇಕು. ಪೂರ್ಣ ಪ್ರಮಾಣದ ಮಂಡಳಿ ರಚನೆಯಾಗದಿದ್ದರೂ ಕೆಕೆಆರ್‌ಡಿಬಿ ನಿಯಮಬಾಹಿರವಾಗಿ ಕೆಲ ಯೋಜನೆಗಳಿಗೆ ಅನುದಾನ ನೀಡಿದೆ. ಅದರ ಗುಣಮಟ್ಟದ ಬಗ್ಗೆ ಮೇಲ್ವಿಚಾರಣೆ ನಡೆದಿಲ್ಲ ಎಂಬುದು ಸಚಿವ ಪ್ರಿಯಾಂಕ್ ಖರ್ಗೆ ಅವರ ಆರೋಪ.

ಮಂಡಳಿಯ ಅಧ್ಯಕ್ಷರು ನೂರಾರು ಕೋಟಿ ರೂಪಾಯಿ ಕಮಿಷನ್ ರೂಪದಲ್ಲಿ ಪಡೆದಿದ್ದಾರೆ ಎಂದು ಈ ಹಿಂದೆ ಸೇಡಂ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕರಾಗಿದ್ದ ರಾಜಕುಮಾರ ಪಾಟೀಲ ಅವರು ವ್ಯಕ್ತಿಯೊಬ್ಬರೊಂದಿಗೆ ಮಾಡಿದ ಫೋನ್ ಸಂಭಾಷಣೆಯು ಅಲ್ಲೋಲ ಕಲ್ಲೋಲ ಉಂಟು ಮಾಡಿತ್ತು. ನಂತರ ತೇಲ್ಕೂರ ಅವರು ತಾವು ಈ ರೀತಿ ಮಾತನಾಡಿಲ್ಲ ಎಂದಿದ್ದರು.

ಬಿಜೆಪಿ ಹಿರಿಯ ನಾಯಕ ಬಸವರಾಜ ಪಾಟೀಲ ಸೇಡಂ ಅವರಿಗೆ ಒಂದು ಸ್ಥಾನ ಕಲ್ಪಿಸುವ ಉದ್ದೇಶದಿಂದ ಯಡಿಯೂರಪ್ಪ ಅವರು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘವನ್ನು ರಚಿಸಿ ಅದರ ಅಧ್ಯಕ್ಷರನ್ನಾಗಿ ಮಾಡಿದ್ದರು.

ಇದಕ್ಕೆ ಸರ್ಕಾರದಿಂದಲೇ ಅನುದಾನ ನೀಡುವ ಬದಲು ಅಭಿವೃದ್ಧಿ ಕಾರ್ಯಕ್ಕೆ ಮೀಸಲಿರಬೇಕಿದ್ದ ಮಂಡಳಿ ಅನುದಾನವನ್ನು ಸಾಂಸ್ಕೃತಿಕ ಸಂಘಕ್ಕೆ ಕೊಡಿಸಿದರು ಎಂದು ದೂರಿದ್ದಾರೆ. ಪ್ರತಿ ವರ್ಷ ₹ 100 ಕೋಟಿಯಂತೆ ಎರಡು ವರ್ಷಗಳ ಕಾಲ ಒಟ್ಟು ₹ 200 ಕೋಟಿಯು ಮಂಡಳಿಯ ಲೆಕ್ಕ ಶೀರ್ಷಿಕೆಯಿಂದಲೇ ನೀಡಿದ್ದರ ಬಗ್ಗೆ ತನಿಖೆ ನಡೆಯುವ ಸಾಧ್ಯತೆ ಇದೆ.



ಕೆಕೆಆರ್‌ಡಿಬಿ ತನ್ನ ಉದ್ದೇಶ ಮರೆತು ಭ್ರಷ್ಟಾಚಾರದ ತಾಣವಾಗಿತ್ತು. ಹೀಗಾಗಿ, ಸಮಗ್ರ ತನಿಖೆಗೆ ಮನವಿ ಮಾಡಿದ್ದೇನೆ. ತಾರ್ಕಿಕ ಅಂತ್ಯ ಕಾಣುವವರೆಗೆ ಬಿಡುವುದಿಲ್ಲ

ಪ್ರಿಯಾಂಕ್ ಖರ್ಗೆ, ಸಚಿವ

ಕಲ್ಯಾಣ ಕರ್ನಾಟಕಕ್ಕೆ ₹10 ಕೋಟಿ ವೆಚ್ಚ

ಫೆಬ್ರುವರಿ ತಿಂಗಳಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ಉತ್ಸವಕ್ಕೆ ಸುಮಾರು ₹ 10 ಕೋಟಿ ವೆಚ್ಚವಾಗಿದೆ.

₹ 5 ಕೋಟಿಯನ್ನು ಮಂಡಳಿಯ ನಿಧಿಯಿಂದ ಹಾಗೂ ₹ 4.5 ಕೋಟಿಯನ್ನು ಮಂಡಳಿಯು ಬ್ಯಾಂಕ್‌ನಲ್ಲಿ ಇರಿಸಿದ್ದ ಅನುದಾನದ ಮೇಲಿನ ಬಡ್ಡಿಯ ಹಣವನ್ನು ಉತ್ಸವಕ್ಕೆ ಬಳಕೆ ಮಾಡಲಾಗಿದೆ. ಬಡ್ಡಿ ಹಣವನ್ನು ಖರ್ಚು ಮಾಡಲು ಹಣಕಾಸು ಇಲಾಖೆ ಒಪ್ಪಿಗೆ ನೀಡಿತ್ತು. ಮಂಡಳಿ ಉಳಿದ ₹ 5 ಕೋಟಿಯನ್ನು ಮಂಡಳಿಯ ಒಪ್ಪಿಗೆ ಪಡೆದು ಖರ್ಚು ಮಾಡಲಾಗಿದೆ ಎಂದು ಕೆಕೆಆರ್‌ಡಿಬಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಸಾಂಸ್ಕೃತಿಕ ಸಂಘವು ಯಾವುದೇ ಮಾನದಂಡ ಅನುಸರಿಸದೇ ತಮಗೆ ಬೇಕಾದವರಿಗೆ ಯೋಜನೆಗಳ ಫಲಾನುಭವಿಗಳನ್ನಾಗಿ ಮಾಡಿದೆ ಎಂದು ಪ್ರಿಯಾಂಕ್ ಖರ್ಗೆ ವರ್ಷದ ಹಿಂದೆ ಪತ್ರಿಕಾಗೋಷ್ಠಿ ನಡೆಸಿ ದಾಖಲೆಗಳನ್ನು ಬಿಡುಗಡೆ ಮಾಡಿದ್ದರು.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ






ಜೂನ್ ಒಂದರಿಂದ ಶೈಕ್ಷಣಿಕ ವರ್ಷ ಆರಂಭವಾಗಲಿದೆ. ಬೆಚ್ಚಗಿನ ಮನೆ, ಕಾಳಜಿ ತೋರುವ ಅಪ್ಪ ಅಮ್ಮನನ್ನು ಬಿಟ್ಟು ಶಾಲೆಗೆ ಹೋಗುವುದೆಂದರೆ ಹಲವು ಮಕ್ಕಳಿಗೆ ದುಃಖವೇ ಬಂದು ಬಿಡುತ್ತದೆ. ಅದರಲ್ಲೂ ಮೊದಲ ಬಾರಿಗೆ ವಿದ್ಯಾದೇಗುಲಕ್ಕೆ ಅಡಿ ಇಡುವ ಮಕ್ಕಳು ಹಾಗೂ ಪೋಷಕರಿಗೂ ಇದೊಂದು ಭಾವಾನಾತ್ಮಕ ಘಟ್ಟವೇ ಸರಿ. ಈ ಘಟ್ಟವನ್ನು ಸರಾಗವಾಗಿ ಹಾದು ಹೋಗುವ ಕುರಿತು ಮಂಗಳೂರಿನ ಮನೋವೈದ್ಯೆ ಡಾ. ಅರುಣಾ ಯಡಿಯಾಳ್ ಕೆಲವೊಂದು ಸಲಹೆಗಳನ್ನು ನೀಡಿದ್ದಾರೆ.

ಸಾಂದರ್ಭಿಕ ಚಿತ್ರ

ಕಂದಾ... ಶಾಲೆಗೆ ಹೋಗಿ ಬರುವೆಯಾ?

ಮರಿ ಹಕ್ಕಿಗೆ ಬೇಕೇ ಬೇಕು ಶಾಲೆ ಎಂಬ ಬಾನು. ತಾನೇ ಇಟ್ಟ ತತ್ತಿಗೆ ಕಾವು ಕೊಟ್ಟು, ಮರಿ ಮಾಡಿ, ಕಾಳು ತಿನ್ನಿಸಿದ ಅಮ್ಮ ಹಕ್ಕಿಗೆ ಗೊತ್ತೇ ಇರುತ್ತದೆ ಅಲ್ಲವೇ ರಕ್ಕೆ ಬಲಿತ ನಂತರ ಮರಿಹಕ್ಕಿಗಳು ಗೂಡು ಬಿಟ್ಟು ಹಾರಿ ಹೋಗುವ ಸಂಗತಿ. ಹಾಗೆಯೇ ಪ್ರತಿ ಮಗುವು ಪೋಷಕರ ಮುದ್ದು ಮುಚ್ಚಟೆಯಲ್ಲಿ ಬೆಳೆದು ಬಂದಿದ್ದರೂ ನಾಲ್ಕೈದು ವರ್ಷವಾಗುತ್ತಲೇ ಶಾಲೆಗೆ ಹೋಗುವ ಅನಿವಾರ್ಯ ಬಂದೇ ಬರುತ್ತದೆ. ಇದು ಮಕ್ಕಳ ಹಾಗೂ ಪೋಷಕರ ಜೀವನದಲ್ಲಿ ಮುಖ್ಯ ಮೈಲಿಗಲ್ಲು ಹೌದು. ಮೊದಲನೇಯ ಸಲ ಮನೆಯ, ಮನೆಯವರ ಬೆಚ್ಚಗಿನ ಪರಿಚಿತ ವಲಯದಿಂದ ಹೊಸದಾದ ಅಪರಿಚಿತ ಶಾಲೆಯ ಆವರಣಕ್ಕೆ ತೆರಳುವಾಗ ಉತ್ಸಾಹದ ಬುಗ್ಗೆಗಳಂತಿರುವ ಮಕ್ಕಳಲ್ಲೂ ಕೆಲವೊಮ್ಮೆ ಆತಂಕ ಕಾಣಿಸಿಕೊಳ್ಳಬಹುದು.

ಕುತೂಹಲ, ಖುಷಿ, ಉಮೇದು ಎಷ್ಟು ಇರುತ್ತದೋ ಅಷ್ಟೆ ವ್ಯಕ್ತ, ಅವ್ಯಕ್ತ ಭಯ, ಅಳುಕು, ಗೊಂದಲ ಆತಂಕ ಕೂಡ ಈ ಪುಟ್ಟ ಮನಗಳಲ್ಲಿ ಇರಬಹುದು. ಈ ಗೊಂದಲ, ಆತಂಕ, ಚಿಂತೆ ಪೋಷಕರನ್ನೂ ಕಾಡಬಹುದು. ಮನೆಯಲ್ಲಿಯೇ ಮೊದಲೇ ಅಕ್ಕ, ಅಣ್ಣ ಇದ್ದಲ್ಲಿ ಈ ಶಾಲೆಯ ಮೊದಲ ದಿನದ ಭಯ ಅದೆಷ್ಟೋ ಕಡಿಮೆಯೂ ಇರಬಹುದು. ಕುಣಿದು ಕುಪ್ಪಳಿಸಿ ಶಾಲೆಗೆ ಹೋಗುವ ಮಕ್ಕಳು ಕೂಡ ಕೆಲವೊಮ್ಮೆ ಅಳುತ್ತ, ಶಾಲೆಗೆ ಹೋಗಲ್ಲ ಎಂದು ರಂಪ ಮಾಡಬಹುದು. ಈ ಮೊದ ಮೊದಲು ಶಾಲೆಗೆ ಕಳುಹಿಸುವ ಸಾಹಸ ಪೋಷಕರನ್ನು ಭಾವನಾತ್ಮಕವಾಗಿ ಜರ್ಜರಿಸಿ ಹೈರಾಣಾಗಿಸುವಂತೆ ಮಾಡಿರುವ ಉದಾಹರಣೆಗಳು ಇವೆ. ಇಷ್ಟೆಲ್ಲ ಆದರೂ ಮಕ್ಕಳನ್ನು ಶಾಲೆಗೆ ಕಳುಹಿಸದೇ ಮನೆಯಲ್ಲಿಯೇ ಉಳಿಸಿಕೊಳ್ಳಲು ಆದೀತೆ?. ಶಾಲೆಗೆ ಕಳುಹಿಸುವ ಅನಿವಾರ್ಯ ಎಂದ ಮೇಲೆ ಆ ಕೆಲಸವನ್ನು ಸುಸೂತ್ರವಾಗಿ ಸರಾಗವಾಗಿ ಮಾಡಿಕೊಂಡು ಹೋಗಲು ಕಲಿತರೆ ಒಳಿತಲ್ಲವೇ. ಮಕ್ಕಳನ್ನು ಮೊದಲ ಸಲ ಶಾಲೆಗೆ ಕಳುಹಿಸುವ ಮುನ್ನ ಈ ಸಲಹೆ ಸೂಚನೆಗಳನ್ನು ಅನುಸರಿಸಿದರೆ ಎದುರಾಗುವ ಇಂಥ ಕಷ್ಟಗಳು ಬೆಣ್ಣೆಯಂತೆ ಕರಗಿ ಹೋಗಬಹುದು. ಒಮ್ಮೆ ಪಾಲಿಸಿ ನೋಡಿ.



ಪೋಷಕರಿಗೆ ಇಲ್ಲಿವೆ ಸಲಹೆಗಳು

- ಮೊದಲನೆಯದಾಗಿ ಮಗು ಹೋಗಲಿರುವ ಶಾಲೆ, ಕುಳಿತುಕೊಳ್ಳಲಿರುವ ಕೊಠಡಿ, ಆಡುವ ಮೈದಾನವನ್ನು ಶಾಲೆಗೆ ಹೋಗುವ ಮುನ್ನ ಮಗುವಿನೊಂದಿಗೆ ಹೋಗಿ ನೋಡಿ ಬಂದು ಆ ಹೊಸ ವಾತಾವರಣವನ್ನು ಮಗುವಿಗೆ ಪರಿಚಯಿಸಿ.
- ಶಾಲೆಯ ಬಗ್ಗೆ, ಶಿಕ್ಷಕರ ಬಗ್ಗೆ, ಸಿಗಲಿರುವ ಪುಟ್ಟ ಗೆಳೆಯರ ಬಗ್ಗೆ , ಕಲಿಯುವ ಹೊಸ ಪಾಠ, ಆಟಗಳ ಬಗ್ಗೆ ಸದಾ ಸಕಾರಾತ್ಮಕವಾಗಿ ಮಾತನಾಡಿ, ಮಕ್ಕಳನ್ನು ಹುರಿದುಂಬಿಸಿ. ಮನೆಯಲ್ಲಿರುವ ದೊಡ್ಡ ಮಕ್ಕಳಿಗೂ ಹಾಗೇ ಮಾಡಲು ತಾಕೀತು ಮಾಡಿ.
- ಶಾಲೆಯ ಬಗ್ಗೆ ಒಳ್ಳೆಯ ಸಕಾರಾತ್ಮಕ(ಪಾಸಿಟಿವ್) ಕಥೆಗಳನ್ನು ಓದಿ ಹೇಳಿ. ಆ ಬಗೆಗಿನ ಕಥೆ ಪುಸ್ತಕಗಳನ್ನು ತರಿಸಿಕೊಂಡು ಓದಿ ಹೇಳಿ. ಶಾಲೆಯಲ್ಲಿ ತಂದೆ ತಾಯಿಯ ಆರೈಕೆ ಸಹಾಯವಿಲ್ಲದೇ ಇರಬೇಕಾಗಿ ಬರುವ ಸಂದರ್ಭದಲ್ಲಿ ಬೇಕಾಗುವ ಜೀವನ ಕಲೆಗಳನ್ನು ಮನೆಯಲ್ಲಿಯೇ ಅಭ್ಯಾಸ ಮಾಡಿಸಿ ಕಳಿಸಿ. ಉದಾಹರಣೆಗೆ ಕೈ ಬಾಯಿ ತೊಳೆದುಕೊಳ್ಳುವುದು, ಕರವಸ್ತ್ರ ಬಳಸುವುದು, ಶೌಚಾಲಯಕ್ಕೆ ಹೋಗಿ ಬರುವುದು, ಶುಚಿತ್ವ ಕಾಪಾಡಿಕೊಳ್ಳುವುದು, ಊಟದ ಡಬ್ಬಿ, ನೀರಿನ ಬಾಟಲಿಯನ್ನು ತೆಗೆಯುವುದು, ಊಟದ ಬುತ್ತಿಯನ್ನು ಖಾಲಿ ಮಾಡಿ ತರುವುದು, ಶಾಲೆಯ ಚೀಲವನ್ನು ಜೋಡಿಸಿಟ್ಟುಕೊಂಡು, ವಸ್ತುಗಳನ್ನು ಜೋಪಾನವಾಗಿ ಪ್ರತಿ ದಿನವೂ ವಾಪಸ್ ತರುವುದು, ಇತರ ಮಕ್ಕಳ ವಸ್ತುಗಳನ್ನು ತರದೇ ಇರುವುದು ಇತರೆ ಕಲೆಗಳನ್ನು ಅಭ್ಯಾಸ ಮಾಡಿಸಿ ಕಳುಹಿಸಿದರೆ ಮಕ್ಕಳಲ್ಲೂ ಆತ್ಮವಿಶ್ವಾಸ ಮೂಡುತ್ತದೆ.
- ಮಕ್ಕಳಿಗೆ ಶಾಲೆಯಲ್ಲಿ ಏನೇ ತೊಂದರೆಯಾದರೂ ಯಾರನ್ನಾದರೂ ಸಹಾಯ ಕೇಳಿ ಪಡೆಯುವಂತೆ ತರಬೇತಿ ನೀಡಬೇಕು. ತಮ್ಮ ಹೆಸರು, ತಂದೆ ತಾಯಿಯ ಹೆಸರು, ವಿಳಾಸ, ಸಂಪರ್ಕ ಸಂಖ್ಯೆಗಳನ್ನು ಕಲಿಸಿ, ಶಾಲೆಗೆ ಕಳುಹಿಸಿದರೆ ಮಕ್ಕಳಿಗೂ ಧೈರ್ಯ ಬರುತ್ತದೆ. ಏನೇ ಆದರೂ ಮನೆಯಲ್ಲಿ ಆದದ್ದನ್ನು ಹೇಳಿಕೊಳ್ಳಬೇಕು ಎಂದು ಹೇಳಿದರೆ ಒಳ್ಳೆಯದು.
- ಸರಿಯಾದ ಸಮಯದಲ್ಲಿ ಮಕ್ಕಳಿಗೆ ನಿದ್ರೆ, ಆಹಾರ, ಆಟ, ಆರಾಮ, ವಿರಾಮ, ಮನರಂಜನೆ ಎಲ್ಲ ಸಿಗುವಂತೆ ಮನೆಯಲ್ಲಿಯೇ ಒಂದು ಶಿಸ್ತಿನ ತಳಹದಿ ಇದ್ದರೆ ಮಕ್ಕಳು ಶಾಲೆಯ ಶಿಸ್ತಿಗೂ ಹೊಂದಿಕೊಳ್ಳಲು ಸುಲಭವಾಗುತ್ತದೆ.
- ಶಾಲೆಗೆ ಹೋಗಿ ಬರುವ ಮಕ್ಕಳು ಸುಸ್ತಾಗಿ, ಸಿಟ್ಟಾಗಿಯೂ ಇರುವ ಸಾಧ್ಯತೆ ಇರುತ್ತದೆ. ಬೇರೆ ಮಕ್ಕಳಿಂದ ಯಾವುದಾದರೂ ಸೋಂಕು, ಸೀನು, ಹೇನು ಹೊತ್ತುಕೊಂಡು ಬರುವ ಸಂಭವವೂ ಅಧಿಕವೇ. ಆಗೆಲ್ಲ ಪೋಷಕರು ತಾಳ್ಮೆಗೆಡದೆ ಸಂಯಮದಿಂದ ಶಾಲೆ, ಶಿಕ್ಷಕರನ್ನು ದೂರದೇ ಪರಿಸ್ಥಿತಿಯನ್ನು ನಿಭಾಯಿಸಲು ಕಲಿತುಕೊಳ್ಳಬೇಕು. ಬೇರೆ ಪೋಷಕರೊಂದಿಗೆ, ಶಿಕ್ಷಕರೊಂದಿಗೆ ಸಂಪರ್ಕದಲ್ಲಿರಬೇಕು. ಒಟ್ಟಿನಲ್ಲಿ ತಮ್ಮಲ್ಲಿ ಆಗುತ್ತಿರುವ ತುಮುಲಗಳನ್ನು ಮಕ್ಕಳೆದುರು ತೋರಗೊಡದೇ ಮಕ್ಕಳನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕು.

ಪ್ರತಿ ಮನೆಯ ಮರಿ ಹಕ್ಕಿಗೂ ಶಾಲೆಯೆಂಬ ಬಾನು ಬೇಕು ಸ್ವಚ್ಛಂದವಾಗಿ ಹಾರಲು. ಆ ಬಾನಿಗೂ ಬೇಕು ಈ ಮರಿ ಹಕ್ಕಿಗಳ ಹಾರಾಟ, ಕಲರವ. ತಮ್ಮದೇ ಆದ ಸೋಜಿಗವನ್ನು ಜಗದೊಡನೆ ಹಂಚಿಕೊಳ್ಳಲು ಪೋಷಕರು ಇಡಬೇಕಾದ ಮೊದಲ ಹೆಜ್ಜೆ ಇದುವೇ ಅಲ್ಲವೇ.

ಕಲ್ಲಂಗಡಿ ಸಿಹಿತಿನಿಸು

ಬೇಸಿಗೆಯಲ್ಲಿ ಕಲ್ಲಂಗಡಿ ಹಣ್ಣಿನ ಬಳಕೆ ಜಾಸ್ತಿ. ಸಾಮಾನ್ಯವಾಗಿ ಹಣ್ಣನ್ನು ಬಳಸಿ ಅದರ ಸಿಪ್ಪೆಯನ್ನು ಬಿಸಾಕುತ್ತೇವೆ. ಕೆಲವರು ಪಲ್ಯ, ಸಾಂಬಾರ್, ದೋಸೆಗಳಲ್ಲಿ ಸಿಪ್ಪೆಯ ಬಿಳಿ ಭಾಗವನ್ನು ಬಳಸುತ್ತಾರೆ. ಈ ಸಿಪ್ಪೆಯ ಬಿಳಿ ಭಾಗದಿಂದ ಇನ್ನೂ ರುಚಿಕರ ಸಿಹಿತಿನಿಸುಗಳನ್ನು ತಯಾರಿಸಬಹುದು. ಅಂಥ ಕೆಲವು ರೆಸಿಪಿಗಳನ್ನು ಸೌಖ್ಯ ಮೋಹನ್ ತಲಕಾಲುಕೊಪ್ಪ ಇಲ್ಲಿ ಪರಿಚಯಿಸಿದ್ದಾರೆ

ನಳಪಾಕ

ಹಲ್ವ

ಕಲ್ಲಂಗಡಿ ಹಣ್ಣು ತಿಂದ ಮೇಲೆ ಉಳಿಯುವ ಬಿಳಿ ಭಾಗದಲ್ಲಿ ಒಂದು ರೀತಿಯ ರುಚಿ ಇದೆ. ಆ ರುಚಿಗೆ ಮೌಲ್ಯವರ್ಧನೆ ಮಾಡಿದರೆ, ಹಲ್ವ ತಯಾರಾಗುತ್ತದೆ.

ಬೇಕಾಗುವ ಸಾಮಗ್ರಿ: ಕಲ್ಲಂಗಡಿ ಹಣ್ಣಿನ ಬಿಳಿ ಭಾಗ 5ಕಪ್, ತುಪ್ಪ 4 ರಿಂದ 5 ಚಮಚ, ದ್ರಾಕ್ಷಿ-ಗೋಡಂಬಿ ಸ್ವಲ್ಪ, ಸಕ್ಕರೆ 2 ಕಪ್, ಕೇಸರಿ, ಏಲಕ್ಕಿ ಪುಡಿ.

ತಯಾರಿಸುವ ವಿಧಾನ: ಮೊದಲು ಕಲ್ಲಂಗಡಿ ಹಣ್ಣಿನ ಬಿಳಿಯ ಭಾಗವನ್ನು ತುರಿದುಕೊಳ್ಳಿ. ಅದರ ನೀರಿನ ಭಾಗವನ್ನು ಹಿಂಡಿ ತೆಗೆದು ಬಾಣಲೆಯಲ್ಲಿ ಹಾಕಿ ಮಗುಚಿ. ಆಗ ಬೆಂದಂತಾಗುತ್ತದೆ. ಚಿಟಿಕೆ ಉಪ್ಪು ಸೇರಿಸಿ ಎರಡು ಚಮಚ ತುಪ್ಪ ಸೇರಿಸಿ ಹುರಿಯಿರಿ. ನಂತರ ಅದು ತೆಳು ಜೇನುತುಪ್ಪದ ಬಣ್ಣಕ್ಕೆ ತಿರುಗುತ್ತದೆ. ಅದಕ್ಕೆ ಸಕ್ಕರೆಯನ್ನು ಹಾಕಿ ಚೆನ್ನಾಗಿ ತಿರುಗಿಸಿ. ಇದು ಸರಿಯಾಗಿ ಪಾಕ ಬಂದು ಗಟ್ಟಿಯಾಗಬೇಕು. ಆಮೇಲೆ ದ್ರಾಕ್ಷಿ ಗೋಡಂಬಿಯನ್ನು ತುಪ್ಪದಲ್ಲಿ ಹುರಿದುಕೊಂಡು ಅದಕ್ಕೆ ಹಾಕಿ ಚೆನ್ನಾಗಿ ಮಿಶ್ರ ಮಾಡಿ ಇಳಿಸಿ. ಏಲಕ್ಕಿ ಪುಡಿ ಅಥವಾ ಕೇಸರಿಯನ್ನು ಸೇರಿಸಿಕೊಳ್ಳಬಹುದು. ಹಲ್ವ ರೆಡಿ.





ಬರ್ಫಿ

ಬೇಕಾಗುವ ಸಾಮಗ್ರಿ: ಕಲ್ಲಂಗಡಿ ಹಣ್ಣಿನ ಸಿಪ್ಪೆಯ ಬಿಳಿ ಭಾಗದ ತುರಿ 2ಕಪ್, ತೆಂಗಿನ ತುರಿ 1ಕಪ್, ರವೆ ಅರ್ಧ ಕಪ್, ಸಕ್ಕರೆ ಎರಡು ಕಪ್, ತುಪ್ಪ 2-3ಚಮಚ

ವಿಧಾನ : ಮೊದಲು ಬಿಳಿ ಭಾಗದ ತುರಿಯನ್ನು ಬಾಣಲೆಗೆ ಹಾಕಿ ನೀರು ಇಂಗಿಸಿ. ನಂತರ ಸಕ್ಕರೆ ಹಾಕಿ ಚೆನ್ನಾಗಿ ಮಗುಚಿ. ಪಾಕ ಬಂದು ಗಟ್ಟಿಯಾಗಬೇಕು. ಮಧ್ಯ ತುಪ್ಪ ಸೇರಿಸಿ. ಸ್ವಲ್ಪ ಗಟ್ಟಿಯಾಗುತ್ತಿದ್ದಂತೆ ರವೆಯನ್ನು ಚೆನ್ನಾಗಿ ಹುರಿದು ಮಿಶ್ರಣ ಮಾಡಿ. ತಳ ಬಿಡುವ ಹಂತಕ್ಕೆ ಬಂದಾಗ ಒಂದು ಚಮಚ ತುಪ್ಪ ಸೇರಿಸಿ. ಒಂದು ಪ್ಲೇಟಿಗೆ ಹಾಕಿ ತಣಿದ ಕತ್ತರಿಸಿ.

ಕಡುಬು

ಬೇಕಾಗುವ ಸಾಮಗ್ರಿ: ರವೆ 2 ಕಪ್, ಕಲ್ಲಂಗಡಿ ಹಣ್ಣಿನ ಬಿಳಿ ಭಾಗದ ತುರಿ ಎರಡು ಕಪ್, ಉಪ್ಪು, ಬೆಲ್ಲ ಸಿಹಿಗೆ, ಬಾಳೆ ಎಲೆ, ತುಪ್ಪ/ಬೆಣ್ಣೆ

ತಯಾರಿಸುವ ವಿಧಾನ: ಮೊದಲು ರವೆಯನ್ನು ಚೆನ್ನಾಗಿ ಹುರಿದುಕೊಂಡು ತಣಿಯಲು ಬಿಡಿ. ಕಲ್ಲಂಗಡಿ ಹಣ್ಣಿನ ತುರಿದ ಭಾಗವನ್ನು ಸ್ವಲ್ಪ ಉಪ್ಪು ಮತ್ತು ಬೆಲ್ಲ ಹಾಕಿ ಬೇಯಿಸಿ. ನಂತರ ರವೆಗೆ ನೀರು ಹಾಕಿ ನೆನೆಸಿದ ರವೆಯನ್ನು ಬೇಯುತ್ತಿರುವ ತುರಿಗೆ ಹಾಕಿ ಮುದ್ದೆಯಾಗುವವರೆಗೂ ತೊಳೆಸಿ. ನಂತರ ಮುಚ್ಚಿಡಿ. ಆಮೇಲೆ ಸ್ವಲ್ಪ ತೆಗೆದುಕೊಂಡು ಬಾಳೆಲೆಯ ಮೇಲೆ ಹರಡಿ ಮಡಚಿ ಉಗಿಯಲ್ಲಿ ಬೇಯಿಸಿ. ಇಡ್ಲಿ ಬೇಯಿಸಿದ ಹಾಗೆ. ನಂತರ ಬೆಣ್ಣೆ ಅಥವಾ ತುಪ್ಪದೊಂದಿಗೆ ತಿನ್ನಲು ಕೊಡಿ.





ಪಾನಕ

ಕಲ್ಲಂಗಡಿಯ ತಿರುಳಿನಿಂದ ಜ್ಯೂಸ್ ಮಾಡಿದರೆ, ತಿರುಳು ತೆಗೆದ ಮೇಲೆ ಉಳಿಯುವ ಸಿಪ್ಪೆಯ ಭಾಗದಿಂದಲೂ ವಿಶಿಷ್ಟ ಬಗೆಯ ಪಾನಕ ಮಾಡಬಹುದು.

ಬೇಕಾಗುವ ಸಾಮಗ್ರಿ: ಕಲ್ಲಂಗಡಿ ಹಣ್ಣಿನ ಸಿಪ್ಪೆಯ ಬಿಳಿ ಭಾಗ ಒಂದು ಕಪ್, ಹಾಲು 2 ಕಪ್, ಬೆಲ್ಲ ಅರ್ಧ ಕಪ್, ಏಲಕ್ಕಿ 2

ತಯಾರಿಸುವ ವಿಧಾನ : ಮೊದಲು ಬಿಳಿ ಭಾಗವನ್ನು ಸಣ್ಣಗೆ ಕತ್ತರಿಸಿಕೊಳ್ಳಿ.ಅದಕ್ಕೆ ಏಲಕ್ಕಿ ಬೀಜ ಮತ್ತು ಬೆಲ್ಲವನ್ನು ಸೇರಿಸಿ ನುಣ್ಣಗೆ ರುಬ್ಬಿ. ರುಬ್ಬಿದ ಮಿಶ್ರಣಕ್ಕೆ ಹಾಲು ಸೇರಿಸಿ. ಹಾಲಿನ ಬದಲಾಗಿ ತೆಂಗಿನ ಹಾಲನ್ನು ಕೂಡ ಬಳಸಬಹುದು. ಫ್ರಿಜ್‌ನಲ್ಲಿಟ್ಟು ತಣ್ಣನೆಯ ಪಾನಕವನ್ನು ಕುಡಿಯಬಹುದು.

ಶಾಸಕಿಯರ ಮನದಾಳ

ಗೃಹೋತ್ಪನ್ನ ಮಾರುಕಟ್ಟೆಗೆ ಆದ್ಯತೆ

ಎಂ.ಪಿ. ಲತಾ ಮಲ್ಲಿಕಾರ್ಜುನ

ಶಾಸಕಿ, ಹರಪನಹಳ್ಳಿ



ಮಾಜಿ ಉಪಮುಖ್ಯಮಂತ್ರಿ ದಿವಂಗತ ಎಂ.ಪಿ.ಪ್ರಕಾಶ್ ಅವರ ಪುತ್ರಿ ಎಂ.ಪಿ. ಲತಾ ಮಲ್ಲಿಕಾರ್ಜುನ ಅವರು ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಗೆದ್ದು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ. ಹುಟ್ಟಿದ್ದು ಹೂವಿನಹಡಗಲಿಯಲ್ಲಿ. ಪದವಿಯವರೆಗೆ ಓದಿ ಬೆಳೆದದ್ದು ಬೆಂಗಳೂರಿನಲ್ಲಿ. ಹರಪನಹಳ್ಳಿ ಅವರ ಗಂಡನ ಮನೆ. ಹರಪನಹಳ್ಳಿಯಲ್ಲಿ ಈವರೆಗೆ ಮಹಿಳೆಯರು ಶಾಸಕರಾಗಿರಲಿಲ್ಲ. ಮೊದಲ ಬಾರಿಗೆ ಅವರು ಶಾಸಕಿಯಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಕೊಟ್ಟೂರಿನಿಂದ ಭಾಗೀರಥಿ ಅವರು ಕಾಂಗ್ರೆಸ್‌ನಿಂದ ಗೆದ್ದಿದ್ದರು. ಕ್ಷೇತ್ರದಲ್ಲಿ ಮೂಲಸೌಕರ್ಯ ಕಲ್ಪಿಸುವುದರ ಜೊತೆಗೆ ದುಡಿಯುವ ಕೈಗಳಿಗೆ ಕೆಲಸ ಕೊಡುವುದು ಅವರ ಮೊದಲ ಆದ್ಯತೆಯಾಗಿದೆ. ಅದರಲ್ಲೂ ಮಹಿಳೆಯರ ಸ್ವಾವಲಂಬನೆಗೆ ತಮ್ಮ ಮೊದಲ ಆದ್ಯತೆ ಎನ್ನುತ್ತಾರೆ.

ನನ್ನ ತಂದೆ (ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್) ಪ್ರಭಾವ ನನ್ನ ಮೇಲೆ ಬಹಳ ಇದೆ. ನಮ್ಮ ಮನೆಯಲ್ಲೂ ರಾಜಕೀಯದ ವಾತಾವರಣವಿತ್ತು. ತಂದೆಯೊಂದಿಗಿನ ಒಡನಾಟದಿಂದ ನನ್ನಲ್ಲಿ ರಾಜಕೀಯದ ಅರಿವು ಮೂಡಲು ಕಾರಣವಾಯಿತು. ಆದರೆ, ಅವರ ನಿಧನದ ನಂತರ ರಾಜಕೀಯ ಆಸಕ್ತಿ ಇರಲಿಲ್ಲ. ನನ್ನ ಸಹೋದರ (ಮಾಜಿ ಶಾಸಕ ಎಂ.ಪಿ. ರವೀಂದ್ರ) ತೀರಿಕೊಂಡ ನಂತರ ಆಕಸ್ಮಿಕವಾಗಿ ರಾಜಕೀಯಕ್ಕೆ ಬರಬೇಕಾಯಿತು. ಅವನಿಗೆ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಬಹಳ ಕನಸುಗಳಿದ್ದವು. ಅದನ್ನು ನನಸಾಗಿಸಲು ಹರಪನಹಳ್ಳಿಯ ಜನ ನನ್ನ ಆಯ್ಕೆ ಮಾಡಿದ್ದಾರೆ. ಅವರ ನಿರೀಕ್ಷೆ ಹುಸಿಯಾಗಿಸುವುದಿಲ್ಲ.

ನನ್ನ ಕ್ಷೇತ್ರದಲ್ಲಿ ಬಹಳ ಮಂದಿ ಹೆಣ್ಣು ಮಕ್ಕಳಿಗೆ ಉದ್ಯೋಗವಿಲ್ಲ. ಮನೆಯಲ್ಲಿ ಶಾವಿಗೆ, ಹಪ್ಪಳ ತಯಾರಿಸಿ ಮಾರಾಟ ಮಾಡುತ್ತಾ, ಜೀವನ ನಡೆಸುತ್ತಿದ್ದಾರೆ. ಮಾರುಕಟ್ಟೆ ಕೊರತೆ ಇದೆ. ಹಾಗೆಯೇ ಇಷ್ಟರಿಂದಲೇ ಬದುಕು ನಡೆಯುವುದಿಲ್ಲ. ಅವರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು ನನ್ನ ಗುರಿ. ನನಗೆ ಇನ್ಫೊಸಿಸ್ ಕಂಪನಿಯ ಸುಧಾಮೂರ್ತಿ ಅವರ ಪರಿಚಯವಿದೆ. ಹುಬ್ಬಳ್ಳಿಯಲ್ಲಿ ಅವರ ಘಟಕವಿದೆ. ಅವರೊಂದಿಗೆ ಚರ್ಚಿಸಿ, ನಮ್ಮ ಕ್ಷೇತ್ರದ ಮಹಿಳೆಯರು ತಯಾರಿಸುವ ಗೃಹೋತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಶ್ರಮಿಸುವೆ. ಬಹಳ ಹೆಣ್ಣುಮಕ್ಕಳಿಗೆ ಹೈನುಗಾರಿಕೆ, ಕುರಿ ಸಾಕಾಣಿಕೆ ಬಗ್ಗೆಯೂ ಆಸಕ್ತಿ ಇದೆ. ಯಾರಿಗೆ ಯಾವುದರಲ್ಲಿ ಆಸಕ್ತಿ ಇದೆಯೋ ಅದರ ಬಗ್ಗೆ ತರಬೇತಿ ಕೊಟ್ಟು ಅವರನ್ನು ಸ್ವಾವಲಂಬಿಗೊಳಿಸಲು ಶ್ರಮಿಸುತ್ತೇನೆ.

ನಿರೂಪಣೆ: ಶಶಿಕಾಂತ ಎಸ್. ಶೆಂಬೆಳ್ಳಿ

ಸ್ವಾವಲಂಬನೆಗೆ ದಾರಿ ತೋರುವ ಗುರಿ

ನಯನಾ ಮೋಟಮ್ಮ

ಶಾಸಕಿ, ಮೂಡಿಗೆರೆ



ನಯನಾ ಅವರು ಮಾಜಿ ಸಚಿವೆ ಮೋಟಮ್ಮ ಅವರ ಪುತ್ರಿ. ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ. ಅಮ್ಮನಂತೆಯೇ ಮೊದಲ ಯತ್ನದಲ್ಲೇ ಗೆಲುವು ಸಾಧಿಸಿದ್ದಾರೆ. ರಾಜಕೀಯದಲ್ಲಿ ಅಮ್ಮನ ಜೊತೆ ಪಳಗಿದ್ದಾರೆ. ನಯನಾ ಪತಿ ಬಿಕಶ್ ಜವಾರ್.

ನಯನಾ ಅವರು ಕಾನೂನು ವಿಷಯದಲ್ಲಿ ಸ್ನಾತಕೋತ್ತರ ಪದವಿ (ಎಲ್‌ಎಲ್‌ಎಂ) ಪಡೆದಿದ್ದಾರೆ. 2014ರಲ್ಲಿ ರಾಜಕೀಯಕ್ಕೆ ಪದಾರ್ಪಣೆ ಮಾಡಿ, ಕಾಂಗ್ರೆಸ್ ಪಕ್ಷದಲ್ಲಿ ಪಯಣ ಆರಂಭಿಸಿದ್ದಾರೆ. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಈಗ ತವರೂರು ಮೂಡಿಗೆರೆ ಕ್ಷೇತ್ರದ ಶಾಸಕಿಯಾಗಿ ಆಯ್ಕೆಯಾಗಿದ್ದಾರೆ.

ನನ್ನ ತಾಯಿ ಮೋಟಮ್ಮ ಸಚಿವರಾಗಿದ್ದಾಗ ಮಹಿಳೆಯರ ಅಭ್ಯುದಯಕ್ಕಾಗಿ ಸ್ತ್ರೀಶಕ್ತಿ ಸಂಘ ರಚನೆ ಮಾಡಿ ರಾಜ್ಯದಲ್ಲಿ ಮನೆ ಮಾತಾಗಿದ್ದಾರೆ. ಅಮ್ಮ ನನಗೆ ಪ್ರೇರಣೆ.

ಮಹಿಳೆಯರಿಗೆ ಉದ್ಯೋಗ ಸೃಷ್ಟಿಸುವ ನಿಟ್ಟಿನಲ್ಲಿ ಕ್ಷೇತ್ರದಲ್ಲೊಂದು ಕೈಗಾರಿಕಾ ಘಟಕ ಸ್ಥಾಪನೆ ಕನಸು ಇದೆ. ಸ್ವಉದ್ಯೋಗ ಕೈಗೊಳ್ಳಲು ಅನುಕೂಲ ಕಲ್ಪಿಸಿ ಸ್ವಾವಲಂಬನೆ ಸ್ವಾಭಿಮಾನದ ಬದುಕಿನ ದಾರಿ ತೋರುವ ಚಿಂತನೆ ಇದೆ.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಕುಟುಂಬದ ಒಡತಿಗೆ ₹ 2 ಸಾವಿರ ನೀಡುವುದಾಗಿ ಭರವಸೆ ನೀಡಿದ್ದೇವೆ, ಅದರಂತೆ ನಡೆದುಕೊಳ್ಳುತ್ತೇವೆ. ಮಹಿಳೆಯನ್ನು ಮನೆ ಯಜಮಾನಿ ಆಗಿಸುವ ಆಶಯ ಇಟ್ಟುಕೊಂಡಿದ್ದೇನೆ.

ಕ್ಷೇತ್ರದಲ್ಲಿ ವಿವಿಧ ಪ್ರವೇಶ (ನೀಟ್, ಸಿಇಟಿ...) ಪರೀಕ್ಷೆ, ನೇಮಕಾತಿ (ಯುಪಿಎಸ್‌ಸಿ, ಕೆಪಿಎಸ್‌ಸಿ, ಐಬಿಪಿಎಸ್...) ಪರೀಕ್ಷೆ ಕೋಚಿಂಗ್ ಕೇಂದ್ರ ತೆರೆಯುವ ಯೋಚನೆ ಇದೆ. ಗ್ರಾಮೀಣ ಭಾಗದ ಯುವತಿಯರು, ಯುವಕರು ಪರೀಕ್ಷೆಗೆ ಸಿದ್ಧತೆ, ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ ಎಂಬ ನಂಬಿಕೆ ಇದೆ.

ಕ್ಷೇತ್ರದಲ್ಲಿ ಮಹಿಳಾ ಕಾರ್ಮಿಕರು ಹೆಚ್ಚು ಇದ್ದಾರೆ. ಪ್ಲಾಂಟೇಷನ್, ತೋಟಗಳಲ್ಲಿ ಕೆಲಸ ಮಾಡುತ್ತಾರೆ. ಬಹುತೇಕ ಕುಟುಂಬಗಳು ಇಂದಿಗೂ ಕೂಲಿ ಲೈನ್ ನಲ್ಲೇ ವಾಸ ಇವೆ. ಇಂಥ ಕುಟುಂಬಗಳಿಗೆ ಸೂರು ಕಲ್ಪಿಸಲು ಶ್ರಮಿಸುತ್ತೇನೆ.


ಕ್ಷೇತ್ರದಲ್ಲೊಂದು ದೊಡ್ಡ ಆಸ್ಪತ್ರೆ ನಿರ್ಮಿಸಬೇಕು ಎಂಬ ಮಹದಾಸೆ ಇಟ್ಟುಕೊಂಡಿದ್ದೇನೆ. ರೋಗಿಗಳು ಚಿಕಿತ್ಸೆಗಾಗಿ ಮಂಗಳೂರು, ಹಾಸನ ಇತರೆಡೆಗಳಿಗೆ ಹೋಗದಂತೆ ಇಲ್ಲಿಯೇ ಎಲ್ಲ ಚಿಕಿತ್ಸೆಗೆ ಪೂರಕ ಸೌಕರ್ಯ ಕಲ್ಪಿಸಲು ಶ್ರಮಿಸುತ್ತೇನೆ. ಕೌಶಲಾಭಿವೃದ್ಧಿ ಕೇಂದ್ರವನ್ನು ತೆರೆಯುವ ಕನಸು ಇದೆ. ಕೌಶಲ ತರಬೇತಿ ನೀಡಿ ಯುವಜನರನ್ನು ಉದ್ಯಮ ಆರಂಭಿಸುವುದಕ್ಕೆ ಪ್ರೋತ್ಸಾಹ ನೀಡುತ್ತೇನೆ. ಕ್ಷೇತ್ರವನ್ನು ರಾಜ್ಯದಲ್ಲಿ ಮಾದರಿಯಾಗಿ ರೂಪಿಸುವ ಗುರಿ ಇಟ್ಟುಕೊಂಡಿದ್ದೇನೆ.

ನಿರೂಪಣೆ: ಬಿ.ಜೆ.ಧನ್ಯಪ್ರಸಾದ್

ವಿದ್ಯಾಭ್ಯಾಸದ ಒತ್ತಡ - ಸರಳ ಪರಿಹಾರಗಳು

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್



ಬಿಎಸ್ಸಿ (ನರ್ಸಿಂಗ್) ಓದುತ್ತಿದ್ದೇನೆ. ಕಾಲೇಜು, ಪಠ್ಯದ ಚಟುವಟಿಕೆಗಳು, ಕೇಸ್ ಪ್ರೆಸೆಂಟೇಶನ್, ಆಸ್ಪತ್ರೆಯ ಕೆಲಸಗಳು ಇವೆಲ್ಲವುಗಳಿಂದ ಹೈರಾಣಾಗಿದ್ದೇನೆ. ಬೆಳಿಗ್ಗೆ 5 ರಿಂದ ಸಂಜೆ 7ರವರೆಗಿನ ದಿನಚರಿ ಸಾಕಾಗಿದೆ. ಜೊತೆಗೆ ಬೆಂಗಳೂರಿನ ಸಂಚಾರದ ವ್ಯವಸ್ಥೆಯ ತೊಂದರೆಗಳೂ ಸೇರಿಕೊಂಡು ನಾನು ಖಿನ್ನತೆಗೆ ಒಳಗಾಗುತ್ತಿದ್ದೇನೆ ಅನ್ನಿಸುತ್ತಿದೆ. ಇದು ನನ್ನೊಬ್ಬಳ ಗೋಳಲ್ಲ ನನ್ನ ಹಾಗೆ ಎಷ್ಟೋ ವಿದ್ಯಾರ್ಥಿಗಳ ನೋವಾಗಿದೆ ಇದರಿಂದ ಹೊರಬರುವುದು ಹೇಗೆ ದಯವಿಟ್ಟು ತಿಳಿಸಿ.

ಹೆಸರು ಊರು ತಿಳಿಸಿಲ್ಲ.

ನಿಮ್ಮ ಸದ್ಯದ ಪರಿಸ್ಥಿತಿ ನಿಜವಾಗಿಯೂ ಕಷ್ಟಕರವಾಗಿದೆ. ನಿಮ್ಮ ಮೇಲಿರುವ ಒತ್ತಡದಲ್ಲಿ ಬಹುಪಾಲು ನಿಮ್ಮ ಹಿಡಿತದಲ್ಲಿ ಇರುವುದಿಲ್ಲ. ನಿಮ್ಮ ಅಸಹಾಯಕತೆ ಹತಾಶೆಗಳನ್ನು ಇನ್ನೂ ಹೆಚ್ಚುಮಾಡುತ್ತದೆ. ದುರದೃಷ್ಟವೆಂದರೆ ವಿದ್ಯಾಭ್ಯಾಸದ ವ್ಯವಸ್ಥೆ ಎಲ್ಲಾ ವಿದ್ಯಾರ್ಥಿಗಳ ಮೇಲೆ ಹೇರುತ್ತಿರುವ ಇಂಥ ಅಗಾಧವಾದ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರಗಳು ಯೋಚಿಸುತ್ತಿಲ್ಲ. ಜೊತೆಗೆ ಒತ್ತಡವನ್ನು ನಿಭಾಯಿಸಲು ನಿಮಗೆ ಸಹಾಯ ಕೂಡ ದೊರಕುತ್ತಿಲ್ಲ. ಇಂತಹ ಒತ್ತಡವನ್ನು ಎರಡು ಮೂರು ಹಂತಗಳಲ್ಲ ನಿಭಾಯಿಸಬೇಕಾಗುತ್ತದೆ.

ನರ್ಸಿಂಗ್ ವಿದ್ಯಾರ್ಥಿಯಾಗಿರುವ ನಿಮಗೆ ಮಾನಸಿಕ ಒತ್ತಡದ ದೈಹಿಕ ಪರಿಣಾಮಗಳು ಗೊತ್ತಿರಲೇಬೇಕಲ್ಲವೇ? ಮಾನಸಿಕ ಒತ್ತಡವನ್ನು ಮಿದುಳು ಅಪಾಯದ ಸೂಚನೆಯೆಂದು ಗ್ರಹಿಸಿ ಅದನ್ನು ಎದುರಿಸಲು ದೇಹವನ್ನು ಸಿದ್ಧಗೊಳಿಸುವುದಕ್ಕಾಗಿ ಒತ್ತಡದ ಹಾರ್ಮೋನ್‌ಗಳಾದ ಅಡ್ರಿನಾಲಿನ್ ಮತ್ತು ಕಾರ್ಟಿಸೋಲ್‌ಗಳನ್ನು ಬಿಡುಗಡೆ ಮಾಡುತ್ತದೆ. ನಿರಂತರವಾಗಿ ಇಂತಹ ಹಾರ್ಮೋನ್‌ಗಳು ಸೃಜನೆಯಾಗುತ್ತಿದ್ದರೆ ದೇಹದ ರೋಗನಿರೋಧಕ ಶಕ್ತಿ ಕುಗ್ಗುವುದಲ್ಲದೆ, ಹಸಿವು ನಿದ್ದೆಗಳು ಕಡಿಮೆಯಾಗುತ್ತದೆ. ಒತ್ತಡ ಅಸಹನೀಯವಾದಾಗ ದೇಹ ತನ್ನನ್ನು ರಕ್ಷಿಸಿಕೊಳ್ಳಲು ಹೊರಗಡೆಯ ಪ್ರಪಂಚದಿಂದ ಮಿದುಳಿನ ಸಂಪರ್ಕವನ್ನು ತಪ್ಪಿಸುತ್ತದೆ. ಈ ಪರಿಸ್ಥಿತಿ ಖಿನ್ನತೆ, ಪ್ಯಾನಿಕ್ ಅಟ್ಯಾಕ್ ಅಥವಾ ಇನ್ನಿತರ ಮಾನಸಿಕ ಕಾಯಿಲೆಯ ಹೆಸರು ಪಡೆದುಕೊಳ್ಳುತ್ತದೆ. ಹೆಚ್ಚಿನ ಮಾನಸಿಕ ಕಾಯಿಲೆಗಳು ತೀವ್ರವಾದ ಒತ್ತಡ ಬೇಸರ ಅಸಮಾಧಾನಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಪ್ರಕೃತಿ ನೀಡಿರುವ ಸಹಜ ರಕ್ಷಣಾತಂತ್ರಗಳು. ಆದರೆ ಒಮ್ಮೆ ಈ ಸ್ಥಿತಿ ತಲುಪಿದರೆ ಅದರಿಂದ ಹೊರಬರುವುದು ಕಠಿಣವಾಗುತ್ತದೆ.

ಇದನ್ನು ನಿಭಾಯಿಸಲು ಪ್ರತಿನಿತ್ಯ ಕನಿಷ್ಠ ಎರಡು ಬಾರಿ 10 ನಿಮಿಷ ವಿಶಿಷ್ಟವಾದ ಧ್ಯಾನದ ಅಭ್ಯಾಸವನ್ನು ಬೆಳೆಸಿಕೊಳ್ಳಿ. ಬೆನ್ನು ಹುರಿಯನ್ನು ನೇರವಾಗಿಟ್ಟು ಸುಮ್ಮನೆ ಕುಳಿತುಕೊಂಡು ನಿಮ್ಮ ಗಮನವನ್ನು ಉಸಿರಾಟದತ್ತ ಹರಿಸಿ. ನಂತರ ನಿಧಾನವಾಗಿ ದೇಹದಲ್ಲಿ ಇರುವ ಒತ್ತಡ ಬಿಗಿತ ನೋವುಗಳನ್ನು ಗುರುತಿಸಿ. ಕೊನೆಯಲ್ಲಿ ನಿಮ್ಮೊಳಗೆ ಮೂಡುತ್ತಿರುವ ಭಾವನೆಗಳು ಯೋಚನೆಗಳತ್ತ ಗಮನ ಹರಿಸಿ. ಇದನ್ನು ಒಬ್ಬರೇ ಮಾಡಿ ಅಥವಾ ಸ್ನೇಹಿತರ ಗುಂಪಿನಲ್ಲಿ ಒಟ್ಟಾಗಿ ಮಾಡಿ. ವಿಜ್ಞಾನಿ, ವೈದ್ಯ ಡ್ಯಾನ್ ಸಿಗಾಲ್ ರೂಪಿಸಿರುವ “Wheel Of Awareness” ಧ್ಯಾನದ ಕ್ರಮದ ಧ್ವನಿಮುದ್ರಿಕೆಗಳು ಅಂತರ್ಜಾಲದಲ್ಲಿ ಲಭ್ಯವಿದೆ. ಅದನ್ನು ಬಳಸಿ ದೇಹ ಮನಸ್ಸುಗಳನ್ನು ಹಗುರಾಗಿಸಿಕೊಳ್ಳಿ. ತೀವ್ರ ಒತ್ತಡವಿದ್ದಾಗ ದಿನದಲ್ಲಿ ಹಲವಾರು ಬಾರಿ ಇದೇ ಧ್ಯಾನವನ್ನು ಒಂದರೆಡು ನಿಮಿಷಗಳು ಮಾತ್ರ ಮಾಡಿದರೆ ಮನಸ್ಸು ಉಲ್ಲಸಿತವಾಗುತ್ತದೆ. ಇದನ್ನು ಕೆಲಸದ ನಡುವೆ ಬಿಡುವಿನಲ್ಲಿ. ಬಸ್ಸಿನಲ್ಲಿ ಪ್ರಯಾಣಿಸುವಾಗ, ತರಗತಿಗಳ ಮಧ್ಯದ ಬಿಡುವಿನಲ್ಲಿ ಹೀಗೆ ಅಗತ್ಯವಿದ್ದಾಗ ಮಾಡುತ್ತಿದ್ದರೆ ದೇಹ ಮನಸ್ಸುಗಳ ಸುರಕ್ಷತೆಯ ಭಾವವನ್ನು ಅನುಭವಿಸುತ್ತಾ ಒತ್ತಡವನ್ನು ಕಡಿಮೆ ಮಾಡುತ್ತದೆ. ಜೊತೆಗೆ ದಿನಕ್ಕೆ ಒಂದು ಬಾರಿಯಾದರೂ 10 ನಿಮಿಷಗಳ ಬಿರುಸಾದ ವ್ಯಾಯಾಮ ಮಾಡಿ. ಮನೆಯೊಳಗೆ ಮಾಡಬಹುದಾದ ಸ್ಕಿಪ್ಪಿಂಗ್, ಬಸ್ಕಿ ಹೊಡೆಯುವುದು ಕೂಡ ದೇಹವನ್ನು ತಕ್ಷಣಕ್ಕೆ ಎಲ್ಲಾ ಒತ್ತಡಗಳಿಂದ ಬಿಡುಗಡೆಗೊಳಿಸುತ್ತದೆ.

ನೀವೇ ಹೇಳಿರುವಂತೆ ಇದು ನಿಮ್ಮೊಬ್ಬರ ಸಮಸ್ಯೆಯಲ್ಲ. ಹಾಗಾಗಿ ಸ್ನೇಹಿತರೆಲ್ಲರೂ ಸೇರಿ ನಿಮ್ಮ ತೊಂದರೆಗಳ ಕುರಿತು ಮೇಲಧಿಕಾರಿಗಳ ಸಹಾಯ ಕೇಳಿ. ತಕ್ಷಣಕ್ಕೆ ಪರಿಹಾರಗಳು ಸಿಗದಿದ್ದರೂ ಅವರಿಗೆ ನಿಮ್ಮ ಪರಿಸ್ಥಿತಿಯ ಅರಿವಾಗುತ್ತದೆ. ಜೊತೆಗೆ ಎಲ್ಲರೂ ಸೇರಿ ತಿಂಗಳಿಗೆ ಒಂದೆರೆಡು ದಿನವಾದರೂ ಬಿಡುವನ್ನು ಹೊಂದಿಸಿಕೊಂಡು ಒಟ್ಟಾಗಿ ಸಂತೋಷದಿಂದ ಸಮಯ ಕಳೆಯುವ ವ್ಯವಸ್ಥೆ ಮಾಡಿಕೊಳ್ಳಬಹುದು.

ಕೊನೆಯದಾಗಿ ನಿಮ್ಮೆಲ್ಲಾ ಪ್ರಯತ್ನಗಳನ್ನೂ ಮೀರಿ ಕೆಲವು ಸಂದರ್ಭಗಳು ಹಿಡಿತ ತಪ್ಪಬಹುದು. ಕೊಟ್ಟ ಕೆಲಸಗಳು ತಡವಾಗಬಹುದು, ಕೇಸ್ ಪ್ರೆಸೆಂಟ್ ಮಾಡುವಾಗ ತಪ್ಪಬಹುದು, ಪರೀಕ್ಷೆಯಲ್ಲಿ ಅಂಕಗಳು ಕಡಿಮೆ ಬರಬಹುದು. ಕೆಲಸದಲ್ಲಿ ಸಣ್ಣಪುಟ್ಟ ತಪ್ಪುಗಳಾಗಬಹುದು. ಇವೆಲ್ಲವೂ ನನ್ನ ಹಿಡಿತವನ್ನು ಮೀರಿದ್ದು ಎಂದು ಪೂರ್ಣ ಮನಸ್ಸಿನಿಂದ ಒಪ್ಪಿಕೊಂಡುಬಿಡಿ. ಎಲ್ಲಾ ಪರಿಸ್ಥಿತಿಗಳನ್ನು ಹಿಡಿತದಲ್ಲಿಟ್ಟುಕೊಂಡು ನಮಗೆ ಬೇಕಾದ ಪರಿಣಾಮಗಳನ್ನು ಪಡೆಯಲು ಪ್ರಯತ್ನಿಸಿದರೆ ನಮ್ಮ ಅರಿವಿಗೆ ಬರದಂತೆ ಮಾನಸಿಕ ಒತ್ತಡ ದೇಹ ಮನಸ್ಸುಗಳಲ್ಲಿ ಶೇಖರಣೆಯಾಗುತ್ತಲೇ ಹೋಗುತ್ತದೆ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಸೇವೆಯಿಂದ ವಜಾಗೊಂಡ ಕೆಎಸ್‌ಆರ್‌ಟಿಸಿ ನೌಕರ ಮರು ನೇಮಕ

ಗಳಿಕೆ ರಜೆ ನಗದೀಕರಣಕ್ಕೆ ಅರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರ ಸೇವೆಯಿಂದ ವಜಾಗೊಂಡು ಮರು ನೇಮಕಗೊಂಡ ನಂತರ ಗಳಿಕೆ ರಜೆ ನಗದೀಕರಣಕ್ಕೆ ಅರ್ಹರಾಗಿರುತ್ತಾರೆ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪ್ರಕರಣವೊಂದರಲ್ಲಿ ಕೆಎಸ್‌ಆರ್‌ಟಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸಿಬ್ಬಂದಿಯ ಗಳಿಕೆ ರಜೆಗೆ ನಗದು ಪಾವತಿಸುವಂತೆ ಆದೇಶಿಸಿದೆ.

'ವಜಾಗೊಂಡ ಸಿಬ್ಬಂದಿ ಗಳಿಕೆ ರಜೆ ನಗದು ಪಡೆಯುವಂತಿಲ್ಲ ಎಂಬ ಸಾರಿಗೆ ಸಂಸ್ಥೆಯ ಆದೇಶವನ್ನು ಒಪ್ಪಲಾಗದು. ಒಮ್ಮೆ ಉದ್ಯೋಗಿ ಅಥವಾ ನೌಕರ ಗಳಿಕೆ ರಜೆ ಪಡೆಯಲು ಅರ್ಹ ಎಂದಾದರೆ ಆತ ಅದರ ನಗದೀಕರಣಕ್ಕೂ ಸಹಜವಾಗಿಯೇ ಅರ್ಹನಾಗಿರುತ್ತಾನೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.



ಪ್ರಕರಣವೇನು?: ವಿ.ನಾಗರಾಜ್ 1977ರಲ್ಲಿ ನಿರ್ವಾಹಕರಾಗಿ ಕೆಎಸ್‌ಆರ್‌ಟಿಸಿಗೆ ಸೇರ್ಪಡೆಯಾಗಿದ್ದರು. ಶಿಸ್ತುಕ್ರಮದ ಕಾರಣಕ್ಕಾಗಿ ಅವರನ್ನು 1991ರಲ್ಲಿ ಸೇವೆಯಿಂದ ವಜಾಗೊಳಿಸಲಾಗಿತ್ತು. ಈ ಕ್ರಮವನ್ನು ಪ್ರಶ್ನಿಸಿ ಅವರು ಕಾರ್ಮಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಕಾರ್ಮಿಕ ನ್ಯಾಯಾಲಯ, 'ಅರ್ಜಿದಾರ ನಾಗರಾಜ್ ಅವರಿಗೆ 1993 ರಿಂದ ಪೂರ್ವಾನ್ವಯವಾಗುವಂತೆ ಎಲ್ಲ ಭತ್ಯೆ ಮತ್ತು ಬಾಕಿ ವೇತನ ನೀಡಬೇಕು ಮತ್ತು ಮರು ನೇಮಕ ಮಾಡಿಕೊಳ್ಳಬೇಕು' ಎಂದು ಆದೇಶಿಸಿತ್ತು.

ನಾಗರಾಜ್ 2012ರ ಜುಲೈನಲ್ಲಿ ಸೇವೆಯಿಂದ ನಿವೃತ್ತರಾದರು. ಹೊಸ ಸುತ್ತೋಲೆ ಅನುಸಾರ 300 ರಜೆಗಳ ಬದಲಿಗೆ 246 ಗಳಿಕೆ ರಜೆಗಳಿಗೆ ಮಾತ್ರವೇ ನಗದು ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ನಾಗರಾಜ್ ಪುನಃ ಕಾರ್ಮಿಕ ನ್ಯಾಯಾಲಯದ ಕದ ತಟ್ಟಿದ್ದರು. ಈ ಪ್ರಕರಣದಲ್ಲಿ, 'ಗಳಿಕೆ ರಜೆಯ ನಗದು ಸಂಬಂಧ ₹ 1,09,210 ನೀಡಬೇಕು ಮತ್ತು ಶೇ 12ರಷ್ಟು ಬಡ್ಡಿ ಪಾವತಿಸಬೇಕು' ಎಂದು ಕೆಎಸ್‌ಆರ್‌ಟಿಸಿಗೆ ಆದೇಶಿಸಲಾಗಿತ್ತು. ಈ ಆದೇಶಕ್ಕೆ ಪ್ರತಿಯಾಗಿ ಸಾರಿಗೆ ಸಂಸ್ಥೆಯು, 'ಸಿಬ್ಬಂದಿಯು ನಿಗದಿತ ಅವಧಿಯಲ್ಲಿ ಕಾರ್ಯ ನಿರ್ವಹಿಸಿಲ್ಲ ಹಾಗೂ ಅವರು ಆ ದಿನಗಳ ರಜೆಯ ಗಳಿಕೆಗೆ ನಗದು ಪಡೆಯಲು ಅರ್ಹರಲ್ಲ' ಎಂದು 2019ರ ಮಾರ್ಚ್‌ನಲ್ಲಿ ಹಿಂಬರಹ ನೀಡಿತ್ತು. ಇದನ್ನು ಪ್ರಶ್ನಿಸಿ ನಾಗರಾಜ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕಾವ್ಯಾನಂದ ಪುರಸ್ಕಾರಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ 'ಕಾವ್ಯಾನಂದ ಪುರಸ್ಕಾರ'ಕ್ಕೆ ಕಾವ್ಯ ಕೃತಿಗಳನ್ನು ಆಹ್ವಾನಿಸಿದೆ.

2021 ಹಾಗೂ 2022ರಲ್ಲಿ ಪ್ರಕಟಗೊಂಡ ಕಾವ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ಪುರಸ್ಕಾರಕ್ಕೆ ಪರಿಗಣಿಸಲಾಗುತ್ತದೆ. ಈ ಪುರಸ್ಕಾರ ₹ 50 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಆಸಕ್ತರು, ತಮ್ಮ ಕೃತಿಯ ಮೂರು ಪ್ರತಿಗಳನ್ನು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಶ್ರೀಗಿರಿ, 4/5ಎ, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560052 ಈ ವಿಳಾಸಕ್ಕೆ ಜುಲೈ 31ರೊಳಗೆ ಕಳುಹಿಸುವಂತೆ ಟ್ರಸ್ಟಿನ ಅಧ್ಯಕ್ಷೆ ವಿಜಯಾ ನಂದೀಶ್ವರ ಮಾಹಿತಿ ನೀಡಿದ್ದಾರೆ.

ಸಂಪರ್ಕಕ್ಕೆ: 080 22264361

ದಕ್ಷಿಣ ಒಳನಾಡಿನಲ್ಲಿ ಬಿರುಗಾಳಿ ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡು, ಉತ್ತರ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಶನಿವಾರ ಹಾಗೂ ಭಾನುವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಬಿರುಗಾಳಿ ಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಬೀಸಲಿದೆ. ಕೆಲವು ಜಿಲ್ಲೆಗಳಲ್ಲಿ ಉಷ್ಣಾಂಶವು 2 ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆಯ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ 5 ಸೆಂ.ಮೀ, ಚಾಮರಾಜನಗರದ ಕೊಳ್ಳೆಗಾಲ, ಹಾಸನದ ಕೊಣನೂರು, ವಿಜಯನಗರದ ಹೊಸಪೇಟೆಯಲ್ಲಿ ತಲಾ 4 ಸೆಂ.ಮೀ ಮಳೆಯಾಗಿದೆ.

रजिस्ट्री सं.डी.एल - 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 27042023-245500
CG-DL-E-27042023-245500
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 1856] नई दिल्ली, बृहस्पतिवार, अप्रैल 27, 2023/ वैशाख 7, 1945
No. 1856] NEW DELHI, THURSDAY, APRIL 27, 2023/VAISAKHA 7, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 27ನೇ ಏಪ್ರಿಲ್, 2023

ಎಸ್.ಓ. ನಂ.1944(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ಹಾಸನ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 ರವರೆಗೆ ರಸ್ತೆ ನಿರ್ಮಾಣ (ಬಾಣಾವಾರ – ಹುಳಿಯಾರು ಸೆಕ್ಷನ್),** (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–234, ಪಿ.ಡಬ್ಲ್ಯೂ.ಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಕರ್ನಾಟಕ ರಾಜ್ಯದ ಹಾಸನ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 ರವರೆಗೆ ರಸ್ತೆ ನಿರ್ಮಾಣ (ಬಾಣಾವಾರ – ಹುಳಿಯಾರು ಸೆಕ್ಷನ್) ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಹಾಸನ

ಕ್ರ ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ. ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
		ತಾಲ್ಲೂಕು : ಅರಸೀಕೆರೆ			
		ಗ್ರಾಮ: ಅರೇಹಳ್ಳಿ			
1	19/2	ಖಾಸಗಿ	ಖುಷ್ಕಿ	0.0404684	0.0404684
		ಗ್ರಾಮ: ಬಾಣಾವಾರ			
1	89	ಖಾಸಗಿ	ಭಾಗಾಯ್ತು	0.0227635	0.0227635
2	90	ಖಾಸಗಿ	ಭಾಗಾಯ್ತು	0.1011710	0.1011710
3	91	ಖಾಸಗಿ	ಭಾಗಾಯ್ತು	0.0809368	0.0809368
4	92	ಖಾಸಗಿ	ಭಾಗಾಯ್ತು	0.0252928	0.0252928
5	96/1	ಖಾಸಗಿ	ಭಾಗಾಯ್ತು	0.0404684	0.0404684
6	ಗ್ರಾಮಠಾಣ	ಸರ್ಕಾರಿ	ಗ್ರಾಮಠಾಣ	0.6373773	0.6373770
		ಗ್ರಾಮ: ಗಂಜಿಗೆರೆ			
1	58/2	ಖಾಸಗಿ	ಖುಷ್ಕಿ	0.0151757	0.0151757
2	59/2A	ಖಾಸಗಿ	ಖುಷ್ಕಿ	0.0252928	0.0252928
		ಗ್ರಾಮ: ಕಲ್ಲುಸಾದರಹಳ್ಳಿ			
1	120/2	ಖಾಸಗಿ	ಖುಷ್ಕಿ	0.0379391	0.0379391
2	120/4	ಖಾಸಗಿ	ಖುಷ್ಕಿ	0.0025293	0.0025293
3	40/1C	ಖಾಸಗಿ	ಖುಷ್ಕಿ	0.0101171	0.0101171
4	40/4B2	ಖಾಸಗಿ	NAK	0.0252928	0.0252928
5	40/4B3	ಖಾಸಗಿ	ಖುಷ್ಕಿ	0.2529280	0.2529280
6	40/5	ಖಾಸಗಿ	ಖುಷ್ಕಿ	0.0050586	0.0050586
7	40/6	ಖಾಸಗಿ	ಖುಷ್ಕಿ	0.0126464	0.0126464
		ಗ್ರಾಮ: ಕಣಕಟ್ಟೆ			
1	171	ಸರ್ಕಾರಿ	ಸರ್ಕಾರಿ	0.1264638	0.1264640
2	209	ಸರ್ಕಾರಿ	ಸರ್ಕಾರಿ ಟ್ಯಾಂಕ್	0.1264638	0.1264640
3	ಗ್ರಾಮಠಾಣ	ಸರ್ಕಾರಿ	ಗ್ರಾಮಠಾಣ	0.5083843	0.5083840
		ಗ್ರಾಮ: ಮಲ್ಲಾಪುರ			
1	18/1	ಖಾಸಗಿ	ಖುಷ್ಕಿ	0.0126464	0.0126464
2	19/12	ಖಾಸಗಿ	ಖುಷ್ಕಿ	0.0025293	0.0025293
3	19/4	ಖಾಸಗಿ	ಖುಷ್ಕಿ	0.0075878	0.0075878
4	19/5	ಖಾಸಗಿ	ಖುಷ್ಕಿ	0.0025293	0.0025293
		ಗ್ರಾಮ: ಮಣಕತ್ತೂರು			
1	95	ಸರ್ಕಾರಿ	ಸರ್ಕಾರಿ	0.3237470	0.3237470
		ಗ್ರಾಮ: ಶಾಣೆಗೆರೆ			
1	2	ಸರ್ಕಾರಿ	ಗ್ರಾಮಠಾಣ	0.0328806	0.0328806
2	3/1A5	ಖಾಸಗಿ	ಖುಷ್ಕಿ	0.0025293	0.0025293
3	3/1A6	ಖಾಸಗಿ	ಖುಷ್ಕಿ	0.0404684	0.0404684
4	3/2	ಖಾಸಗಿ	ಖುಷ್ಕಿ	0.0505855	0.0505855
		ಗ್ರಾಮ: ಶಂಕರನಹಳ್ಳಿ			
1	10	ಸರ್ಕಾರಿ	ಸರ್ಕಾರಿ	0.7941924	0.7941920
2	47	ಖಾಸಗಿ	ಖುಷ್ಕಿ	0.0556410	0.0556410
		ಗ್ರಾಮ: ಸೋಮಶೆಟ್ಟಿ ಹಳ್ಳಿ			
1	71/1B	ಖಾಸಗಿ	ಖುಷ್ಕಿ	0.0278220	0.0278220
			ಒಟ್ಟು	**3.4499**	**3.4499**

[F. No. NH-234-KNT-2017-18-870/3A1]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

रजिस्ट्री सं.डी.एल - 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 27042023-245493
CG-DL-E-27042023-245493
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 1858] नई दिल्ली, बृहस्पतिवार, अप्रैल 27, 2023/ वैशाख 7, 1945
No. 1858] NEW DELHI, THURSDAY, APRIL 27, 2023/VAISAKHA 7, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 27ನೇ ಏಪ್ರಿಲ್, 2023

ಎಸ್.ಓ. ನಂ.1946 (ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವಾರ – ಹುಳಿಯಾರು ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ,** (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–234, ಪಿ.ಡಬ್ಲ್ಯೂ.ಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವಾರ – ಹುಳಿಯಾರು ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ, ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಚಿಕ್ಕಮಗಳೂರು

ಕ್ರ ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ. ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
		ತಾಲ್ಲೂಕು : ಕಡೂರು			
		ಗ್ರಾಮ: ತಿಮ್ಮಲಾಪುರ			
1	40	ಸರ್ಕಾರಿ	ಸರ್ಕಾರಿ	0.0175000	0.0175000
			ಒಟ್ಟು	**0.0175**	**0.0175**

[F. No. NH-234-KNT-2017-18-870/3A3]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

रजिस्ट्री सं.डी.एल - 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 27042023-245499
CG-DL-E-27042023-245499
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 1857] नई दिल्ली, बृहस्पतिवार, अप्रैल 27, 2023/ वैशाख 7, 1945
No. 1857] NEW DELHI, THURSDAY, APRIL 27, 2023/VAISAKHA 7, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 27ನೇ ಏಪ್ರಿಲ್, 2023

ಎಸ್.ಓ. ನಂ.1945 (ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವಾರ – ಹುಳಿಯಾರು ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ,** (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–234, ಪಿ.ಡಬ್ಲ್ಯೂ.ಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವಾರ – ಹುಳಿಯಾರು ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ, ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ತುಮಕೂರು

ಕ್ರ ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ. ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
		ತಾಲ್ಲೂಕು : ಚಿಕ್ಕನಾಯಕನಹಳ್ಳಿ			
		ಗ್ರಾಮ: ಬೊಮ್ಮೇನಹಳ್ಳಿ			
1	48	ಖಾಸಗಿ	ಖುಷ್ಕಿ	0.0075878	0.0075878
		ಗ್ರಾಮ: ಚಿಕ್ಕಯ್ಯನಗೆರೆ			
1	77	ಖಾಸಗಿ	ಬಾಗಾಯ್ತು	0.0050586	0.0050586
2	78	ಖಾಸಗಿ	ಬಾಗಾಯ್ತು	0.0075878	0.0075878
		ಗ್ರಾಮ: ದೊಡ್ಡಹುಲ್ಲೇನಹಳ್ಳಿ			
1	52/1	ಖಾಸಗಿ	ಖುಷ್ಕಿ	0.0202342	0.0202342
		ಗ್ರಾಮ: ಹಾಲುಮಲ್ಲೇದೇವರ ಕಾವಲ್			
1	487	ಖಾಸಗಿ	ಖುಷ್ಕಿ	0.0278220	0.0278220
		ಗ್ರಾಮ: ನಡುವನಹಳ್ಳಿ			
1	22	ಖಾಸಗಿ	ಖುಷ್ಕಿ	0.0025293	0.0025293
			ಒಟ್ಟು	**0.0708**	**0.0708**

[F. No. NH-234-KNT-2017-18-870/3A2]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

ಅಭಿಮತ



ಸುಭಾಷಿತ

ಕ್ರಾಂತಿ ಎಂದರೆ ಹಳೆಯದನ್ನೆಲ್ಲ ನಾಶ ಮಾಡುವುದು ಎಂದಲ್ಲ. ಹಳೆಯದರಲ್ಲಿ ಏನೇನು ಒಳ್ಳೆಯದಿದೆಯೋ ಅದೆಲ್ಲವನ್ನೂ ಉಳಿಸಿಕೊಂಡು ಹೊಸ ಬದುಕನ್ನು ಕಟ್ಟುವುದು. -ಜಿ.ಎಸ್.ಶಿವರುದ್ರಪ್ಪ

ಸಂಸತ್ತಿನ ಹೊಸ ಕಟ್ಟಡ ಉದ್ಘಾಟನೆ ಆರಂಭದಲ್ಲಿಯೇ ತಪ್ಪು ನಡೆ ಬೇಡ

ಸಂಸತ್ತಿನ ಹೊಸ ಕಟ್ಟಡವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ ಎಂಬುದು ಹಲವು ರಾಜಕೀಯ ಪಕ್ಷಗಳಿಂದ ಹಾಗೂ ಬೇರೆ ಬೇರೆ ವರ್ಗಗಳಿಗೆ ಸೇರಿದ ಜನರಿಂದ ಟೀಕೆಗೆ ಗುರಿಯಾಗಿದೆ. ಉದ್ಘಾಟನೆಯ ಗೌರವವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕೊಡುವ ಬದಲು, ಉದ್ಘಾಟನಾ ಸಮಾರಂಭದಲ್ಲಿ ತಾವೇ ಕೇಂದ್ರ ಸ್ಥಾನದಲ್ಲಿ ಕಾಣಿಸಿಕೊಳ್ಳಬೇಕು ಎಂಬುದು ಪ್ರಧಾನಿ ಮೋದಿ ಅವರ ಆಲೋಚನೆ. ಇದರ ಸುತ್ತ ವಿವಾದ ಉಂಟಾಗುವುದನ್ನು ತಡೆಯಬಹುದಿತ್ತು. ಸಾಂವಿಧಾನಿಕವಾಗಿ ಸೂಕ್ಷ್ಮವಾಗಿರುವ ವಿಚಾರಗಳನ್ನು ಕೇಂದ್ರವು ಉಪೇಕ್ಷೆ ಮಾಡಿರುವುದು ವಿವಿಧ ವಲಯಗಳಲ್ಲಿ ಕೋಪಕ್ಕೆ ಕಾರಣವಾಗಿದೆ. ಹೊಸ ಕಟ್ಟಡದ ಉದ್ಘಾಟನಾ ಕಾರ್ಯಕ್ರಮವನ್ನು ತಾವು ಬಹಿಷ್ಕರಿಸುವುದಾಗಿ ಹಲವು ರಾಜಕೀಯ ಪಕ್ಷಗಳು ಹೇಳಿವೆ. ಆದರೆ, ಇದು ಮುಂದಿನ ದಿನಗಳಲ್ಲಿ ಸಂಸತ್ತಿನ ಕಾರ್ಯಕಲಾಪಗಳ ದೃಷ್ಟಿಯಿಂದ ಒಳ್ಳೆಯದಲ್ಲ.

ರಾಷ್ಟ್ರಪತಿಯು ಭಾರತ ಎಂಬ ಗಣರಾಜ್ಯದ ಸಾಂವಿಧಾನಿಕ ಮುಖ್ಯಸ್ಥರು. ಸಂವಿಧಾನದ 79ನೆಯ ವಿಧಿಯು 'ಒಕ್ಕೂಟಕ್ಕೆ ಒಂದು ಸಂಸತ್ತು ಇರಬೇಕು. ರಾಷ್ಟ್ರಪತಿ, ರಾಜ್ಯಸಭೆ ಮತ್ತು ಲೋಕಸಭೆಯನ್ನು ಅದು ಒಳಗೊಂಡಿರಬೇಕು' ಎಂದು ಹೇಳುತ್ತದೆ. ಅಂದರೆ ರಾಷ್ಟ್ರಪತಿ ಬಹಳ ವಿಶಿಷ್ಟವಾದ ಸ್ಥಾನ ಹೊಂದಿದ್ದಾರೆ. ಅವರು ಕಾರ್ಯಾಂಗದ ಮುಖ್ಯಸ್ಥರು, ಸಂಸತ್ತು ರೂಪಿಸುವ ಶಾಸನಗಳಿಗೆ ಅಂತಿಮ ಮುದ್ರೆ ಹಾಕಬೇಕಿರುವುದು ರಾಷ್ಟ್ರಪತಿ. ಸಂಸತ್ ಭವನದಂತಹ ರಾಷ್ಟ್ರದ ಹೆಗ್ಗುರುತುಗಳನ್ನು ಯಾರು ಉದ್ಘಾಟಿಸಬೇಕು ಎಂಬ ಬಗ್ಗೆ ಸಂವಿಧಾನದಲ್ಲಿ ಉಲ್ಲೇಖವಿಲ್ಲ. ಏಕೆಂದರೆ, ಸಂವಿಧಾನ ರೂಪಿಸಿದವರಿಗೆ ಆ ದಿನಗಳಲ್ಲಿ ಯಾವುದೇ ನಿಯಮ ರೂಪಿಸುವ ಅಗತ್ಯ ಎದುರಾಗಿರಲಿಕ್ಕಿಲ್ಲ. ಆದರೆ ಸರ್ಕಾರ ಹಾಗೂ ವಿರೋಧ ಪಕ್ಷಗಳು ಈ ವಿಚಾರದಲ್ಲಿ ಸಾಂವಿಧಾನಿಕ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಂಡು, ತಮ್ಮ ನಡೆಯು ತಮಗೆ ಕೀರ್ತಿ ತರುವ ರೀತಿಯಲ್ಲಿ ವರ್ತಿಸಬೇಕು. ಇಂತಹ ವಿಷಯಗಳಲ್ಲಿ ಬರೀ ರಾಜಕೀಯ ಲೆಕ್ಕಾಚಾರಗಳ ಆಧಾರದಲ್ಲಿ ಮುಂದಡಿ ಇರಿಸಬಾರದು. ಈ ಹೊತ್ತಿನಲ್ಲಿ ಬಿಜೆಪಿ ನಾಯಕರು, ಪ್ರತಿಪಕ್ಷಗಳ ಆರೋಪಗಳಿಗೆ ಪ್ರತಿಯಾಗಿ, ಹಿಂದೆ ಸಂಸತ್ ಭವನದ ಅನೆಕ್ಸ್ ಕಟ್ಟಡ ಹಾಗೂ ಗ್ರಂಥಾಲಯ ಕಟ್ಟಡ ಉದ್ಘಾಟನೆ ಯಾರು ಮಾಡಿದ್ದರು ಎಂಬುದನ್ನು ಆಧಾರವಾಗಿ ಇರಿಸಿಕೊಂಡು ಪ್ರತ್ಯಾರೋಪದಲ್ಲಿ ತೊಡಗಿದ್ದಾರೆ. ಸರ್ಕಾರದ ಮುಖ್ಯಸ್ಥರಾಗಿ ಸಂಸತ್ತಿನ ಸದಸ್ಯರಾಗಿ ಉದ್ಘಾಟಿಸುವ ಹಕ್ಕು ಪ್ರಧಾನಿಗೆ ಇದೆ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಆದರೆ ಪ್ರಧಾನಿಯು ಸಂಸತ್ತಿಗೆ ಉತ್ತರದಾಯಿ. ಹೀಗಾಗಿ, ರಾಷ್ಟ್ರಪತಿ ಹೊಂದಿರುವ ಸ್ಥಾನಕ್ಕೆ ಸರಿಸಮನಾದ ಸ್ಥಾನವನ್ನು ಪ್ರಧಾನಿ ಹೊಂದಿಲ್ಲ ಎಂಬ ಸತ್ಯವನ್ನು ಅವರು ಅಂಗೀಕರಿಸಬೇಕಿದೆ.



ಸರ್ಕಾರ ಹಾಗೂ ವಿರೋಧ ಪಕ್ಷಗಳು ಈ ವಿಚಾರದಲ್ಲಿ ಬರೀ ರಾಜಕೀಯ ಲೆಕ್ಕಾಚಾರಗಳನ್ನು ಹಾಕದೆ, ಸಾಂವಿಧಾನಿಕ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಂಡು ಮುನ್ನಡೆಯಬೇಕು

ರಾಷ್ಟ್ರೀಯ ಯುದ್ಧ ಸ್ಮಾರಕವನ್ನು ಪ್ರಧಾನಿಯವರೇ ಉದ್ಘಾಟಿಸಿದರು. ಆದರೆ, ದೇಶದ ಸಶಸ್ತ್ರ ಪಡೆಗಳ ಪರಮೋಚ್ಚ ನಾಯಕಿ ಆಗಿರುವ ರಾಷ್ಟ್ರಪತಿ ಮುರ್ಮು ಅವರು ಅದನ್ನು ಉದ್ಘಾಟಿಸಬೇಕಿತ್ತು. ಈ ಉದ್ಘಾಟನೆಯನ್ನು ಪ್ರಧಾನಿ ತಾವೇ ಮಾಡುವ ಮೂಲಕ, ಪ್ರಧಾನಿಗೆ ಹೆಚ್ಚಿನ ಆದ್ಯತೆ ನೀಡುವ ಪ್ರಯತ್ನವನ್ನು ಆರಂಭಿಸಿದಂತಾಗಿದೆ. ಮೇ 28ರಂದು ನಡೆಯಲಿರುವ ಸಂಸತ್ತಿನ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿಯೂ ಇದನ್ನು ಮತ್ತಷ್ಟು ಪಾಲಿಸಿದಂತಾಗುತ್ತದೆ. ಅಧಿಕಾರವನ್ನು ಮೆರೆಯುವ ಈ ಧೋರಣೆಯ ಕಾರಣದಿಂದ, ರಾಜ್ಯಸಭೆಯ ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿಯನ್ನು ಕೂಡ ಕಾರ್ಯಕ್ರಮದಿಂದ ದೂರ ಇರಿಸಲಾಗುತ್ತಿದೆ. ವಿರೋಧ ಪಕ್ಷಗಳ ಪ್ರತಿಭಟನೆಯು ಎತ್ತಿ ತೋರಿಸುತ್ತಿರುವುದು ಇಂತಹ ನಡೆಗಳನ್ನು. ಈ ನಡುವೆ, ಉದ್ಘಾಟನಾ ವಿಚಾರದಲ್ಲಿ ಏಕಪಕ್ಷೀಯ ಗದ್ದಲ ಉಂಟಾಗುತ್ತಿದೆ ಎಂಬುದು ಜನಸಾಮಾನ್ಯರಿಗೆ ಅರ್ಥವಾಗುತ್ತಿಲ್ಲ. ಉದ್ಘಾಟನಾ ಕಾರ್ಯಕ್ರಮವನ್ನು ವಿರೋಧ ಪಕ್ಷಗಳು ಬಹಿಷ್ಕರಿಸುತ್ತಿರುವುದು ಸಾಂಕೇತಿಕ ಮಾತ್ರ. ಏಕೆಂದರೆ, ಮುಂದೆ ಸಂಸತ್ತಿನ ಕಲಾಪಗಳು ಅದೇ ಕಟ್ಟಡದಲ್ಲಿ ನಡೆಯುತ್ತವೆ ಹಾಗೂ ತಾವು ಅಲ್ಲಿ ಕಲಾಪದಲ್ಲಿ ಭಾಗಿಯಾಗಬೇಕು ಎಂಬುದು ಆ ಪಕ್ಷಗಳಿಗೆ ಗೊತ್ತಿದೆ. ಹೊಸ ಕಟ್ಟಡದ ನಿರ್ಮಾಣದ ಶ್ರೇಯಸ್ಸನ್ನು ಪ್ರಧಾನಿ ಮೋದಿ ಅವರಿಂದ ಕಿತ್ತುಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಹೊಸ ಕಟ್ಟಡಕ್ಕೆ ವಿರೋಧ ವ್ಯಕ್ತವಾಗಿತ್ತು, ಈ ಕಟ್ಟಡವು ಮೂರ್ತರೂಪ ಪಡೆದಿರಲು ಕಾರಣ ಮೋದಿ ಅವರ ಆಲೋಚನೆ. ಇವೆಲ್ಲ ಏನೇ ಇದ್ದರೂ, ಕಟ್ಟಡವು ಅದೆಷ್ಟೇ ಭವ್ಯವಾಗಿದ್ದರೂ ಅದು ಒಂದು ಕಟ್ಟಡ ಮಾತ್ರ. ಸಂಸತ್ತಿನ ಭವ್ಯತೆ ಇರುವುದು ಕಟ್ಟಡದಲ್ಲಿ ಅಲ್ಲ. ಬದಲಿಗೆ, ಸಂಸತ್ತು ಹಾಗೂ ಪ್ರಧಾನಿಯ ಕಾರ್ಯನಿರ್ವಹಣೆಗೆ ಕೈಪಿಡಿಯಂತೆ ಇರುವ ಸಂವಿಧಾನದಲ್ಲಿ ಅದರ ಭವ್ಯತೆಯು ಅಡಕವಾಗಿದೆ. ಪ್ರಧಾನಿಯವರು ಈಗ ಮುತ್ಸದ್ದಿಯಂತೆ ಹೆಜ್ಜೆ ಇರಿಸಬೇಕು. ಅವರು ಪ್ರಜಾತಂತ್ರದ ಹೊಸ ದೇವಸ್ಥಾನವನ್ನು ದೇಶದ ಜನರಿಗೆ ಅರ್ಪಣೆ ಮಾಡುವಂತೆ ರಾಷ್ಟ್ರಪತಿಯವರನ್ನು ಕೋರಬೇಕು. ಆಗ ನವ ಭಾರತವು ಸರಿದಾರಿಯಲ್ಲಿ ಹೆಜ್ಜೆ ಇರಿಸಿದಂತಾಗುತ್ತದೆ.

ಸಾವಿಗೆ ಆತಂಕಪಡುವ ಅಗತ್ಯ ಇಲ್ಲವಾದರೂ ನಿಖರ ಕಾರಣ ತಿಳಿಯಬೇಕಾಗಿದೆ

ಕುನೊ ಉದ್ಯಾನ: ಚೀತಾಗಳ ಸಾವೇಕೆ?



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ


ನಮ್ಮ ದೇಶದ ವನ್ಯಜೀವಿ ಇತಿಹಾಸದಲ್ಲಿ ಚೀತಾಗಳ ಖಂಡಾಂತರ ಸ್ಥಳಾಂತರ ಅತ್ಯಂತ ಮಹತ್ವಾಕಾಂಕ್ಷೆಯ ಪ್ರಯೋಗ. ಒಂಬತ್ತು ತಿಂಗಳ ಹಿಂದೆ ಪ್ರಾರಂಭವಾದ ಈ ಯೋಜನೆಯಲ್ಲಿ, ನಮೀಬಿಯಾದಿಂದ ಎಂಟು ಮತ್ತು ದಕ್ಷಿಣ ಆಫ್ರಿಕಾದಿಂದ ಹನ್ನೆರಡು ಚೀತಾಗಳನ್ನು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಸ್ಥಳಾಂತರಿಸಲಾಗಿದೆ. ಅಲ್ಲಿ ನಿರ್ಮಿಸಲಾಗಿರುವ, 500 ಹೆಕ್ಟೇರ್‌ಗಳಲ್ಲಿ ಬೇಲಿ ಹಾಕಿದ ವಿಶೇಷ ಆವರಣದಲ್ಲಿ ಈ ಚೀತಾಗಳನ್ನು ನೆಲೆಗೊಳಿಸಿ, ಅವು ಅಲ್ಲಿಗೆ ಹೊಂದಿಕೊಂಡ ನಂತರ, ಮೊದಲ ಹಂತದಲ್ಲಿ ನಾಲ್ಕು ಚೀತಾಗಳನ್ನು ಆವರಣದಿಂದ ಹೊರತಂದು, ರಾಷ್ಟ್ರೀಯ ಉದ್ಯಾನದ 748 ಚದರ ಕಿ.ಮೀ. ವಿಸ್ತೀರ್ಣದ ಉದುರೆಲೆ ಕಾಡು ಮತ್ತು ಹುಲ್ಲುಗಾವಲಿನ ಆವಾಸದಲ್ಲಿ ಮುಕ್ತವಾಗಿ ಬಿಡಲಾಗಿದೆ. ಆದರೆ ಈ ನಡುವೆ ಐದು ವರ್ಷದ ಸಾಶಾ, ಆರು ವರ್ಷದ ಉದಯ್ ಮತ್ತು ಎರಡು ವರ್ಷದ ದಕ್ಷಾ, ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಾವಿಗೀಡಾಗಿವೆ. ಮಾರ್ಚ್ ತಿಂಗಳ ಅಂತ್ಯದಲ್ಲಿ ಹೆಣ್ಣು ಚೀತಾ ಜ್ವಾಲಾ ಹಾಕಿದ ನಾಲ್ಕು ಮರಿಗಳಲ್ಲಿ ಮೂರು ಸಾವನ್ನಪ್ಪಿವೆ. ಅತ್ಯಂತ ಸಡಗರ, ಸಂಭ್ರಮದಿಂದ ಪ್ರಾರಂಭವಾದ ಯೋಜನೆಯಲ್ಲಿ ಸಂಭವಿಸಿರುವ ಈ ಸಾವುಗಳು ಆತಂಕ, ಕಳವಳಕ್ಕೆ ದಾರಿ ಮಾಡಿಕೊಟ್ಟಿವೆ.

ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಸ್ಥಳಾಂತರಗೊಂಡ ಚೀತಾಗಳಲ್ಲಿ ಮೂರು ವಯಸ್ಕ ಚೀತಾಗಳು ಸತ್ತಿರುವುದು ದುರದೃಷ್ಟಕರ ಹೌದು. ಆದರೆ ನಿಸರ್ಗ ವ್ಯವಸ್ಥೆಯಲ್ಲಿ ಅದು ಅಸಹಜವೇನಲ್ಲ. ಆಫ್ರಿಕಾದ ಹುಲ್ಲುಗಾವಲು ಮೈದಾನ ಪ್ರದೇಶಗಳಲ್ಲಿ ಚೀತಾಗಳು ಬದುಕುಳಿಯುವ ಪ್ರಮಾಣ ಶೇ 10ಕ್ಕಿಂತ ಹೆಚ್ಚಿಲ್ಲ. 10 ಚೀತಾ ಮರಿಗಳಲ್ಲಿ ಬದುಕುಳಿದು ವಯಸ್ಕ ಹಂತ ತಲುಪುವುದು ಒಂದು ಚೀತಾ ಮಾತ್ರ. ಈ ಸ್ಥಳಾಂತರ ಯೋಜನೆಯನ್ನು ರೂಪಿಸುವ ಹಂತದಲ್ಲಿ, ಯೋಜನೆ ಪ್ರಾರಂಭವಾದ ಒಂದು ವರ್ಷದ ಅಂತ್ಯದ ವೇಳೆಗೆ, ಅಂದರೆ 2023ರ ಸೆಪ್ಟೆಂಬರ್- ಅಕ್ಟೋಬರ್ ವೇಳೆಗೆ, ಸ್ಥಳಾಂತರಿಸಿದ 20 ಚೀತಾಗಳಲ್ಲಿ ಗರಿಷ್ಠ 10 ಬದುಕುಳಿಯುವ ನಿರೀಕ್ಷೆಯನ್ನು ವ್ಯಕ್ತಪಡಿಸಲಾಗಿತ್ತು. ಈ ಕಾರಣದಿಂದ, ಮೂರು ಚೀತಾಗಳ ಸಾವು ತೀವ್ರ ಆತಂಕಕ್ಕೆ ಕಾರಣವಾಗಬೇಕಿಲ್ಲ ಎಂಬುದು ವನ್ಯಜೀವಿ ತಜ್ಞರ ಅಭಿಪ್ರಾಯ. ಆದರೆ ಚೀತಾಗಳ ಸಾವಿಗೆ ಕಾರಣ ತಿಳಿಯುವುದು ಮಾತ್ರ ತೀರಾ ಅಗತ್ಯ. ಈಗ ಲಭ್ಯವಿರುವ ಮಾಹಿತಿಯಂತೆ, ಸಾಶಾ ಮೂತ್ರಪಿಂಡದ ತೊಂದರೆಯಿಂದ, ಉದಯ್ ಹೃದಯ, ಶ್ವಾಸಕೋಶಗಳ ವೈಫಲ್ಯದಿಂದ ಮತ್ತು ದಕ್ಷಾ ಸಂತಾನೋತ್ಪಾದನೆಯ ಸಮಯದಲ್ಲಿ ಗಂಡು ಚೀತಾದ ಆಕ್ರಮಣಕಾರಿ ವರ್ತನೆಯಿಂದ ಸತ್ತಿವೆ. ಜ್ವಾಲಾದ ಮೂರು ಮರಿಗಳು ನಿತ್ರಾಣಗೊಂಡು, ಕುನೊದ 45 ಡಿಗ್ರಿ ಸೆಲ್ಸಿಯಸ್ ತಾಪದಲ್ಲಿ ನಿರ್ಜಲೀಕರಣದಿಂದ ಪ್ರಾಣಬಿಟ್ಟಿವೆ.

2008ರಷ್ಟು ಹಿಂದೆಯೇ 'ಸೈನ್ಸ್' ನಿಯತಕಾಲಿಕದಲ್ಲಿ ಪ್ರಕಟವಾದ ಸಂಶೋಧನಾ ಲೇಖನವೊಂದರಲ್ಲಿ, ನಮೀಬಿಯಾ, ದಕ್ಷಿಣ ಆಫ್ರಿಕಾದಲ್ಲಿ ಚೀತಾಗಳ ಸಾವಿಗೆ ಮೂತ್ರಪಿಂಡ ವೈಫಲ್ಯ ಬಹುಮುಖ್ಯ ಕಾರಣವೆಂದು ಗುರುತಿಸಲಾಗಿತ್ತು. ಅಮಿಲಾಯ್ಡೋಸಿಸ್ ಎಂಬ ಜೈವಿಕ ಪ್ರಕ್ರಿಯೆಯಲ್ಲಿ, ಚೀತಾಗಳ ದೇಹದ ಸಹಜ ಪ್ರೋಟೀನ್, ಅಸಹಜ (ಅಬ್‌ನಾರ್ಮಲ್) ಪ್ರೋಟೀನ್ ಆಗಿ ಪರಿವರ್ತನೆಗೊಂಡು, ಯಕೃತ್ತು ಮತ್ತು ಗುಲ್ಮಗಳಲ್ಲಿ ಸಂಗ್ರಹಗೊಂಡು, ಕಡೆಗೆ ಮೂತ್ರಪಿಂಡ ವಿಫಲವಾಗುವುದರ ಮೇಲೆ ಲೇಖನ ಬೆಳಕು ಚೆಲ್ಲಿತ್ತು. 1980-2008ರ ಅವಧಿಯಲ್ಲಿ, ಮುಕ್ತ ಸಂಚಾರಕ್ಕೆ ಅವಕಾಶವಿಲ್ಲದ ಚೀತಾಗಳಲ್ಲಿ ಅಮಿಲಾಯ್ಡೋಸಿಸ್ ಪ್ರಮಾಣ ಶೇ 20ರಿಂದ ಶೇ 70ಕ್ಕೆ ಏರಿತ್ತು. ದಕ್ಷಿಣ ಆಫ್ರಿಕಾದಿಂದ ಕುನೊಗೆ ಬಂದ 12 ಚೀತಾಗಳನ್ನು 9 ತಿಂಗಳಷ್ಟು ಮುಂಚೆಯೇ ಸೆರೆಹಿಡಿದು ವಿಶೇಷ ಆವರಣದಲ್ಲಿ ಇಡಲಾಗಿತ್ತು ಮತ್ತು ಸಾಶಾದ ಆರೋಗ್ಯ ಸರಿ ಇರಲಿಲ್ಲವೆಂಬ ಅಂಶಗಳು ಈ ಕಾರಣದಿಂದ ಮುಖ್ಯವಾಗುತ್ತವೆ.

ನಮೀಬಿಯಾದ ಅರಣ್ಯಗಳಲ್ಲಿ ಚೀತಾಗಳ ಸಾವಿಗೆ ಎರಡನೆಯ ಮುಖ್ಯ ಕಾರಣವೆಂದರೆ, ಬ್ಯಾಕ್ಟೀರಿಯಾಗಳಿಂದ ತಗಲುವ ಆಂತ್ರಾಕ್ಸ್ ಸೋಂಕು ರೋಗ. ನಮೀಬಿಯಾದ ಎಟೋಶ ರಾಷ್ಟ್ರೀಯ ಉದ್ಯಾನದಲ್ಲಿ ಆಂತ್ರಾಕ್ಸ್ ಪ್ರಕರಣಗಳು ಸಾಮಾನ್ಯ. ಈ ಸೋಂಕು ರೋಗಕ್ಕೆ ಬಲಿಯಾಗಿ ಸತ್ತ ಪ್ರಾಣಿಗಳ ಕಳೇಬರವನ್ನು ತಿನ್ನುವ ಜೀವಿಗಳಲ್ಲಿ, ಕಾಲಕ್ರಮೇಣ ಆಂತ್ರಾಕ್ಸ್ ವಿರುದ್ಧ ರೋಗರಕ್ಷೆ ಬೆಳೆದುಬರುತ್ತದೆ. ಆದರೆ ಚೀತಾಗಳು ಕಳೇಬರವನ್ನು ತಿನ್ನದೇ ಸ್ಪ್ರಿಂಗ್‌ಬೋಕ್ ಚಿಗರೆಗಳನ್ನು ಬೇಟೆಯಾಡಿ ತಿನ್ನುತ್ತವೆ. ಈ ಕಾರಣದಿಂದ ಆಫ್ರಿಕಾದ ಚೀತಾಗಳಲ್ಲಿ ಆಂತ್ರಾಕ್ಸ್ ವಿರುದ್ಧ ರೋಗರಕ್ಷೆ ಬೆಳೆದುಬಂದಿಲ್ಲ. ಭಾರತದ ವನ್ಯಜೀವಿಗಳಲ್ಲಿ ಆಂತ್ರಾಕ್ಸ್ ಪ್ರಮಾಣ ಬಹಳ ಕಡಿಮೆಯಾಗಿದ್ದರೂ ಈಗಾಗಿರುವ ಚೀತಾಗಳ ಸಾವಿನ ಕಾರಣದಿಂದ ಈ ಅಂಶದತ್ತ ಗಮನ ಹರಿಸಬೇಕಾಗುತ್ತದೆ.

ನಮೀಬಿಯಾದಲ್ಲಿರುವ ಲೆಬ್ನೀಜ್ ಇನ್‌ಸ್ಟಿಟ್ಯೂಟ್ ಆಫ್ ಝೂ ಆ್ಯಂಡ್ ವೈಲ್ಡ್‌ಲೈಫ್ ರಿಸರ್ಚ್ ಸಂಸ್ಥೆಯ ಸಂಶೋಧಕರು ಚೀತಾಗಳಿಗೆ ಸಂಬಂಧಿಸಿದ ದೀರ್ಘಕಾಲಿಕ ಅಧ್ಯಯನಗಳನ್ನು ನಡೆಸಿಕೊಂಡು ಬಂದಿದ್ದಾರೆ. 100 ಚದರ ಕಿ.ಮೀ. ಪ್ರದೇಶ ಒಂದು ಚಿರತೆಯನ್ನು ಪೋಷಿಸಬಲ್ಲದು ಎಂಬ ಅಂಶವನ್ನು ಈ ಅಧ್ಯಯನಗಳು ಸ್ಪಷ್ಟವಾಗಿ ತೋರಿಸಿವೆ. ಆದರೆ ಕುನೊ ಅರಣ್ಯ ಪ್ರದೇಶದಲ್ಲಿ ಚೀತಾಗಳಿಗೆ ಆಹಾರವಾಗುವ ಬಲಿಪ್ರಾಣಿಗಳ ದಟ್ಟಣೆ ಹೆಚ್ಚಾಗಿರುವುದರಿಂದ, 100 ಚದರ ಕಿ.ಮೀ. ಪ್ರದೇಶ 3 ಚೀತಾಗಳನ್ನು ಪೋಷಿಸಬಲ್ಲದು ಎಂಬ ಮೂಲ ಗ್ರಹಿಕೆಯೊಂದಿಗೆ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಈ ಗ್ರಹಿಕೆಗೆ ವೈಜ್ಞಾನಿಕ ಆಧಾರವಿಲ್ಲ ಎಂಬುದು ಲೆಬ್ನೀಜ್ ಸಂಶೋಧಕರ ಅಭಿಪ್ರಾಯ. ಚೀತಾಗಳ 'ಸ್ಪೇಶಿಯಲ್ ಎಕಾಲಜಿ'ಗೆ ಗಮನಕೊಡದೇ ಅವುಗಳನ್ನು ಕುನೊಗೆ ಸ್ಥಳಾಂತರಿಸಲಾಗಿದೆ ಎಂಬ ಟೀಕೆಯನ್ನೂ ಈ ಸಂಶೋಧಕರು ಮಾಡಿದ್ದಾರೆ.



ಜೀವಿ ಪ್ರಭೇದವೊಂದಕ್ಕೆ ಲಭ್ಯವಿರುವ ನೈಸರ್ಗಿಕ ವಾಸಕ್ಷೇತ್ರದ ವಿಸ್ತೀರ್ಣ, ಆ ಪ್ರಭೇದದ ಜೀವಿಗಳ ಸಂಖ್ಯೆ, ಚಲನವಲನ, ಇತರ ಜೀವಿ ಪ್ರಭೇದಗಳೊಂದಿಗೆ ವರ್ತಿಸುವ ರೀತಿಯಂತಹವುಗಳನ್ನು ಹೇಗೆ ಪ್ರಭಾವಿಸುತ್ತವೆ ಎಂಬುದನ್ನು ಸ್ಪೇಶಿಯಲ್ ಎಕಾಲಜಿ ತಿಳಿಸುತ್ತದೆ. ಈ ಅಧ್ಯಯನ ಕೂಡ, ಒಂದು ಚೀತಾ ಪೋಷಣೆಗೆ 100 ಚದರ ಕಿ.ಮೀ. ಅರಣ್ಯ ಪ್ರದೇಶ ಅಗತ್ಯವೆಂಬುದನ್ನು ಸೂಚಿಸುತ್ತದೆ. 'ಜರ್ನಲ್ ಆಫ್ ಕನ್ಸರ್‌ವೇಶನ್ ಸೈನ್ಸ್ ಆ್ಯಂಡ್ ಪ್ರಾಕ್ಟೀಸ್'ನ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಂಶೋಧನಾ ಲೇಖನವೊಂದರಲ್ಲಿ, ಗರಿಷ್ಠ 7ರಿಂದ 8 ಚೀತಾಗಳನ್ನು ಪೋಷಿಸಬಲ್ಲ, 748 ಚದರ ಕಿ.ಮೀ. ವಿಸ್ತೀರ್ಣದ ಕುನೊ ಉದ್ಯಾನದಲ್ಲಿ 20 ಚೀತಾಗಳನ್ನು ಸ್ಥಳಾಂತರಿಸಿರುವುದರಿಂದ, ಅವು ಉದ್ಯಾನದ ವ್ಯಾಪ್ತಿಯನ್ನು ದಾಟಿ, ಅರಣ್ಯದಂಚಿನ ಹಳ್ಳಿಗಳ ಸಮೀಪದಲ್ಲಿ ಮಾನವ- ವನ್ಯಜೀವಿ ಸಂಘರ್ಷ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗುತ್ತವೆಂಬ ಎಚ್ಚರಿಕೆಯಿದೆ. ಈ ಸೂಚನೆ ಈಗಾಗಲೇ ನಿಜವಾಗಿದೆ.

ನಮೀಬಿಯಾ, ದಕ್ಷಿಣ ಆಫ್ರಿಕಾದಲ್ಲಿ ಚೀತಾಗಳ ನಿರ್ವಹಣೆಗಿರುವ ಕ್ರಮಗಳತ್ತಲೂ ನಾವು ಆಸಕ್ತಿಯಿಂದ ಗಮನಹರಿಸಿಲ್ಲವೆಂಬ ದೂರಿದೆ. 2012ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಚೀತಾ ಯೋಜನೆ ಪ್ರಾರಂಭವಾದಾಗ, ಬೇಲಿ ಹಾಕಿದ 40 ವಿಶಾಲ ಆವರಣಗಳಲ್ಲಿ 247 ಚೀತಾಗಳನ್ನು ಇರಿಸಲಾಗಿತ್ತು. ಚೀತಾಗಳ ಉಳಿವಿಗೆ ಸವಾಲಾಗುವ ಸಂದರ್ಭ ಒದಗಿದಾಗ ಅವುಗಳನ್ನು ಬೇರೆಯ ಆವರಣಕ್ಕೆ ಸ್ಥಳಾಂತರಿಸುವ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಈ ಮುನ್ನೆಚ್ಚರಿಕೆಯಿಂದ 2012ರಲ್ಲಿ 247ರಷ್ಟಿದ್ದ ಚೀತಾಗಳು 2018ರಲ್ಲಿ 328 ಆಗಿದ್ದವು. ಇಂತಹ ಪರ್ಯಾಯ ವ್ಯವಸ್ಥೆ ಅಗತ್ಯವೆಂಬುದು ತಜ್ಞರ ಅಭಿಪ್ರಾಯ.

ಲೆಬ್ನೀಜ್ ಸಂಶೋಧಕರ ಅಧ್ಯಯನದಂತೆ, ಅರಣ್ಯ ಪ್ರದೇಶದಲ್ಲಿ ಚೀತಾಗಳ ಸರಹದ್ದು (ಟೆರಿಟರಿ) ಒಂದರ ಪಕ್ಕ ಒಂದರಂತೆ ಇರದೆ ಅವುಗಳ ನಡುವೆ ಅಂತರ ಇರುತ್ತದೆ. ಎರಡು ಚೀತಾಗಳ ಸರಹದ್ದಿನ ನಡುವಿನ ಪ್ರದೇಶದಲ್ಲಿ ಸರಹದ್ದನ್ನು ಸ್ಥಾಪಿಸಿಕೊಂಡಿರದ ಗಂಡು ಚೀತಾಗಳು ಮತ್ತು ಹೆಣ್ಣು ಚೀತಾಗಳಿರುತ್ತವೆ. ಇಂತಹ ನೈಸರ್ಗಿಕ ವ್ಯವಸ್ಥೆಗೆ ಅತಿ ವಿಶಾಲವಾದ ಆವಾಸ ಬೇಕು. ಕುನೊದಲ್ಲಿ ಇಂತಹ ವಿಶಾಲವಾದ ಆವಾಸವಿಲ್ಲದಿರುವುದರಿಂದ, ಕೆಲವು ಚೀತಾಗಳನ್ನು ರಾಜಸ್ಥಾನದ ಜೈಸಲ್ಮೇರ್ ಬಳಿಯ ಶಹ್‌ಘರ್ ದಿಣ್ಣೆ ಪ್ರದೇಶಕ್ಕೆ ಸ್ಥಳಾಂತರಿಸಬೇಕೆಂಬ ಸಲಹೆಯಿದೆ. ಚೀತಾಗಳ ಸಾವಿನಿಂದ ಕಳವಳಗೊಂಡಿರುವ ಸುಪ್ರೀಂ ಕೋರ್ಟ್ ಈ ಸಲಹೆಯನ್ನು ಪರಿಶೀಲಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮೇ 18ರಂದು ಸೂಚನೆ ನೀಡಿದೆ.

ರಾಜಸ್ಥಾನದಲ್ಲಿ ಬೇರೆ ಪಕ್ಷಕ್ಕೆ ಸೇರಿದ ಸರ್ಕಾರವಿದೆ ಎಂಬ ಕಾರಣಕ್ಕೆ ಈ ಸಲಹೆಗೆ ಗಮನಕೊಡದೇ ಇರಬೇಡಿ ಎಂದು ಲಘು ಧಾಟಿಯ ಚಾಟಿಯನ್ನೂ ಬೀಸಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಮೊದಲ ಬಾರಿಗೆ ಮಧ್ಯಪ್ರದೇಶ ಸರ್ಕಾರವೂ ಕೆಲವು ಚೀತಾಗಳನ್ನು ರಾಜಸ್ಥಾನಕ್ಕೆ ಸ್ಥಳಾಂತರಿಸಲು ಕೇಂದ್ರ ಸರ್ಕಾರದ ಅನುಮತಿ ಕೋರಿದೆ.

ಚುರುಮುರಿ



ಪೂರಕ ಗ್ಯಾರಂಟಿ!

• ತುರುವೇಕೆರೆ ಪ್ರಸಾದ್

ಯಾರ‍್ಯಾರು ಯಾವ್ಯಾವ ಗ್ಯಾರಂಟಿ ದಕ್ಕುಸ್ಕೊಬಹುದು ಅಂತ ಹರಟೆಕಟ್ಟೇಲಿ ಲೆಕ್ಕಾಚಾರ ಹಾಕ್ತಿದ್ರು. 'ನೀವೇನೇ ಹೇಳ್ರಲೇ, ಈ ಗ್ಯಾರಂಟಿಗಳ ಜೊತೆ ಪೂರಕ ಗ್ಯಾರಂಟಿ ಕೊಡ್ಲೇಬೇಕು' ಅಂದ ಮಾಲಿಂಗ.

'ಪೂರಕ ಗ್ಯಾರಂಟಿನಾ? ಅಂಗಂದ್ರೆ ಏನೋ?' ಹುಬ್ಬೇರಿಸಿದ ಗುದ್ದಿಂಗ.

'ಈ ಪೂರಕ ಬಜೆಟ್ಟು, ಪೂರಕ ಅನುದಾನ ಇರಕಿಲ್ವಾ? ಅಂಗೇಯ ಇದು ಪೂರಕ ಗ್ಯಾರಂಟಿ. ಈಗ ಪುಕ್ಕಟೆ ಕರೆಂಟು ಗ್ಯಾರಂಟಿ. ಅಂಗೇಯ ಕರೆಂಟ್ ಕೈ ಎತ್ಕಂಡಾಗ ಬ್ಯಾಟರಿ, ಯುಪಿಎಸ್ಸು, ಸೀಮೆಎಣ್ಣೆ ಕೊಡ್ಬೇಕು. ಅಂಗೇ ಒಂದೀಟು ಬುಡ್ಡಿ, ಬಲ್ಬುಗಳು ಜೊತೆಗೆ ಮಿಕ್ಸಿ, ಗ್ರೈಂಡರ್ ಬಡ್ಡಿ ಇಲ್ದೆ ಸಾಲ, ಕಂತು ಎಲ್ಲಾನೂ ಸರ್ಕಾರ ಕೊಡುಸ್ಬೇಕು. ಇದು ಪೂರಕ ಗ್ಯಾರಂಟಿ'.

'ಅಂಗಾರೆ ಹೊಸ ನಿರುದ್ಯೋಗಿಗಳಿಗೆ ಅಷ್ಟೇ ಅಲ್ಲ, ಹಳೇ ನಿರುದ್ಯೋಗಿಗಳಿಗೂ ಭತ್ಯೆ, 60 ವರ್ಷ ಪೂರಾ ನಿರುದ್ಯೋಗಿಯಾಗಿಯೇ ಕಳೆದ್ರೆ ನಿರುದ್ಯೋಗ ಮಾಸಾಶನ ಕೊಡ್ಬೇಕು ಅನ್ನು'.

'ಊ ಮತ್ತೆ, ಫ್ರೀಬಿ ಜೊತೆಗೆ ಒಂದೀಟು ಡೇಟಾ ಬಿಟ್ಟಿ ಕೊಟ್ರೆ ನಿರುದ್ಯೋಗಿಗಳು ಕೆಲಸನೂ ಕೇಳಕಿಲ್ಲ, ರೀಲ್ ನೋಡ್ಕಂಡು ಸರ್ಕಾರಗಳು ಏನೇ ರೈಲ್ ಬಿಟ್ರೂ ಮಾತಾಡದೆ ಮೊಬೈಲಲ್ಲೇ ಮುಳುಗಿ ಓಗಿರ್ತಾರೆ' ಎಂದ ಮಾಲಿಂಗ.

'ಅಂದ್ಮ್ಯಾಗೆ ಅಕ್ಕಿ ಜೊತೆಗೆ ಪುಳಿಯೋಗರೆ, ಚಿತ್ರಾನ್ನದ ಮಿಕ್ಸು, ಚಟ್ನಿನೂ ಪೂರಕ ಗ್ಯಾರಂಟಿ ಅಂತ ಕೊಡ್ಬೇಕಲ್ವಾ?'

'ಊ, ಕೊಡ್ಲೇಬೇಕು, ಈಗ ಮನೆ ಯಜಮಾನ್ತಿಗೆ ಎರಡು ಸಾವಿರ ಕೊಡ್ತೀವಿ ಅಂತ ಯೋಳವ್ರೆ. ನಮ್ ದುಡ್ಡೂ ಹೆಂಡ್ತಿನೇ ಕಿತ್ಕಂಡಿರ್ತಾಳೆ. ಅವಳಿಗೇ ಮತ್ತೆ ದುಡ್ ಕೊಡೋದು ಶಾನೆ ಅನ್ಯಾಯ. ಸರ್ಕಾರ 'ಬಡಪಾಯಿ ಯಜಮಾನ' ಅಥವಾ 'ದರಿದ್ರ ನಾರಾಯಣ' ಸ್ಕೀಂ ಮಾಡಿ, ಮನೆ ಯಜಮಾನನ ಅಕೌಂಟಿಗೇ ಸೀದಾ ದುಡ್ ಆಕೋ ಅಂಗಾಗ್ಬೇಕು'.

'ನಮ್ಗೆ ಬಾರ್ ಪಾಸ್ ಕೊಟ್ಬುಡ್ಲಿ. ಯಾವ ಗ್ಯಾರಂಟಿ, ಪೂರಕ ಗ್ಯಾರಂಟಿನೂ ಕೇಳ್ದೆ ಮೂರೊತ್ತೂ ನೈಂಟಿ ಒಡ್ಕಂಡ್ ಜೈ ಅಂದ್ಕಂಡು ಇದ್‌ಬಿಡ್ತೀವಿ'.

'ಹೌದೌದು, ಇದಕ್ಕೆ ನಾವೂ ಜೈ' ಅಂತ ಎಲ್ಲಾ ಕೈ ಎತ್ತಿ ಹಲ್ ಕಿರಿದ್ರು.

ದಿನದ ಟ್ವೀಟ್

ಅಧಿಕಾರದ ದುರ್ಬಳಕೆ



ತಮಿಳುನಾಡಿನ ಕರೂರು ಜಿಲ್ಲೆಯಲ್ಲಿ ಆದಾಯ ತೆರಿಗೆ ದಾಳಿ ಸಂದರ್ಭದಲ್ಲಿ, ಇಲಾಖೆ ಅಧಿಕಾರಿಗಳ ಮೇಲೆ ಹಲ್ಲೆ ಎಸಗಿ ಅವರ ವಾಹನಗಳನ್ನು ಹಾನಿಗೊಳಿಸಲಾಗಿದೆ. ಐ.ಟಿ ಅಧಿಕಾರಿಗಳು ತಮ್ಮ ಜೀವ ರಕ್ಷಣೆಗಾಗಿ ಜಿಲ್ಲೆಯ ಐದು ಕಡೆ ಪೊಲೀಸ್ ಠಾಣೆಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಇದು, ರಾಜಕೀಯ ಅಧಿಕಾರದ ದುರ್ಬಳಕೆಗೆ ನಿದರ್ಶನ!

ಚಿರಾಗ್ ಚೌಹಾಣ್, ಚಾರ್ಟರ್ಡ್ ಅಕೌಂಟೆಂಟ್

ಕಿಡಿನುಡಿ

60ನೇ ವಯಸ್ಸಿನಲ್ಲಿ ಎರಡನೇ ಬಾರಿಗೆ ಮದುವೆಯಾದರು ಎಂಬ ಒಂದೇ ಕಾರಣಕ್ಕಾಗಿ ಆಶಿಷ್ ವಿದ್ಯಾರ್ಥಿ ಅವರನ್ನು ಗುರಿಯಾಗಿಸಿ ಜನ ಅಪಹಾಸ್ಯ, ಅವಹೇಳನ ಹಾಗೂ ಟ್ರೋಲ್ ಮಾಡುತ್ತಿರುವುದೇಕೆ? ಅವರ ಪತ್ನಿಗೆ 50 ವರ್ಷ ವಯಸ್ಸು. ಅವರದು ಸಂತೋಷದಿಂದ ಕೂಡಿದ ಮುದ್ದಾದ ಜೋಡಿ...



ಶೆಫಾಲಿ ವೈದ್ಯ, ಲೇಖಕಿ

25 ವರ್ಷಗಳ ಹಿಂದೆ

ಬುಧವಾರ, 27-5-1998

• ಕೊರತೆ ಕೂಗಿಗೆ ತಡೆ ಹಾಕಿ ಮಾರುಕಟ್ಟೆಗೆ ಬಂದ ಪಠ್ಯಪುಸ್ತಕ

ಬೆಂಗಳೂರು, ಮೇ 26– 'ರಾಜ್ಯದಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ನಿಗದಿಪಡಿಸಿರುವ ಎಲ್ಲ ಪಠ್ಯಪುಸ್ತಕಗಳು ಮಾರುಕಟ್ಟೆಗೆ ಬಿಡುಗಡೆಯಾಗಿವೆ. ಈ ಬಾರಿ ಯಾವುದೇ ಜಿಲ್ಲೆಯಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಕೊರತೆ ಉಂಟಾಗದಂತೆ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

1998–99ನೇ ಸಾಲಿನ, ಅಗತ್ಯವಾದ ಪಠ್ಯ ಪುಸ್ತಕಗಳ ಮುದ್ರಣ ಮತ್ತು ಮಾರಾಟದ ಜವಾಬ್ದಾರಿಯನ್ನು 27 ಖಾಸಗಿ ಪ್ರಕಾಶಕರು–ಮುದ್ರಕರಿಗೆ ವಹಿಸಲಾಗಿದ್ದು, 'ಇವರೆಲ್ಲರೂ ಏಪ್ರಿಲ್ ಕೊನೆಯ ವೇಳೆಗೆ ಪಠ್ಯಪುಸ್ತಕಗಳನ್ನು ಮುದ್ರಿಸಿ ಮಾರಾಟಕ್ಕೆ ಬಿಡುಗಡೆ ಮಾಡಿದ್ದಾರೆ. ಇದರಿಂದಾಗಿ ಎಲ್ಲ ವಿದ್ಯಾರ್ಥಿಗಳಿಗೂ ಸಕಾಲದಲ್ಲಿ ಪುಸ್ತಕಗಳು ದೊರೆಯಲಿವೆ. ಈ ಎಲ್ಲ ಪಠ್ಯಪುಸ್ತಕಗಳು 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಉಲ್ಲೇಖಿಸಿರುವ 10 ಮೂಲಭೂತ ಅಂಶಗಳು ಹಾಗೂ 84 ಮಾನವೀಯ ಮೌಲ್ಯಗಳನ್ನು ಒಳಗೊಂಡಿವೆ' ಎಂದರು.

50 ವರ್ಷಗಳ ಹಿಂದೆ

ಭಾನುವಾರ, 27-5-1973

• ಆರು ತಿಂಗಳ ಕಾಲ ರೈಲ್ವೆ ಮುಷ್ಕರ ನಿಷಿದ್ಧ: ಕೇಂದ್ರದ ನಿರ್ಧಾರ

ನವದೆಹಲಿ, ಮೇ 26– ಭಾರತ ಸಂರಕ್ಷಣಾ ನಿಯಮಗಳ ಪ್ರಕಾರ, ಭಾರತೀಯ ರೈಲ್ವೆಯಲ್ಲಿ ಮುಷ್ಕರವನ್ನು ಆರು ತಿಂಗಳ ಕಾಲ ನಿಷೇಧಿಸಲು ಸರ್ಕಾರ ನಿರ್ಧರಿಸಿದೆ ಎಂದು ರೈಲ್ವೆ ಸಚಿವ ಎಲ್.ಎನ್.ಮಿಶ್ರಾ ಅವರು ಇಂದು ಇಲ್ಲಿ ಹೇಳಿದರು.

ಕ್ಷಾಮಪೀಡಿತ ಪ್ರದೇಶಗಳಿಗೆ ಅಗತ್ಯ ವಸ್ತುಗಳ ಸತತ ರವಾನೆಗೆ ಧಕ್ಕೆ ಉಂಟಾಗದಂತೆ ಎಚ್ಚರ ವಹಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಂಜೆ ಮಾಡಿದ ಆಕಾಶವಾಣಿ ಭಾಷಣದಲ್ಲಿ ಅವರು ತಿಳಿಸಿದರು.

ಚಳವಳಿ ಹೂಡಿರುವ ರೈಲ್ವೆ ಸಿಬ್ಬಂದಿಯ ಕೆಲವು ಕುಂದುಕೊರತೆಗಳು ನಿಜವಾಗಿ ನ್ಯಾಯಯುತವಾಗಿರಬಹುದೆಂದು ಒಪ್ಪಿಕೊಂಡ ಅವರು, ಆದರೆ ರಾಷ್ಟ್ರದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ಎದುರಿಸಲು, ಸಂಚಾರ ವ್ಯವಸ್ಥೆಗೆ ಧಕ್ಕೆ ತಗುಲದಂತೆ ವರ್ತಿಸುವಂತೆ ರೈಲ್ವೆ ಉದ್ಯೋಗಿಗಳಿಗೆ ಮನವಿ ಮಾಡಿಕೊಂಡರು.

• ಸಂಪದ್ಭರಿತ ಮಲೆನಾಡು ಅಭಿವೃದ್ಧಿಗೆ ಕ್ರಮ ಅಗತ್ಯ: ಸುಖಾಡಿಯಾ

ಬೆಂಗಳೂರು, ಮೇ 26– ಸಂಪದ್ಭರಿತ ಮಲೆನಾಡು ಪ್ರದೇಶದ ಅಭಿವೃದ್ಧಿಯನ್ನು ರಾಜ್ಯದ ಹಾಗೂ ದೇಶದ ಹಿತದೃಷ್ಟಿಯಿಂದ ಆದ್ಯತೆಯ ಮೇಲೆ ಕೈಗೊಳ್ಳಬೇಕೆಂದು ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಮತ್ತು ಕೇಂದ್ರ ಪ್ರವಾಸೋದ್ಯಮ ಸ್ಟೇಟ್ ಸಚಿವೆ ಡಾ. ಸರೋಜಿನಿ ಮಹಿಷಿ ಅವರು ಹೇಳಿದರು.

ಲಾಲ್‌ಬಾಗಿನ ಸ್ವರ್ಣ ಮಹೋತ್ಸವ ಭವನದಲ್ಲಿ ಮಲೆನಾಡು ಅಭಿವೃದ್ಧಿ ಕುರಿತಾದ ಎರಡು ದಿನಗಳ ಸಮ್ಮೇಳನವನ್ನು ಉದ್ಘಾಟಿಸಿದ ರಾಜ್ಯಪಾಲರು, ಮಲೆನಾಡಿನ ಸಮಸ್ಯೆ ಹಾಗೂ ಅಗತ್ಯಗಳ ಬಗ್ಗೆ ಎಚ್ಚರಿಕೆಯ ವಿಶ್ಲೇಷಣೆ ಮತ್ತು ನಿಲುವು ಅಗತ್ಯ ಎಂದರು.

ಸಂಗತ

ಸಾಧನೆಗೆ ಅಡ್ಡಿಯಾಗದಿರಲಿ ಸಹಜ ಕ್ರಿಯೆ

ಮುಟ್ಟಿನ ಸಹಜ ಕ್ರಿಯೆಯನ್ನು ಹೆಣ್ಣುಮಕ್ಕಳು ಎಲ್ಲದಕ್ಕೂ ನೆಪವಾಗಿ ಬಳಸಿಕೊಂಡರೆ, ತಮ್ಮ ಶೈಕ್ಷಣಿಕ ಮತ್ತು ಇತರ ಸಾಧನೆಗಳಿಗೆ ಸ್ವತಃ ಅಡ್ಡಗಾಲು ಹಾಕಿಕೊಂಡಂತೆ ಆಗುತ್ತದೆ

• ಡಾ. ವಿನಯ ಶ್ರೀನಿವಾಸ್

ಅವು ತೊಂಬತ್ತರ ದಶಕದ ದಿನಗಳು. ನಾನು ವೈದ್ಯಕೀಯ ಸ್ನಾತಕೋತ್ತರ ಅಧ್ಯಯನ ಮಾಡುತ್ತಿದ್ದೆ. ಹಾಸ್ಟೆಲಿನ ಕೋಣೆಯಲ್ಲಿ ನನ್ನ ಜೊತೆಗಿದ್ದಾಕೆ ಸ್ತ್ರೀ ಹಾಗೂ ಪ್ರಸೂತಿ ರೋಗ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿನಿ. ಒಂದು ಬೆಳಿಗ್ಗೆ ಆಕೆ ನೋವು ನಿವಾರಕ ಚುಚ್ಚುಮದ್ದು ಮತ್ತು ಸಿರಿಂಜ್‌ನೊಂದಿಗೆ ನನ್ನಲ್ಲಿಗೆ ಬಂದು, 'ಇದನ್ನು ಈ ಕೂಡಲೇ ನನಗೆ ಕೊಡು' ಎಂದಳು. ನಾನು, 'ಏನಾಯಿತು' ಎಂದು ಅಚ್ಚರಿಯಲ್ಲಿ ಕೇಳಿದಾಗ, ಆಕೆ ತನಗೆ ತನ್ನ ಪ್ರಾಧ್ಯಾಪಕರು ಆ ದಿನ ಮುಖ್ಯ ಶಸ್ತ್ರಚಿಕಿತ್ಸೆಗೆ ಸಹಾಯ ಮಾಡಲು ಅವಕಾಶ ಕೊಡುವವರಿದ್ದಾರೆಂದೂ, ಆದರೆ ತನಗೆ ತಿಂಗಳ ಋತುಸ್ರಾವದ ದಿನಗಳಾದ್ದರಿಂದ ವಿಪರೀತ ಕಿಬ್ಬೊಟ್ಟೆ ನೋವಿರುವುದೆಂದೂ, ಪ್ರಾಧ್ಯಾಪಕರು ಅನುಗ್ರಹಿಸಿರುವ ಆ ಅವಕಾಶವನ್ನು ತಾನು ತಪ್ಪಿಸಿಕೊಳ್ಳಲು ಇಷ್ಟಪಡುವುದಿಲ್ಲವೆಂದೂ, ಹಾಗಾಗಿ ಆ ಚುಚ್ಚುಮದ್ದನ್ನು ತನಗೆ ಕೊಡಬೇಕೆಂದೂ ಹೇಳಿದ್ದಳು.

ನೋವು ನಿವಾರಕ ಚುಚುಮದ್ದಿನ ಸಹಾಯ ಪಡೆದು, ಎಂದಿನ ಕ್ಷಮತೆಯನ್ನೇ ಕಾಪಾಡಿಕೊಂಡು ಶಸ್ತ್ರಚಿಕಿತ್ಸೆಯ ತಂತ್ರಗಳನ್ನು ಕಲಿಯುವ ಆಶಯ ಆಕೆಯದಾಗಿತ್ತು. ಎಲ್ಲವೂ ಅಂತೆಯೇ ನಡೆದು ಸಂಜೆ ಅತ್ಯಂತ ಖುಷಿಯಿಂದ, ಮಹತ್ವದ ಶಸ್ತ್ರಚಿಕಿತ್ಸೆಗೆ ಮೊದಲನೇ ಸಹಾಯಕಿ ಆಗಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಿತು ಎಂದು ಸಂಭ್ರಮಪಟ್ಟಿದ್ದಳು.

ಋತುಸ್ರಾವದ ನೋವಿನ ನೆಪವೊಡ್ಡಿ ತನ್ನ ವೃತ್ತಿ ಬದುಕಿನ ಮಹತ್ತರವಾದ ಕಲಿಕೆಯಿಂದ ವಂಚಿತಳಾಗದಿರಲು, ಲಭ್ಯವಿದ್ದ ಮಾರ್ಗೋಪಾಯ ಹುಡುಕಿ ಆಕೆ ಯಶಸ್ವಿಯಾಗಿದ್ದಳು. ಆದರೆ, ಮೂವತ್ತು ವರ್ಷದ ಹಿಂದಿನ ನನ್ನ ಸಹಪಾಠಿಯ ಇಂತಹ ದೃಢ ನಿಲುವೇ ಈ ವರ್ಷದ 'ಮುಟ್ಟಿನ ನೈರ್ಮಲ್ಯ ದಿನ'ದ (ಮೇ 28) ಪರಿಕಲ್ಪನೆಯೂ ಆಗಿದೆ. 'ಋತುಸ್ರಾವದ ನೆಪ ಹೇಳಿ ಜೀವನದ ಮಹತ್ವದ ವಿದ್ಯಮಾನಗಳಿಂದ ವಂಚಿತರಾಗದಿರಿ, ಅದೊಂದು ಸಹಜ ಮತ್ತು ಸ್ವಾಭಾವಿಕ ಕ್ರಿಯೆ ಎಂದು ಒಪ್ಪಿಕೊಳ್ಳಿ' ಎಂಬುದು ಈ ವರ್ಷದ ಕರೆ.

ನಿಜ, ಹೆಣ್ಣುಮಕ್ಕಳಲ್ಲಿ ಕಂಡುಬರುವ ಸ್ವಾಭಾವಿಕ ಶಾರೀರಿಕ ಕ್ರಿಯೆ ಮಾಸಿಕ ಋತುಸ್ರಾವ. ಆದರೆ ಇದರ ಅನುಭವ ಪ್ರತಿಯೊಬ್ಬ ಹೆಣ್ಣುಮಗಳಲ್ಲಿಯೂ ಭಿನ್ನ. ಕೆಲವರಲ್ಲಿ ಯಾವುದೇ ತೊಡಕು ತೊಂದರೆಗಳಿಲ್ಲದೆ ಸಂಭವಿಸುವ ಈ ಮಾಸಿಕ ಕ್ರಿಯೆ, ಇನ್ನು ಕೆಲವರನ್ನು ದೈಹಿಕವಾಗಿಯೂ ಮಾನಸಿಕವಾಗಿಯೂ ಕುಗ್ಗಿಸುತ್ತದೆ. ಆ ಸಮಯದಲ್ಲಿ ಅವರು ಓದು, ಆಟೋಟದಂತಹ ಚಟುವಟಿಕೆಗಳಲ್ಲಿ ಎಂದಿನಂತೆ ಆಸಕ್ತಿಯಿಂದ ಭಾಗವಹಿಸಲು ಕಷ್ಟ ಎನ್ನಿಸಬಹುದು. ಒಂದಿಷ್ಟು ಕುಟುಂಬಗಳಲ್ಲಿ ಪೋಷಕರೂ ಅದಕ್ಕೆ ಸಮ್ಮತಿಸುತ್ತಾ ಆ ದಿನಗಳಲ್ಲಿ ಮಕ್ಕಳು ಆಟೋಟಗಳಲ್ಲಿ ತೊಡಗಿಕೊಳ್ಳುವುದನ್ನು ಸಂಪೂರ್ಣ ನಿಷೇಧಿಸಬಹುದು. ಆದರೆ, ಪ್ರತಿ ತಿಂಗಳೂ ಇದು ಪುನರಾವರ್ತಿಸಿದಾಗ, ಮಕ್ಕಳು ಎಷ್ಟೋ ಚಟುವಟಿಕೆಗಳಲ್ಲಿ ಒಳ್ಳೆಯ ಅವಕಾಶಗಳಿಂದ ವಂಚಿತರಾಗಬಹುದು.

ಔದ್ಯೋಗಿಕ ಬದುಕಿನಲ್ಲಿಯೂ ಇಂತಹ ವಿನಾಯಿತಿ ಮುಂದುವರಿದು, ಸಂಸ್ಥೆಯ ಅಥವಾ ಕಚೇರಿಯ ಮುಖ್ಯ ಆಗುಹೋಗುಗಳಲ್ಲಿ ಭಾಗವಹಿಸಲು ಹೆಣ್ಣುಮಕ್ಕಳು ತಪ್ಪಿಸಿಕೊಳ್ಳುವಂತೆ ಆಗಬಹುದು. ಇದರಿಂದಾಗಿ ಮಹಿಳೆಯರು ಪ್ರತಿಭೆಯಿದ್ದೂ ಒಳ್ಳೆಯ ಸ್ಥಾನಗಳಿಗೆ ಏರುವುದರಿಂದ ಮತ್ತು ಮುಂದಿನ ಹುದ್ದೆಗಳಿಗೆ ಬಡ್ತಿ ಹೊಂದುವುದರಿಂದ ವಂಚಿತರಾಗುವುದೂ ಇದೆ. ಆದರೆ ಈ ದಿನಗಳಲ್ಲಿ ಹೆಣ್ಣುಮಕ್ಕಳ ಎಲ್ಲಾ ಕ್ಷೇತ್ರಗಳಲ್ಲಿನ ಸಾಧನೆಗಳಿಗೆ ನಾವು ಸಾಕ್ಷಿಯಾಗಿದ್ದೇವೆ. ಮಹಿಳೆಯರ ಈ ಹಾದಿ ಇನ್ನೂ ಸುಗಮವಾಗಬೇಕು, ಅವರು ಯಾವುದೇ ನಿರ್ಬಂಧ ಇಲ್ಲದೆ, ಅಳುಕಿಲ್ಲದೆ ಎಲ್ಲೆಡೆಯೂ ಕ್ಷಮತೆಯಿಂದ ತೊಡಗಿಕೊಳ್ಳಬೇಕು. ಇಂತಹದ್ದು ಸಾಧ್ಯವಾಗಬೇಕೆಂದರೆ, ಋತುಸ್ರಾವದ ಬಗ್ಗೆ ಇರುವ ಮೂಢ ನಂಬಿಕೆಗಳನ್ನು ಹೊಡೆದೋಡಿಸುವ ಕಾರ್ಯವಾಗಬೇಕು. ಜೊತೆಯಲ್ಲಿಯೇ ಋತುಸ್ರಾವವನ್ನು ನಿರ್ವಹಿಸಲು ಈ ದಿನಗಳಲ್ಲಿ ಲಭ್ಯವಿರುವ ನವೀನ ರೀತಿಯ ಸಾಧನಗಳ ಬಗ್ಗೆ ಅರಿವು ಮೂಡಿಸುವ ಕೆಲಸವೂ ಆಗಬೇಕು. ಇವೆಲ್ಲಕ್ಕಿಂತಲೂ ಮುಖ್ಯವಾಗಿ, ಇದೊಂದು ಸಹಜ ಕ್ರಿಯೆ, ಇದನ್ನು ಯಾವುದಕ್ಕೂ ನೆಪವಾಗಿ ಬಳಸಿಕೊಳ್ಳಬಾರದು ಎಂಬ ದೃಢ ನಿಲುವನ್ನು ಹೆಣ್ಣುಮಕ್ಕಳು ತಾಳಬೇಕು. ಆಗ ಎಲ್ಲವೂ ಸಾಧ್ಯ, ಸುಗಮ.



ಇದು ಒಂದು ಆಯಾಮವಾದರೆ, ಇನ್ನು ಕೆಲವೆಡೆ ಮುಟ್ಟಿನ ಕ್ರಿಯೆಯನ್ನು ಮೈಲಿಗೆಯಂತೆ ನೋಡುವುದು, ಮುಖ್ಯ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವುದನ್ನು ನಿಷೇಧಿಸುವುದು, ಆ ಸಮಯದಲ್ಲಿ ವಿಶ್ರಾಂತಿ ಬೇಕೆಂದು ಮನೆಯಲ್ಲಿಯೇ ಮಕ್ಕಳನ್ನು ಕೂರಿಸಿಕೊಳ್ಳುವುದು ನಡೆದೇ ಇದೆ. ಕುಟುಂಬದವರ ಈ ನಿಲುವನ್ನು ಕೆಲವೆಡೆ ಹೆಣ್ಣುಮಕ್ಕಳೂ ಬೆಂಬಲಿಸಿ ವಿನಾಯಿತಿ ಪಡೆಯುವುದುಂಟು. ಇದು ಹೀಗೆಯೇ ನಡೆದುಕೊಂಡು ಹೋದರೆ ನಷ್ಟ ಹೆಣ್ಣುಮಕ್ಕಳಿಗೇ. ಮುಂದುವರಿದ ವೈದ್ಯ ವಿಜ್ಞಾನದ ಸೌಲಭ್ಯವನ್ನು ಎಲ್ಲರೂ ಪಡೆಯಬೇಕು. ಸ್ತ್ರೀರೋಗ ತಜ್ಞರ ಸಲಹೆ ಮತ್ತು ಮಾರ್ಗದರ್ಶನ ಪಡೆದು, ಆ ಸಮಯದಲ್ಲಿ ಬಳಸಬಹುದಾದ ನವೀನ ಮಾದರಿಯ ಪರಿಕರಗಳ ನೆರವನ್ನು ಪಡೆದು, ಇತರ ದಿನಗಳಂತೆಯೇ ಆ ದಿನಗಳಲ್ಲಿಯೂ ಕ್ರಿಯಾಶೀಲರಾಗಿರಲು ಮನಸ್ಸು ಮಾಡಬೇಕು. ಇದಕ್ಕೆ ಪೋಷಕರು ಮತ್ತು ಕುಟುಂಬದ ಇತರ ಸದಸ್ಯರ ಸಹಾಯವೂ ಅತ್ಯಗತ್ಯ.

ಈ ದಿಸೆಯಲ್ಲಿ, ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳುವತ್ತ ಯುವತಿಯರು ಚಿತ್ತ ಹರಿಸಬೇಕು. ಪೌಷ್ಟಿಕ ಆಹಾರ, ನಿಯಮಿತ ವ್ಯಾಯಾಮ, ಬಹಳಷ್ಟು ನೀರು ಕುಡಿಯುವುದು, ಯೋಗ, ನಡಿಗೆ, ಪ್ರಾಣಾಯಾಮ, ಧ್ಯಾನದಂತಹ ಅಭ್ಯಾಸಗಳೂ ಸಹಕಾರಿ. ಆದರೆ ಎಲ್ಲಕ್ಕಿಂತ ಮುಖ್ಯವಾದದ್ದು ದೃಢ ನಿಲುವು ಮತ್ತು ಮನಸ್ಸನ್ನು ಅಣಿ ಮಾಡಿಕೊಳ್ಳುವುದು.

ವಾಚಕರ ವಾಣಿ

ಸರ್ಕಾರಿ ವಾಹನ: ದುರುಪಯೋಗ ಸಲ್ಲ

ಸರ್ಕಾರಿ ಅಧಿಕಾರಿಗಳು ವೃತ್ತಿಸಂಬಂಧಿತ ಕೆಲಸಗಳನ್ನು ತ್ವರಿತಗತಿಯಲ್ಲಿ ಮಾಡಲಿ ಎಂಬ ಸದುದ್ದೇಶದಿಂದ ರಾಜ್ಯ ಸರ್ಕಾರವು ಲಕ್ಷಾಂತರ ರೂಪಾಯಿ ವ್ಯಯಿಸಿ ವಿವಿಧ ಇಲಾಖೆಗಳಿಗೆ ವಾಹನಗಳನ್ನು ಕೊಡುತ್ತದೆ. ಆದರೆ ನಮ್ಮ ಅಧಿಕಾರಿಗಳಿಂದ ಇಂತಹ ವಾಹನಗಳ ದುರ್ಬಳಕೆ ಎಗ್ಗಿಲ್ಲದೆ ನಡೆಯುತ್ತದೆ. ಮನೆಗೆ ಸಂಬಂಧಿಸಿದ ಕೆಲಸ, ಹೆಂಡತಿ ಮಕ್ಕಳ ಸುತ್ತಾಟಕ್ಕೆ ಅವರು ಈ ವಾಹನಗಳನ್ನು ಬಳಸಿಕೊಳ್ಳುವ ದೃಶ್ಯಗಳನ್ನು ಸಾಮಾಜಿಕ ಜಾಲತಾಣದಲ್ಲಿ ನೋಡುತ್ತಿರುತ್ತೇವೆ. ಹಾಗಾಗಿ ಎಲ್ಲಾ ಸರ್ಕಾರಿ ಅಧಿಕಾರಿಗಳ ವಾಹನಗಳಿಗೆ, ವಿಶೇಷವಾಗಿ ಪೊಲೀಸರ ವಾಹನಗಳಿಗೆ ಜಿಪಿಎಸ್ ಅಳವಡಿಸಿ ಆಡಳಿತದಲ್ಲಿ ದಕ್ಷತೆ, ಕಾರ್ಯಕ್ಷಮತೆ ಹೆಚ್ಚಿಸಲು ಸರ್ಕಾರ ಮುಂದಾಗಬೇಕು.

ದೊರೆಸ್ವಾಮಿ, ಗದ್ದೆಬಿಂಡೇನಹಳ್ಳಿ, ಚನ್ನರಾಯಪಟ್ಟಣ

ನ್ಯಾಯದಂಡದಲ್ಲಿರಲಿ ಸಿಂಹ ಮುದ್ರಿಕೆ

ಹೊಸ ಸಂಸತ್ ಭವನದಲ್ಲಿ ಸ್ಪೀಕರ್ ಅವರ ಪೀಠದ ಬಳಿ 'ಸೆಂಗೋಲ್' ಅನ್ನು ಪ್ರತಿಷ್ಠಾಪಿಸುವ ಸುದ್ದಿಯು ಮಾಧ್ಯಮಗಳಲ್ಲಿ ಪ್ರಕಟವಾಗಿದೆ (ಪ್ರ.ವಾ., ಮೇ 23). ಸೆಂಗೋಲ್ ಅನ್ನುವುದು ತಮಿಳು ಪದ 'ಸೆಮ್ಮಯ್' ಮೂಲದ್ದಾಗಿದ್ದು, ನ್ಯಾಯಪರತೆ, ಧರ್ಮನಿಷ್ಠ ಎಂಬ ಅರ್ಥಗಳನ್ನು ನೀಡುತ್ತದೆ. ಚೋಳರ ಕಾಲದ ಈ ಸಾಂಪ್ರದಾಯಿಕ ರಾಜದಂಡದ ನೆತ್ತಿಯಲ್ಲಿ ನಂದಿ ವಿಗ್ರಹವಿದೆ. ಇದು ಚೋಳ ಅರಸರ ಶೈವ ಸಂಪ್ರದಾಯದ ಪ್ರತೀಕವೂ ಆಗಿದೆ. ಇದು ಆ ಕಾಲಕ್ಕೆ, ಆ ರಾಜತ್ವ ಸಂಪ್ರದಾಯಕ್ಕೆ ಸರಿಯಾಗಿಯೇ ಇದೆ. ಆದರೆ ಈಗ ಅದನ್ನು ಪ್ರತಿಷ್ಠಾಪಿಸುತ್ತಿರುವುದು ಇಡೀ ಭಾರತದ ಆಡಳಿತ ಕೇಂದ್ರವೂ ಪ್ರಜಾಪ್ರಭುತ್ವದ ಪ್ರತೀಕವೂ ಆದ ಸಂಸತ್ ಭವನದಲ್ಲಿ.

ಈಗ ದೇಶದ ಪರಮೋನ್ನತ ಸ್ಥಾನದಲ್ಲಿರುವುದು ಸ್ವತಂತ್ರ ಭಾರತ ಮಾನ್ಯ ಮಾಡಿರುವ 'ಸಂವಿಧಾನ'. ಈಗಿನ ರಾಷ್ಟ್ರಲಾಂಛನ ಅಥವಾ ಮುದ್ರೆಯಾಗಿ ಬಳಕೆಯಾಗುತ್ತಿರುವುದು ನಾಲ್ಕು ಸಿಂಹಗಳಿರುವ ಅಶೋಕ ಸ್ತಂಭ. ಇದು ಧರ್ಮನಿರಪೇಕ್ಷವೂ ನ್ಯಾಯಪರವೂ ಆದುದು, ಯಾವುದೇ ಒಂದು ಪ್ರಾಂತ್ಯ, ಧರ್ಮಕ್ಕೆ ಸೀಮಿತವಾದುದಲ್ಲ.

ವಾಸ್ತವವಾಗಿ ಸೆಂಗೋಲ್‌ಗೆ ಚಿನ್ನದ ಕೋಲು, ದಂಡ ಎಂಬ ಅರ್ಥವೂ ಇದೆ. ಆದ್ದರಿಂದ ಈಗಿನ ರಾಜದಂಡ ಸೆಂಗೋಲ್‌ನ ನೆತ್ತಿಯಲ್ಲಿ ನಂದಿ ವಿಗ್ರಹಕ್ಕೆ ಬದಲು ಪ್ರಜಾಪ್ರಭುತ್ವದ ಪ್ರತೀಕವಾದ ನಾಲ್ಕು ಸಿಂಹಗಳ ಮುದ್ರಿಕೆಯನ್ನು ಅಳವಡಿಸುವುದು ಅತ್ಯಂತ ಅರ್ಥಪೂರ್ಣವಾಗುತ್ತದೆ. ಈ ಹಿಂದೆಯೇ ಆಗಬೇಕಿದ್ದ ಈ ಕೆಲಸ ಈಗಲಾದರೂ ಆಗಬೇಕಿದೆ.

ಡಾ. ಟಿ.ಗೋವಿಂದರಾಜು, ಬೆಂಗಳೂರು

ಸೆಂಗೋಲ್ ಸ್ಥಾಪನೆ: ಅರ್ಥವಾಗದ ಔಚಿತ್ಯ

ಮೂರು ರಾಷ್ಟ್ರಗಳ ಪ್ರವಾಸದಿಂದ ಹಿಂತಿರುಗಿದ ಪ್ರಧಾನಿಯವರು 'ಪೂರ್ಣ ಬಹುಮತ ಇದ್ದುದಕ್ಕಾಗಿ ನನ್ನ, ಭಾರತದ ಮಾತುಗಳನ್ನು ಗಮನವಿಟ್ಟು, ಗೌರವದಿಂದ ಕೇಳಿದ್ದಾರೆ' ಎಂದಿದ್ದಾರೆ. ವಿದೇಶ ವ್ಯವಹಾರಗಳ ಸಚಿವ ಜೈಶಂಕರ್ ಅವರು ಆಸ್ಟ್ರೇಲಿಯಾದ ಅಧ್ಯಕ್ಷರು ಮೋದಿಯವರನ್ನು 'ದಿ ಬಾಸ್' ಎಂದುದನ್ನು, ಪಪುವಾ ನ್ಯೂ ಗಿನಿಯ ಪ್ರಧಾನಮಂತ್ರಿ 'ಗುರು, ವಿಶ್ವಗುರು' ಎಂದು ಕಾಲು ಮುಟ್ಟಿ ನಮಸ್ಕರಿಸಿದುದನ್ನು ಪ್ರಸ್ತಾಪಿಸಿ ಹೊಗಳಿದ್ದಾರೆ. ಪಕ್ಷವು ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ, ಮೋದಿಯವರು ಜೈತ್ರಯಾತ್ರೆ ಮಾಡಿಬಂದರೋ ಎಂಬಂತೆ ಪಕ್ಷದ ಅಧ್ಯಕ್ಷರು ಅಭಿನಂದಿಸಿದ್ದಾರೆ. ಈಗ ಹೊಸ ಸಂಸತ್ ಭವನದ ಉದ್ಘಾಟನೆಯೂ ಇಂತಹ ತೋರಿಕೆ ಕಾರ್ಯಕ್ರಮದ ಭಾಗವಾಗಬಹುದು (ಅಂದೇ 'ಮನ್ ಕೀ ಬಾತ್' ಇದೆ!).

ಸೆಂಗೋಲ್ (ಚಿನ್ನದ ರಾಜದಂಡ) ವಿಷಯದಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಚೋಳರ ಕಾಲದ ಕತೆಯನ್ನು ಹೇಳಿದರೆ, ಅಮಿತ್ ಶಾ ಅವರು 'ನೆಹರೂ ಅದಕ್ಕೆ ತಕ್ಕ ಗೌರವ ಸಲ್ಲಿಸಲಿಲ್ಲ' ಎಂದು ದೂರಿದ್ದಾರೆ. ಆ ದಂಡ ಅತ್ಯಂತ ಪ್ರಾಚೀನವಾದುದಲ್ಲ, 1947ರಲ್ಲಿ ಮಾಡಿಸಿದ್ದು. ಅದು ಕಲಾತ್ಮಕವಾಗಿರಬಹುದು, ಲೇಬಲ್ ಸರಿಪಡಿಸಿ ದೆಹಲಿಯ ಮ್ಯೂಸಿಯಂ ಒಂದರಲ್ಲಿ ಇಡಬಹುದು. ಆದರೆ ಸಂಸತ್ತಿನಲ್ಲಿ ಅದನ್ನು ಧಾರ್ಮಿಕ ವಿಧಿಗಳ ನಂತರ ಸ್ಥಾಪಿಸುವ ಔಚಿತ್ಯ ಅರ್ಥವಾಗದು. ಪ್ರಜಾಪ್ರಭುತ್ವ ಎಂದರೆ ಭವನಗಳಲ್ಲ, ಇಂಥ ವಸ್ತುಗಳಲ್ಲ. ಹೊಸ ಕಟ್ಟಡದಲ್ಲಿ ಸಂಸದರು ಹೆಚ್ಚು ಅರ್ಥಪೂರ್ಣವಾಗಿ ಕಾರ್ಯನಿರ್ವಹಿಸುತ್ತಾರೆಯೇ ಎನ್ನುವುದು ಮುಖ್ಯ. ತಿರುಕ್ಕುರಳ್‌ನ ಅನುವಾದದಂತೆ, ಸೆಂಗೋಲನ್ನು ತಮಿಳುನಾಡಿನಲ್ಲಿ ಒಂದಿಷ್ಟು ಸಂವೇದನೆ, ಬೆಂಬಲ ಗಳಿಸಿಕೊಳ್ಳಲು ಬಳಸಿಕೊಳ್ಳುವ ಇರಾದೆ ಇದ್ದೀತು. ಕರ್ನಾಟಕದ ಜನ ಎಚ್ಚರವಾಗಿ ಉಳಿದು, ಇಲ್ಲಿಂದ ಚುನಾಯಿತರಾಗಿ ಹೋಗಿರುವ ಸಂಸದರು ಇಂಥ ಪ್ರಚಾರದಲ್ಲಿ ಹೆಚ್ಚು ತೊಡಗಿದ್ದಾರೆಯೇ ಅಥವಾ ರಾಜ್ಯಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆಯೇ ಎಂಬುದನ್ನು ನಿರಂತರವಾಗಿ ಗಮನಿಸುತ್ತಿರಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸಿರಿಧಾನ್ಯ ಬೆಳೆಗೆ ರೈತರು ಸಜ್ಜಾಗಲಿ

ಸಿರಿಧಾನ್ಯಗಳಿಂದ ತಯಾರಾದ ಆಹಾರ ಸೇವನೆಯ ಮಹತ್ವ ಇತ್ತೀಚೆಗೆ ಹೆಚ್ಚು ಬೆಳಕಿಗೆ ಬರುತ್ತಿದೆ. ವಿಶ್ವಸಂಸ್ಥೆಯು 2023ನೇ ಸಾಲನ್ನು 'ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ' ಎಂದು ಘೋಷಣೆ ಮಾಡಿದೆ. ಆದರೆ ದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಇವುಗಳ ಉತ್ಪಾದನೆ ಕಡಿಮೆ ಇದೆ. ಬೇಡಿಕೆಯನ್ನು ಪೂರೈಸಲು ಹೆಚ್ಚಿನ ಬೆಲೆ ತೆತ್ತು ಹೊರ ರಾಜ್ಯಗಳಿಂದ ತರಿಸಿಕೊಳ್ಳಲಾಗುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಮಣ್ಣಿನ ಫಲವತ್ತತೆ, ನೀರು ಹಾಗೂ ಪೂರಕ ವಾತಾವರಣವಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಉತ್ಪಾದನೆಯಾಗುತ್ತಿಲ್ಲ.

ಈಗ ಮಳೆ ಬಿದ್ದಿದೆ. ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಜ್ಜಾಗುತ್ತಿದ್ದಾರೆ. ರಾಜ್ಯದಲ್ಲಿ ಸುಮಾರು 2.5 ಲಕ್ಷ ಹೆಕ್ಟೇರ್ ಬಂಜರು ಭೂಮಿ ಇದ್ದು, ಇದರಲ್ಲಿ ಮಳೆಯಾಶ್ರಯದಲ್ಲಿಯೇ ಸಿರಿಧಾನ್ಯವನ್ನು ಬೆಳೆಯಬಹುದು. ಹಾಗೆಯೇ, ತೆಂಗು ಮತ್ತು ಅಡಿಕೆಯಂಥ ದೀರ್ಘಾವಧಿ ಬೆಳೆಗಳ ಜೊತೆಗೆ ಅಂತರ ಬೇಸಾಯವಾಗಿ ಕೂಡ ಸಿರಿಧಾನ್ಯಗಳನ್ನು ಬೆಳೆಯಬಹುದು. ಇದರಿಂದ ಕೃಷಿ ಸಲುವಾಗಿ ಭೂಮಿಯನ್ನು ಸದ್ಬಳಕೆ ಮಾಡಿಕೊಂಡಂತಾಗುತ್ತದೆ. ಈ ಸಂಬಂಧ ರೈತರು ಕೃಷಿ ಇಲಾಖೆಯಿಂದ ಅಗತ್ಯ ತಂತ್ರಜ್ಞಾನದ ನೆರವು ಪಡೆದುಕೊಳ್ಳಬೇಕು. ಸರ್ಕಾರವು ರೈತರಿಗೆ ಕಡಿಮೆ ದರದಲ್ಲಿ ಬಿತ್ತನೆ ಬೀಜ ಒದಗಿಸಬೇಕು. ಇದರಿಂದ ಹೆಚ್ಚಿನ ರೈತರು ಸಿರಿಧಾನ್ಯ ಬೆಳೆದರೆ ಹೊರರಾಜ್ಯಗಳಿಂದ ಬರುವ ಸಿರಿಧಾನ್ಯದ ಪ್ರಮಾಣ ಕಡಿಮೆಯಾಗಿ ರಾಜ್ಯದಲ್ಲಿಯೇ ಅಗತ್ಯವಿರುವಷ್ಟು ಉತ್ಪಾದನೆಯಾಗುತ್ತದೆ. ಆಗ ಗ್ರಾಹಕರಿಗೆ ಕೂಡ ಕಡಿಮೆ ದರದಲ್ಲಿ ಸಿರಿಧಾನ್ಯಗಳು ಲಭ್ಯವಾಗುತ್ತವೆ.

ಡಾ. ಡಿ.ರಾಜಗೋಪಾಲ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಂಗೈಯಲ್ಲಿ ಅರಮನೆ ತೋರಿಸುವ ಆಟ

ಐಪಿಎಲ್ ತಳಕಿಗೆ 'ಸ್ಮಾರ್ಟ್' ಮೆರುಗು

• ಗಿರೀಶ ದೊಡ್ಡಮನಿ



ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹದಿನಾರನೇ ಆವೃತ್ತಿಯು ಈಗ ಕೊನೆಯ ಹಂತ ತಲುಪಿದೆ. ಲೀಗ್ ಸುತ್ತಿನ ಕೊನೆಯ ಪಂದ್ಯದವರೆಗೂ ಪ್ಲೇಆಫ್ ಸುತ್ತಿಗೆ ಪ್ರವೇಶಿಸುವ ತಂಡಗಳ ಕುರಿತು ಕುತೂಹಲವಿತ್ತು. ಅದರಿಂದಾಗಿಯೇ ಈ ಸಲದ ಟೂರ್ನಿಯಲ್ಲಿ ದಾಖಲೆಗಳು ಆಟಕ್ಕಷ್ಟೆ ಸೀಮಿತವಲ್ಲ. ವೀಕ್ಷಕರಿಂದಲೂ ನೂತನ ದಾಖಲೆಗಳು ಸೃಷ್ಟಿಯಾದವು.

ಪಂದ್ಯಗಳನ್ನು ನೋಡಲು ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಕ್ರೀಡಾಂಗಣಗಳಿಗೆ ಜನರು ನುಗ್ಗಿದರು. ಟಿ.ವಿಯಲ್ಲಿಯೂ ಜನರು ನೋಡಿದರು. ಇದೆಲ್ಲಕ್ಕಿಂತ ಮುಖ್ಯವಾಗಿ ಈ ಬಾರಿ ಸ್ಮಾರ್ಟ್ ಫೋನ್‌ಗಳು ಅಂಗೈಯಲ್ಲಿ ಅರಮನೆ ತೋರಿಸಿವೆ.

ಟಿ.ವಿ ಹಾಗೂ ಡಿಜಿಟಲ್ ಮಾಧ್ಯಮಗಳಿಗೆ ಪ್ರತ್ಯೇಕ ಪ್ರಸಾರ ಹಕ್ಕುಗಳನ್ನು ಬಿಡ್ ಮಾಡಿದ್ದ ಬಿಸಿಸಿಐ ಈಗ ಹೆಮ್ಮೆಯಿಂದ ಬೀಗುತ್ತಿದೆ. ಏಕೆಂದರೆ ಮೊಬೈಲ್ ಆ್ಯಪ್‌ನಲ್ಲಿಯೇ ಜನ ಈಗ ಐಪಿಎಲ್ ಪಂದ್ಯಗಳನ್ನು ಹೆಚ್ಚು ವೀಕ್ಷಿಸುತ್ತಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಲಖನೌ ಸೂಪರ್‌ಜೈಂಟ್ಸ್ ನಡುವಣ ಪಂದ್ಯವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿತ್ತು. ಕೊನೆಯ ಎಸೆತದಲ್ಲಿ ರೋಚಕ ಫಲಿತಾಂಶ ಹೊಮ್ಮಿದ್ದ ಪಂದ್ಯ ಅದು. ಜಿಯೊ ಸಿನಿಮಾ ಆ್ಯಪ್ ಮೂಲಕ ಈ ಪಂದ್ಯಕ್ಕೆ ಸಿಕ್ಕ ವೀಕ್ಷಣೆ 1.8 ಕೋಟಿ. ಇದೇ ಟೂರ್ನಿಯಲ್ಲಿ, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಲಖನೌ ಸೂಪರ್‌ಜೈಂಟ್ಸ್ ನಡುವೆ ನಡೆದಿದ್ದ ಪಂದ್ಯದಲ್ಲಿ ಮಹೇಂದ್ರಸಿಂಗ್ ಧೋನಿ ಹೊಡೆದಿದ್ದ ಸಿಕ್ಸರ್‌ಗಳಿಗೆ ಸಿಕ್ಕ ವೀಕ್ಷಣೆ 1.7 ಕೋಟಿ.

ಹಾಗೆ ನೋಡಿದರೆ ಅಹಮದಾಬಾದಿನಲ್ಲಿ ಚೆನ್ನೈ ಹಾಗೂ ಗುಜರಾತ್ ಟೈಟನ್ಸ್ ನಡುವೆ ನಡೆದ ಈ ಟೂರ್ನಿಯ ಮೊದಲ ಪಂದ್ಯದಲ್ಲಿಯೂ ಧೋನಿಯ ಆಟಕ್ಕೆ 1.6 ಕೋಟಿ ವೀಕ್ಷಣೆಗಳಿದ್ದವು. ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದರೂ ಧೋನಿಯ ಜನಪ್ರಿಯತೆ ಮುಕ್ಕಾಗಿಲ್ಲ. ರಾಜಸ್ಥಾನ ರಾಯಲ್ಸ್ ಮತ್ತು ಚೆನ್ನೈ ವಿರುದ್ಧದ ಪಂದ್ಯದಲ್ಲಿ 'ಕ್ಯಾಪ್ಟನ್ ಕೂಲ್' ಧೋನಿಯ ಆಟ ನಡೆದಾಗ 2.2 ವೀಕ್ಷಣೆಗಳು ದಾಖಲಾಗಿವೆ ಎಂದು ವಯಾಕಾಮ್ -18 ಸಂಸ್ಥೆ ತಿಳಿಸಿದೆ.

ಈ ಬಾರಿಯ ಟೂರ್ನಿಗೆ ನೂರು ಕೋಟಿಗೂ ಹೆಚ್ಚು ವೀಕ್ಷಣೆ ದೊರೆತಿದೆ ಎಂಬ ಮಾಹಿತಿ ಇದೆ. ಟಿ.ವಿ ಮೂಲಕ ವೀಕ್ಷಿಸಿದವರ ಸಂಖ್ಯೆ ಬೇರೆಯೇ ಇದೆ. ಒಟ್ಟಿನಲ್ಲಿ ಪಂದ್ಯಗಳನ್ನು ಕಣ್ತುಂಬಿಕೊಳ್ಳಲು ತಮಗೆ ಸಾಧ್ಯವಿರುವ ಎಲ್ಲ ದಿಕ್ಕುಗಳಿಂದಲೂ ಅಭಿಮಾನಿಗಳು ಲಗ್ಗೆ ಇಡುತ್ತಿದ್ದಾರೆ. ಈ ಬಗೆಯ 'ನೂಕುನುಗ್ಗಲು' ಉಂಟಾಗಲು ಕಾರಣಗಳೇನಿರಬಹುದು?

ಇಲ್ಲಿ ಮೂರು ಪ್ರಮುಖ ಕಾರಣಗಳು ಎದ್ದು ಕಾಣುತ್ತವೆ. ಮೊದಲನೆಯದಾಗಿ, ಈ ಬಾರಿ ಟಿ.ವಿ. ಮತ್ತು ಡಿಜಿಟಲ್ ಮಾಧ್ಯಮಗಳ ಪ್ರಸಾರ ಹಕ್ಕುಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಿರುವುದು. ಈ ಎರಡೂ ಬಿಡ್‌ಗಳನ್ನು ಬೇರೆ ಬೇರೆ ಸಂಸ್ಥೆಗಳು ಖರೀದಿಸಿವೆ. ಆ ಸಂಸ್ಥೆಗಳು ಪ್ರೇಕ್ಷಕರನ್ನು ಸೆಳೆಯಲು ಜಿದ್ದಿಗೆ ಬಿದ್ದಿವೆ. ಡಿಜಿಟಲ್ ಆ್ಯಪ್ ಉಚಿತವಾಗಿ ಪ್ರಸಾರ ನೀಡುತ್ತಿದೆ. ಅಲ್ಲದೇ ಪಂದ್ಯದ ನೇರಪ್ರಸಾರವನ್ನು ಮೂರು ಆಯಾಮಗಳ ಕ್ಯಾಮೆರಾಗಳ ಮೂಲಕ ವೀಕ್ಷಿಸುವ (3ಕೆ) ಅವಕಾಶವನ್ನೂ ನೀಡಿದೆ. ಇದು ಕೂಡ ಪ್ರಮುಖ ಆಕರ್ಷಣೆಯಾಗಿದೆ.

1983ರಲ್ಲಿ ಭಾರತ ವಿಶ್ವಕಪ್ ಗೆದ್ದಾಗ ದೇಶದ ಪ್ರಮುಖ ನಗರಗಳ ಕೆಲವೇ ಕೆಲವು ಮನೆಗಳಲ್ಲಿ ಮಾತ್ರ ಟಿ.ವಿಗಳು ಇದ್ದವು. ಅದಕ್ಕೂ ಮುನ್ನ ಹಾಗೂ ನಂತರದ ಕೆಲವು ವರ್ಷಗಳವರೆಗೂ ಪಂದ್ಯಗಳನ್ನು ಬಾನುಲಿಯ ಕಾಮೆಂಟ್ರಿಯ ಮೂಲಕವೇ ಆಸ್ವಾದಿಸಬೇಕಿತ್ತು. ಪಾಕೆಟ್ ರೇಡಿಯೊ ಎಲ್ಲರಿಗೂ ಮೆಚ್ಚಿನದಾಗಿತ್ತು. ನಂತರ ಅದೇ ಕೈಗಳಿಗೆ ಟಿ.ವಿ ರಿಮೋಟ್ ಇತ್ತು. ಈಗ ಸ್ಮಾರ್ಟ್‌ಫೋನ್ ಹೊಸಲೋಕವನ್ನು ತೆರೆದಿಟ್ಟಿದೆ.

ಎರಡನೆಯದಾಗಿ, ಹೊಸದಾಗಿ ಜಾರಿಯಾಗಿರುವ ಕೆಲವು ನಿಯಮಗಳು. ಈ ಮೊದಲು ಟಾಸ್ ಆಗುವ ಮುನ್ನವೇ ಉಭಯ ತಂಡಗಳು ಕಣಕ್ಕಿಳಿಯುವ ತಮ್ಮ 11 ಆಟಗಾರರ ಪಟ್ಟಿಯನ್ನು ಪ್ರಕಟಿಸಬೇಕಿತ್ತು. ಆದರೆ ಈಗ ಟಾಸ್ ಆದ ನಂತರ ಆಡುವ ಬಳಗವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಇದರಿಂದಾಗಿ ತಂಡ ಸಂಯೋಜನೆ ಮತ್ತು ತಂತ್ರಗಾರಿಕೆಗಳಲ್ಲಿ ಬದಲಾವಣೆಯಾಗಿದೆ. ಅದಕ್ಕಾಗಿಯೇ ಈಗ ಟಾಸ್ ಗೆದ್ದವರೇ ಹೆಚ್ಚು ಪಾರಮ್ಯ ಮೆರೆಯುವ ಕಾಲ ಹೋಗಿದೆ. ಆರ್‌ಸಿಬಿ ತಂಡವು ತನ್ನ ತವರಿನಲ್ಲಿ ಆಡಿದ ಏಳು ಪಂದ್ಯಗಳಲ್ಲಿ ಮೂರರಲ್ಲಿ ಟಾಸ್ ಜಯಿಸಿತ್ತು. ಆದರೆ ತಂಡವು ಜಯಿಸಿದ್ದು ಒಂದು ಪಂದ್ಯ ಮಾತ್ರ. ಟಾಸ್ ಸೋತಿದ್ದ ನಾಲ್ಕರಲ್ಲಿ ಎರಡು ಪಂದ್ಯ ಗೆದ್ದಿತ್ತು. ಅದೇ ತವರಿನಾಚೆಯ ಪಂದ್ಯಗಳಲ್ಲಿ ಟಾಸ್ ಗೆದ್ದ ಐದು ಪಂದ್ಯಗಳಲ್ಲಿ ಮೂರರಲ್ಲಿ ಜಯಭೇರಿ ಬಾರಿಸಿತ್ತು. ಕಳೆದ ಕೆಲವು ಟೂರ್ನಿಗಳಲ್ಲಿ ಇಬ್ಬನಿ ಮತ್ತು ಪಿಚ್ ಪರಿಸ್ಥಿತಿಯ ಲೆಕ್ಕಾಚಾರದ ಮೇಲೆ ಟಾಸ್ ಗೆದ್ದ ನಾಯಕ ಬ್ಯಾಟಿಂಗ್ ಅಥವಾ ಬೌಲಿಂಗ್ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಇರುಳು ಕವಿದಂತೆ ತೇವಾಂಶ ಹೆಚ್ಚಿ ಬೌಲಿಂಗ್ ಹಾಗೂ ಫೀಲ್ಡಿಂಗ್ ಕಠಿಣವಾಗುವುದರಿಂದ ಟಾಸ್ ಜಯಿಸಿದವರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದೇ ಹೆಚ್ಚು. ಅವರೇ ಪಂದ್ಯಗಳನ್ನು ಹೆಚ್ಚು ಗೆದ್ದಿರುವ ದಾಖಲೆಗಳೂ ಇವೆ. ಈ ಬಾರಿಯೂ ಇಲ್ಲಿಯವರೆಗೆ ನಡೆದ ಪಂದ್ಯಗಳ ಪೈಕಿ ಟಾಸ್ ಗೆದ್ದವರು ಬಹುತೇಕ ಬಾರಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದಾರೆ.

ಪ್ರಭಾವಿ ಆಟಗಾರ (ಇಂಪ್ಯಾಕ್ಟ್ ಪ್ಲೇಯರ್) ನಿಯಮವೂ ಪಂದ್ಯಗಳಲ್ಲಿ ರೋಚಕತೆಯನ್ನು ಹುಟ್ಟುಹಾಕುತ್ತಿದೆ. ಬೆಂಗಳೂರಿನಲ್ಲಿ ನಡೆದ ಆರ್‌ಸಿಬಿ ಮತ್ತು ಲಖನೌ ಸೂಪರ್ ಜೈಂಟ್ಸ್ ಪಂದ್ಯವು ರೋಚಕ ಅಂತ್ಯ ಕಂಡಿತ್ತು. ಬೆಂಗಳೂರು ನೀಡಿದ್ದ ಬೃಹತ್ ಗುರಿಯನ್ನು ಬೆನ್ನಟ್ಟಿದ್ದ ಲಖನೌ ತಂಡದ ಗೆಲುವಿನಲ್ಲಿ ಮಾರ್ಕಸ್ ಸ್ಟೊಯಿನಿಸ್ ಮತ್ತು ನಿಕೊಲಸ್ ಪೂರನ್ ಅವರ ಬ್ಯಾಟಿಂಗ್ ಪ್ರಮುಖವಾಗಿತ್ತು ನಿಜ. ಆ ತಂಡದ ಇಂಪ್ಯಾಕ್ಟ್ ಪ್ಲೇಯರ್ ಆಯುಷ್ ಬಡೋಣಿಯ ಆಟವೂ ಕಾರಣವಾಗಿತ್ತು.ಅಲ್ಲದೇ ಆ ಪಂದ್ಯದ ಮಧ್ಯದಲ್ಲಿ ಆರ್‌ಸಿಬಿಯ ಇಂಪ್ಯಾಕ್ಟ್ ಪ್ಲೇಯರ್ ಸ್ಪಿನ್ನರ್ ಕರಣ್ ಶರ್ಮಾ ಆಟವೂ ಗಮನ ಸೆಳೆದಿತ್ತು. ಅಲ್ಲದೇ ವೈಡ್ ಬಾಲ್ ಮತ್ತು ನೋಬಾಲ್‌ಗಳ ಅಂಪೈರ್ ತೀರ್ಪು ಮರುಪರಿಶೀಲನೆಗೆ (ಯುಡಿಆರ್‌ಎಸ್) ಅವಕಾಶ ಕೊಡಲಾಗಿದೆ. ನಿಗದಿಯ ಅವಧಿಯೊಳಗೆ ಓವರ್‌ಗಳನ್ನು ಮುಗಿಸದಿದ್ದರೆ ನಾಯಕನಿಗೆ ದಂಡ ವಿಧಿಸಲಾಗುತ್ತಿದೆ.

ಮೂರನೆಯದಾಗಿ, ಈ ಎಲ್ಲ ಅಂಶಗಳ ಜೊತೆಗೆ ಅನುಭವಿ ಹಾಗೂ ಉದಯೋನ್ಮುಖ ಆಟಗಾರರ ನಡುವಣ ಪೈಪೋಟಿ ಮುಗಿಲು ಮುಟ್ಟಿದೆ. ಭಾರತ ತಂಡಕ್ಕೆ ಮರಳಲು ಯತ್ನಿಸುತ್ತಿರುವ ಶಿಖರ್ ಧವನ್ ಅವರ 99 ರನ್‌ಗಳ ಸಮಚಿತ್ತದ ಆಟ, ಅಜಿಂಕ್ಯ ರಹಾನೆಯ ಅಬ್ಬರ, ಲಯಕ್ಕೆ ಮರಳಿರುವ ವಿರಾಟ್ ಕೊಹ್ಲಿ, ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ಕೇಂದ್ರಬಿಂದುವೇ ಆಗಿರುವ ಧೋನಿ ಹೀಗೆ ಪಟ್ಟಿ ಬೆಳೆಯುತ್ತದೆ. ಕೊಹ್ಲಿ ಎರಡು ಶತಕ ಹೊಡೆದರೆ, ಯುವಪ್ರತಿಭೆ ಶುಭಮನ್ ಗಿಲ್ ಮೂರು ಶತಕ ಬಾರಿಸಿದರು.

ಯುವಪ್ರತಿಭೆಗಳಾದ ಋತುರಾಜ್ ಗಾಯಕವಾಡ್, ಯಶಸ್ವಿ ಜೈಸ್ವಾಲ್, ರಿಂಕು ಸಿಂಗ್, ಸಾಯಿ ಸುದರ್ಶನ್, ಸ್ಪಿನ್ನರ್ ಸುಯಶ್ ಶರ್ಮಾ ಸೇರಿದಂತೆ ಹಲವು ಆಟಗಾರರು ಗಮನ ಸೆಳೆದರು. ಆದ್ದರಿಂದಲೇ ಇವರನ್ನು ಹತ್ತಿರದಿಂದ ನೋಡಲು ಹಾಗೂ ಅವಕಾಶ ಸಿಕ್ಕರೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಕ್ರೀಡಾಂಗಣಗಳಿಗೂ ಜನರು ಲಗ್ಗೆ ಇಟ್ಟರು. ಮೂರು ವರ್ಷಗಳ ನಂತರ ಪಂದ್ಯಗಳು ತವರು ಹಾಗೂ ತವರಿನಾಚೆ (ಹೋಮ್ ಆ್ಯಂಡ್ ಅವೇ) ಮಾದರಿಗೆ ಮರಳಿದವು.

ಕ್ರೀಡಾಂಗಣದೊಳಗೆ ನಾಲ್ಕರಿಂದ-ಐದು ತಾಸು ಡಿಜೆ ಸಂಗೀತ, ಮತ್ತೇರಿಸುವ ಬೆಳಕಿನಾಟ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸೆಲ್ಫಿಗಳನ್ನು ಹಂಚಿಕೊಳ್ಳುವ ಭರಾಟೆಯೂ ಅಷ್ಟಿಷ್ಟಲ್ಲ. ಇದೆಲ್ಲದರ ಲಾಭ ಸಿಕ್ಕಿದ್ದು ಕ್ರಿಕೆಟ್ ಜೊತೆಗೆ ಬೆಟ್ಟಿಂಗ್ ಮತ್ತು ಗೇಮಿಂಗ್ ಆ್ಯಪ್‌ಗಳ ಲೋಕಕ್ಕೂ ಆಗಿದ್ದು ಸುಳ್ಳಲ್ಲ.

ಮಳೆ ಸುರಿದರೂ ನಡೆದ ಪಂದ್ಯ

ಮೇ 21ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ 37 ಸಾವಿರಕ್ಕೂ ಹೆಚ್ಚು ಅಭಿಮಾನಿಗಳಿಗೆ ನಿರಾಶೆಯಾಗಲಿಲ್ಲ. ಅವತ್ತು ಬೆಂಗಳೂರಿನಲ್ಲಿ ರಭಸದ ಮಳೆ ಸುರಿದಿತ್ತು. ಹಾಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಗುಜರಾತ್ ಟೈಟನ್ಸ್ ನಡುವಣ ಪಂದ್ಯವು ನಡೆಯುವುದು ಅನುಮಾನವಾಗಿತ್ತು.

ಆದರೆ, ನಿಗದಿಯ ವೇಳೆಗಿಂತ ಅರ್ಧಗಂಟೆ ವಿಳಂಬವಾಗಿ ಪಂದ್ಯ ಆರಂಭವಾಯಿತು. ಪಂದ್ಯವು ಪೂರ್ಣವಾಗಿ ನಡೆಯಿತು. ಅದಕ್ಕೆ ಕಾರಣವಾಗಿದ್ದು ಕ್ರೀಡಾಂಗಣದಲ್ಲಿ ಅಳವಡಿಸಿರುವ ಸಬ್ ಏರ್ ಸಿಸ್ಟಮ್ ಮತ್ತು ಸಿಬ್ಬಂದಿಯ ಪರಿಶ್ರಮ.

ಈ ಸಲದ ಐಪಿಎಲ್‌ನಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವು ಏಳು ಪಂದ್ಯಗಳನ್ನು ಆಯೋಜಿಸಿತು. ಅದರಲ್ಲಿ ಮೊದಲ ಆರು ಪಂದ್ಯಗಳು ಏಪ್ರಿಲ್ ತಿಂಗಳಿನಲ್ಲಿಯೇ ನಡೆದಿದ್ದು ವಿಶೇಷ. ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಇದ್ದ ಕಾರಣ ಏಪ್ರಿಲ್ 27ರ ನಂತರ ಪಂದ್ಯಗಳನ್ನು ನಡೆಸಲು ಅವಕಾಶವಿರಲಿಲ್ಲ.

'ಸಬ್ ಏರ್ ವ್ಯವಸ್ಥೆಯಿಂದಾಗಿ ಅಭಿಮಾನಿಗಳಿಗೆ ಉತ್ತಮ ಪಂದ್ಯವನ್ನು ವೀಕ್ಷಿಸುವ ಅವಕಾಶ ಒದಗಿತು. ಪ್ರಾಯೋಜಕರು, ಜನರು ಎಲ್ಲರೂ ಸಂತಸಗೊಂಡರು. ಇಂತಹ ವ್ಯವಸ್ಥೆಯನ್ನು ಇಲ್ಲಿ ಅಳವಡಿಸಿದ ಶ್ರೇಯ ಐದು ವರ್ಷಗಳ ಹಿಂದೆ ಈ ಸಂಸ್ಥೆಯ ಕಾರ್ಯದರ್ಶಿಯಾಗಿದ್ದ ಬ್ರಿಜೇಶ್ ಪಟೇಲ್ ಅವರಿಗೇ ಸಲ್ಲಬೇಕು. ಅವರ ದೂರದೃಷ್ಟಿಯ ಫಲ ಈಗ ಲಭಿಸಿದೆ. ದೊಡ್ಡ ಪ್ರಮಾಣದ ಮಳೆ ಬಂದು ಹೋದರೂ ಪಂದ್ಯ ನಡೆಯುವಂತಾಗಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ ಸಂತಸ ವ್ಯಕ್ತಪಡಿಸಿದರು.

ಸೆಂಗೋಲ್ ಅಧಿಕಾರ ಹಸ್ತಾಂತರದ ಪ್ರತೀಕವೇ?

ಪ್ರಜಾವಾಣಿ ವಾರ್ತೆ

ನೂತನ ಸಂಸತ್ ಭವನದಲ್ಲಿ ಸ್ಪೀಕರ್ ಪೀಠದ ಬಳಿ 'ಸೆಂಗೋಲ್' (ರಾಜದಂಡ) ಅನ್ನು ಪ್ರತಿಷ್ಠಾಪಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಆದರೆ, ಸೆಂಗೋಲ್ ಕುರಿತು ಕೇಂದ್ರ ಸರ್ಕಾರವು ನೀಡುತ್ತಿರುವ ವಿವರಗಳು ಸುಳ್ಳು ಎಂದು ವಿರೋಧ ಪಕ್ಷಗಳು ಹೇಳುತ್ತಿವೆ.


ಸೆಂಗೋಲ್

ಸೆಂಗೋಲ್ ಅನ್ನು ನೂತನ ಸಂಸತ್ ಭವನದಲ್ಲಿ ಪ್ರತಿಷ್ಠಾಪನೆ ಮಾಡಲಾಗುತ್ತದೆ ಎಂದು ಕೇಂದ್ರ ಸರ್ಕಾರವು ಈಚೆಗೆ ಹೇಳಿತ್ತು. ಚೆನ್ನೈನಲ್ಲಿ ನಡೆದಿದ್ದ ಮಾಧ್ಯಮಗೋಷ್ಠಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೆಂಗೋಲ್ ಬಗ್ಗೆ ಮಾಹಿತಿ ನೀಡಿದ್ದರು. ತಮಿಳುನಾಡಿನ ಶೈವ ಪರಂಪರೆಯ ಅಧೀನಾಮ್ ಮಠದ ಸ್ವಾಮೀಜಿಗಳು ಸೆಂಗೋಲ್ ಅನ್ನು ಭಾರತದ ಕೊನೆಯ ವೈಸ್‌ರಾಯ್ ಲಾರ್ಡ್ ಮೌಂಟ್‌ಬ್ಯಾಟನ್‌ಗೆ ನೀಡಿದ್ದರು. ಆನಂತರ ಅದನ್ನು ವಾಪಸ್ ಪಡೆದು, ನೆಹರೂಗೆ ನೀಡಲಾಗಿತ್ತು ಎಂದು ಹೇಳಿದ್ದರು.

'ಇದಕ್ಕೆ ಪುರಾವೆ ಇದೆಯೇ?' ಎಂದು ಅಲ್ಲಿದ್ದ ಪತ್ರಕರ್ತರು ನಿರ್ಮಲಾ ಅವರನ್ನು ಪ್ರಶ್ನಿಸಿದ್ದರು. ಉತ್ತರ ನೀಡಿದ್ದ ಸಚಿವೆ, 'ನಿಮಗೆ ನೀಡಿರುವ ಪ್ರಕಟಣೆಯಲ್ಲೇ ಸಾಕಷ್ಟು ಪುರಾವೆಗಳು' ಇವೆ ಎಂದು ಹೇಳಿದ್ದರು. ಸೆಂಗೋಲ್ ಕುರಿತ ಮಾಹಿತಿ ನೀಡಲು ರೂಪಿಸಲಾಗಿರುವ ಜಾಲತಾಣದಲ್ಲೂ ಇದೇ ಪುರಾವೆಗಳನ್ನು ಒದಗಿಸಲಾಗಿದೆ.

ಈ ಜಾಲತಾಣದಲ್ಲಿ, 'ಸೆಂಗೋಲ್ ಅನ್ನು ಮೊದಲು ಮೌಂಟ್‌ಬ್ಯಾಟನ್‌ಗೆ ನೀಡಲಾಗಿತ್ತು. ಅವರಿಂದ ಅದನ್ನು ವಾಪಸ್ ಪಡೆದು, ಗಂಗಾಜಲದಲ್ಲಿ ಶುದ್ಧೀಕರಿಸಲಾಗಿತ್ತು. ಆನಂತರ ಅದನ್ನು ನೆಹರೂ ಅವರಿಗೆ ಹಸ್ತಾಂತರಿಸಲಾಗಿತ್ತು. ಸೆಂಗೋಲ್ ಅನ್ನು ನೆಹರೂ ಅವರಿಗೆ ನೀಡಲು ಸ್ವಾಮೀಜಿಗಳ ನಿಯೋಗವು ದೆಹಲಿಗೆ ವಿಶೇಷ ವಿಮಾನದಲ್ಲಿ ತೆರಳಿತ್ತು. ಇದನ್ನು ದೇಶ ಮತ್ತು ವಿದೇಶಗಳ ಮಾಧ್ಯಮಗಳೂ ವರದಿ ಮಾಡಿವೆ' ಎಂದು ಜಾಲತಾಣದಲ್ಲಿ ವಿವರಿಸಲಾಗಿದೆ.

ಆದರೆ ಜಾಲತಾಣದಲ್ಲಿ ಉಲ್ಲೇಖಿಸಲಾಗಿರುವ ಯಾವ ಮಾಧ್ಯಮ ವರದಿಯಲ್ಲೂ, ಜಾಲತಾಣದಲ್ಲಿ ನೀಡಿರುವ ಮಾಹಿತಿ ಇಲ್ಲ.

1947ರ ಆಗಸ್ಟ್ 25ರ ಸಂಚಿಕೆಯ ಟೈಮ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಲೇಖನದ ಪುಟವನ್ನು ಜಾಲತಾಣದಲ್ಲಿ ನೀಡಲಾಗಿದೆ. ಇಂಡಿಯನ್ ಎಕ್ಸ್‌ಪ್ರೆಸ್, ಹಿಂದುಸ್ತಾನ್ ಟೈಮ್ಸ್ ವರದಿ ಮಾಡಿದ್ದವು ಎಂದು ಹೇಳಲಾಗಿರುವ ಒಂದೊಂದು ಪ್ಯಾರಾವನ್ನು ಜಾಲತಾಣದಲ್ಲಿ ನೀಡಲಾಗಿದೆ. ಜತೆಗೆ, ಡಾ.ಬಿ.ಆರ್. ಅಂಬೇಡ್ಕರ್ ಅವರ ಬರಹದ ಆಯ್ದ ಭಾಗವನ್ನು ಮತ್ತು ಇತರ ಲೇಖಕರ ಪುಸ್ತಕಗಳನ್ನು ಜಾಲತಾಣದಲ್ಲಿ ಉಲ್ಲೇಖಿಸಲಾಗಿದೆ. ಈ ಎಲ್ಲ ವರದಿ ಮತ್ತು ಪುಸ್ತಕಗಳಲ್ಲಿ ಸೆಂಗೋಲ್ ಅನ್ನು ನೆಹರೂ ಅವರಿಗೆ ನೀಡಲಾಗಿತ್ತು ಎಂದು ಉಲ್ಲೇಖಿಸಲಾಗಿದೆಯಷ್ಟೆ.

'ಸೆಂಗೋಲ್ ಅನ್ನು ಮೌಂಟ್ ಬ್ಯಾಟನ್‌ಗೆ ನೀಡಿ, ವಾಪಸ್ ಪಡೆಯಲಾಗಿತ್ತು. ಆನಂತರ ಗಂಗಾಜಲದಿಂದ ಶುದ್ಧೀಕರಿಸಿ, ನೆಹರೂ ಅವರಿಗೆ ಹಸ್ತಾಂತರಿಸಲಾಗಿತ್ತು' ಎಂದು ಈ ವರದಿಗಳು ಮತ್ತು ಪುಸ್ತಕಗಳಲ್ಲಿ ಇಲ್ಲ.

ಸೆಂಗೋಲ್ ಅನ್ನು ನೆಹರೂ ಅವರಿಗೆ ನೀಡಲು ಸ್ವಾಮೀಜಿಗಳ ನಿಯೋಗವು ವಿಶೇಷ ವಿಮಾನದಲ್ಲಿ ತೆರಳಿತ್ತು ಎಂಬ ಸರ್ಕಾರದ ಪ್ರತಿಪಾದನೆಗೆ ವ್ಯತಿರಿಕ್ತವಾದ ವರದಿ ಮತ್ತು ಚಿತ್ರಗಳು ಲಭ್ಯವಿವೆ. ಸ್ವಾಮೀಜಿಗಳ ನಿಯೋಗವು ಸೆಂಗೋಲ್ ಹಿಡಿದು ಚೆನ್ನೈ ಸೆಂಟ್ರಲ್ ರೈಲು ನಿಲ್ದಾಣದಲ್ಲಿ ನಿಂತಿರುವ ಚಿತ್ರವು ದಿ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ಆಧಾರ: ಕೇಂದ್ರ ಸರ್ಕಾರದ 'ಸೆಂಗೋಲ್1947ಐಜಿಎನ್‌ಸಿಎ.ಐಎನ್', ಪಿಟಿಐ, ದಿ ಹಿಂದೂ

ಪುರಾವೆಗೆ 'ವಾಟ್ಸ್‌ಆ್ಯಪ್ ಹಿಸ್ಟರಿ' ಉಲ್ಲೇಖ

'ಸೆಂಗೋಲ್ ಅನ್ನು ಮೌಂಟ್‌ಬ್ಯಾಟನ್‌ಗೆ ನೀಡಿ, ವಾಪಸ್ ಪಡೆಯಲಾಗಿತ್ತು. ಅದನ್ನು ಗಂಗಾಜಲದಲ್ಲಿ ಶುದ್ಧೀಕರಿಸಿ, ನೆಹರೂ ಅವರಿಗೆ ನೀಡಲಾಗಿತ್ತು' ಎಂಬುದಕ್ಕೆ ಪುರಾವೆಯಾಗಿ ಕೇಂದ್ರ ಸರ್ಕಾರವು 'ವಾಟ್ಸ್‌ಆ್ಯಪ್ ಹಿಸ್ಟರಿ' ಎಂಬ ಬ್ಲಾಗ್‌ಪೋಸ್ಟ್ ಬರಹವನ್ನು ಪುರಾವೆಯಾಗಿ ನೀಡಿದೆ.

ತಮಿಳು ಲೇಖಕ ಜಯಮೋಹನ್ ಈ ಬರಹವನ್ನು ಬರೆದಿದ್ದಾರೆ. 'ವಾಟ್ಸ್‌ಆ್ಯಪ್‌ನಲ್ಲಿ ಬಂದ ಫಾರ್ವರ್ಡ್ ಸಂದೇಶಗಳು, ಪುರಾವೆಗಳನ್ನು ಬಳಸಿಕೊಂಡು ಇದನ್ನು ಬರೆದಿದ್ದೇನೆ. ಈವರೆಗೆ ಈ ಇತಿಹಾಸವನ್ನು ಮುಚ್ಚಿಡಲಾಗಿತ್ತು' ಎಂದು ಅವರು ತಮ್ಮ ಲೇಖನದಲ್ಲಿ ಬರೆದುಕೊಂಡಿದ್ದಾರೆ.



ಮಲಬಾರ್ ಮಳಿಗೆಯಲ್ಲಿ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಕುರಿತು ಸುಂದರ್‌ರಾಜ್

'ಪ್ರಭಾವದಿಂದ ಈ ಪ್ರಶಸ್ತಿ ಪಡೆಯುವುದು ಅಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ನೀಡುವ ಚಲನಚಿತ್ರ ಪ್ರಶಸ್ತಿಗಳಲ್ಲಿ ಕೆಲವೊಮ್ಮೆ ಪ್ರಭಾವ ಕೆಲಸ ಮಾಡಬಹುದು. ಆದರೆ 'ಪ್ರಜಾವಾಣಿ ಸಿನಿ ಸಮ್ಮಾನ' ಅತ್ಯಂತ ಪಾರದರ್ಶಕವಾಗಿದ್ದು, ಈ ಪ್ರಶಸ್ತಿಯನ್ನು ಪ್ರಭಾವ ಬಳಸಿ ಪಡೆಯಲು ಸಾಧ್ಯವಿಲ್ಲ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗೌರವ ಕಾರ್ಯದರ್ಶಿ ಹಾಗೂ ಹಿರಿಯ ನಟ ಸುಂದರ್‌ರಾಜ್ ಹೇಳಿದರು.

ನಗರದ ಮಲಬಾರ್ ಚಿನ್ನಾಭರಣ ಮಳಿಗೆಯಲ್ಲಿ ಶುಕ್ರವಾರ ನಡೆದ 'ಪ್ರಜಾವಾಣಿ ಸಿನಿಸಮ್ಮಾನ'ದ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, 'ಪ್ರಜಾವಾಣಿ ಪತ್ರಿಕೆಗೆ 75 ವರ್ಷವಾಗಿದೆ. ನಾನು 1960ರಿಂದ ಈ ಪತ್ರಿಕೆಯ ಓದುಗ. ಕನ್ನಡದ ಮನೆ, ಮನಸ್ಸುಗಳನ್ನು ತಲುಪಿರುವ ಪತ್ರಿಕೆಯಿದು. ಯಾವ ಉತ್ಪನ್ನ ಖರೀದಿಸಬೇಕಿದ್ದರೂ ಅದರ ಜೀವಿತಾವಧಿ, ಬ್ರ್ಯಾಂಡ್ ನೇಮ್ ನೋಡುತ್ತೇವೆ. ಹಾಗೆಯೇ ಪ್ರಜಾವಾಣಿ ಇವತ್ತು ಒಂದು ಬ್ರ್ಯಾಂಡ್. ಇಂತಹ ಪತ್ರಿಕೆ ನೀಡುವ ಪ್ರಶಸ್ತಿ ಅತ್ಯಂತ ಮೌಲ್ಯಯುತವಾಗಿದ್ದು, ಇಲ್ಲಿ ಯಾರ ಪ್ರಭಾವವೂ ನಡೆಯುವುದಿಲ್ಲ' ಎಂದರು.

'ಬಡವನಿಂದ ಹಿಡಿದು ಮಹಾರಾಜನವರೆಗೆ ಎಲ್ಲರೂ ಸಿನಿಮಾ ನೋಡುತ್ತಾರೆ. ವಿಶ್ವದಲ್ಲಿ ಅತ್ಯಂತ ಅಗ್ಗವಾಗಿ ಸಿಗುವ ಮನರಂಜನೆಯೆಂದರೆ ಸಿನಿಮಾ. ಇಂದು ಸಿನಿಮಾ ಜಗತ್ತು 75 ಎಂಎಂ ನಿಂದ 7 ಇಂಚಿನ ಮೊಬೈಲ್‌ಗೆ ಬಂದು ನಿಂತಿದೆ. ಇಂತಹ ಕ್ಷೇತ್ರದ ಪ್ರತಿಭೆಗಳನ್ನು ಗೌರವಿಸುವ ಪ್ರಜಾವಾಣಿಯ ಹೆಜ್ಜೆ, ಅದಕ್ಕೆ ಮಲಬಾರ್ ಗೋಲ್ಡ್ ಕೈಜೋಡಿಸಿರುವುದು ಅತ್ಯಂತ ಶ್ಲಾಘನೀಯ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಈ ಕಾರ್ಯದ ಜೊತೆಗಿರುತ್ತದೆ' ಎಂದು ಸುಂದರ್‌ರಾಜ್ ಆಶ್ವಾಸನೆ ನೀಡಿದರು.

ಗೋಲ್ಡ್ ಜೊತೆಗೆ ಪ್ಲಾಟಿನಂ: ಕಾರ್ಯಕ್ರಮದಲ್ಲಿ ಮಾತನಾಡಿದ 'ಪ್ರಜಾವಾಣಿ' ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, 'ಮಲಬಾರ್‌ನಲ್ಲಿ ಗೋಲ್ಡ್ ಮತ್ತು ಡೈಮಂಡ್ ಇದೆ. ಪ್ರಜಾವಾಣಿಗೆ 75ರ ಸಂಭ್ರಮ. ಹೀಗಾಗಿ ಮಲಬಾರ್ ಜೊತೆ ನಮ್ಮ ಪ್ಲಾಟಿನಂ ಸೇರಿ ಈ ಸಿನಿಮಾ ಸಮ್ಮಾನ ಯಶಸ್ವಿಯಾಗಲಿದೆ. ಕನ್ನಡ ಚಿತ್ರೋದ್ಯಮಕ್ಕೆ ಗಂಭೀರವಾದ ಪ್ರಶಸ್ತಿ ನೀಡುವ ಅಮೃತ ಗಳಿಗೆಯಿದು' ಎಂದರು.

ಮಲಬಾರ್ ಗೋಲ್ಡ್‌ನ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಮಾತನಾಡಿ, 'ಸಿನಿ ಸಮ್ಮಾನದ ಭಾಗವಾಗಲು ಸಂತಸವಾಗುತ್ತಿದೆ. ಮೂರು ದಶಕಗಳಿಂದ ನಮ್ಮ ಸಂಸ್ಥೆ ಉದ್ಯಮದಲ್ಲಿದ್ದು, ಪ್ರಜಾವಾಣಿಯಂತಹ ಪತ್ರಿಕೆ ಜೊತೆಗಿನ ನಮ್ಮ ಒಡನಾಟ ಸುದೀರ್ಘವಾದುದು. ನಮ್ಮ 34 ಮಳಿಗೆಗಳ ಎಲ್ಲ ಗ್ರಾಹಕರಿಗೂ ಪ್ರಶಸ್ತಿಯ ವಿಷಯ ತಲುಪಿದೆ' ಎಂದು ಹೇಳಿದರು.

'ಪ್ರಜಾವಾಣಿ ಸಿನಿಸಮ್ಮಾನ'ದ ಮುಖ್ಯ ತೀರ್ಪುಗಾರರಲ್ಲಿ ಒಬ್ಬರಾಗಿರುವ ಶ್ರುತಿ ಹರಿಹರನ್, ಚಿತ್ರನಟಿ ಭಾವನಾರಾವ್ ಹಾಗೂ ಮಲಬಾರ್ ಗೋಲ್ಡ್‌ನ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್‌ನ ಮನ್ಸೂರ್, ಮಲಬಾರ್ ಗೋಲ್ಡ್ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ನಟಿ ಭಾವನಾ ರಾವ್, ನಟ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಕಾರ್ಯದರ್ಶಿ ಸುಂದರ್ ರಾಜ್, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ನಟಿ ಶ್ರುತಿ ಹರಿಹರನ್, ಹಿರಿಯ ಮಾರುಕಟ್ಟೆ ವ್ಯವಸ್ಥಾಪಕ ಹುಸ್ಸೈಲ್ ಮತ್ತು ಶಿಜುಲಾಲ್ ಹಾಜರಿದ್ದರು —ಪ್ರಜಾವಾಣಿ ಚಿತ್ರ

ಅತ್ಯಂತ ಸೂಕ್ತ ಹೆಜ್ಜೆ



'ಸಮಾಜದ ಎಲ್ಲ ಸ್ತರದವರನ್ನು ತಲುಪುವ, ಸ್ಫೂರ್ತಿ ನೀಡುವ, ಮನರಂಜಿಸುವ, ಒಟ್ಟಾಗಿಸುವ ಶಕ್ತಿ ಸಿನಿಮಾಕ್ಕಿದ್ದು, ಇಂತಹ ಮಾಧ್ಯಮವನ್ನು ಪ್ರಶಸ್ತಿ ಮೂಲಕ ಸಂಭ್ರಮಿಸುವುದು ಅತ್ಯಂತ ಸೂಕ್ತ ಹೆಜ್ಜೆ. 'ಪ್ರಜಾವಾಣಿ ಸಿನಿ ಸಮ್ಮಾನ'ದ ಭಾಗವಾಗಿ ಬೆಳೆಯುತ್ತಿರುವ ಪ್ರತಿಭೆಗಳನ್ನು ಗೌರವಿಸುವುದು ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಕುಟುಂಬಕ್ಕೆ ಒಂದು ಅತ್ಯದ್ಭುತ ಅನುಭವ. ಪ್ರಾಯೋಜಕತ್ವದ ಹೊರತಾಗಿ ಚಂದನವನದ ಸಿನಿಮಾಗಳೊಂದಿಗಿನ ಸಹಭಾಗಿತ್ವವು ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸಿ, ಬೆಳೆಸುವಲ್ಲಿ ನಮ್ಮ ಬದ್ಧತೆಯನ್ನು ತೋರಿಸುತ್ತದೆ. ಸಂಸ್ಥೆಯ ಅಧ್ಯಕ್ಷನಾಗಿ ಕಲಾವಿದರನ್ನು ಗೌರವಿಸಲು ಹೆಮ್ಮೆ ಎನಿಸುತ್ತಿದೆ' ಎಂದು ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ಅಧ್ಯಕ್ಷ ಎಂ.ಪಿ.ಅಹಮ್ಮದ್ ತಿಳಿಸಿದರು.

ಮಹತ್ವದ ಜವಾಬ್ದಾರಿ

'ಪ್ರಜಾವಾಣಿ ಪತ್ರಿಕೆ ಕಲಾವಿದೆಯಾಗಿ ನನ್ನನ್ನು ಸದಾ ಪ್ರೋತ್ಸಾಹಿಸಿದೆ. ವೈಯಕ್ತಿಕ ಬದುಕಿನ ಭಾಗವೂ ಆಗಿದೆ. ಮೊದಲಿನಿಂದ ಪತ್ರಿಕೆಗೊಂದು ಮೌಲ್ಯವಿದೆ. ಇಂತಹ ಪತ್ರಿಕೆ ನಡೆಸುತ್ತಿರುವ ಸಿನಿ ಸಮ್ಮಾನದ ತೀರ್ಪುಗಾರರ ಸಮಿತಿಯ ಭಾಗವಾಗಿರುವುದು ಅತ್ಯಂತ ಸಂತಸದ ಸಂಗತಿ. ಕನ್ನಡದಲ್ಲಿ ಇವತ್ತು ಹಲವು ಅತ್ಯುತ್ತಮ ಚಿತ್ರಗಳು ಬರುತ್ತಿವೆ. ಇದರ ನಡುವೆ ಪ್ರಶಸ್ತಿಗಾಗಿ ಕೆಲ ಸಿನಿಮಾಗಳನ್ನು, ಪ್ರತಿಭೆಗಳನ್ನು ಆಯ್ಕೆ ಮಾಡುವುದು ಸವಾಲು ಮತ್ತು ಮಹತ್ವದ ಜವಬ್ದಾರಿಯಾಗಿತ್ತು. ಈ ಕಾರ್ಯಕ್ರಮಕ್ಕಾಗಿ ಕಾಯುತ್ತಿದ್ದೇನೆ' ಎಂದು 'ಪ್ರಜಾವಾಣಿ ಸಿನಿಸಮ್ಮಾನ'ದ ಮುಖ್ಯ ತೀರ್ಪುಗಾರ ಮಂಡಳಿ ಸದಸ್ಯೆ ಶ್ರುತಿ ಹರಿಹರನ್ ಹೇಳಿದರು.

ಪದಬಂಧ 5331


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚತುರತೆಯಿಂದಾಡುವ ಚೆಸ್ ಆಟ (4)
3.ದುಮುಗುಟ್ಟುತ್ತಿರುವ ಮದುವೆಯ ಗಂಡು! (4)
5.ಅತಿಯಾದ ಉತ್ಸುಕತೆ (3)
6.ದಿನ ಬೆಳಗುವ ಸೂರ್ಯ (4)
8.ಯತಿಗೆ ಸಿಕ್ಕಿರುವ ರಿಬೇಟ್! (4)
10.ಕಸುವಿನಲ್ಲಿ ಆತುರಾತುರವಾಗಿ ನುಂಗು! (4)
12.ಅವರು ತೋರುತ್ತಿರುವ ಆತುರ! (4)
14.ದಡಿ ಹಿಡಿದಿರುವ ದಾಂಡಿಗ! (3)
15.ಬಾಳೆಹಣ್ಣು ಬೆಲ್ಲದ ರಸವತ್ತಾದ ಮಿಶ್ರಣ (4)
16.ತರತರದ ಕಾಯಿಪಲ್ಯೆ (4)

ಮೇಲಿಂದ ಕೆಳಕ್ಕೆ

1.ನಾಲ್ಕು ಪಾದಗಳುಳ್ಳದ್ದು (4)
2.ಬೇರೆಯ ಉಪಾಯವು ಗರದೊಳಗಿದೆ (4)
3.ಮರದಲ್ಲಿ ಮಧುವನ್ನರಸುವ ಹೆಣ್ಣುತುಂಬಿ (4)
4.ಗಣದ ಮುಂದೆ ಪ್ರತ್ಯಕ್ಷನಾಗಿರುವ ವಿನಾಯಕ (4)
7.ಭವನದ ಹತ್ತಿರವಿರುವ ಮುಸಲ್ಮಾನ ದೊರೆ (3)
9.ಉಲ್ಟಾ ಪಲ್ಟಾ ಆಗಿರುವ ವೇಳೆ (3)
10.ಕಳೆಯಿದ್ದ ಜಾಗದಲ್ಲಿ ಕಾಣಿಸಿದ ಹೆಣ (4)
11.ವಿಷ್ಣುವಿನ ಕೈಯ್ಯಲ್ಲಿರುವ ಚಕ್ರಾಯುಧ (4)
12.ಆಯುತಾಕಾರದ ಸೂಜಿಗಲ್ಲು (4)
13.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)



5330ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅರ್ಧಾಂಗಿ 3.ಮನೆತನ
5.ಲೀಲಾಜಾಲ
6.ವಟು 7.ಗಗನ
9.ನವೀನ 12.ಜಯ
13.ಮಡಿವಾಳ
15.ಸೆರೆಮನೆ 16.ಕರುಳು

ಮೇಲಿಂದ ಕೆಳಕ್ಕೆ:
1.ಅತ್ತೆ 2.ಗಿಲೀಟು
3.ಮಲರೋಗ 4.ನಸುಕು
6.ವರ್ತಮಾನ
8.ನವೋದಯ
10.ನಡುಮನೆ 11.ಹಾವಸೆ
12ಜಳಕ 14.ಅಳು

ಸುಡೊಕು 5717

	5			6	8	1		3
9		6					7	
	8		7			2		6
6		1		5		7		9
			8	9	6			
8				7		5		2
3		9		1			2	
			6		7	9		4
7		8		2			1	


5716 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಸಪ್ತಮಿ ಗಂ. 7-43 ನಕ್ಷತ್ರ: ಮಘಾ ಗಂ. 23-43 ಯೋಗ: ವ್ಯಾಘಾತ ಗಂ. 19-57, ಕರಣ: ವಣಿಜ ಗಂ. 7-43, ವೃಷಭ ಮಾಸದ 12 ನೇ ದಿನ, ಮಳೆನಕ್ಷತ್ರ: ರೋಹಿಣಿ 1.
ರಾಹುಕಾಲ : ಬೆಳಿಗ್ಗೆ 09-00 – 10-30,
ಸೂರ್ಯೋದಯ : 06-06 **ಸೂರ್ಯಾಸ್ತ :** 06-49
ಮುಸ್ಲಿಂ ದಿನಾಂಕ : 07 ಜುಲ್ಕಾಯದ್
ಅದೃಷ್ಟ ಸಂಖ್ಯೆ : 4, 9

ಮೇಷ: ಅರ್ಥವಿಲ್ಲದ ಕುಟುಂಬದ ನಡೆಗಳನ್ನು ವಿರೋಧಿಸಿ ಧ್ವನಿ ಎತ್ತುವಿರಿ. ನಿಮ್ಮ ಪ್ರಾರ್ಥನೆ ದೇವರನ್ನು ತಲುಪಿತು ಎನ್ನುವಂತೆ ನಿಮ್ಮ ಅಭೀಷ್ಟಗಳು ನೆರವೇರುವವು. ಸಾಕುಪ್ರಾಣಿಯ ಸಂಖ್ಯೆ ಹೆಚ್ಚಾಗುವುದು.

ವೃಷಭ: ದೇಹದ ಸೌಂದರ್ಯ ವರ್ಧನೆಗಾಗಿ ಹಣ ಖರ್ಚು ಮಾಡುವಿರಿ. ನೀವು ಹೇಳುವ ತಿಳಿವಳಿಕೆಯ ಮಾತು ಒಬ್ಬರ ಜೀವನವನ್ನು ಉದ್ಧರಿಸುತ್ತದೆ. ನಿಮ್ಮ ಹರಿತವಾದ ಮಾತುಗಳು ತಾಯಿಯ ಮನಸ್ಸನ್ನು ನೋಯಿಸುವ ಸಾಧ್ಯತೆ ಇದೆ.

ಮಿಥುನ: ನಿಮ್ಮ ಸೌಭಾಗ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ವ್ರತಗಳನ್ನು ಮಾಡುವ ನಿರ್ಧಾರ ತೆಗೆದುಕೊಳ್ಳುವಿರಿ. ನಿಮ್ಮದೇ ನಿರೀಕ್ಷೆಯಲ್ಲಿರುವ ಕುಟುಂಬದ ವ್ಯಕ್ತಿಗಳಿಗೆ ಬಿಗುವಿನ ದಿನಚರಿಯಿಂದಾಗಿ ಬೇಸರಗೊಳಿಸುವಿರಿ.

ಕರ್ಕಾಟಕ: ಈಗಿನ ಉದ್ಯೋಗವನ್ನು ಬಿಟ್ಟು ಹೊಸ ಸ್ವಉದ್ಯೋಗ ಒಂದನ್ನು ಶುರು ಮಾಡುವ ಯೋಜನೆ ನಿರೂಪಿಸುವಿರಿ. ಆಧ್ಯಾತ್ಮಿಕ ಪುಸ್ತಕಗಳನ್ನು ಪಠಿಸಿದ ಕಾರಣ ದೈವಿಕ ಅನುಭವ ಪದೇ ಪದೇ ಆಗುತ್ತದೆ.

ಸಿಂಹ: ಶಿಬಿರಗಳಲ್ಲಿ ಭಾಗವಹಿಸಿದ ಕಾರಣವಾಗಿ ಹೆಚ್ಚಿನ ಚಟುವಟಿಕೆಯಿಂದಿರುವ ನಿಮ್ಮ ಮಕ್ಕಳು ನಿಮ್ಮ ಮನಸ್ಸಂತೋಷಕ್ಕೆ ಕಾರಣವಾಗಿರುತ್ತಾರೆ. ನಿಮ್ಮ ಕೆಲವು ತಪ್ಪುಗಳಿಗೆ ಸಣ್ಣ ವಯಸ್ಸಿನಿಂದಾಗಿ ಈ ಕ್ಷಣಕ್ಕೆ ಕ್ಷಮೆ ಸಿಗಬಹುದು.

ಕನ್ಯಾ: ಸಾಂಕ್ರಾಮಿಕ ರೋಗಗಳಿಂದ ಅಧ್ಯಯನ ಹಾಗೂ ಅಧ್ಯಾಪನಕ್ಕೆ ತೊಂದರೆ ಉಂಟಾಗಬಹುದು. ಕ್ಲಿಪ್ತ ಸಮಯಕ್ಕೆ ಸರಿಯಾಗಿ ಬೇಕಾದ ವಸ್ತುಗಳು ನಿಮ್ಮ ಬಳಿ ಇಲ್ಲದಿದ್ದರೂ ಸ್ನೇಹಿತರಿಂದ ಬಂದೊದಗುತ್ತದೆ.

ತುಲಾ: ಕ್ರೂರವಾದ ನಿಮ್ಮ ಅಧಿಕಾರಿಗಳ ವಿರುದ್ಧ ತಿರುಗಿಬೀಳುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಕಾರ್ಯ ಕಲಾಪಗಳ ಒತ್ತಡದಲ್ಲಿಯು ಸ್ನೇಹಿತರ ವರ್ಗಕ್ಕೆ ಸಮಯ ನೀಡಬೇಕಾಗುತ್ತದೆ. ಸಾಧು ಸಂತರ ದರ್ಶನ ಮಾಡುವಿರಿ.

ವೃಶ್ಚಿಕ: ಕಣ್ಣಿನ ಆರೋಗ್ಯದ ವಿಚಾರವಾಗಿ ಎಷ್ಟು ಕಾಳಜಿ ವಹಿಸಿದರೂ ವೈದ್ಯರ ಭೇಟಿ ನಿಯಮಿತವಾಗಿ ಮಾಡುವುದು ತಪ್ಪುವುದಿಲ್ಲ. ಸಂಗಾತಿಯ ಜತೆ ನೀವಂದುಕೊಂಡ ಖುಷಿಯ ಸಮಯ ಕಳೆಯುವ ಅವಕಾಶ ದೊರೆಯುವುದು.

ಧನು: ಎಲ್ಲಾ ಆಲೋಚನೆಗಳು ಸರಿಯೇ ಆಗಿರಬೇಕೆಂಬ ಧೋರಣೆ ಇತರರಿಗೆ ಸರಿ ಎನ್ನಿಸದಿರಬಹುದು. ಕೆಲವು ವ್ಯಕ್ತಿಗಳ ದ್ವೇಷದ ಕೃತ್ಯಗಳ ಫಲವಾಗಿ ನೀವು ಸಂಕಷ್ಟವನ್ನು ಅನುಭವಿಸಬೇಕಾಗುತ್ತದೆ.

ಮಕರ: ಕೆಲವು ಸಮಯಗಳಲ್ಲಿ ನಿಮ್ಮ ಅಜ್ಞಾನದಿಂದ ಮಾಡಿದ ತಪ್ಪು ಕೆಲಸವು ಭವಿಷ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ. ಅಳಿಯನ ಸಹಾಯದಿಂದಾಗಿ ಹೊಸ ನಿವೇಶನವನ್ನು ವ್ಯವಹಾರಿಕ ದೃಷ್ಟಿಯಿಂದ ಖರೀದಿಸುವಿರಿ.

ಕುಂಭ: ಆಲಸ್ಯದ ಕಾರಣವಾಗಿ ನಿತ್ಯದ ಕೆಲಸಗಳು ನಿಂತು ಹೋಗುವ ಸಾಧ್ಯತೆ ಇದೆ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭದ ದಿನವಾಗಿರುತ್ತದೆ. ಅನವಶ್ಯಕವಾದ ವಸ್ತುಗಳನ್ನು ಖರೀದಿ ಮಾಡದಿರಿ.

ಮೀನ: ಬ್ಯಾಂಕ್ ಉದ್ಯಮ ಮಾಡುವ ಸಾಮರ್ಥ್ಯ ಇದೆ ಎಂದು ಧೈರ್ಯ ವಿದ್ದರಷ್ಟೇ ಪರೀಕ್ಷೆ ಕಟ್ಟುವ ಸಾಹಸವನ್ನು ಮಾಡಿ. ತಿಳಿಯದೇ ಮಾಡುವ ತಪ್ಪುಗಳಿಗೆ ಜೀವನ ಪರ್ಯಂತ ಸಮಸ್ಯೆ ಪಡುವಂತಾಗುತ್ತದೆ.

ವಿದೇಶದಲ್ಲಿ ಆಸ್ತಿ ಇಲ್ಲ: ಇಮ್ರಾನ್

ಇಸ್ಲಾಮಾಬಾದ್ (ಪಿಟಿಐ): 'ನೋ ಫ್ಲೈ ಲಿಸ್ಟ್' ಗೆ ಸೇರಿಸಿದ ಬೆನ್ನಲ್ಲೆ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಶುಕ್ರವಾರ ಆಡಳಿತ ಒಕ್ಕೂಟದ ಉನ್ನತ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ್ದು, ಹೊರ ದೇಶದಲ್ಲಿ ಆಸ್ತಿ ಅಥವಾ ಯಾವುದೇ ವ್ಯವಹಾರ ಹೊಂದಿಲ್ಲದ ಕಾರಣ ವಿದೇಶಕ್ಕೆ ಪ್ರಯಾಣಿಸುವ ಯೋಜನೆ ಇಲ್ಲ ಎಂದು ಹೇಳಿದ್ದಾರೆ.

ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿ ಹಾಗೂ ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಪಕ್ಷದ ಇತರ ಮುಖಂಡರು ದೇಶ ತೊರೆಯದಂತೆ ನಿರ್ಬಂಧಿಸಲಾಗಿದೆ ಎಂದು ವರದಿಯಾಗಿದೆ.

'ನನ್ನ ಹೆಸರನ್ನು ಎಕ್ಸಿಟ್ ಕಂಟ್ರೋಲ್ ಪಟ್ಟಿ (ಇಸಿಎಲ್) ನಲ್ಲಿ ಸೇರಿಸಿದಕ್ಕಾಗಿ ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ. ಏಕೆಂದರೆ ವಿದೇಶದಲ್ಲಿ ಆಸ್ತಿ, ವ್ಯವಹಾರ ಹೊಂದಿಲ್ಲ ಅಥವಾ ಬ್ಯಾಂಕ್ ಖಾತೆ ಸಹ ಹೊಂದಿಲ್ಲ' ಎಂದು ಇಮ್ರಾನ್ ಖಾನ್ ಟ್ವೀಟ್ ಮಾಡಿದ್ದಾರೆ.

ಇಮ್ರಾನ್, ಅವರ ಪತ್ನಿ ಮತ್ತು ಕನಿಷ್ಠ 80 ಜನರು ದೇಶ ತೊರೆಯದಂತೆ ಪಾಕಿಸ್ತಾನ ಸರ್ಕಾರ ನಿರ್ಬಂಧ ಹೇರಿದೆ ಎಂದು ಸಮಾ ನ್ಯೂಸ್ ಚಾನೆಲ್ ಗುರುವಾರ ವರದಿ ಮಾಡಿತ್ತು.

ಮೂರು ವರ್ಷಗಳ ಅವಧಿಗೆ ನಿರಾಕ್ಷೇಪಣಾ ಪತ್ರ ನೀಡಿದ ದೆಹಲಿ ಕೋರ್ಟ್

ರಾಹುಲ್‌ಗೆ ಪಾಸ್‌ಪೋರ್ಟ್: ಸಮ್ಮತಿ

ಪ್ರಜಾವಾಣಿ ವಾರ್ತೆ



ರಾಹುಲ್



ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಹೊಸದಾಗಿ ಸಾಮಾನ್ಯ ಪಾಸ್‌ಪೋರ್ಟ್ ಪಡೆಯಲು ಮೂರು ವರ್ಷಗಳ ಅವಧಿಗೆ ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ದೆಹಲಿ ಕೋರ್ಟ್ ಶುಕ್ರವಾರ ಮಂಜೂರು ಮಾಡಿದೆ.

ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂಎಂ) ವೈಭವ್ ಮೆಹ್ತಾ, 'ನಿಮ್ಮ ಅರ್ಜಿಯನ್ನು ಭಾಗಶಃ ಪರಿಗಣಿಸಿದ್ದೇನೆ. 10 ವರ್ಷಗಳಿಗೆ ಅಲ್ಲ, ಮೂರು ವರ್ಷಗಳಿಗೆ ಎನ್‌ಒಸಿ ಕೊಡಲಾಗುವುದು' ಎಂದು ರಾಹುಲ್ ಅವರ ವಕೀಲರಿಗೆ ತಿಳಿಸಿದರು.

ಮಾನನಷ್ಟ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿ, ಲೋಕಸಭೆ ಸದಸ್ಯತ್ವ ಕಳೆದುಕೊಂಡ ನಂತರ ರಾಹುಲ್ ತಮ್ಮ ರಾಜತಾಂತ್ರಿಕ ಪಾಸ್‌ಪೋರ್ಟ್ ಒಪ್ಪಿಸಿದ್ದಾರೆ. ಅವರು 10 ವರ್ಷದ ಅವಧಿಯ ಸಾಮಾನ್ಯ ಪಾಸ್‌ಪೋರ್ಟ್‌ಗೆ ಎನ್‌ಒಸಿ ಕೋರಿ ಮಂಗಳವಾರ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಲಿಖಿತ ಆಕ್ಷೇಪಣೆ ಸಲ್ಲಿಸಲು ಬಿಜೆಪಿಯ ಸುಬ್ರಮಣಿಯನ್ ಸ್ವಾಮಿ ಅವರಿಗೆ ಕೋರ್ಟ್ ಅವಕಾಶ ನೀಡಿತ್ತು.

'ರಾಹುಲ್ ಅವರಿಗೆ ವಿದೇಶಕ್ಕೆ ತೆರಳಲು ಅವಕಾಶ ನೀಡಿದರೆ, ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ತನಿಖೆಗೆ ಅಡ್ಡಿಯಾಗಬಹುದು. ಇದೊಂದು ವಿಶೇಷ ಪ್ರಕರಣ. ರಾಹುಲ್ ಅವರ ಭಾರತೀಯ ಪೌರತ್ವವು ಪ್ರಶ್ನಾರ್ಹವಾಗಿದೆ. ಅವರು ಬ್ರಿಟಿಷ್ ಪ್ರಜೆ. ಅವರಿಗೆ ಪಾಸ್‌ಪೋರ್ಟ್ ಪಡೆಯಲು ಒಂದು ವರ್ಷಕ್ಕೆ ಮಾತ್ರ ಎನ್‌ಒಸಿ ನೀಡಬಹುದು. ನಂತರ ಪ್ರತಿ ವರ್ಷ ನವೀಕರಿಸಬೇಕು' ಎಂದು ಸ್ವಾಮಿ ವಾದಿಸಿದರು. ಈ ವಾದವನ್ನು ಕೋರ್ಟ್ ಒಪ್ಪಿಲ್ಲ.

ಸುಬ್ರಮಣಿಯನ್ ಸ್ವಾಮಿ ಅವರು ನ್ಯಾಷನಲ್ ಹೆರಾಲ್ಡ್ ಪ್ರಕರಣದ ಖಾಸಗಿ ದೂರುದಾರ. ಇದಲ್ಲಿ ರಾಹುಲ್ ಗಾಂಧಿ, ಸೋನಿಯಾಗಾಂಧಿ ಹಾಗೂ ಇತರರು ಆರೋಪಿಗಳಾಗಿದ್ದಾರೆ.

ರಾಹುಲ್ ಗಾಂಧಿ ಅವರು ಜೂನ್ ಮೊದಲ ವಾರದಲ್ಲಿ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆ. ವಾಷಿಂಗ್ಟನ್ ಡಿಸಿ, ನ್ಯೂಯಾರ್ಕ್ ಮತ್ತು ಸ್ಯಾನ್ ಫ್ರಾನ್ಸಿಸ್ಕೊಗೆ ಭೇಟಿ ನೀಡಲಿರುವ ಅವರು ಅನಿವಾಸಿ ಭಾರತೀಯರ ಜತೆ ಸಭೆ ನಡೆಸಲಿದ್ದು, ಬಳಿಕ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಸತ್ಯೇಂದ್ರ ಜೈನ್‌ಗೆ ಮಧ್ಯಂತರ ಜಾಮೀನು



ನವದೆಹಲಿ: ದೆಹಲಿಯ ಮಾಜಿ ಸಚಿವ ಸತ್ಯೇಂದ್ರ ಜೈನ್ ಅವರಿಗೆ ವೈದ್ಯಕೀಯ ಆಧಾರದ ಮೇಲೆ ಸುಪ್ರೀಂಕೋರ್ಟ್ ಶುಕ್ರವಾರ ಆರು ವಾರಗಳ ಕಾಲ ಮಧ್ಯಂತರ ಜಾಮೀನು ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ಪಿ.ಎಸ್.ನರಸಿಂಹ ಅವರಿದ್ದ ನ್ಯಾಯಪೀಠ, 'ಜೈನ್ ಅವರು ತಮ್ಮ ಆಯ್ಕೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು. ಜುಲೈ 10ರ ಒಳಗಾಗಿ ಸಂಬಂಧಪಟ್ಟ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಬೇಕು' ಎಂದು ಸೂಚಿಸಿತು.

'ಮಧ್ಯಂತರ ಜಾಮೀನು ಅವಧಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಬಾರದು ಹಾಗೂ ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು' ಎಂದೂ ನ್ಯಾಯಪೀಠ ನಿರ್ದೇಶಿಸಿತು.

'ಏಐಐಎಂಎಸ್ ಅಥವಾ ರಾಮಮನೋಹರ ಲೋಹಿಯಾ ಆಸ್ಪತ್ರೆ ವೈದ್ಯರಿಂದ ಜೈನ್ ಅವರ ಆರೋಗ್ಯ ತಪಾಸಣೆ ನಡೆಸುವಂತೆ ನಿರ್ದೇಶಿಸಬೇಕು' ಎಂಬ ಜಾರಿ ನಿರ್ದೇಶನಾಲಯದ ವಾದವನ್ನು ನ್ಯಾಯಪೀಠ ತಳ್ಳಿಹಾಕಿತು.

ಸತ್ಯೇಂದ್ರ ಜೈನ್ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರು. ಜಾರಿ ನಿರ್ದೇಶನಾಲಯ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಹಾಜರಿದ್ದರು.

ಅಭಿಷೇಕ್‌ಗೆ ವಿಧಿಸಿದ್ದ ₹25 ಲಕ್ಷ ದಂಡಕ್ಕೆ ತಡೆ



ನವದೆಹಲಿ(ಪಿಟಿಐ): ಪಶ್ಚಿಮ ಬಂಗಾಳದಲ್ಲಿನ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ತೃಣಮೂಲ ಕಾಂಗ್ರೆಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಸಂಸದ ಅಭಿಷೇಕ್ ಬ್ಯಾನರ್ಜಿ ಅವರಿಗೆ ಕಲ್ಕತ್ತ ಹೈಕೋರ್ಟ್ ವಿಧಿಸಿರುವ ₹25 ಲಕ್ಷ ದಂಡಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ. ಆದರೆ, ಅವರನ್ನು ಸಿಬಿಐ, ಜಾರಿ ನಿರ್ದೇಶನಾಲಯ (ಇ.ಡಿ) ವಿಚಾರಣೆಗೆ ಒಳಪಡಿಸಲು ಯಾವುದೇ ನಿರ್ಬಂಧ ಇಲ್ಲ ಎಂದು ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ಪಿ.ಎಸ್. ನರಸಿಂಹ ಅವರಿದ್ದ ರಜಾಕಾಲದ ಪೀಠವು, ಅಭಿಷೇಕ್ ಬ್ಯಾನರ್ಜಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.

'ದಂಡ ವಿಧಿಸಿರುವುದನ್ನು ಹೊರತುಪಡಿಸಿ, ಇ.ಡಿ ಮತ್ತು ಸಿಬಿಐ ವಿಚಾರಣೆಗೆ ಕಲ್ಕತ್ತ ಹೈಕೋರ್ಟ್ ಆದೇಶಿಸಿರುವುದರಲ್ಲಿ ಮೇಲ್ನೋಟಕ್ಕೆ ಯಾವುದೇ ತಪ್ಪು ಕಾಣುತ್ತಿಲ್ಲ. ಹೀಗಾಗಿ, ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸುವುದಿಲ್ಲ' ಎಂದು ಪೀಠವು ಹೇಳಿದೆ.


ಸುದ್ದಿ 2 ನಿಮಿಷ

'ಈ ವರ್ಷ ವಾಡಿಕೆಯಂತೆ ಮಳೆ'

ನವದೆಹಲಿ (ಪಿಟಿಐ): ಈ ಮುಂಗಾರು ಅವಧಿಯಲ್ಲಿ ದೇಶದಾದ್ಯಂತ ವಾಡಿಕೆಯಂತೆ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ಅಂದಾಜಿಸಿದೆ.

ಪರ್ಯಾಯ ದ್ವೀಪಗಳಾದ ದಕ್ಷಿಣ ಕರ್ನಾಟಕ, ಉತ್ತರ ತಮಿಳುನಾಡು, ರಾಜಸ್ಥಾನ ಮತ್ತು ಲಡಾಖ್‌ನ ಕೆಲವು ಪ್ರದೇಶಗಳು ಹೊರತುಪಡಿಸಿ ದೇಶದ ಹಲವು ಭಾಗಗಳಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದೂ ಅದು ತಿಳಿಸಿದೆ.

ಐಎಂಡಿಯ ಪರಿಸರ ನಿರ್ವಹಣೆ ಮತ್ತು ಸಂಶೋಧನಾ ಕೇಂದ್ರದ ಮುಖ್ಯಸ್ಥ ಶಿವಾನಂದ ಪೈ ಅವರು, 'ಎಲ್ ನಿನೊ (ಪೆಸಿಫಿಕ್ ಸಾಗರದ ಮೇಲ್ಮೈಯಲ್ಲಿ ಅಸಹಜ ಬಿಸಿಯಾಗುವಿಕೆ) ಪರಿಣಾಮ ಉದ್ಭವಿಸುವ ಸಾಧ್ಯತೆ ಶೇ 90ರಷ್ಟಿದೆ. ಆದರೆ ಮುಂಗಾರು ಅವಧಿಯಲ್ಲಿ ಹಿಂದೂ ಮಹಾ ಸಾಗರದ ಮೇಲ್ಮೈ ಉಷ್ಣತೆಯಲ್ಲಿಯೂ ವ್ಯತ್ಯಾಸ ಉಂಟಾಗುವ ಸಾಧ್ಯತೆ ಹೆಚ್ಚಿದೆ. ಇದು ಎಲ್ ನಿನೊ ಪರಿಣಾಮವನ್ನು ದುರ್ಬಲಗೊಳಿಸಿ ದೇಶದ ಹಲವು ಭಾಗಗಳಲ್ಲಿ ಮಳೆ ಸುರಿಸಲಿದೆ. ಇದರಂತೆ ರಾಜಸ್ಥಾನ, ಪಂಜಾಬ್ ಮತ್ತು ಹರಿಯಾಣ ಹೊರತುಪಡಿಸಿ ದೇಶದಾದ್ಯಂತ ವಾಡಿಕೆಯ ಮಳೆಯಾಗಲಿದೆ' ಎಂದು ತಿಳಿಸಿದ್ದಾರೆ.



'ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ದೀರ್ಘಾವಧಿ ಸರಾಸರಿ ಶೇ 96ರಷ್ಟು ಮಳೆಯಾಗಲಿದೆ. ಇದಕ್ಕಿಂತ ಶೇ 4ರಷ್ಟು ಹೆಚ್ಚು ಅಥವಾ ಕಡಿಮೆ ಮಳೆಯೂ ಆಗಬಹುದು. ನೈಋತ್ಯ ಮುಂಗಾರು ವಾಡಿಕೆಯಂತೆ ಇರಲಿದ್ದು, ದೀರ್ಘಾವಧಿ ಸರಾಸರಿ ಶೇ 96ರಿಂದ 106ರಷ್ಟು ಮಳೆ ಸುರಿಯಲಿದೆ' ಎಂದು ತಿಳಿಸಿದ್ದಾರೆ.


ರಾಜಸ್ಥಾನ: ಭಾರಿ ಮಳೆಗೆ 12 ಜನ ಸಾವು, ಹಲವು ಮಂದಿಗೆ ಗಾಯ

ಜೈಪುರ (ಪಿಟಿಐ): ರಾಜಸ್ಥಾನದ ಟೊಂಕ ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ಶುಕ್ರವಾರ ಪ್ರತ್ಯೇಕ ಘಟನೆಗಳಲ್ಲಿ 12 ಜನರು ಮೃತಪಟ್ಟಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ.

ಜಿಲ್ಲೆಯ ಹಲವೆಡೆ ಗುರುವಾರ ರಾತ್ರಿ ಭಾರಿ ಗಾಳಿ ಮತ್ತು ಮಳೆಯಿಂದ ಜೀವ ಹಾನಿ ಮತ್ತು ಆಸ್ತಿ ಹಾನಿ ಸಂಭವಿಸಿದೆ. ಹಲವೆಡೆ ಮನೆಗಳ ಗೋಡೆಗಳು ಕುಸಿದಿವೆ. ಜೈಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗರಿಷ್ಠ 96 ಕಿ.ಮೀ ವೇಗದಲ್ಲಿ ಗಾಳಿ ಬೀಸಿರುವುದು ವರದಿಯಾಗಿದೆ.

ಟೊಂಕ ನಗರ ಮತ್ತು ನಿವಾಯಿಯಲ್ಲಿ ತಲಾ ಮೂವರು, ಮಲ್ಪುರ ಮತ್ತು ದೇವಲಿಯಲ್ಲಿ ತಲಾ ಇಬ್ಬರು, ಟೋಡಾರಾಯ್‌ಸಿಂಗ್ ಮತ್ತು ಉನಿಯಾರಾದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಗಾಯಗೊಂಡಿರುವವರನ್ನು ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಜೈಪುರ, ಟೊಂಕ ಸೇರಿ ಹಲವೆಡೆ 6 ಸೆಂ.ಮೀ.ವರೆಗೂ ಮಳೆ ಸುರಿದಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಬಿಕನೇರ್, ಜೈಪುರ, ಭರತ್‌ಪುರ, ಅಜ್ಮೇರ್, ಕೋಟಾ ವಿಭಾಗಗಳಲ್ಲಿ ಶನಿವಾರ ಕೂಡ ಗುಡುಗು ಸಹಿತ ಭಾರಿ ಗಾಳಿ-ಮಳೆಯಾಗುವ ಮುನ್ಸೂಚನೆ ಇದೆ ಎಂದು ಐಎಂಡಿ ವರದಿ ಹೇಳಿದೆ.

ಮುಟ್ಟಿನ ರಜೆ: ಶೇ 73 ಮಹಿಳೆಯರ ಒಲವು



ನವದೆಹಲಿ (ಪಿಟಿಐ): ಮುಟ್ಟಿನ ರಜೆ ತೆಗೆದುಕೊಳ್ಳಲು ತಾವು ಕಾರ್ಯ ನಿರ್ವಹಿಸುತ್ತಿರುವ ಕಂಪನಿಗಳು ಅವಕಾಶ ನೀಡಬೇಕೆಂದು ಶೇ 73ರಷ್ಟು ಮಹಿಳೆಯರು ಬಯಸುತ್ತಾರೆ ಎಂದು ಇತ್ತೀಚೆಗೆ ನಡೆದ ಸಮೀಕ್ಷೆಯೊಂದು ಹೇಳಿದೆ.

ನೈರ್ಮಲ್ಯಕ್ಕೆ ಆದ್ಯತೆ ಇರುವ ಮತ್ತು ಮಹಿಳೆಯರಿಗೆ ಸುಲಭವಾಗಿ ಸಿಗುವ ನೈರ್ಮಲ್ಯಕ್ಕೆ ಸಂಬಂಧಿಸಿದ ಮೂಲಸೌಕರ್ಯಗಳನ್ನು ಹೊಂದಿದ ಋತುಚಕ್ರ ಸ್ನೇಹಿ ಕೆಲಸದ ಸ್ಥಳದ ಬಗ್ಗೆ ಶೇ 86.6ರಷ್ಟು ಮಹಿಳೆಯರು ಒಲವು ವ್ಯಕ್ತಪಡಿಸಿದ್ದಾರೆ.

ಮಹಿಳೆಯರ ವೈಯಕ್ತಿಕ ಆರೋಗ್ಯಕ್ಕೆ ಸಂಬಂಧಿಸಿ 'ಎವರ್‌ಟೀನ್' ಬ್ರ್ಯಾಂಡ್‌ನಡಿ ಉತ್ಪನ್ನಗಳನ್ನು ತಯಾರಿಸುವ ವೆಟ್ ಅಂಡ್ ಡ್ರೈ ಪರ್ಸನಲ್ ಕೇರ್ ಎಂಬ ಕಂಪನಿ ಇತ್ತೀಚೆಗೆ ನಡೆಸಿರುವ 'ಋತುಚಕ್ರ ನೈರ್ಮಲ್ಯ ಸಮೀಕ್ಷೆ 2023'ರಲ್ಲಿ ಈ ಮಾಹಿತಿ ಇದೆ.

'ಮುಟ್ಟಿನ ರಜೆ ತೆಗೆದುಕೊಂಡ ಅವಧಿಗೆ ವೇತನ ನೀಡುವುದನ್ನು ತಾವು ಬಯಸುವುದಿಲ್ಲ ಎಂಬುದಾಗಿ ಶೇ 71.7ರಷ್ಟು ಮಹಿಳೆಯರು ತಿಳಿಸಿದ್ದಾರೆ. ಈ ಅವಧಿಯ ವೇತನ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಕಂಪನಿಗಳು ಮಹಿಳೆಯರನ್ನು ನೇಮಕ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ ಎಂಬ ಭಯವೇ ಇದಕ್ಕೆ ಕಾರಣ' ಎಂಬುದನ್ನೂ ಸಮೀಕ್ಷೆ ಬಹಿರಂಗಪಡಿಸಿದೆ.


ದೆಹಲಿ, ಮುಂಬೈ, ಬೆಂಗಳೂರು, ಹೈದರಾಬಾದ್, ಕೋಲ್ಕತ್ತ, ಚೆನ್ನೈ, ಪುಣೆ, ಅಹಮದಾಬಾದ್, ಲಖನೌ ಮತ್ತು ಪಟ್ನಾ ಸೇರಿದಂತೆ ವಿವಿಧ ನಗರಗಳಲ್ಲಿ ನಡೆಸಿರುವ ಈ ಸಮೀಕ್ಷೆಯಲ್ಲಿ 18 ರಿಂದ 35 ವರ್ಷದೊಳಗಿನ 10 ಸಾವಿರ ಮಹಿಳೆಯರು ಪಾಲ್ಗೊಂಡಿದ್ದರು.

ಮೇ 28ರಂದು 'ವಿಶ್ವ ಋತುಚಕ್ರ ನೈರ್ಮಲ್ಯ ದಿನ'ವಿದ್ದು, ಈ ಅಂಗವಾಗಿ ಸಮೀಕ್ಷೆಯ ವರದಿಯನ್ನು ಬಿಡುಗಡೆಗೊಳಿಸಲಾಗಿದೆ.

ಉದ್ಯೋಗ ಸ್ಥಳವು ಋತುಚಕ್ರ ಸ್ನೇಹಿಯಾಗಿರುವಂತೆ ಮಾಡುವ ವಿಧಾನಗಳನ್ನು ಅಳವಡಿಸಿಕೊಳ್ಳಲು ಕಾರ್ಪೊರೇಟ್ ಕಂಪನಿಗಳು ಆದ್ಯತೆ ನೀಡಬೇಕು ಎಂದು ಪಿಎಎನ್ ಹೆಲ್ತ್‌ಕೇರ್ ಸಂಸ್ಥೆಯ ಸಿಇಒ ಚಿರಾಗ್ ಪಾನ್ ಅವರು ಹೇಳಿದ್ದಾರೆ.

'ಕೇವಲ ಶೇ 5.2ರಷ್ಟು ಮಹಿಳೆಯರು ತಮ್ಮ ವ್ಯವಸ್ಥಾಪಕರ ಜೊತೆ ಮುಟ್ಟಿನ ಕುರಿತು ಚರ್ಚಿಸಲು ಸಂಕೋಚಪಡುವುದಿಲ್ಲ. ಶೇ 39.9ರಷ್ಟು ಮಹಿಳೆಯರು ಮುಟ್ಟಿನ ಕುರಿತು ಕೆಲಸದ ಸ್ಥಳದಲ್ಲಿ ಮಾತನಾಡಲು ಬಯಸುವುದಿಲ್ಲ. ತಮ್ಮ ಮಹಿಳಾ ಸಹೋದ್ಯೋಗಿಗಳ ಜೊತೆಗೆ ಸಹ ಅವರು ಈ ಕುರಿತು ಚರ್ಚಿಸಲು ಇಷ್ಟಪಡುವುದಿಲ್ಲ ಎಂಬುದೂ ನಮ್ಮ ಸಮೀಕ್ಷೆಯಿಂದ ತಿಳಿದು ಬಂದಿದೆ' ಎಂದು ಅವರು ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,321
ಇಂದಿನ ಅಂತ್ಯ	18,499
▲	178
ದಿನದ ಗರಿಷ್ಠ	18,508

ಷೇರುಪೇಟೆಯ ಉತ್ಸಾಹ ಹೆಚ್ಚಿಸಿದ ಮುಂಗಾರು, ವಿದೇಶಿ ಹೂಡಿಕೆ

5 ತಿಂಗಳ ಗರಿಷ್ಠ ಮಟ್ಟಕ್ಕೆ ವಹಿವಾಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯ ಕಂಡಿದೆ. ಮುಂಬೈ ಷೇರುಪೇಟೆ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕಗಳು ಐದು ದಿನಗಳ ವಹಿವಾಟಿನಲ್ಲಿ ಶೇಕಡ 1ಕ್ಕೂ ಹೆಚ್ಚಿನ ಏರಿಕೆ ಕಂಡಿವೆ. 2022ರ ಡಿಸೆಂಬರ್ ನಂತರದ ವಹಿವಾಟಿನ ಗರಿಷ್ಠ ಅಂತ್ಯ ಇದಾಗಿದೆ.

ದೇಶದ ಷೇರುಪೇಟೆಗಳ ವಾರದ ವಹಿವಾಟಿನ ಮೇಲೆ ಈ ವಾರ ಜಾಗತಿಕ ವಿದ್ಯಮಾನಗಳು ಹೆಚ್ಚು ಪ್ರಭಾವ ಬೀರಿದವು. ಭಾರತದಲ್ಲಿ ದೇಶಿ ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸಿದರು. ಹೀಗಿದ್ದರೂ ಭಾರತದ ಆರ್ಥಿಕ ಬೆಳವಣಿಗೆಯ ಮುನ್ನೋಟ ಉತ್ತಮ ಆಗಿರುವುದರಿಂದ ವಹಿವಾಟು ಚೇತರಿಕೆ ಕಂಡಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ 'ಪ್ರಜಾವಾಣಿ'ಗೆ ತಿಳಿಸಿದರು.



ಐ.ಟಿ. ಮತ್ತು ಔಷಧ ವಲಯದ ಷೇರುಗಳು ಚೇತರಿಕೆ ಹಾದಿಗೆ ಮರಳಿವೆ. 2022-23ನೇ ಹಣಕಾಸು ವರ್ಷದಲ್ಲಿ ಜಿಡಿಪಿಯು ಶೇ 7ನ್ನು ಮೀರುವ ಅಂದಾಜು ಮಾಡಲಾಗಿದೆ. ಆ ಮೂಲಕ ಭಾರತದ ಆರ್ಥಿಕ ಬೆಳವಣಿಗೆಯ ಒಟ್ಟಾರೆ ಮುನ್ನೋಟ ಸುಧಾರಿಸಲಿದೆ ಎಂದು ಅವರು ಹೇಳಿದರು.

ನಿಫ್ಟಿಯು 18,500 ಅಂಶಗಳಿಗೆ ತಲುಪುವ ಮೂಲಕ ಸಕಾರಾತ್ಮ ನೆಲೆಯಲ್ಲಿ ವಾರದ ವಹಿವಾಟು ಅಂತ್ಯಗೊಂಡಿದೆ. ಲೋಹ ಮತ್ತು ಔಷಧ ಒಳಗೊಂಡು ಬಹುತೇಕ ಎಲ್ಲ ವಲಯಗಳೂ ಗಳಿಕೆ ಕಂಡಿವೆ. ಪ್ರಮುಖ ಕಂಪನಿ ರಿಲಯನ್ಸ್ ಇಂಡಸ್ಟ್ರೀಸ್ ಉತ್ತಮ ಗಳಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸಿದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಮಾಹಿತಿ ನೀಡಿದರು.

ಮಿಡ್, ಸ್ಮಾಲ್ ಮತ್ತು ಮೈಕ್ರೊ ಕ್ಯಾಪ್ ಸೂಚ್ಯಂಕಗಳು ವಾರದ ವಹಿವಾಟಿನಲ್ಲಿ ಸಕಾರಾತ್ಮಕ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ. ಮುಂಗಾರು ವಾಡಿಕೆಯಂತೆಯೇ ಇರುವ ನಿರೀಕ್ಷೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ. ಇದು ಮಾರುಕಟ್ಟೆಯಲ್ಲಿ ಉತ್ಸಾಹ ಹೆಚ್ಚಾಗಲು ಕಾರಣವಾಗಿದೆ. ನಿಫ್ಟಿ-50 ಸೂಚ್ಯಂಕದಲ್ಲಿ 45 ಕಂಪನಿಗಳು ಮಾರುಕಟ್ಟೆಯ ನಿರೀಕ್ಷೆಯಂತೆಯೇ ಗಳಿಕೆ ಕಂಡುಕೊಂಡಿವೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ತಿಳಿಸಿದರು.

ಎಫ್‌ಐಐ ಹೂಡಿಕೆ: ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಖರೀದಿಸಲು ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ಮೇ 22 ರಿಂದ 25ವರೆಗೆ ₹ 2,880 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ರಿಲಯನ್ಸ್ ಗಳಿಕೆ ₹45,887 ಕೋಟಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಶುಕ್ರವಾರದ ವಹಿವಾಟಿನಲ್ಲಿ ಶೇ 3ರಷ್ಟು ಏರಿಕೆ ಕಂಡಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ₹45,887 ಕೋಟಿ ಹೆಚ್ಚಾಗಿ ಒಟ್ಟು ಮೌಲ್ಯವು ₹16.95 ಲಕ್ಷ ಕೋಟಿಗೆ ತಲುಪಿದೆ.

ಬಿಎಸ್‌ಇನಲ್ಲಿ ಕಂಪನಿ ಷೇರು ಶೇ 2.79ರಷ್ಟು ಹೆಚ್ಚಾಗಿ ₹ 2,506ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಕಂಪನಿ ಷೇರು ಮೌಲ್ಯ ಶೇ 2.80ರಷ್ಟು ಏರಿಕೆ ಕಂಡು ₹2,508ರಂತೆ ವಹಿವಾಟು ಅಂತ್ಯಗೊಳಿಸಿತು.

₹75ರ ಹೊಸ ನಾಣ್ಯ ಬಿಡುಗಡೆ ಮಾಡಲಿರುವ ಕೇಂದ್ರ

ನವದೆಹಲಿ (ಪಿಟಿಐ): ಸಂಸತ್ತಿನ ಹೊಸ ಕಟ್ಟಡದ ಉದ್ಘಾಟನೆಯ ಸ್ಮರಣಾರ್ಥವಾಗಿ ಕೇಂದ್ರ ಸರ್ಕಾರವು ₹75ರ ಮುಖಬೆಲೆಯ ನಾಣ್ಯಗಳನ್ನು ಹೊರತರಲಿದೆ. ಸಂಸತ್ತಿನ ಹೊಸ ಕಟ್ಟಡವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಉದ್ಘಾಟಿಸಲಿದ್ದಾರೆ.

ಕೇಂದ್ರ ಆರ್ಥಿಕ ವ್ಯವಹಾರಗಳ ಇಲಾಖೆ ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಈ ನಾಣ್ಯಗಳ ಗರಿಷ್ಠ ತೂಕ 35.5 ಗ್ರಾಂ ಇರಲಿದೆ. ನಾಣ್ಯದ ಒಂದು ಬದಿಯಲ್ಲಿ ಅಶೋಕ ಸ್ತಂಭದಲ್ಲಿರುವ ಸಿಂಹಗಳ ಚಿತ್ರ ಇರುತ್ತದೆ. ಅದರ ಕೆಳಗಡೆ '₹ 75' ಎಂಬ ಉಲ್ಲೇಖ ಇರುತ್ತದೆ. ಇನ್ನೊಂದು ಬದಿಯಲ್ಲಿ ಸಂಸತ್ ಸಂಕೀರ್ಣದ ಚಿತ್ರ ಇರುತ್ತದೆ.

ಕರ್ಣಾಟಕ ಬ್ಯಾಂಕ್ ಸಿಇಒ ಆಗಿ ಶ್ರೀಕೃಷ್ಣನ್ ಹರಿಹರ ಶರ್ಮ ನೇಮಕ

ಪ್ರಜಾವಾಣಿ ವಾರ್ತೆ



ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ಶ್ರೀಕೃಷ್ಣನ್ ಹರಿಹರ ಶರ್ಮ ನೇಮಕಗೊಂಡಿದ್ದಾರೆ.

ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅವರನ್ನು ನೇಮಕ ಮಾಡಲಾಗಿದೆ.

ಶ್ರೀಕೃಷ್ಣನ್ ಅವರು ಬ್ಯಾಂಕಿಂಗ್‌ನ ವಿವಿಧ ಕ್ಷೇತ್ರಗಳಲ್ಲಿ ಹಾಗೂ ತಂತ್ರಜ್ಞಾನ, ಪಾವತಿ ಕ್ಷೇತ್ರಗಳಲ್ಲಿ 40 ವರ್ಷಗಳ ಅನುಭವ ಹೊಂದಿದ್ದಾರೆ. ಈ ಮೊದಲು ಅವರು ಎಚ್‌ಡಿಎಫ್‌ಸಿ ಬ್ಯಾಂಕ್, ಯೆಸ್ ಬ್ಯಾಂಕ್ ಹಾಗೂ ಜಿಯೊ ಪೇಮೆಂಟ್ಸ್ ಬ್ಯಾಂಕ್‌ನಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದರು.

'ಕರ್ಣಾಟಕ ಬ್ಯಾಂಕ್ ಕುಟುಂಬಕ್ಕೆ ಸೇರಲು ಹೆಮ್ಮೆಯಾಗುತ್ತಿದೆ. 100 ವರ್ಷಗಳಿಂದ ನಂಬಿಕೆ ಮತ್ತು ಒಳ್ಳೆಯ ಹೆಸರನ್ನು ಬೆಳೆಸಿಕೊಂಡು ಬಂದ ಬ್ಯಾಂಕ್‌ನಲ್ಲಿ ಕೆಲಸ ಮಾಡಲು ಉತ್ಸುಕನಾಗಿದ್ದೇನೆ' ಎಂದು ಶ್ರೀಕೃಷ್ಣನ್ ಹೇಳಿದ್ದಾರೆ.

ಮಹೀಂದ್ರ ಲಾಭ ಏರಿಕೆ

ಮುಂಬೈ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಮಾರ್ಚ್ ತ್ರೈಮಾಸಿಕದ ಲಾಭದಲ್ಲಿ ಶೇಕಡ 18ರಷ್ಟು ಏರಿಕೆ ದಾಖಲಿಸಿದೆ. ಕಂಪನಿಯ ತೆರಿಗೆ ನಂತರದ ಲಾಭವು ₹2,637 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯ ತೆರಿಗೆ ನಂತರದ ಲಾಭವು ₹2,237 ಕೋಟಿ ಆಗಿತ್ತು. ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ₹ 25,934 ಕೋಟಿ ಆಗಿದ್ದುದು ಈ ಬಾರಿ ₹32,366 ಕೋಟಿಗೆ ಏರಿಕೆ ಆಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹525
	12 ಮೊಟ್ಟೆಗೆ	₹72
ಮೈಸೂರು	100 ಮೊಟ್ಟೆಗೆ	₹530

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1605 (1615)
ಸೋಯಾ (ರಿಫೈಂಡ್)	₹910 (902)
ಸೂರ್ಯಕಾಂತಿ (ರಿಫೈಂಡ್)	₹930 (925)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29999-32999
ಕೋಕ	21089-31599
ಹಳೆಚಾಲಿ	36599-39719
ಹೊಸಚಾಲಿ	35889-37519
ಶಿವಮೊಗ್ಗ	
ಬೆಟ್ಟೆ	48399-53569
ಗೊರಬಲು	19996-35476
ರಾಶಿ	37019-48899
ಸರಕು	56159-81299
ಸಿದ್ದಾಪುರ	
ಬಿಳಿಗೋಟು	30309-32899
ಚಾಲಿ	35555-37889
ಕೋಕ	28699-32609
ಹಳೆಚಾಲಿ	37199-37519
ಕೆಂಪುಗೋಟು	29319-33509
ರಾಶಿ	44299-47209
ತಟ್ಟಿಬೆಟ್ಟೆ	37899-44769
ಶಿರಸಿ	
ಬೆಟ್ಟೆ	37899-44499
ಬಿಳಿಗೋಟು	26699-32698
ಚಾಲಿ	34809-38061
ಕೆಂಪುಗೋಟು	22622-34699
ರಾಶಿ	43699-46808
ಯಲ್ಲಾಪುರ	
ಬಿಳಿಗೋಟು	24899-34750
ಚಾಲಿ	34099-39111
ಕೋಕ	18899-31500
ಕೆಂಪುಗೋಟು	28612-35199
ರಾಶಿ	41028-50780
ತಟ್ಟಿಬೆಟ್ಟೆ	38199-45770

ಮುಂಬೈ ಧಾರಣೆ

ಶೇಂಗಾ

26-5-2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1625)
ಒಂದು ವಾರದ ಡೆಲಿವರಿ	1610 (1620)
ಸೋಯಾ ಕಚ್ಚಾ	850 (845)
ಪಾಮ್ ವಾರದ ಡೆಲಿವರಿ	868 (865)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60000 (60250)
ಬೆಳ್ಳಿ ಕೆ.ಜಿ 70550 (70350)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ಪಂಜಾಬಿ ಹುಡುಗನಿಗೆ 'ಆರೆಂಜ್ ಕ್ಯಾಪ್' • ಮೋಹಿತ್‌ಗೆ ಐದು ವಿಕೆಟ್ • ಮುಂಬೈ ಇಂಡಿಯನ್ಸ್‌ಗೆ ನಿರಾಶೆ

ಶುಭಮನ್ ಶತಕ: ಫೈನಲ್‌ಗೆ ಟೈಟನ್ಸ್

ಪ್ರಜಾವಾಣಿ ವಾರ್ತೆ


ಅಹಮದಾಬಾದ್: ಐಪಿಎಲ್ ಟೂರ್ನಿಯಲ್ಲಿ ಮೂರನೇ ಶತಕ ಗಳಿಸಿದ ಶುಭಮನ್ ಗಿಲ್ ಹಾಗೂ ಐದು ವಿಕೆಟ್ ಗೊಂಚಲು ಗಳಿಸಿದ ಮೋಹಿತ್ ಶರ್ಮಾ ಅವರ ಬಲದಿಂದ ಗುಜರಾತ್ ಟೈಟನ್ಸ್ ಜಯಭೇರಿ ಬಾರಿಸಿತು. ಇದರೊಂದಿಗೆ ಸತತ ಎರಡನೇ ವರ್ಷ ಫೈನಲ್ ಪ್ರವೇಶಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಎರಡನೇ ಕ್ವಾಲಿಫೈಯರ್‌ನಲ್ಲಿ ಗಿಲ್ (129; 60ಎ) ಅವರ ಅಮೋಘ ಶತಕದ ಬಲದಿಂದ ಗುಜರಾತ್ ಟೈಟನ್ಸ್ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 233 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಮುಂಬೈ ಇಂಡಿಯನ್ಸ್ ತಂಡವು 18.2 ಓವರ್‌ಗಳಲ್ಲಿ 171 ರನ್ ಗಳಿಸಿತು. ಕೊನೆಯ ಐದು ವಿಕೆಟ್‌ಗಳು 16 ರನ್ನಿಗೆ ಬಿದ್ದವು. ಗುಜರಾತ್ 62 ರನ್‌ಗಳಿಂದ ಗೆದ್ದಿತು.

ಮಧ್ಯಮವೇಗಿ ಮೋಹಿತ್ ಶರ್ಮಾ (10ಕ್ಕೆ5) ಅಮೋಘ ಬೌಲಿಂಗ್ ಮಾಡಿದರು. ಇದರಿಂದಾಗಿ ಐದು ಬಾರಿಯ ಚಾಂಪಿಯನ್ ಮುಂಬೈ ತಂಡದ ಸೂರ್ಯಕುಮಾರ್ ಯಾದವ್ (61ರನ್), ತಿಲಕ್ ವರ್ಮಾ (43ರನ್) ಹಾಗೂ ಕ್ಯಾಮರಾನ್ ಗ್ರೀನ್ (30 ರನ್) ಅವರ ಹೋರಾಟಕ್ಕೆ ಜಯ ಒಲಿಯಲಿಲ್ಲ.

ಆದರೆ ಟೂರ್ನಿಯುದ್ದಕ್ಕೂ ಅಮೋಘ ಲಯದಲ್ಲಿರುವ ಗಿಲ್ ಅವರ ಆಟಕ್ಕೆ ಜಯ ಒಲಿಯಿತು. ಟೂರ್ನಿಯಲ್ಲಿ ಒಟ್ಟು 851 ರನ್ ಗಳಿಸಿರುವ ಅವರಿಗೆ ಆರೇಂಜ್ ಕ್ಯಾಪ್ ಕೂಡ ಒಲಿಯಿತು. 'ಹಾಲಿ ಚಾಂಪಿಯನ್' ಗುಜರಾತ್ ತಂಡವು ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಬಳಗವನ್ನು ಎದುರಿಸಲಿದೆ.



ಶುಭಮನ್ ಗಿಲ್ ಶತಕ ಸಂಭ್ರಮ

ಗಿಲ್ ಅಬ್ಬರ: ಟಾಸ್ ಗೆದ್ದ ಮುಂಬೈ ತಂಡದ ನಾಯಕ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಅವರ ಯೋಜನೆ ಕೈಕೊಟ್ಟಿತು.

ಕ್ರೀಸ್‌ಗೆ ಕಾಲಿಟ್ಟ ಕೆಲವೇ ನಿಮಿಷಗಳಲ್ಲಿಯೇ ಶುಭಮನ್ ಎದುರಾಳಿ ಬೌಲರ್‌ಗಳನ್ನು ದಂಡಿಸಲು ಆರಂಭಿಸಿದರು. ಇನ್ನೊಂದೆಡೆ ಅನುಭವಿ ಬ್ಯಾಟರ್ ವೃದ್ಧಿಮಾನ್ ಸಹಾ ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 54 ರನ್ ಕಲೆಹಾಕಿದರು. ಏಳನೇ ಓವರ್‌ನಲ್ಲಿ ಸ್ಪಿನ್ನರ್ ಪಿಯೂಷ್ ಚಾವ್ಲಾ ಎಸೆತದಲ್ಲಿ ಸಹಾ ಔಟಾದರು.

ಇನಿಂಗ್ಸ್ ಹೊಣೆಯನ್ನು ತಮ್ಮ ಮೇಲೆ ಹೊತ್ತುಕೊಂಡ 23 ವರ್ಷದ ಗಿಲ್ ಕೇವಲ 48 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು. ಹತ್ತು ಸಿಕ್ಸರ್ ಹಾಗೂ ಏಳು ಬೌಂಡರಿ ಹೊಡೆದರು. ಪುಲ್, ಕಟ್, ಸ್ವೀಪ್ ಮತ್ತು ಡ್ರೈವ್‌ಗಳ ಸುಂದರ ಆಟ ಅವರಿಂದ ಮೂಡಿಬಂದಿತು.



ಮೋಹಿತ್ ಶರ್ಮಾ

ಅವರಿಗೆ ಇಲ್ಲಿ ಅದೃಷ್ಟವೂ ಜೊತೆಯಿತ್ತು. ವೇಗಿ ಜೋರ್ಡಾನ್ ಹಾಕಿದ ಆರನೇ ಓವರ್ ಮತ್ತು ಕ್ಯಾಮರಾನ್ ಗ್ರೀನ್ ಮಾಡಿದ 11ನೇ ಓವರ್‌ನಲ್ಲಿ ಕ್ಯಾಚ್ ಆಗುವ ಸಾಧ್ಯತೆಗಳಿಂದ ತಪ್ಪಿಸಿಕೊಂಡರು. ಫೀಲ್ಡರ್‌ಗಳ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಇದರ ಲಾಭ ಪಡೆದ ಗಿಲ್ 215ರ ಸ್ಟ್ರೈಕ್‌ರೇಟ್‌ನಲ್ಲಿ ರನ್‌ಗಳನ್ನು ಹರಿಸಿದರು. ಅವರಿಗೆ ಸಾಯಿ ಸುದರ್ಶನ್ ಉತ್ತಮ ಜೊತೆ ನೀಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 138 ರನ್ ಸೇರಿಸಿದರು. 17ನೇ ಓವರ್‌ನಲ್ಲಿ ಮತ್ತೊಂದು ಸಿಕ್ಸರ್ ಹೊಡೆಯುವ ಯತ್ನದಲ್ಲಿ ಗಿಲ್ ವಿಫಲರಾಗಿ ಟಿಮ್ ಡೇವಿಡ್ ಅವರಿಗೆ ಕ್ಯಾಚಿತ್ತರು. ಆಕಾಶ್ ಮಧ್ವಾಲ್ ವಿಕೆಟ್ ಗಳಿಸಿದರು.

ಕಳೆದ ಪಂದ್ಯದಲ್ಲಿ ಮಿಂಚಿದ್ದ ಆಕಾಶ್, ಇಲ್ಲಿ ದುಬಾರಿಯಾದರು. ಇನಿಂಗ್ಸ್‌ನಲ್ಲಿ ಕೊನೆಯ ಒಂದು ಓವರ್ ಬಾಕಿ ಇದ್ದಾಗ ಸಾಯಿ ಸುದರ್ಶನ ಗಾಯಗೊಂಡು ಪೆವಿಲಿಯನ್‌ಗೆ ಮರಳಿದರು.

ಮಳೆ, ವಿಳಂಬ: ಅಹಮದಾಬಾದಿನಲ್ಲಿಸಂಜೆ ಮಳೆ ಸುರಿದಿದ್ದರಿಂದ ಪಂದ್ಯವು ಅರ್ಧಗಂಟೆ ವಿಳಂಬವಾಗಿ ಆರಂಭವಾಯಿತು. 7.30ರ ಬದಲಿಗೆ 8 ಗಂಟೆಗೆ ಪಂದ್ಯ ಆರಂಭವಾಯಿತು.

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 3ಕ್ಕೆ 233 (20 ಓವರ್‌ಗಳಲ್ಲಿ)

ವೃದ್ಧಿಮಾನ್ ಸ್ಟಂಪ್ಡ್ ಇಶಾನ್ ಬಿ ಚಾವ್ಲಾ 18 (16ಎ, 4X3)
ಶುಭಮನ್ ಸಿ ಟಿಮ್ ಬಿ ಮಧ್ವಾಲ್ 129 (60ಎ, 4X7, 6X10)
ಸುದರ್ಶನ್ ಗಾಯಗೊಂಡು ನಿವೃತ್ತಿ 43 (31ಎ, 4X5, 6X1)
ಹಾರ್ದಿಕ್ ಔಟಾಗದೆ 28 (13ಎ, 4X2, 6X2)
ರಶೀದ್ ಔಟಾಗದೆ 5 (1ಎ, 4X1)
ಇತರೆ: 10 (ಲೆಗ್‌ಬೈ 2, ವೈಡ್ 6, ನೋಬಾಲ್ 2)
ವಿಕೆಟ್ ಪತನ: 1–54 (ವೃದ್ಧಿಮಾನ್ ಸಹಾ; 6.2), 2–192 (ಶುಭಮನ್ ಗಿಲ್; 16.5), 3–214 (ಸಾಯಿ ಸುದರ್ಶನ್; 18.6)
ಬೌಲಿಂಗ್: ಜೇಸನ್ ಬೆಹ್ರನ್‌ಡಾರ್ಫ್ 4–0–28–0, ಕ್ಯಾಮರಾನ್ ಗ್ರೀನ್ 3–0–35–0, ಆಕಾಶ್ ಮಧ್ವಾಲ್ 4–0–52–1, ಕ್ರಿಸ್ ಜೋರ್ಡಾನ್ 4–0–56–0, ಪಿಯೂಷ್ ಚಾವ್ಲಾ 3–0–45–1, ಕುಮಾರ್ ಕಾರ್ತಿಕೇಯ 2–0–15–0

ಮುಂಬೈ ಇಂಡಿಯನ್ಸ್ 171 (18.2 ಓವರ್‌ಗಳಲ್ಲಿ)

ರೋಹಿತ್ ಸಿ ಲಿಟ್ಲ್ ಬಿ ಶಮಿ 8 (7ಎ, 4X1)
ನೇಹಲ್ ಸಿ ಸಹಾ ಬಿ ಶಮಿ 4 (3ಎ, 4X1)
ಗ್ರೀನ್ ಬಿ ಲಿಟ್ಲ್ 30 (20ಎ, 4X2, 6X2)
ಸೂರ್ಯಕುಮಾರ್ ಬಿ ಮೋಹಿತ್ 61 (38ಎ, 4X7, 6X2)
ತಿಲಕ್ ಬಿ ರಶೀದ್ 43 (14ಎ, 4X5, 6X3)
ವಿಷ್ಣು ಸಿ ಹಾರ್ದಿಕ್ ಬಿ ಮೋಹಿತ್ 5 (7ಎ)
ಟಿಮ್ ಎಲ್‌ಬಿಡಬ್ಲ್ಯು ಬಿ ರಶೀದ್ 2 (3ಎ)
ಜೋರ್ಡಾನ್ ಸಿ ಸುದರ್ಶನ್ ಬಿ ಮೋಹಿತ್ 2 (5ಎ)
ಪಿಯೂಷ್ ಸಿ ಮಿಲ್ಲರ್ ಬಿ ಮೋಹಿತ್ 0 (2ಎ), ಕುಮಾರ್ ಸಿ ಮಿಲ್ಲರ್ ಬಿ ಮೋಹಿತ್ 6 (7ಎ, 4X1)
ಬೆಹ್ರನ್‌ಡಾರ್ಫ್ ಔಟಾಗದೆ 3 (5ಎ)
ಇತರೆ: 7 (ಲೆಗ್‌ಬೈ 2, ನೋಬಾಲ್ 1, ವೈಡ್ 4)
ವಿಕೆಟ್ ಪತನ: 1-5 (ನೇಹಲ್ ವಧೇರಾ; 0.5) 2-21 (ರೋಹಿತ್ ಶರ್ಮಾ; 2.2), 3-72 (ತಿಲಕ್ ವರ್ಮಾ; 5.6), 4-124 (ಕ್ಯಾಮರಾನ್ ಗ್ರೀನ್; 11.2), 5-155 (ಸೂರ್ಯಕುಮಾರ್ ಯಾದವ್; 14.3), 6-156 (ವಿಷ್ಣು ವಿನೋದ್; 14.5), 7-158 (ಟಿಮ್ ಡೇವಿಡ್; 15.3), 8-161 (ಕ್ರಿಸ್ ಜೋರ್ಡಾನ್; 16.1), 9-162 (ಪಿಯೂಷ್ ಚಾವ್ಲಾ; 16.3), 10-171 (ಕುಮಾರ್ ಕಾರ್ತಿಕೇಯ; 18.2)
ಬೌಲಿಂಗ್: ಮೊಹಮ್ಮದ್ ಶಮಿ 3–0–41–2, ಹಾರ್ದಿಕ್ ಪಾಂಡ್ಯ 2–0–24–0, ರಶೀದ್ ಖಾನ್ 4–0–33–2, ನೂರ್ ಅಹಮದ್ 4–0–35–0, ಜೋಶುವಾ ಲಿಟ್ಲ್ 3–0–26–1, ಮೋಹಿತ್ ಶರ್ಮಾ 2.2–0–10–5

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 62 ರನ್‌ಗಳ ಜಯ

ಇಶಾನ್ ಕಿಶನ್, ಗ್ರೀನ್‌ಗೆ ಗಾಯ

ಅಹಮದಾಬಾದ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗೆ ಸಜ್ಜುಗೊಳ್ಳುತ್ತಿರುವ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ಇಬ್ಬರು ಆಟಗಾರರಿಗೆ ಗಾಯದ ಸಮಸ್ಯೆ ಎದುರಾಗಿದೆ.

ಶುಕ್ರವಾರ ನಡೆದ ಗುಜರಾತ್ ಟೈಟನ್ಸ್ ಎದುರಿನ ಐಪಿಎಲ್ ಪಂದ್ಯದ ವೇಳೆ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸಿದ್ದ ಭಾರತದ ಇಶಾನ್ ಕಿಶನ್ ಫೀಲ್ಡಿಂಗ್ ಸಂದರ್ಭದಲ್ಲಿ ಸಹ ಆಟಗಾರ ಕ್ರಿಸ್ ಜೋರ್ಡಾನ್‌ಗೆ ಡಿಕ್ಕಿ ಹೊಡೆದು ಗಂಭೀರ ಗಾಯಗೊಂಡರು. ಬಳಿಕ ಅವರು ಬ್ಯಾಟಿಂಗ್‌ಗೆ ಇಳಿಯಲಿಲ್ಲ. ಅವರ ಬದಲಿಗೆ ವಿಷ್ಣು ವಿನೋದ್ 'ಕಂಕಷನ್ ಸಬ್' ಆಗಿ ಕಣಕ್ಕಿಳಿದರು.

ಮುಂಬೈ ತಂಡವನ್ನೇ ಪ್ರತಿನಿಧಿಸಿದ್ದ ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ರೀನ್ ಅವರಿಗೆ ಗುಜರಾತ್ ಆಟಗಾರ ಹಾರ್ದಿಕ್ ಪಾಂಡ್ಯ ಎಸೆದ ಬೌಲಿಂಗ್‌ನಲ್ಲಿ ಮೊಣಕೈ ಗಾಯವಾಯಿತು.

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶುಭಮನ್	ಗುಜರಾತ್	851

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	28

ಫೈನಲ್‌ನಲ್ಲಿ ಡಿವೈನ್ ಕಾರ್ಯಕ್ರಮ

ಮುಂಬೈ (ಪಿಟಿಐ): ರ‍್ಯಾಪ್ ಗಾಯಕ ಡಿವೈನ್ ಭಾನುವಾರ ಅಹಮದಾಬಾದಿನಲ್ಲಿ ನಡೆಯಲಿರುವ ಐಪಿಎಲ್ ಫೈನಲ್ ಪಂದ್ಯದ ಸಂದರ್ಭದಲ್ಲಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಡಿವೈನ್ ಎಂದೇ ಚಿರಪರಿಚಿತರಾಗಿರುವ ವಿವಿಯನ್ ಫರ್ನಾಂಡಿಸ್ ಅವರು ಫೈನಲ್‌ನಲ್ಲಿ ಇದೇ ಮೊದಲ ಬಾರಿಗೆ ಇನಿಂಗ್ಸ್ ಮಧ್ಯಂತರದಲ್ಲಿ ರ‍್ಯಾಪ್ ಕಾರ್ಯಕ್ರಮ ನೀಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಡಿವೈನ್

ಡಿವೈನ್ ಅವರೊಂದಿಗೆ ಕೆನಡಾದ ಹಿನ್ನೆಲೆ ಗಾಯಕಿ ಜೊನಿತಾ ಗಾಂಧಿ ಜೊತೆಗೂಡಲಿದ್ದಾರೆ. ಅವರು ಕ್ರಿಕೆಟಿಗ ವಿರಾಟ್ ಕೊಹ್ಲಿ ಕುರಿತ 'ನಯಾ ಶೇರ್' ಟ್ರ್ಯಾಕ್ ಪ್ರಸ್ತುತಪಡಿಸುವರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ವಿಜೇತರಿಗೆ ₹ 13 ಕೋಟಿ

ದುಬೈ (ಪಿಟಿಐ): ಇಂಗ್ಲೆಂಡ್‌ನ ದ ಓವಲ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ವಿಜೇತರಾದವರಿಗೆ ₹ 13 ಕೋಟಿ ಬಹುಮಾನ ಲಭಿಸಲಿದೆ.

ಜೂನ್ 7ರಿಂದ 11ರವರೆಗೆ ನಡೆಯುವ ಫೈನಲ್‌ನಲ್ಲಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ಸೆಣಸಲಿವೆ. ವಿಜಯೀ ತಂಡಕ್ಕೆ ನಗದು ಬಹುಮಾನದ ಜೊತೆಗೆ ಚಾಂಪಿಯನ್‌ಷಿಪ್ 'ಗದೆ'ಯನ್ನು ಪ್ರದಾನ ಮಾಡಲಾಗುವುದು. ರನ್ನರ್ಸ್ ಅಪ್ ತಂಡವು ₹ 6.5 ಕೋಟಿ ಪಡೆಯಲಿದೆ.

2019–21ರ ಸಾಲಿನಲ್ಲಿ ನಡೆದಿದ್ದ ಮೊದಲ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ನ್ಯೂಜಿಲೆಂಡ್ ತಂಡ ವಿಜಯಿಯಾಗಿತ್ತು.



ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ವಿಜೇತರಿಗೆ ನೀಡಲಾಗುವ ಗದೆ

ಈ ಸಲದ ಟೂರ್ನಿಯಲ್ಲಿ ಆಡಿದ್ದ ಒಂಬತ್ತು ತಂಡಗಳಿಗೂ ನಗದು ಬಹುಮಾನ ನಿಗದಿ ಮಾಡಲಾಗಿದೆ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಲ್ಯ ವಶದಲ್ಲಿದ್ದ ಟಿಪ್ಪು ಖಡ್ಗ ₹143 ಕೋಟಿಗೆ ಹರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ 18ನೇ ಶತಮಾನದ ದೊರೆ ಟಿಪ್ಪು ಸುಲ್ತಾನ್ ತನ್ನ ಮಲಗುವ ಕೋಣೆಯಲ್ಲಿ ಇರಿಸಿಕೊಂಡಿದ್ದ ಖಡ್ಗವೊಂದು ಲಂಡನ್‌ನಲ್ಲಿ ₹143 ಕೋಟಿಗೆ ಹರಾಜಾಗಿದೆ ಎಂದು ಹರಾಜು ಸಂಸ್ಥೆ ಬೋನ್‌ಹ್ಯಾಮ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಉದ್ಯಮಿ ವಿಜಯ್ ಮಲ್ಯ ವಶದಲ್ಲಿದ್ದ ಖಡ್ಗವನ್ನು ಲಂಡನ್‌ನಲ್ಲಿ ಇತ್ತೀಚೆಗೆಹರಾಜುಮಾಡಲಾಗಿದ್ದು, ವ್ಯಕ್ತಿಯೊಬ್ಬರು ₹143 ಕೋಟಿಗೆ ಖರೀದಿಸಿದ್ದಾರೆ.

ಬ್ರಿಟಿಷ್ ರಾಜಮನೆತನದ ವಸ್ತುಸಂಗ್ರಹಾಲಯದಲ್ಲಿದ್ದ ಖಡ್ಗವನ್ನು ಮಲ್ಯ ₹1.57 ಕೋಟಿಗೆ 2004ರಲ್ಲಿ ಖರೀದಿಸಿದ್ದರು. ಮಲ್ಯ ಅವರು ಇತ್ತೀಚೆಗೆ ಕೋರ್ಟ್‌ಗೆ ಹಾಜರಾದಾಗ 'ಖಡ್ಗ ಎಲ್ಲಿದೆಯೋ ಗೊತ್ತಿಲ್ಲ' ಎಂದಿದ್ದರು. ಅದೇ ಖಡ್ಗ ಈಗ ಮತ್ತೊಮ್ಮೆ ಹರಾಜಿನಲ್ಲಿ ಮಾರಾಟವಾಗಿದೆ.

ಖಡ್ಗ ಮಾರಿದವರು ಮತ್ತು ತೆಗೆದುಕೊಂಡವರ ಹೆಸರನ್ನು ಪ್ರಕಟಿಸಲುಸಾಧ್ಯವಿಲ್ಲ. ಹೆಸರು ಬಹಿರಂಗವಾದರೆ ಗೋಪ್ಯತೆಯ ಉಲ್ಲಂಘನೆಯಾಗುತ್ತದೆ ಮತ್ತು ಸುರಕ್ಷತೆಯ ಸಮಸ್ಯೆಯೂ ಆಗುತ್ತದೆ ಎಂದು ಬೋನ್‌ಹ್ಯಾಮ್ ಹೇಳಿದೆ.



ಟಿಪ್ಪು ಸುಲ್ತಾನ್ ಖಡ್ಗ

1799ರಲ್ಲಿ ನಡೆದ 4ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಮರಣ ನಂತರ ಈ ಖಡ್ಗವನ್ನು ಅರಮನೆಯ ಖಾಸಗಿ ಕೋಣೆಯಿಂದ ವಶಪಡಿಸಿಕೊಳ್ಳಲಾಗಿತ್ತು. ಬಳಿಕ ಅದನ್ನು ಬ್ರಿಟಿಷ್ ಸೇನೆ ಮೇಜರ್ ಜನರಲ್ ಡೇವಿಡ್ ಬೇರ್ಡ್‌ಗೆ ನೀಡಲಾಗಿತ್ತು.



ಭವನೀಶ್ ಮೆಂಡಿರಟ್ಟಾ

ಜಂಟಿ ಅಗ್ರಸ್ಥಾನದಲ್ಲಿ ಭವನೀಶ್ ಮೆಂಡಿರಟ್ಟಾ

ಅಲ್ಮಾಟಿ, ಕಜಕಸ್ತಾನ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ವಿಜೇತ ಶೂಟರ್ ಭಾರತದ ಭವನೀಶ್ ಮೆಂಡಿರಟ್ಟಾ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್ ಟೂರ್ನಿಯ ಟ್ರ್ಯಾಪ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಶುಕ್ರವಾರ ಅಗ್ರಸ್ಥಾನದಲ್ಲಿದ್ದರು.

ಟೋಕಿಯೊ ಒಲಿಂಪಿಕ್ಸ್ ಮಿಶ್ರ ತಂಡ ವಿಭಾಗದ ಚಾಂಪಿಯನ್, ಸ್ಪೇನ್‌ನ ಅಲ್ಬರ್ಟೊ ಫರ್ನಾಂಡೆಜ್ ಸೇರಿ ನಾಲ್ಕು ಮಂದಿ 75 ಪಾಯಿಂಟ್ಸ್‌ನೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದರು.

ಶನಿವಾರ ಮತ್ತೆರಡು ಸುತ್ತುಗಳು ನಡೆಯಲಿದ್ದು, ಅದರಲ್ಲಿ ಅಗ್ರ ಆರು ಸ್ಥಾನ ಪಡೆಯುವವರು ಫೈನಲ್ಸ್‌ಗೆ ಅರ್ಹತೆ ಗಳಿಸಲಿದ್ದಾರೆ.

ಭಾರತದ ಜೊರಾವರ್ ಸಂಧು ಮತ್ತು ಪೃಥ್ವಿರಾಜ್ ತೊಂಡೈಮನ್ ಕ್ರಮವಾಗಿ 16 ಮತ್ತು 23ನೇ ಸ್ಥಾನದಲ್ಲಿದ್ದರು.

ಮಹಿಳೆಯರ ಟ್ರ್ಯಾಪ್ ಸ್ಪರ್ಧೆಯಲ್ಲಿ ಶ್ರೇಯಸಿ ಸಿಂಗ್ ಜಂಟಿ ಎಂಟನೇ ಸ್ಥಾನದಲ್ಲಿದ್ದರು.

ಗಾಲ್ಫ್: ಅದಿತಿ ಅಶೋಕ್‌ಗೆ ಜಯ

ಲಾಸ್ ವೆಗಾಸ್, ಅಮೆರಿಕ (ಪಿಟಿಐ): ಭಾರತದ ಅದಿತಿ ಅಶೋಕ್ ಅವರು ಇಲ್ಲಿ ನಡೆಯುತ್ತಿರುವ ಎಲ್‌ಪಿಜಿಎ ಮ್ಯಾಚ್ ಪ್ಲೇ ಗಾಲ್ಫ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಜಯ ಗಳಿಸಿದರು.

ಮೊದಲ ಪಂದ್ಯದಲ್ಲಿ ನಿರಾಸೆ ಅನುಭವಿಸಿದ್ದ ಕರ್ನಾಟಕದ ಅದಿತಿ, ಶುಕ್ರವಾರ ಅಮೆರಿಕದ ಕರೋಲಿನ್ ಇಂಗ್ಲಿಸ್ ಎದುರು ಗೆಲುವಿನ ನಗೆ ಬೀರಿದರು. ಇದರೊಂದಿಗೆ ನಾಕೌಟ್ ಹಂತ ತಲುಪುವತ್ತ ಚಿತ್ತ ನೆಟ್ಟರು.

ಮುಂದಿನ ಪಂದ್ಯದಲ್ಲಿ ಅದಿತಿ ಅವರಿಗೆ ಅಮೆರಿಕದ ಜೆನಿಫರ್ ಕುಪ್‌ಚೊ ಸವಾಲು ಎದುರಾಗಿದೆ.

64 ಆಟಗಾರ್ತಿಯರನ್ನು 16 ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪ್ರತಿ ಗುಂಪಿನ ವಿಜೇತರು ನಾಕೌಟ್ ತಲುಪಲಿದ್ದಾರೆ. ಅದಿತಿ ಈ ಋತುವಿನ ಆರಂಭದಲ್ಲಿ ಲೇಡಿಸ್ ಯೂರೋಪಿಯನ್ ಟೂರ್ನಿ ಯಲ್ಲಿ ಪ್ರಶಸ್ತಿ ಜಯಿಸಿದ್ದರು.



ಅದಿತಿ ಅಶೋಕ್

ಪ್ಯಾರಿಸ್ ಒಲಿಂಪಿಕ್ಸ್: ಏಕಬಳಕೆ ಪ್ಲಾಸ್ಟಿಕ್‌ಗೆ ನಿಷೇಧ

ಪ್ಯಾರಿಸ್ (ರಾಯಿಟರ್ಸ್): ಮುಂದಿನ ವರ್ಷ ಇಲ್ಲಿ ನಡೆಯಲಿರುವ ಬೇಸಿಗೆ ಒಲಿಂಪಿಕ್ಸ್ ವೇಳೆ ನಗರದಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧಿಸಲು ಯೋಜಿಸಲಾಗಿದೆ. ಪ್ಲಾಸ್ಟಿಕ್ ಮಾಲಿನ್ಯ ಪಿಡುಗಿಗೆ ಕಡಿವಾಣ ಹಾಕುವ ಉದ್ದೇಶದಿಂದ ಈ ಕ್ರಮಕ್ಕೆ ಮುಂದಾಗಿರುವುದಾಗಿ ಪ್ಯಾರಿಸ್ ಮೇಯರ್ ಆ್ಯನೆ ಹಿಡಾಲ್ಗೊ ಶುಕ್ರವಾರ ತಿಳಿಸಿದ್ದಾರೆ.

ಒಲಿಂಪಿಕ್ ಕ್ರೀಡೆಗಳನ್ನು, ಏಕಬಳಕೆಯ ಪ್ಲಾಸ್ಟಿಕ್ ಇಲ್ಲದೇ ನಡೆಸುವ ಮೊದಲ ದೊಡ್ಡ ಕೂಟವನ್ನಾಗಿ ಆಯೋಜಿಸಲು ನಾನು ನಿರ್ಧರಿಸಿದ್ದೇವೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಪ್ಲಾಸ್ಟಿಕ್ ಮಾಲಿನ್ಯ ವಿರೋಧಿ ಮೇಯರ್‌ಗಳ ಅಂತರರಾಷ್ಟ್ರೀಯ ವೇದಿಕೆಯ ಅಧಿವೇಶನದ ಸಂದರ್ಭದಲ್ಲಿ ಈ ಗೋಷ್ಠಿ ನಡೆಯಿತು.

ಪ್ಲಾಸ್ಟಿಕ್ ಬಾಟಲುಗಳನ್ನು ಹೊಂದಿದ್ದರೆ ಅಂಥ ಪ್ರೇಕ್ಷಕರಿಗೆ ಸ್ಪರ್ಧೆಗಳು ನಡೆಯುವ ತಾಣಗಳಿಗೆ ಪ್ರವೇಶ ಇರುವುದಿಲ್ಲ.

ಅಮೆರಿಕದ ತಂಪು ಪಾನೀಯ ದೈತ್ಯ 'ಕೋಕಾ ಕೋಲಾ' ಕೂಡ ತನ್ನ ಉತ್ಪನ್ನಗಳನ್ನು ಮರುಬಳಕೆಯ ಗಾಜಿನ ಬಾಟಲುಗಳಲ್ಲಿ ನೀಡಲಿದೆ. 200ಕ್ಕೂ ಹೆಚ್ಚು 'ಸೋಡಾ ಫೌಂಟನ್'ಗಳನ್ನು ತೆರೆಯಲಾಗುವುದು.

'ಪ್ಲಾಸ್ಟಿಕ್ ತ್ಯಾಜ್ಯ ಜಾಗತಿಕ ಪಿಡುಗಾಗಿ ಉಳಿದಿದೆ. ಪ್ರತಿ ವರ್ಷ 14,000 ಪ್ರಾಣಿಗಳು ಮತ್ತು 14 ಲಕ್ಷ ಕಡಲಹಕ್ಕಿಗಳು ಪ್ಲಾಸ್ಟಿಕ್ ಅಂಶವಿರುವ ವಸ್ತುಗಳ ಸೇವನೆಯಿಂದ ಸಾಯುತ್ತಿವೆ' ಎಂದು ಹಿಡಾಲ್ಗೊ ಅವರ ಕಚೇರಿ ಹೊರಡಿಸಿರುವ ಒಲಿಂಪಿಕ್ಸ್‌ನಲ್ಲಿ ಏಕಬಳಕೆ ಪ್ಲಾಸ್ಟಿಕ್ ನಿಷೇಧ ಘೋಷಣೆಯ ಹೇಳಿಕೆಯಲ್ಲಿ ವಿವರಿಸಲಾಗಿದೆ.

ಹಾಕಿ: ಬೆಲ್ಜಿಯಂಗೆ ಮಣಿದ ಭಾರತ

ಲಂಡನ್ (ಪಿಟಿಐ): ಒಲಿಂಪಿಕ್ ಚಾಂಪಿಯನ್ ಬೆಲ್ಜಿಯಂ ತಂಡಕ್ಕೆ ಕೊನೆಯ ಗಳಿಗೆಯಲ್ಲಿ ಗೋಲು ಬಿಟ್ಟುಕೊಟ್ಟ ಭಾರತ ತಂಡ ಎಫ್‌ಐಎಚ್ ಪುರುಷರ ಪ್ರೊ ಲೀಗ್ ಹಾಕಿ ಪಂದ್ಯವನ್ನು 1–2 ಗೋಲುಗಳಿಂದ ಸೋತಿತು.

ಶುಕ್ರವಾರ ನಡೆದ ಈ ಪಂದ್ಯದ ಮೂರೂ ಗೋಲುಗಳು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ದಾಖಲಾದವು. ಬೆಲ್ಜಿಯಂ ಪಂದ್ಯದ 18ನೇ ನಿಮಿಷ ತಿಬೆಯು ಸ್ಟಾಕ್‌ಬ್ರೂಕ್ ಮೂಲಕ ಮುನ್ನಡೆ ಸಾಧಿಸಿತು. 25ನೇ ನಿಮಿಷ ಮನ್‌ದೀಪ್ ಸಿಂಗ್ ಗಳಿಸಿದ ಗೋಲಿನಿಂದ ಭಾರತ ಸ್ಕೋರ್ ಸಮ ಮಾಡಿಕೊಂಡಿತು.

ಆದರೆ ಕೊನೆಯ ಕೆಲವು ನಿಮಿಷಗಳಲ್ಲಿ ಭಾರತದ ರಕ್ಷಣಾ ಕೋಟೆ ಶಿಥಿಲಗೊಳ್ಳತೊಡಗಿತು. ಪರಿಣಾಮ ಬೆಲ್ಜಿಯಂ ತಂಡಕ್ಕೆ ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳು ಒದಗಿಬಂದವು. 60ನೇ ನಿಮಿಷ ಇಂಥ ಒಂದು ಅವಕಾಶ ಗೋಲಾಗಿ ಪರಿವರ್ತನೆಗೊಂಡಿತು. ಆ ಪೆನಾಲ್ಟಿ ಕಾರ್ನರ್‌ನಲ್ಲಿ ಚೆಂಡನ್ನು ಗೋಲ್‌ಕೀಪರ್ ಶ್ರೀಜೇಶ್ ತಡೆಯಲು ಮುಂದಾದರು. ಆದರೆ ಅವರಿಂದ ರಿಬೌಂಡ್ ಆದ ಚೆಂಡನ್ನು ನೆಲ್ಸನ್ ಒನಾನಾ ಗುರಿ ತಲುಪಿಸಿ ಬೆಲ್ಜಿಯಂ ಗೆಲುವಿಗೆ ಕಾರಣರಾದರು.

ಜೂನಿಯರ್ ಏಷ್ಯಾಕಪ್: ಭಾರತಕ್ಕೆ ಇಂದು ಪಾಕ್ ಎದುರಾಳಿ

ಸಲಾಲಾ (ಒಮಾನ್): ಎರಡು ಪಂದ್ಯಗಳನ್ನು ಗೆದ್ದು ಉತ್ಸಾಹದಲ್ಲಿರುವ ಭಾರತ ತಂಡ ಶನಿವಾರ ನಡೆಯುವ ಪುರುಷರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಶನಿವಾರ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. 'ಎ' ಗುಂಪಿನ ಪಂದ್ಯದಲ್ಲಿ ಭಾರತ ತಂಡ ಬುಧವಾರ 18–0 ಗೋಲುಗಳಿಂದ ಚೀನಾ ತೈಪೆ ತಂಡವನ್ನು ಬಗ್ಗುಬಡಿದಿತ್ತು. ಮರುದಿನ ಜಪಾನ್ ತಂಡವನ್ನು 3–1 ಗೋಲುಗಳಿಂದ ಮಣಿಸಿತ್ತು.

ವಿಮಾನದ ತುರ್ತು ನಿರ್ಗಮನ ಬಾಗಿಲು ತೆರೆದ ಪ್ರಯಾಣಿಕ!

ಸೋಲ್ (ಎಪಿ): ದಕ್ಷಿಣ ಕೊರಿಯಾದಲ್ಲಿ ವಿಮಾನ ಹಾರಾಟ ವೇಳೆಯೇ ಪ್ರಯಾಣಿಕರೊಬ್ಬರು ತುರ್ತು ನಿರ್ಗಮನ ಬಾಗಿಲು ತೆರೆದ ಪರಿಣಾಮ ಕ್ಯಾಬಿನ್ ಒಳಗೆ ಗಾಳಿ ನುಗ್ಗಿ ಕ್ಷಣಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು ಎಂದು ವಿಮಾನಯಾನ ಸಂಸ್ಥೆ ಮತ್ತು ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಆಸಿಯಾನಾ ಏರ್‌ಲೈನ್ಸ್ ಏರ್‌ಬಸ್ ಎ321 ವಿಮಾನದಲ್ಲಿದ್ದ ಕೆಲವರು ವ್ಯಕ್ತಿಯನ್ನು ಬಾಗಿಲು ತೆರೆಯದಂತೆ ತಡೆಯಲು ಪ್ರಯತ್ನಿಸಿದ್ದರು. ಆದಾಗ್ಯೂ ಬಾಗಿಲು ಭಾಗಶಃ ತೆರೆದಿತ್ತು ಎಂದು ಸಾರಿಗೆ ಸಚಿವಾಲಯ ತಿಳಿಸಿದೆ.

194 ಮಂದಿ ಪ್ರಯಾಣಿಸುತ್ತಿದ್ದ ವಿಮಾನವನ್ನು ಸುರಕ್ಷಿತವಾಗಿ ಇಳಿಸಲಾಗಿದೆ. ಯಾರಿಗೂ ಹಾನಿಯಾಗಿಲ್ಲ. ಘಟನೆ ಬಗ್ಗೆ ತನಿಖೆ ನಡೆಯುತ್ತಿದೆ. ಆರೋಪಿಯನ್ನು ಬಂಧಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

'ಮಣ್ಣು ಉಳಿಸಿ' ಪ್ರೇರಣೆ– ದಕ್ಷಿಣ ಆಫ್ರಿಕಾದಲ್ಲಿ 10 ಸಾವಿರ ಕಿ.ಮೀ ನಡಿಗೆ

ಜೋಹಾನ್ಸ್‌ಬರ್ಗ್ (ಪಿಟಿಐ): ಈಶಾ ಫೌಂಡೇಶನ್‌ನ ಸದ್ಗುರು ಜಗ್ಗಿ ವಾಸುದೇವ್ ಅವರ 'ಮಣ್ಣು ಉಳಿಸಿ' ಅಭಿಯಾನದ ಪ್ರೇರಣೆಯಿಂದ ದಕ್ಷಿಣ ಆಫ್ರಿಕಾದಲ್ಲಿ 10 ಸಾವಿರ ಕಿ.ಮೀ ನಡಿಗೆ ಕೈಗೊಂಡಿರುವ ಸಾಧಕ ಟೆಸ್ಕೆ ನಾಕಾಡಿಮೆಂಗ್ ಇಲ್ಲಿನ ವಾಂಡರರ್ಸ್ ಕ್ರೀಡಾಂಗಣದಲ್ಲಿ ಜೂನ್ 26ರಂದು ಆಯೋಜಿಸಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಮುಖ್ಯ ಅತಿಥಿಯಾಗಿದ್ದಾರೆ. ಈ ಸಮಾರಂಭದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆಯಿದೆ.

'ಸದ್ಗುರು ಲಂಡನ್‌ನಿಂದ ಭಾರತಕ್ಕೆ ಮೋಟಾರ್ ಬೈಕ್‌ನಲ್ಲಿ ಜಾಥಾ ನಡೆಸಿದ್ದನ್ನು ನೋಡಿ ನಾನು ಈ ನಿರ್ಧಾರ ತೆಗೆದುಕೊಂಡಿದ್ದೇನೆ. ನಾನು ನೆಲೆಸಿರುವ ಡಲ್‌ಸ್ಟ್ರೂಮ್‌ನಿಂದ ದಕ್ಷಿಣ ಆಫ್ರಿಕಾದಾದ್ಯಂತ 10 ಸಾವಿರ ಕಿ.ಮೀ. ನಡಿಗೆ ಕೈಗೊಂಡೆ. ಎಲ್ಲಿ ನಾನು ಬದುಕುತ್ತೇನೋ ಅಲ್ಲಿ ಮಣ್ಣು ಉಳಿಸಿ ಅಭಿಯಾನದ ಬಗ್ಗೆ ಜಾಗೃತಿ ಮೂಡಿಸುತ್ತೇನೆ' ಎಂದು 'ಮಣ್ಣು ಉಳಿಸಿ' ರಾಯಭಾರಿ ಟೆಸ್ಕೆ ಹೇಳಿದ್ದಾರೆ. ಈ ನಡಿಗೆಯನ್ನು ಅವರು ಒಂಬತ್ತು ತಿಂಗಳ ಕಾಲ ನಡೆಸಿದ್ದಾರೆ.

ಪೋಪ್ ಉತ್ತರಾಧಿಕಾರಿ ಆಯ್ಕೆ

ವ್ಯಾಟಿಕನ್ (ಎಪಿ): ಕ್ರೈಸ್ತ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರು ತಮ್ಮ ಉತ್ತರಾಧಿಕಾರಿಯಾಗಿ ಅರ್ಜೆಂಟೀನಾದ ಬಿಷಪ್ ಜಾರ್ಜ್ ಇಗ್ನೇಷಿಯೊ ಗಾರ್ಸಿಯಾ ಕ್ವಿವಾ ಅವರನ್ನು ಆಯ್ಕೆ ಮಾಡಿದ್ದಾರೆ. ಇವರು ಆರೆಲಿಯೊ ಪೊಲಿ ಅವರ ನಿವೃತ್ತಿಯಿಂದ ತೆರವಾಗುವ ಬ್ಯೂನಸ್ ಐರಿಸ್‌ನ ಆರ್ಚ್ ಬಿಷಪ್ ಸ್ಥಾನಕ್ಕೆ ಬರಲಿದ್ದಾರೆ. ಪೋಪ್ ಆಗುವ ಮೊದಲು ಅರ್ಜೆಂಟೀನಾ ರಾಜಧಾನಿ ಬ್ಯೂನಸ್ ಐರಿಸ್‌ನ ಆರ್ಚ್ ಬಿಷಪ್ ಆಗಿರಬೇಕು. ಫ್ರಾನ್ಸಿಸ್ ಅವರು 1998ರಿಂದ 2013ರ ವರೆಗೆ ಇಲ್ಲಿನ ಆರ್ಚ್ ಬಿಷಪ್ ಆಗಿದ್ದರು. ಫ್ರಾನ್ಸಿಸ್ ಅವರು ಅರ್ಜೆಂಟೀನಾಕ್ಕೆ ಮುಂದಿನ ವರ್ಷ ಭೇಟಿ ನೀಡುವುದಾಗಿ ಹೇಳಿದ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ.

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ: ಶ್ರೀಕಾಂತ್ ಪರಾಭವ

ಸೆಮಿಫೈನಲ್‌ಗೆ ಸಿಂಧು, ಪ್ರಣಯ್

ಕ್ವಾಲಾಲಂಪುರ (ಪಿಟಿಐ): ಎದುರಾಳಿಗಳ ವಿರುದ್ಧ ತೀವ್ರ ಹೋರಾಟದ ಪಂದ್ಯಗಳಲ್ಲಿ ಗೆದ್ದ ಭಾರತದ ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು. ಆದರೆ ಕಿದಂಬಿ ಶ್ರೀಕಾಂತ್ ಅವರ ಅಭಿಯಾನ ಅಂತ್ಯವಾಯಿತು.

ಆರನೇ ಶ್ರೇಯಾಂಕದ ಸಿಂಧು, ಮಹಿಳೆಯರ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಹಣಾಹಣಿಯಲ್ಲಿ 21-16, 13-21, 22-20ರಿಂದ ತನಗಿಂತ ಕೆಳ ರ‍್ಯಾಂಕಿನ ಯಿ ಮಾನ್ ಜಾಂಗ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಭಾರತದ ಆಟಗಾರ್ತಿಗೆ ಏಳನೇ ಶ್ರೇಯಾಂಕದ ಆಟಗಾರ್ತಿ, ಇಂಡೊನೇಷ್ಯಾದ ಗ್ರೆಗರಿಯಾ ಮರಿಸ್ಕಾ ತನ್‌ಜುಂಗ್ ಸವಾಲು ಎದುರಾಗಿದೆ.

ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಣಯ್ ಅವರಿಗೆ 25-23, 18-21, 21-13ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ವಿರುದ್ಧ ಜಯ ಒಲಿಯಿತು.

ಪ್ರಣಯ್ ನಾಲ್ಕರ ಘಟ್ಟದಲ್ಲಿ ಇಂಡೊನೇಷ್ಯಾದ ಕ್ರಿಸ್ಟಿಯನ್ ಆದಿನಾಥ ವಿರುದ್ಧ ಆಡುವರು.

ಜಿದ್ದಾಜಿದ್ದಿ ಪಂದ್ಯ ಗೆದ್ದ ಸಿಂಧು: ವಿಶ್ವ ರ‍್ಯಾಂಕಿಂಗ್‌ನಲ್ಲಿ 13ನೇ ಸ್ಥಾನದಲ್ಲಿರುವ ಸಿಂಧು ಅವರು 18ನೇ ಕ್ರಮಾಂಕದಲ್ಲಿರುವ ಜಾಂಗ್ ವಿರುದ್ಧ ಗೆಲುವಿಗೆ ಬೆವರು ಹರಿಸಬೇಕಾಯಿತು. ಈ ಜಯದ ಮೂಲಕ ಕಳೆದ ವರ್ಷ ಆಲ್ ಇಂಗ್ಲೆಂಡ್ ಓಪನ್ ಟೂರ್ನಿಯ 32ರ ಸುತ್ತಿನಲ್ಲಿ ಅನುಭವಿಸಿದ ಸೋಲಿಗೆ ಅವರು ಮುಯ್ಯಿ ತೀರಿಸಿಕೊಂಡರು.


ಪಿ.ವಿ.ಸಿಂಧು

ಮೊದಲ ಗೇಮ್‌ನ ಆರಂಭದಲ್ಲಿ 0–5ರಿಂದ ಹಿನ್ನಡೆಯಲ್ಲಿದ್ದ ಸಿಂಧು, ಚೇತರಿಸಿಕೊಂಡು ಸ್ಕೋರ್‌ಅನ್ನು 10–10ಕ್ಕೆ ಸಮಬಲಗೊಳಿಸಿದರು. ಆ ಬಳಿಕ ಭಾರತದ ಆಟಗಾರ್ತಿ ತಿರುಗಿ ನೋಡಲಿಲ್ಲ. ಅದೇ ಲಯದೊಂದಿಗೆ ಗೇಮ್ ಕೈವಶ ಮಾಡಿಕೊಂಡರು.

ಎರಡನೇ ಗೇಮ್‌ನಲ್ಲಿ ಚೀನಾ ಆಟಗಾರ್ತಿ ಪುಟಿದೆದ್ದರು. ಆರಂಭದಲ್ಲಿ ಸ್ಕೋರ್ 2–2ರಿಂದ ಸಮನಾಗಿತ್ತು. ಆದರೆ ಬಳಿಕದ ಆಟದಲ್ಲಿ ಜಾಂಗ್ ಪಾರಮ್ಯ ಮೆರೆದರು.

ಮೂರನೇ ಮತ್ತು ನಿರ್ಣಾಯಕ ಗೇಮ್‌ನಲ್ಲಿ ಪೈಪೋಟಿ ಇನ್ನಷ್ಟು ಹೆಚ್ಚಿತು. 12ನೇ ಗೇಮ್‌ವರೆಗೆ ಇಬ್ಬರ ಮಧ್ಯೆ ಸಮಬಲದ ಆಟ ನಡೆಯಿತು. ಎರಡಕ್ಕಿಂತ ಹೆಚ್ಚು ಪಾಯಿಂಟ್ ಮುನ್ನಡೆಯನ್ನು ಇಬ್ಬರೂ ಬಿಟ್ಟುಕೊಡಲಿಲ್ಲ. ಒಂದು ಹಂತದಲ್ಲಿ 17–17ರಿಂದ ಗೇಮ್ ಸಮವಾಯಿತು.

ಬಳಿಕ ಸತತ ಮೂರು ಪಾಯಿಂಟ್ಸ್ ಗಳಿಸಿದ ಸಿಂಧು 20–17ಕ್ಕೆ ಮುನ್ನಡೆದರು. ನಂತರ ಜಾಂಗ್ ಕೂಡ ಮೂರು ಪಾಯಿಂಟ್ಸ್ ಕಲೆಹಾಕಿದರು. ಕೊನೆಯಲ್ಲಿ ಒತ್ತಡವನ್ನು ಮೀರಿನಿಂತ ಭಾರತದ ಆಟಗಾರ್ತಿ ಸತತ ಎರಡು ಪಾಯಿಂಟ್ಸ್ ಗಳಿಸಿ ಗೆಲುವಿನ ನಿಟ್ಟುಸಿರು ಬಿಟ್ಟರು.

ನಿಶಿಮೊಟೊ ಎದುರಿನ ಪಂದ್ಯದಲ್ಲಿ ಪ್ರಣಯ್ ಕೂಡ ತೀವ್ರ ಸೆಣಸಾಟ ನಡೆಸಿದರು. ಮೊದಲ ಗೇಮ್ 25–23ರಿಂದ ಗೆದ್ದ ಅವರು, ಎರಡನೇ ಗೇಮ್‌ಅನ್ನು ಕೈಚೆಲ್ಲಿದರು. ಆದರೆ ಮೂರನೇ ಗೇಮ್‌ನಲ್ಲಿ ಸಂಪೂರ್ಣ ಪಾರಮ್ಯ ಭಾರತದ ಆಟಗಾರನದಾಯಿತು.

ಸಿಂಗಲ್ಸ್ ವಿಭಾಗದ ಮತ್ತೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಶ್ರೀಕಾಂತ್ 21-16, 16-21, 11-21ರಿಂದ ಆದಿನಾಥ ಎದುರು ಮಣಿದರು.

ದೀರ್ಘ ಹೊಡೆತಗಳ ರ‍್ಯಾಲಿ ಗೆದ್ದ ಮಲೇಷ್ಯಾ ಜೋಡಿ

ಕ್ವಾಲಾಲಂಪುರ (ರಾಯಿಟರ್ಸ್): ಆ ಒಂದು ಪಾಯಿಂಟ್‌ಗಾಗಿ ಒಟ್ಟು 211 ‘ಹೊಡೆತಗಳ ರ‍್ಯಾಲಿ’ ಕೊನೆಗೂ ಕೊನೆಗೊಂಡಾಗ ಮಲೇಷ್ಯಾದ ತೀನಾ ಮುರಳೀಧರನ್ ಖುಷಿಯಲ್ಲಿ ರ‍್ಯಾಕೆಟ್‌ಅನ್ನು ಪ್ರೇಕ್ಷಕರ ಗ್ಯಾಲರಿಗೆ ಎಸೆದರೆ, ಅವರ ಡಬಲ್ಸ್ ಜೊತೆಗಾತಿ ಪಿಯರ್ಲಿ ಟಾನ್ ಬಸವಳಿದು ಕುಳಿತರು! ಎದುರಾಳಿ ಜಪಾನ್ ಆಟಗಾರ್ತಿಯರು ನಿರಾಶರಾದರು. ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಗುರುವಾರ ಇದು ಸುದೀರ್ಘ ಹೊಡೆತಗಳ ರ‍್ಯಾಲಿ ಎಂಬ ದಾಖಲೆ ಆಯಿತು.

ಪ್ರಿಕ್ವಾರ್ಟರ್‌ಫೈನಲ್‌ನ ಅಂತಿಮ ಸೆಟ್‌ನಲ್ಲಿ ಮಲೇಷ್ಯಾ ಆಟಗಾರ್ತಿಯರು ಗೆಲುವಿನಂಚಿನಲ್ಲಿದ್ದಾಗ ಈ ದಾಖಲೆ ಘಟಿಸಿತು. ಮೂರು ನಿಮಿಷಗಳ ಮ್ಯಾರಥಾನ್ ‘ರ‍್ಯಾಲಿ’ಯ ನಂತರ ತಾನ್, ನೆಟ್ ಬಳಿ ಹಾಕಿದ ‘ಡ್ರಾಪ್’ ಅನ್ನು ಎದುರಾಳಿ ಅಂಕಣಕ್ಕೆ ಮರಳಿಸಲು ಜಪಾನ್‌ನ ಅಯಾಕೊ ಸಕುರಮೊಟೊ ವಿಫಲರಾದಾಗ, ಅಲ್ಲಿವರೆಗೂ ಪಾಯಿಂಟ್ ಯಾರಿಗೆ ಸಲ್ಲುವುದೊ ಎಂದು ತುದಿಗಾಲಲ್ಲಿ ನಿಂತಿದ್ದ ಪ್ರೇಕ್ಷಕರು ಚಪ್ಪಾಳೆ ಹೊಡೆದರು.

‘ಈ ರ‍್ಯಾಲಿ ಗೆದ್ದಾಗ ಪಂದ್ಯ ಗೆದ್ದಷ್ಟೇ ಸಂತಸವಾಯಿತು. ಇಷ್ಟೊಂದು ಹೊಡೆತಗಳ ದೀರ್ಘ ರ‍್ಯಾಲಿ ಮುಗಿದಾಗ ಪಂದ್ಯ ಗೆದ್ದೆನೆಂದೇ ಅನಿಸಿತು. ಸುದೀರ್ಘ ರ‍್ಯಾಲಿ ಆಡುವಾಗ ಹೆಚ್ಚಿನ ಮನೋಬಲವೂ ಬೇಕಾಗುತ್ತದೆ. ಪ್ರೇಕ್ಷಕರತ್ತ ರ‍್ಯಾಕೆಟ್ ಎಸೆದೆ. ಅವರು ಅದನ್ನು ಹಿಡಿದು ಮರಳಿ ಪಡೆಯುವ ತನಕ ಒಂದಿಷ್ಟು ವಿಶ್ರಾಂತಿಯಾದರೂ ಸಿಗುತ್ತದೆ’ ಎಂದು ತೀನಾ ಹೇಳಿದರು.

‘ಡ್ರಾಪ್’ ಹಿಂತಿರುಗಿಸಲು ವಿಫಲರಾದ ಸಕುರಮೊಟೊ ಬಳಲಿ ಒಂದು ಕ್ಷಣ ಅಂಕಣದಲ್ಲೇ ನೆಲಕ್ಕೊರಗಿದರು.

ತೀನಾ –ಪಿಯರ್ಲಿ ಜೋಡಿ 21–17, 18–21, 21–19ರಿಂದ ಸ ಕು ರ ಮೊ ಟೊ – ಮಿ ಯಾ ವು ರಾ ಜೋಡಿಯನ್ನು ಸೋಲಿಸಿ ಎಂಟರ ಘಟಕ್ಕೆ ತಲುಪಿತು.

ಕಳೆದ ವರ್ಷದ ಏಪ್ರಿಲ್‌ನಲ್ಲಿ ನಡೆದ ಕೊರಿಯಾ ಓಪನ್‌ನ ಮಹಿಳಾ ಡಬಲ್ಸ್ ಪಂದ್ಯದಲ್ಲೇ 195 ಹೊಡೆತಗಳ ರ‍್ಯಾಲಿ ನಡೆದಿದ್ದು ದಾಖಲೆ ಎಂದು ಆಗ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ತಿಳಿಸಿತ್ತು.

ರಾಜ್ಯ ಚೆಸ್ ಚಾಂಪಿಯನ್‌ಷಿಪ್: ಪ್ರಮುಖ ಆಟಗಾರರಿಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಸುತ್ತಿನಲ್ಲಿ ಎಂಟು ಮತ್ತು ಒಂಬತ್ತನೇ ಶ್ರೇಯಾಂಕದ ಇಬ್ಬರು ಆಟಗಾರರು ತಮಗಿಂತ ಕೆಳಕ್ರಮಾಂಕದ ಆಟಗಾರರ ಜೊತೆ ‘ಡ್ರಾ’ ಮಾಡಿಕೊಂಡಿದ್ದು ಬಿಟ್ಟರೆ ಉಳಿದಂತೆ ಪ್ರಮುಖ ಆಟಗಾರರು ಅಕ್ಷಯಕಲ್ಪ ಆರ್ಗ್ಯಾನಿಕ್ ಕರ್ನಾಟಕ ರಾಜ್ಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ನಿರೀಕ್ಷಿತ ಮುನ್ನಡೆ ಸಾಧಿಸಿದರು.

ಅಗ್ರ ಶ್ರೇಯಾಂಕದ ಐಎಂ ಆಟಗಾರ, ಮಂಗಳೂರಿನ ವಿಯಾನಿ ಡಿ‘ಕುನ್ಹಾ (ರೇಟಿಂಗ್: 2417), ಎರಡನೇ ಶ್ರೇಯಾಂಕದ ಗ್ರ್ಯಾಂಡ್‌ಮಾಸ್ಟರ್ ತೇಜ್ ಕುಮಾರ್ ಎಂ.ಎಸ್. (2384), ಮೂರನೇ ಶ್ರೇಯಾಂಕದ ಫಿಡೆಮಾಸ್ಟರ್ ಡಿ.ಯಶಸ್ (2315), ನಾಲ್ಕನೇ ಶ್ರೇಯಾಂಕದ ಇಶಾ ಶರ್ಮಾ, ಐದನೇ ಶ್ರೇಯಾಂಕದ ಫಿಡೆಮಾಸ್ಟರ್ ಶರಣ್ ರಾವ್ (ಮಂಗಳೂರು), ಆರನೇ ಶ್ರೇಯಾಂಕದ ಫಿಡೆಮಾಸ್ಟರ್ ನಿರಂಜನ ನವಲಗುಂದ, ಏಳನೇ ಶ್ರೇಯಾಂಕದ ಪ್ರಜ್ವಲ್ ಶೇಟ್ ಅವರು ತಲಾ ಎರಡು ಅಂಕ ಗಳಿಸಿದ ಆಟಗಾರರಲ್ಲಿ ಒಳಗೊಂಡಿದ್ದಾರೆ.

ಆದರೆ ಎರಡನೇ ಸುತ್ತಿನಲ್ಲಿ ಎಂಟನೇ ಶ್ರೇಯಾಂಕದ ಪಿ.ಸುಧೀರ್ (ರೇಟಿಂಗ್: 2084) ತಮಗಿಂತ ಕೆಳಕ್ರಮಾಂಕದ ಸಾಯಿ ಪರಶುರಾಮ ಮಾಂಗ್ನಾಯಕ್ (1209) ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು. ಪಕ್ಕದ 9ನೇ ಬೋರ್ಡ್‌ನಲ್ಲಿ, ಬಿಳಿ ಕಾಯಿಗಳಲ್ಲಿ ಆಡಿದ ಸುದರ್ಶನ ಭಟ್ (2020), ಸಿದ್ಧಿ ರಾವ್ (1208) ಅವರ ಜೊತೆ ‘ಡ್ರಾ’ ಮಾಡಿಕೊಂಡರು.

ಕನಕಪುರ ರಸ್ತೆಯ ಫೋರಂ ಮಾಲ್‌ನಲ್ಲಿ, ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ಐದು ದಿನಗಳ ಈ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯದ ವಿವಿಧೆಡೆಯಿಂದ 503 ಆಟಗಾರರು ಪಾಲ್ಗೊಂಡಿದ್ದಾರೆ.

ಕುಸ್ತಿಪಟುಗಳಿಗೆ ಬೆಂಬಲ ಘೋಷಿಸಿದ ಜಪಾನ್‌ನ ಒಲಿಂಪಿಕ್ ಚಾಂಪಿಯನ್

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಭಾರತದ ಪ್ರಮುಖ ಕುಸ್ತಿಪಟುಗಳನ್ನು ಟೋಕಿಯೊ ಒಲಿಂಪಿಕ್ಸ್ ಸ್ವರ್ಣ ಪದಕ ವಿಜೇತೆ, ಜಪಾನ್‌ನ ಕುಸ್ತಿಪಟು ರಿಸಾಕೊ ಕವಾಯಿ ಅವರು ಬೆಂಬಲಿಸಿ ಹೇಳಿಕೆ ನೀಡಿದ್ದಾರೆ.

ವಿನೇಶಾ ಫೋಗಟ್, ಬಜರಂಗ್ ಪೂನಿಯಾ ಮತ್ತು ಸಾಕ್ಷಿ ಮಲಿಕ್ ನೇತೃತ್ವದಲ್ಲಿ ಜಂತರ್ ಮಂತರ್‌ನಲ್ಲಿ ಒಂದು ತಿಂಗಳಿಗಿಂತ ಹೆಚ್ಚು ಸಮಯದಿಂದ ಪ್ರತಿಭಟನೆ ನಡೆಯುತ್ತಿದೆ.

‘ಭಾರತದ ಕುಸ್ತಿಪಟುಗಳು ನೆಮ್ಮದಿಯಿಂದ ಅಭ್ಯಾಸ ನಡೆಸುವ ವಾತಾವರಣ ಮೂಡಬಹುದು ಎಂಬ ವಿಶ್ವಾಸವಿದೆ’ ಎಂದು ಅವರು ಕುಸ್ತಿಪಟುಗಳ ಪ್ರತಿಭಟನೆಗೆ ಸಂಬಂಧಿಸಿದ ಬಿಬಿಸಿ ನ್ಯೂಸ್ ವಿಡಿಯೊವನ್ನು ಮರುಟ್ವೀಟ್ ಮಾಡಿ ಬರೆದಿದ್ದಾರೆ. ಕವಾಯಿ ಮೂರು ಬಾರಿಯ ವಿಶ್ವ ಚಾಂಪಿಯನ್ ಕೂಡ ಆಗಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ 57 ಕೆ.ಜಿ. ವಿಭಾಗದಲ್ಲಿ ಚಿನ್ನ ಗೆದ್ದುಕೊಂಡಿದ್ದ ಕವಾಯಿ, ಧರಣಿ ನಿರತ ಭಾರತದ ಕುಸ್ತಿಪಟುಗಳಿಗೆ ಬೆಂಬಲ ನೀಡಿದ ವಿದೇಶದ ಮೊದಲ ಕುಸ್ತಿಪಟುವಾಗಿದ್ದಾರೆ.

ಅಂಗವಿಕಲರ ಒಲಿಂಪಿಕ್ಸ್‌ಗೆ ಕುಮಟಾದ ವಿಘ್ನೇಶ್ವರ ನಾಯ್ಕ ಆಯ್ಕೆ

ಕುಮಟಾ: ಇಲ್ಲಿಯ ದಯಾ ನಿಲಯ ಅಂಗವಿಕಲ ಮಕ್ಕಳ ಶಾಲೆಯ ವಿದ್ಯಾರ್ಥಿ ವಿಘ್ನೇಶ್ವರ ನಾಯ್ಕ ಭಾರತ ಅಂಗವಿಕಲರ ಟೇಬಲ್ ಟೆನಿಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಈ ತಂಡವು ಜರ್ಮನಿಯ ಬರ್ಲಿನ್‌ನಲ್ಲಿ ಜೂನ್ 12ರಿಂದ 26 ರವರೆಗೆ ನಡೆಯಲಿರುವ ಅಂಗವಿಕಲ ಮಕ್ಕಳ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿದೆ.

ವಿಘ್ನೇಶ್ವರ ನಾಯ್ಕ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡಿದ್ದರಿಂದ ಆಯ್ಕೆಯಾಗಿದ್ದಾರೆ. ಪಟ್ಟಣದ ಹೆಲ್ತ್ ಪಾಯಿಂಟ್ ಹಾಗೂ ದಯಾ ನಿಲಯ ಅಂಗವಿಕಲ ಮಕ್ಕಳ ಶಾಲೆಯ ಪವರ್ ಲಿಫ್ಟಿಂಗ್ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿರುವ ಅನಿಲ ನಾಯ್ಕ ಅವರು ಈ ಕ್ರೀಡಾ ಕೂಟದಲ್ಲಿ ಭಾರತ ತಂಡದ ಪವರ್ ಲಿಫ್ಟಿಂಗ್ ತರಬೇತುದಾರರಾಗಿ ಕಾರ್ಯನಿರ್ವಹಿಸುವರು ಎಂದು ಶಾಲೆಯ ಮುಖ್ಯಸ್ಥ ಬಾಲಕೃಷ್ಣ ಕೋರೆಗಾಂವ್ಕರ್ ತಿಳಿಸಿದ್ದಾರೆ.

ವಿವಿಧ ಕ್ರೀಡೆಗಳ ತರಬೇತುದಾರರಾಗಿರುವ ದಯಾ ನಿಲಯ ಅಂಗವಿಕಲ ಮಕ್ಕಳ ಶಾಲೆಯ ಶಿಕ್ಷಕ ಸಿರಿಲ್ ಲೊಪೀಸ್ ವಿಶೇಷ ಆಹ್ವಾನಿತರಾಗಿದ್ದಾರೆ.

ಟೈಗರ್ ಕಪ್: ಕ್ರೀಡಾಕ್ಷೇತ್ರಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟ ಮುಂದುವರಿಸಿದ ಕ್ರೀಡಾಕ್ಷೇತ್ರ ತಂಡದವರು ಟೈಗರ್ ಕಪ್ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗೆಲುವು ಸಾಧಿಸಿದರು.

ಅಲ್ಟಾಯರ್ ಸ್ಪೋರ್ಟ್ಸ್ ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕ್ರೀಡಾಕ್ಷೇತ್ರ ಆರು ವಿಕೆಟ್‌ಗಳಿಂದ ಸ್ಕೂಲ್ ಆಫ್ ಕ್ರಿಕೆಟ್ ತಂಡವನ್ನು ಸೋಲಿಸಿತು.

ಮತ್ತೊಂದು ಪಂದ್ಯದಲ್ಲಿ ಪಿಇಎಸ್‌ಸಿಎ ಸಿಬಿಟಿ ತಂಡವು 94 ರನ್‌ಗಳಿಂದ ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಸ್ಕೂಲ್ ಆಫ್ ಕ್ರಿಕೆಟ್: 30 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 140 (ಯಧು 45. ಸರ್ವಾರ್ಥ್ 8ಕ್ಕೆ 2, ಪ್ರೀತಂ ಆರ್. 9ಕ್ಕೆ 2). ಕ್ರೀಡಾಕ್ಷೇತ್ರ: 25 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 143 (ಗೋಕುಲ್ ಸಾಯಿ 53, ಸೌಮ್ಯರೂಪ್ 43).

ಪಿಇಎಸ್‌ಸಿಎ ಸಿಬಿಟಿ: 29 ಓವರ್‌ಗಳಲ್ಲಿ 173 (ಅಕ್ಷಜ್ ಠಾಕೂರಿಯಾ 58; ದಿಶಾಂತ್ ರಜಪೂತ್ 27ಕ್ಕೆ 3, ಆರವ್ 28ಕ್ಕೆ 2). ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ: 21.1 ಓವರ್‌ಗಳಲ್ಲಿ 79 (ಕೃಷ್ಣ ಕುಮಾರ್ 5ಕ್ಕೆ 3, ನಲಿನ್ ಗೋಯಲ್ 9ಕ್ಕೆ 2).



ಗಿಡಗಳನ್ನು ರೋಗ–ಕೀಟಬಾಧೆಯಿಂದ ರಕ್ಷಿಸಿಕೊಳ್ಳಲು ರಾಸಾಯನಿಕ ಕೀಟನಾಶಕಗಳೇ ಬೇಕಿಲ್ಲ. ನಿಮ್ಮ ಮನೆಯಲ್ಲೇ ಸಿಗುವ ವಸ್ತುಗಳಿಂದ ಕಷಾಯದಂತಹ ಔಷಧಗಳನ್ನು ತಯಾರಿಸಬಹುದು. ಅವುಗಳ ಪರಿಚಯ ಇಲ್ಲಿದೆ.

ಹಿತ್ತಿಲ ಗಿಡ ರಕ್ಷಣೆಗೆ ಮನೆಯಲ್ಲಿದೆ ಮದ್ದು

ಅನುಸೂಯ ಎಸ್. ಶರ್ಮಾ

ಕೈತೋಟ ಮಾಡುವುದು ಸುಲಭ. ಆದರೆ, ನಿರ್ವಹಣೆಯೇ ಸವಾಲು – ಇದು ಬಹುತೇಕ ಕೈತೋಟ ಪ್ರಿಯರ ಮಾತುಗಳು. ಅದರಲ್ಲೂ, ರೋಗ–ಕೀಟಬಾಧೆ ನಿಯಂತ್ರಣವಂತೂ ಬಹಳ ಕಠಿಣವಾದ ಕೆಲಸ.

ರೋಗ–ಕೀಟ ಬಾಧೆ ನಿವಾರಣೆ ಅಥವಾ ನಿಯಂತ್ರಣಕ್ಕಾಗಿ ಸಿಕ್ಕ ಸಿಕ್ಕ ರಾಸಾಯನಿಕ ಕೀಟನಾಶಕ, ರೋಗನಿವಾರಕ ಔಷಧಗಳನ್ನು ಸಿಂಪಡಿಸುವುದಕ್ಕೂ ಭಯ. ಯಾಕೆಂದರೆ, ಒಮ್ಮೊಮ್ಮೆ ಈ ‘ಕೀಟನಾಶಕ‘ಗಳು ಉಪಕಾರಕ ಕೀಟಗಳನ್ನೂ ಕೊಂದುಬಿಡುತ್ತವೆ. ಕೆಲವು ಮಣ್ಣಿನಲ್ಲಿನ ಸೂಕ್ಷ್ಮಾಣುಜೀವಿಗಳನ್ನೂ ನಾಶ ಮಾಡಬಹುದು. ಹಾಗಾದರೆ, ಇದಕ್ಕೆ ಪರಿಹಾರವೇನು ?

ಚಿಂತಿಸಬೇಡಿ. ಹಿತ್ತಿಲ ಗಿಡಗಳನ್ನು ರೋಗ–ಕೀಟಬಾಧೆಯಿಂದ ರಕ್ಷಿಸಿಕೊಳ್ಳಲು ರಾಸಾಯನಿಕ ಕೀಟನಾಶಕಗಳೇ ಬೇಕಿಲ್ಲ. ನಿಮ್ಮ ಮನೆಯಲ್ಲೇ ಸಿಗುವ ವಸ್ತುಗಳಿಂದ ಕಷಾಯದಂತಹ ಮದ್ದುಗಳನ್ನು ತಯಾರಿಸಬಹುದು. ಇವುಗಳ ತಯಾರಿಗೆ ಸ್ವಲ್ಪ ಸಹನೆ, ಸ್ವಲ್ಪ ಸಮಯ ಬೇಕು. ಅಂಥ ಕೆಲವು ಕಷಾಯಗಳನ್ನು ಇಲ್ಲಿ ವಿವರಿಸಲಾಗಿದೆ.

ಸುವರ್ಣ ಸಿಂಪಡಣೆ

25 ಗ್ರಾಂ, ಸುವರ್ಣ ಗೆಡ್ಡೆಯ ಚೂರಿಗೆ ಒಂದು ಲೀಟರ್ ನೀರು ಹಾಕಿ ಹತ್ತು ಹದಿನೈದು ನಿಮಿಷ ಕುದಿಸಿ ಮುಚ್ಚಿಡಿ. 24 ಗಂಟೆಯ ನಂತರ ಈ ದ್ರಾವಣಕ್ಕೆ ಒಂಬತ್ತು ಲೀಟರ್ ನೀರು ಸೇರಿಸಿ ಬಳ್ಳಿ ತರಕಾರಿಗೆ ಸಿಂಪಡಿಸಿ. ಇದರಿಂದ ಮೊಗ್ಗು, ಹೂವು, ಹೀಚು ಕಾಯಿ ಉದುರುವುದನ್ನು ನಿಲ್ಲಿಸಬಹುದು. ಅಲ್ಲದೆ ಚಿಗುರು ಕೊಳೆಯುವುದನ್ನು ತಪ್ಪಿಸುತ್ತದೆ. ವೆನಿಲ್ಲ, ವೀಳೆಯದೆಲೆಯಂತಹ ಬಳ್ಳಿಗಳಿಗೆ ಇದು ತುಂಬ ಸಹಕಾರಿ.



ಚೆಂಡು ಹೂವಿನ ಚಾತುರ್ಯ

ಒಂದು ಲೀಟರ್ ಕುದಿಯುವ ನೀರಿಗೆ ಒಂದು ಹಿಡಿ (8 ರಿಂದ 10 ದೊಡ್ಡ ಚೆಂಡು ಹೂವು. ಹೂವು ಒಣಗಿದ್ದಾದರೂ ಬಳಸಬಹುದು) ಹಾಕಿ ಹದಿನೈದು ನಿಮಿಷ ಕುದಿಸಿ. 24 ಗಂಟೆಗಳ ನಂತರ ಅದನ್ನು ಶೋಧಿಸಿ 8 ರಿಂದ 9 ಲೀಟರ್ ಬೇರೆ ನೀರು ಸೇರಿಸಿ. ಸಸ್ಯಗಳಿಗೆ ಸಿಂಪಡಣೆ ಮಾಡಿ. ಇದರಿಂದ ಹೂವಿನ ಗಿಡಗಳಿಗೆ ಮತ್ತು ತರಕಾರಿಗೆ ಬರುವ ಹೇನು, ಬಿಳಿ ನೊಣಗಳನ್ನು ನಿಯಂತ್ರಿಸಬಹುದು.



ಬೇವಿನ ಬಾಣ

- ಬೇವಿನ ಎಣ್ಣೆ ಒಂದು ಚಮಚ, 5 ರಿಂದ 10 ಗ್ರಾಂ ಹಳದಿ ಸೋಪು (ಡಿಟರ್ಜೆಂಟ್ ಬೇಡ) ಹಾಗೂ ಒಂದು ಲೀಟರ್ ನೀರು. ಮೊದಲು ಸೋಪಿನ ದ್ರಾವಣ ಮಾಡಿಕೊಳ್ಳ (ನೀರಿಗೆ ಸೋಪಿನ ಪುಡಿ ಹಾಕಿ ಚೆನ್ನಾಗಿ ಕರಗಿಸಿ). ನಂತರ ಬೇವಿನ ಎಣ್ಣೆ ಬೆರೆಸಿ. ಎಣ್ಣೆ ಸೋಪಿನ ದ್ರಾವಣದಲ್ಲಿ ಚೆನ್ನಾಗಿ ಮಿಶ್ರವಾಗ ಬೇಕು ಎಮಲ್ಶನ್ ತರಹ. ಹಾಲಿನ ಬಣ್ಣ ಬರುತ್ತದೆ. ನಂತರ ಸಸ್ಯಗಳಿಗೆ ಸಿಂಪಡಿಸಿ. ಬಹುತೇಕ ಎಲ್ಲ ಕೀಟ ರೋಗಗಳಿಗೂ ಇದು ಸಿದ್ಧೌಷಧ.

ಎಲೆಗಳ ಕಷಾಯ

500 ಗ್ರಾಂ ನಷ್ಟು ಬೇವಿನ ಎಲೆ, ಹೊಂಗೆ ಎಲೆ, ಸೀತಾಫಲದ ಎಲೆ, ಎಕ್ಕದ ಎಲೆ, ಲಂಟಾನ ಎಲೆಗಳನ್ನು ತೆಗೆದುಕೊಳ್ಳಿ. ಜೊತೆಗೆ ಸ್ವಲ್ಪ ಸಗಣಿ, ಬೆಲ್ಲವೂ ಇರಲಿ. ಇವುಗಳನ್ನು 5 ಲೀಟರ್ ನೀರಿನಲ್ಲಿ ಹಾಕಿ ಮುಚ್ಚಿಡಿ. ಎಂಟು ದಿನಗಳ ಕಾಲ ಬೆಳಿಗ್ಗೆ ಸಂಜೆ ಕಲಕುತ್ತಿರಿ. ಸೋಸಿದ ಈ ದ್ರಾವಣಕ್ಕೆ 1:10ರ (1 ಲೀಟರ್ ದ್ರಾವಣಕ್ಕೆ 10 ಲೀಟರ್ ನೀರು) ಅನುಪಾತದಲ್ಲಿ ನೀರು ಬೆರೆಸಿ ಸಿಂಪಡಿಸಿ. ಇದರ ಕಹಿ ವಾಸನೆಗೆ ಕೀಟಗಳೂ ವಿಕರ್ಷಣೆಗೊಳ್ಳುತ್ತವೆ. ಎಲೆಗಳಿಗೆ ಬೇಕಾದ ಸಾರಜನಕ, ಪೊಟ್ಯಾಶ್ ಸಹ ದೊರೆಯುತ್ತದೆ. ಈ ದ್ರಾವಣ ಬೆಳೆಗಳಿಗೆ ಪೋಷಕಾಂಶಗಳನ್ನೂ ಒದಗಿಸುತ್ತದೆ.

ಬಣ್ಣದ ಹೂವುಗಳನ್ನು ಬೆಳೆಸಿ

- ಕೆಲವು ಬೆಳೆಗಳಿಗೆ ಹಾರುವ ಬಿಳಿ ನೊಣಗಳು ಕಂಟಕವಾಗಿರುತ್ತದೆ. ಇವು ರಸ್ತೆ ಬದಿಯ ಮರಗಳಲ್ಲಿ ಆಶ್ರಯ ಪಡೆದಿರುವುದರಿಂದ ಸಾಮೂಹಿಕ ಪ್ರಯತ್ನದಿಂದ ಮಾತ್ರ ನಿರ್ವಹಣೆ ಸುಲಭ. ಇದು ಕಷ್ಟ ಸಾಧ್ಯವೇ. ಸಂಪೂರ್ಣ ನಾಶ ಸಾಧ್ಯವಿಲ್ಲದಿದ್ದರೂ, ನಿಯಂತ್ರಣಕ್ಕೆ ಹೀಗೂ ಮಾಡ ಬಹುದು.

ಕೈತೋಟದಲ್ಲಿ ಅಲ್ಲಲ್ಲಿ ಹಳದಿ ಹೂವು ಬಿಡುವ ಕಾಸ್ಮಾಸ್, ಚೆಂಡು ಹೂವಿನ ಗಿಡಗಳನ್ನು ಬೆಳೆಸಿದರೆ, ಇವು ಕೀಟಗಳನ್ನು ಆಕರ್ಷಿಸುತ್ತವೆ.

- ತಗಡಿನ ಮುಚ್ಚಳಗಳಿಗೆ ಹಳದಿ ಬಣ್ಣ ಹಚ್ಚಿ ಹರಳೆಣ್ಣೆ ಸವರಿ ಅಲ್ಲಲ್ಲಿ ನೇತು ಹಾಕಿ. ಬಣ್ಣಕ್ಕೆ ಆಕರ್ಷಿತವಾದ ಹುಳುಗಳು ಹಾರಿದಾಗ ಎಣ್ಣೆಗೆ ಅಂಟಿ ಕೊಳ್ಳುತ್ತವೆ. ನಂತರ ಹಾರಲಾರವು. ಸ್ವಲ್ಪ ಮಟ್ಟಿಗೆ ನಿಯಂತ್ರಣ ಸಾಧ್ಯ.

ಬೆಳ್ಳುಳ್ಳಿ ಕಷಾಯ

- ಬೆಳ್ಳುಳ್ಳಿಯನ್ನು ಅರೆದು ದ್ರಾವಣ ತೆಳುಗೊಳಿಸಿ ಗಿಡಗಳಿಗೆ ಸಿಂಪಡಣೆ ಮಾಡುತ್ತಿದ್ದರೆ, ಕೀಟ–ರೋಗಗಳು ಬರುವುದನ್ನು ತಪ್ಪಿಸಬಹುದು.
- ಡೇಲಿಯ, ಟೊಮೆಟೊ, ಮೆಣಸಿನ ಕಾಯಿ ಬೆಳೆಗೆ ಎಲೆ ಮುರುಟು ರೋಗ ಹೆಚ್ಚಾಗಿ ಬಾಧಿಸುತ್ತದೆ. ಇದಕ್ಕೆ ಪರಿಹಾರವಾಗಿ ರೋಗ ಬಂದ ಗಿಡಗಳಿಗೆ ಬೆಳ್ಳುಳ್ಳಿ ಕಷಾಯ ಸಿಂಪಡಿಸಬಹುದು.

ಬೇವಿನ ಹಿಂಡಿ

ಗಿಡಗಳ ಬೇರಿನ ಸುತ್ತ ಕೆಲವೊಮ್ಮೆ ಶಿಲೀಂದ್ರ ಬರುವುದುಂಟು. ಇದರಿಂದ ಗಿಡಗಳ ಬೆಳವಣಿಗೆ ಕುಂಠಿತವಾಗುವುದು. ಇಂಥ ಸಂದರ್ಭದಲ್ಲಿ ಗಿಡದ ಸುತ್ತ ಬೇವಿನ ಹಿಂಡಿ ಹಾಕಿ (ನೀಮ್ ಆಯಿಲ್ ಕೇಕ್) ನೀರು ಹಾಕಿದರೆ ಕ್ರಮೇಣ ಕಮ್ಮಿಯಾಗುತ್ತದೆ.

ಹುಳಿ ಮಜ್ಜಿಗೆ

ಮನೆಯಲ್ಲಿ ಮಜ್ಜಿಗೆ ಉಳಿದು ಹುಳಿಯಾಗಿದ್ದಾಗ ಅದನ್ನು ಎಸೆಯಬೇಡಿ. ಇದಕ್ಕೆ ನೀರು ಸೇರಿಸಿ ಕರಿಬೇವಿನ ಗಿಡಕ್ಕೆ ಹಾಕಿ. ಕರಿಬೇವಿನ ಎಲೆಗಳಲ್ಲಿ ಎಣ್ಣೆಯ ಗ್ರಂಥಿಗಳಿರುತ್ತವೆ. ಸುವಾಸನೆಯ ಮೂಲ ಅದೇ. ಮಜ್ಜಿಗೆಯಿಂದಾಗಿ ಅದು ಹೆಚ್ಚು ಸುವಾಸಿತವಾಗುತ್ತದೆ.

ಇಂಥ ಹಲವು ಸಾವಯವ ಔಷಧಗಳನ್ನು ಮನೆಯಲ್ಲೇ ತಯಾರಿಸಿಕೊಂಡು, ಹಿತ್ತಿಲು, ಕೈತೋಟದ ಗಿಡಗಳಿಗೆ ಬಳಸಿದರೆ, ತೋಟದ ಗಿಡಗಳು ಹಸಿರಾಗಿರುತ್ತವೆ. ಕೈತೋಟ ನಿರ್ವಹಣೆಗೆ ಒಳಸುರಿ (ಇನ್‌ಪುಟ್ಸ್) ಖರ್ಚು ಕಡಿಮೆಯಾಗುತ್ತದೆ. ರಾಸಾಯನಿಕ ಮುಕ್ತ ವಾತಾವರಣ, ತಾಜಾ ತರಕಾರಿ ಹಣ್ಣುಗಳನ್ನು ಬೆಳೆದು ಬಳಸಬಹುದು. ❖



ರಾಮ್ ಪೋತಿನೇನಿ

ಸಿನಿ ಹನಿ

ಮತ್ತೆ ಒಂದಾದ ಪೂರಿ ಜಗನ್ನಾಥ್–ರಾಮ್ ಪೋತಿನೇನಿ

ಶಿವರಾತ್ರಿಗೆ ‘ಡಬಲ್ ಇಸ್ಮಾರ್ಟ್’ ತೆರೆಗೆ

ಉಸ್ತಾದ್ ರಾಮ್ ಪೋತಿನೇನಿ ಹಾಗೂ ಸೆನ್ಸೇಷನಲ್ ಡೈರೆಕ್ಟರ್ ಪೂರಿ ಜಗನ್ನಾಥ್ ಮತ್ತೊಮ್ಮೆ ಒಂದಾಗಿದ್ದಾರೆ. ‘ಇಸ್ಮಾರ್ಟ್ ಶಂಕರ್’ ಸಿನಿಮಾ ಮೂಲಕ ಮೋಡಿ ಮಾಡಿದ್ದ ಈ ಜೋಡಿ ನಾಲ್ಕು ವರ್ಷದ ಬಳಿಕ ಸೀಕ್ವೆಲ್‌ಗೆ ಕೈ ಹಾಕಿದ್ದಾರೆ.

ಡಬಲ್ ಮಾಸ್ ಮತ್ತು ಡಬಲ್ ಮನರಂಜನೆ ನೀಡಲು ಸಜ್ಜಾಗಿರುವ ಪುರಿ ಜಗನ್ನಾಥ್ ಹೊಸ ಚಿತ್ರಕ್ಕೆ ‘ಡಬಲ್ ಇಸ್ಮಾರ್ಟ್’ ಎಂದು ಹೆಸರಿಟ್ಟಿದ್ದಾರೆ. ಮುಂದಿನ ವರ್ಷ ಅಂದರೆ 2024ರ ಮಾರ್ಚ್ 8 ರಂದು ಶಿವರಾತ್ರಿ ಹಬ್ಬಕ್ಕೆ ಈ ಚಿತ್ರ ತೆರೆಗೆ ಬರಲಿದೆ. ಈಗ ರಾಮ್ ಪೋತಿನೇನಿ ಹುಟ್ಟು ಹಬ್ಬದ ಪ್ರಯುಕ್ತ ಸಿನಿಮಾ ಟೈಟಲ್ ಹಾಗೂ ಬಿಡುಗಡೆಯ ದಿನಾಂಕವನ್ನೂ ಪ್ರಕಟಿಸಲಾಗಿದೆ.

ಈ ಚಿತ್ರ ತೆಲುಗು, ತಮಿಳು, ಕನ್ನಡ, ಹಿಂದಿ ಹಾಗೂ ಮಲಯಾಳಂ ಭಾಷೆಯಲ್ಲಿ ಮೂಡಿ ಬರಲಿದೆ.

ಪೂರಿ ಜಗನ್ನಾಥ್ ಕಥೆ ಬರೆದು ನಿರ್ದೇಶಿಸುತ್ತಿರುವ ‘ಡಬಲ್ ಇಸ್ಮಾರ್ಟ್’ ಸಿನಿಮಾವನ್ನು ಪುರಿ ಕನೆಕ್ಟ್ಸ್ ನಡಿ ಚಾರ್ಮಿ ಕೌರ್ ಹಾಗೂ ಪೂರಿ ಜಗನ್ನಾಥ್ ನಿರ್ಮಿಸುತ್ತಿದ್ದಾರೆ. ಲೈಗರ್ ಸಿನಿಮಾದಲ್ಲಿ ಖಳನಾಯಕನಾಗಿ ಘರ್ಜಿಸಿದ್ದ ವಿಷು ರೆಡ್ಡಿ ಪುರಿ ಕನೆಕ್ಟ್ ಸಿಇಒ ಆಗಿ ಕೆಲಸ ಮಾಡುತ್ತಿದ್ದಾರೆ. ಭಾರಿ ಬಜೆಟ್‌ನಲ್ಲಿ ತಯಾರಾಗುತ್ತಿರುವ ಈ ಸಿನಿಮಾ ತಾಂತ್ರಿಕವಾಗಿ ಶ್ರೀಮಂತಿಕೆಯಿಂದ ಕೂಡಿರಲಿದೆ.

‘ಡಬಲ್ ಇಸ್ಮಾರ್ಟ್’ ಪೋಸ್ಟರ್‌ನಲ್ಲಿ ರಾಮ್ ಪೋತಿನೇನಿ ರಕ್ತದ ಗುರುತುಗಳ ತ್ರಿಶೂಲ್ ಹಿಡಿದು ಮಾಸ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದ ತಾರಾಬಳಗ ಹಾಗೂ ತಾಂತ್ರಿಕ ವರ್ಗದ ಮಾಹಿತಿಯನ್ನು ಶೀಘ್ರದಲ್ಲೇ ಘೋಷಿಸುವುದಾಗಿ ಚಿತ್ರತಂಡ ತಿಳಿಸಿದೆ. ❖

ಜೋರು ಮಳೆ ದುಗುಡ ತೊಳೆದುಬಿಡಲಿ

ಲಹರಿ



ಸದಾಶಿವ ಸೊರಟೂರು

ಬೆಂಗಳೂರು ಒಂದು ಅಬ್ಬರದಿಂದ ಬಿಡಿಸಿಕೊಳ್ಳುವ ತಹತಹಿಕೆಯಲ್ಲಿದೆ. ಅದರ ಮೌನವೊಂದು ಯಾವುದೊ ಟ್ರಾಫಿಕ್ಕಿನ ಮಧ್ಯೆ ಸಿಕ್ಕಿ ಹಾಕಿಕೊಂಡಿರಬೇಕು. ಸೂತ್ರವನ್ನು ಹಿಡಿದವನ ಕೈಯಲ್ಲಿ ಗುರುತು ಬಿಟ್ಟು ಆಕಾಶಕ್ಕೆ ಹಾರಿದ ಗಾಳಿಪಟದಂತೆ ಮನೆಯ ಮುದ್ದು ಮಕ್ಕಳು ಯಾವುದೊ ಬೇಸಿಗೆ ಶಿಬಿರದೊಳಗೆ ಸಿಕ್ಕಿಹಾಕಿಕೊಂಡಿದ್ದಾರೆ. ವರ್ಷವಿಡೀ ಓದಿದ ಮಕ್ಕಳು ಸುಡುವ ಬಿಸಿಲಲ್ಲೆ ಗಿರಗಿರ ತಿರುಗುವ ಫ್ಯಾನಿನ ಕೆಳಗೆ ಸುರಿವ ಭಯದ ಬೆವರು ಒರೆಸಿಕೊಳ್ಳುತ್ತಾ ಪರೀಕ್ಷೆ ಬರೆದು ಮುಗಿಸಿ, ಬೇಸಿಗೆಯ ಬಿಸಿಲಿಗಿಂತಲೂ ಅವರ ಫಲಿತಾಂಶದ ಬಿಸಿಗೆ ಕಾದು ಮೊನ್ನೆಯಷ್ಟೆ ಅದನ್ನು ಪಡೆದು ಇನ್ನೂ ನಿಟ್ಟುಸಿರು ಬಿಡುತ್ತಿದ್ದಾರೆ. ಅಂಕದ ದಾಹವಿನ್ನೂ ತೀರಿದಂತೆ ಕಾಣುತ್ತಿಲ್ಲ. ಅವರ ಪೋಷಕರು ಅಂಕಪಟ್ಟಿ ಹಿಡಿದು ದೊಡ್ಡ ದೊಡ್ಡ ಕಾಲೇಜುಗಳ ಎದುರಿಗೆ ಸಾಲು ನಿಲ್ಲುತ್ತಿದ್ದಾರೆ. ರಸ್ತೆಯ ಮೇಲಿನ ವಾಹನಗಳಿಗಿಂತ ಹೆಚ್ಚು ಅವರ ಮನಸಿನಲ್ಲಿ ಗೊಂದಲಗಳಿವೆ. ಕಾಲೇಜುಗಳ ಫೀಜಿಗೆ, ಅವರ ನಿಬಂಧನೆಗಳಿಗೆ ಇವರು ಕಂಗಾಲಾಗಿದ್ದಾರೆ.

ನೀಟ್ ಪರೀಕ್ಷೆಗೆ ಕೂತಿದ್ದ ಮಕ್ಕಳ ಎದೆಯೊಳಗೆ ಇನ್ನೇನು ಸಣ್ಣ ಸುಳಿಗಾಳಿ ಏಳುವ ಲಕ್ಷಣಗಳು ಕಾಣಿಸುತ್ತಿವೆ. ಸಿಇಟಿಗಾಗಿ ಮಕ್ಕಳು ತಮ್ಮ ನಿದ್ದೆಯನ್ನು ಇಂಧನವಾಗಿ ಉರಿಸುತ್ತಿದ್ದಾರೆ. ಅದರ ಝಳಕ್ಕೆ ಗಾಳಿ ಇನ್ನಷ್ಟು ಬಿಸಿಯಾಗಿದೆ. ರಜೆಯ ನೆವಕ್ಕೆ ಅಮ್ಮನೊಂದಿಗೆ ದೂರದ ಹಳ್ಳಿಗೆ ಹೋದ ಎಳೆಯ ಪೋರರ ಅಪ್ಪ ಹಗಲು ದುಡಿದು ರಸ್ತೆ ಬದಿಯಲ್ಲಿ ಎರಡು ಇಡ್ಲಿ ತಿಂದು ನಡುರಾತ್ರಿ ಒಂಟಿತನದಲ್ಲಿ ಮಗ್ಗಲು ಬದಲಿಸುತ್ತಿದ್ದಾನೆ..

ಬಿಸಿಲಿಗೆ ಬೆಂಗಳೂರಿನ ಮುಖ ಕಂದಿಹೋಗಿದೆ. ದಟ್ಟವಾದ ಬಿಸಿಲು ಸುರಿಯುತಿದೆ. ಜನರೆಲ್ಲಾ ಒಂದು ಹಿಡಿ ತಣ್ಣನೆಯ ಗಾಳಿಗೆ ಹಸಿದಿದ್ದಾರೆ. ತಂಪು ಪಾನೀಯ ಮಾರಾಟಗಾರರಿಗೆ ಬಿಸಿಲೇ ಬಂಡವಾಳ. ಬಿಸಿಲು ನಿಖರವಾದಷ್ಟು ಅವರ ಜೇಬು ಝಣಝಣ. ಅಳುವ ಮಗುವಿನ ಕೈಗೆ ಗಿಲಕಿಕೊಟ್ಟು ಸುಮ್ಮನಿರುಸುವಂತೆ ನಾಲ್ಕು ಹನಿ ಮಳೆ ಮೊನ್ನೆಯಷ್ಟೆ ಸುರಿವ ಬೆವರಿಗೆ ಸಮಾಧಾನ ಹೇಳಿ ಹೋಗಿದೆ. ಇನ್ನೂ ಬರುತ್ತದೊ, ಬಾರದೊ..!

ಬಿಸಿಲಾದರೇನು ಮಳೆಯಾದರೇನು ಎನುತ್ತಾ ಬೆಂಗಳೂರು ತುಂಬುತ್ತಲೇ ಇದೆ. ಮೆಜೆಸ್ಟಿಕ್ ಕರಗಿದಕ್ಕಿಂತ ತುಂಬಿದ್ದೆ ಹೆಚ್ಚು. ಈ ನಗರಿ ಕಳೆದುಕೊಂಡಿದ್ದಕ್ಕಿಂತ ಪಡೆದದ್ದೆ ಹೆಚ್ಚು. ಮಳೆಯಲ್ಲೂ ಕೈಹಿಡಿದಿದೆ, ಬಿಸಿಲಲ್ಲೂ ನಡೆಸಿದೆ.

ಈ ಎಲ್ಲಾ ಅಬ್ಬರಗಳಿಗಿಂತ ಮೊನೆಯಷ್ಟೇ ಒಂದು ಅಬ್ಬರ ತಣ್ಣಗೆ ಮುಗಿದುಹೋಯಿತು. ಈ ಬಾರಿ ಬಿಸಿಲಿಗಿಂತ ಜೋರಾದದ್ದು ಈ ಅಬ್ಬರ. ನಮಗೆಲ್ಲಾ ಬೇಕಾದ ಒಂದು ಸರ್ಕಾರದ ಆಯ್ಕೆಯ ಅಬ್ಬರ ಅದು. ಚುನಾವಣೆಯ ಜೋರು ಬಿಸಿಲು.

ಇಡೀ ನಾಡಿನದು ಒಂದು ಅಬ್ಬರವಾದರೆ ಇಲ್ಲಿಯದೆ ಒಂದು ಅಬ್ಬರ. ಬೆಂಗಳೂರಿನ ರಸ್ತೆಗಳು ಎಷ್ಟೊಂದು ರೋಡ್ ಶೋಗಳಿಗೆ ಗೆಳೆಯನಾಯಿತು. ಎಷ್ಟೊಂದು ಹೂವುಗಳಿಗೆ ಹಾಸಿಗೆಯಾಯಿತು. ಎಷ್ಟೊಂದು ಜನ ರಸ್ತೆಯಲ್ಲಿ ತಮ್ಮ ದಿನ ಕಳೆದರು. ಎಷ್ಟೊ ಜನ ಟ್ರಾಫಿಕ್‌ನಲ್ಲೆ ಹಸಿದು ಕೂತರು. ಭಾಷಣಗಳು ಮನಕ್ಕೆ ನಾಟಿದ್ದಕ್ಕಿಂತ ಕಟ್ಟಡಗಳಿಗೆ ಹೋಗಿ ಬಡಿದು ಬಿದ್ದದ್ದೆ ಹೆಚ್ಚು. ಮನೆ ಮನೆಗಳಲ್ಲೂ ಇದೇ ಚರ್ಚೆ. ಯಾರು ಸೋಲಬಹುದು? ಯಾರು ಗೆಲ್ಲಬಹುದು? ವೋಟಿಗೆಷ್ಟು ಎನ್ನುವ ಆಸೆ.. ಮತದಾನಕ್ಕೆ ಸಿಕ್ಕ ರಜೆಯನ್ನು ಅದರಲ್ಲಿ ಖರ್ಚು ಮಾಡಬೇಕೆಂಬ ದುರಾಸೆ.. ಗುಪ್ತ ಸಭೆಗಳು, ಕ್ಲುಪ್ತ ಯೋಜನೆಗಳು.. ಮನೆ ಬಾಗಿಲು ತಟ್ಟುವ ಕೈಗಳು, ಹಂಚುವ ಉಡುಗೊರೆಗಳು.. ಓಹ್ ಎಷ್ಟೊಂದು ಕವಲುಗಳಿದ್ದವು ಈ ಅಬ್ಬರಕ್ಕೆ. ಏರಿದಷ್ಟೇ ವೇಗವಾಗಿ ಇಳಿದುಹೊಯಿತಲ್ಲ. ಮಳೆ ನಿಂತರೂ ಹನಿ ನಿಲ್ಲದು ಎಂಬಂತೆ ಇನ್ನೂ ಏನೇನೊ ಚಕಮಕಿ ನಡೆದಿವೆಯಲ್ಲಾ..

ಅಲೆ ಬಂದು ಹೋದ ಮೇಲೆ ಕಿನಾರೆಯಲ್ಲಿ ಉಳಿಯುವ ಒಂದು ನಿರಾಳತೆಗೆ ಬೆಂಗಳೂರು ಕಾದಿದೆ. ಮಕ್ಕಳ ಸಂಕಟದಿಂದ ನಾಯಕರ ಪರದಾಟದವರೆಗೂ ಉಬ್ಬಿದ ಅಬ್ಬರ ಕಳೆದುಕೊಳ್ಳಲು ನಗರಿ ಹೊಂಚುಹಾಕುತ್ತಿದೆ. ಸುರಿವ ಬಿಸಿಲಿಗೆ ಹಿಡಿಯಲು ಒಂದು ಕೊಡೆ ಹುಡುಕುತಿದೆ. ದೂರದಿಂದ ಯಾವುದಾದರೂ ಒಂದು ಅಲೆಬಂದು ಎಲ್ಲವನ್ನೂ ಸಾಫು ಮಾಡಲಿ ಎಂದು ಹಂಬಲಿಸಿದೆ..

ಮುಂಗಾರಿಗೂ ಮುನ್ನ ಒಂದು ಜೋರು ಮಳೆ ಸರಿಯಲಿ ಬೆಂಗಳೂರಿನ ಒಡಲಿಗೆ. ಎಲ್ಲಾ ದುಗುಡಗಳು ಅದರಲ್ಲಿ ಕೊಚ್ಚಿ ಹೋಗಲಿ. ರಜೆ ಮುಗಿಸಿ ಬಂದ ಪೋರ ಪೋರಿಯರು ಯೂನಿಫಾರಂ ತೊಟ್ಟು ಹೊಸ ಹುರುಪಿನೊಂದಿಗೆ ಬೆಂಗಳೂರು ರಸ್ತೆಗೆ ತಮ್ಮ ಪುಟ್ಟ ಪಾದವಿಡಲಿ. ಮಕ್ಕಳನ್ನು ಶಾಲೆಗೆ ಸೇರಿಸಿದ ನಿರಾಳತೆಯಲ್ಲಿ ಪೋಷಕರು ನಿದ್ದೆ ಹೋಗಲಿ. ದೊಡ್ಡ ಕನಸುಗಳ ಕಾಲೇಜು ಮಕ್ಕಳು ಹೊಸ ಭರವಸೆಯಲ್ಲಿ ಎದ್ದು ಹೊರಡಲಿ. ಗಿರಗಿರ ಸುತ್ತಿ ಸುತ್ತಿ ಸಾಕಾದ ಫ್ಯಾನ್ ಗಳು ವಿಶ್ರಾಂತಿ ಪಡೆಯಲಿ. ಉದ್ಯಾನಗರಿಯ ಮಂಜು ಬೇಸಿಗೆಯ ಎಲ್ಲರ ದಣಿವನ್ನು ತೊಳೆಯಲಿ. ಎಲ್ಲಕ್ಕೂ ಮುಗಿಲಾಗಿ ಗೆದ್ದು ಬಂದ ಜನ.. ಈ ನಗರವನ್ನು, ಈ ನಾಡನ್ನು ಪೊರೆಯಲಿ. ಈ ಎಲ್ಲವನ್ನೂ ಸಾಧ್ಯ ಮಾಡುವಂಥಹ ಒಂದು ಜೋರು ಮಳೆ ಸುರಿಯಲಿ...

❖

ಫೋನ್‌ಗಳು ನಾಲ್ಕಾದರೂ ವಾಟ್ಸ್‌ಆ್ಯಪ್ ಖಾತೆ ಒಂದೇ!

ತಂತ್ರಜ್ಞಾನ

ಇನ್ನು ಮುಂದೆ ಒಂದಕ್ಕಿಂತ ಹೆಚ್ಚು ಫೋನ್ ಹೊಂದಿರುವವರು ಒಂದೇ ವಾಟ್ಸ್‌ಆ್ಯಪ್ ಖಾತೆಯನ್ನು ಎಲ್ಲ ಫೋನ್‌ಗಳಲ್ಲಿ ಬಳಸಲು ಆಗುತ್ತಿಲ್ಲ ಎಂದು ಚಿಂತಿಸುವ ಅಗತ್ಯವಿಲ್ಲ. ಯಾಕೆಂದರೆ ವಾಟ್ಸ್‌ಆ್ಯಪ್ ಇದೀಗ ಹೊಸ ಫೀಚರ್‌ವೊಂದನ್ನು ಹೊರತಂದಿದ್ದು, ಒಂದೇ ವಾಟ್ಸ್‌ಆ್ಯಪ್ ಖಾತೆಯನ್ನು(WhatsApp Account) ಒಂದೇ ಸಮಯದಲ್ಲಿ ನಾಲ್ಕು ಫೋನ್‌ಗಳಲ್ಲಿ ಬಳಸಬಹುದಾಗಿದೆ.

ಈ ಬಗ್ಗೆ ಫೇಸ್‌ಬುಕ್ ಸಿಇಒ ಮಾರ್ಕ್ ಝುಕರ್ ಬರ್ಗ್ ಮಾಹಿತಿ ನೀಡಿದ್ದು, 'ಇಂದಿನಿಂದ ನೀವು ನಾಲ್ಕು ಫೋನ್‌ಗಳಲ್ಲಿ ಒಂದೇ ವಾಟ್ಸ್‌ಆ್ಯಪ್ ಖಾತೆಗೆ ಲಾಗಿನ್ ಆಗಬಹುದು' ಎಂದು ಹೇಳಿದ್ದಾರೆ.

ಈ ಹಿಂದೆ ಪ್ರೈಮರಿ ಫೋನ್ ಜೊತೆಗೆ ಕಂಪ್ಯೂಟರ್ ಅಥವಾ ಆಂಡ್ರಾಯ್ಡ್‌ಗಳಲ್ಲಿ ಒಂದೇ ವಾಟ್ಸ್‌ಆ್ಯಪ್ ಖಾತೆಯನ್ನು ಲಾಗಿನ್ ಮಾಡಬಹುದಿತ್ತು. ಇದು ಇಷ್ಟಕ್ಕೆ ಸೀಮಿತವಾಗಿತ್ತು. ಪ್ರೈಮರಿ ಫೋನ್‌ನ ವಾಟ್ಸ್‌ಆ್ಯಪ್ ಖಾತೆಯನ್ನು ಇನ್ನೊಂದು ಫೋನ್‌ನಲ್ಲಿ ಬಳಸಲು ಆಗುತ್ತಿರಲಿಲ್ಲ. ಇದರಿಂದ ಒಂದಕ್ಕಿಂತ ಹೆಚ್ಚು ಫೋನ್ ಬಳಸುವವರಿಗೆ ತೊಂದರೆಯಾಗುತ್ತಿತ್ತು.

ಇದೀಗ ಹೊಸ ವೈಶಿಷ್ಟ್ಯದ ಮೂಲಕ ವಾಟ್ಸ್‌ಆ್ಯಪ್ ಮತ್ತೆ ಯುಸರ್ ಫ್ರೆಂಡ್ಲಿ ಡಿವೈಸ್ ಆಗಿದೆ.

ವಾಟ್ಸ್‌ಆ್ಯಪ್ ತನ್ನ ಈ ಹೊಸ ವೈಶಿಷ್ಟ್ಯವನ್ನು 'ಒಂದು ವಾಟ್ಸ್‌ಆ್ಯಪ್ ಖಾತೆ ಈಗ ಮಲ್ಟಿಪಲ್ ಫೋನ್‌ಗಳಲ್ಲಿ' ಎಂದು ವಿವರಿಸಿದೆ. ಮುಂದಿನ ವಾರಗಳಲ್ಲಿ ವಾಟ್ಸ್‌ಆ್ಯಪ್‌ನ ಈ ವೈಶಿಷ್ಟ್ಯ ಲಭ್ಯವಿರುತ್ತದೆ ಎಂದು ತಿಳಿಸಿದೆ.

ಲಾಗಿನ್ ಆಗೋದು ಹೇಗೆ?

ಈ ಹೊಸ ವೈಶಿಷ್ಟ್ಯದಲ್ಲಿ ಹಳೆ ವಿಧಾನದಂತೆ ಫೋನ್ ಸಂಖ್ಯೆಯನ್ನು ನಮೂದಿಸಿ ಲಾಗಿನ್ ಆಗುವ ಅಗತ್ಯವಿಲ್ಲ. ಅದರ ಬದಲು link to existing account ಎನ್ನುವುದರ ಮೇಲೆ ಟ್ಯಾಪ್ ಮಾಡಬೇಕು. ಆಗ ಕ್ಯೂ ಆರ್ ಕೋಡ್ ಕಾಣಿಸುತ್ತದೆ. ನಂತರ ಪ್ರೈಮರಿ ಫೋನ್ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬೇಕು. ಹೀಗೆ ಎಲ್ಲ ಫೋನ್ ಗಳಲ್ಲಿಯೂ ಪ್ರೈಮರಿ ಫೋನ್‌ನ ವಾಟ್ಸ್‌ಆ್ಯಪ್ ಖಾತೆಯನ್ನು ಹೊಂದಬಹುದಾಗಿದೆ.

ವೈಶಿಷ್ಟ್ಯಗಳೇನು?

ಒಂದು ವರ್ಷದವರೆಗೆ ಒಂದೇ ವಾಟ್ಸ್‌ಆ್ಯಪ್ ಖಾತೆಯನ್ನು ಹೊಂದಿರುವ ಎಲ್ಲ ಫೋನ್‌ಗಳಲ್ಲಿ (ಗರಿಷ್ಠ ನಾಲ್ಕು) ಸಂದೇಶಗಳನ್ನು ಸಿಂಕ್ ಮಾಡುತ್ತದೆ.

ಒಂದು ವಾಟ್ಸ್‌ಆ್ಯಪ್ ಖಾತೆಯನ್ನು ವಿವಿಧ ಫೋನ್‌ಗಳಲ್ಲಿ (ಗರಿಷ್ಠ ನಾಲ್ಕು) ಬಳಸುವುದರಿಂದ ಒಂದು ಫೋನ್ ಸ್ವಿಚ್ ಆಫ್ ಆಗಿದ್ದರೂ, ಖಾತೆ ಸಿಂಕ್ ಆಗಿರುವುದರಿಂದ ಇತರ ಫೋನ್‌ಗಳಲ್ಲಿ ಸಂದೇಶಗಳನ್ನು ಸ್ವೀಕರಿಸಬಹುದಾಗಿದೆ.

ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಎಲ್ಲಾ ಚಾಟ್‌ಗಳು, ಕರೆಗಳು ಎಂಡ್-ಟು-ಎಂಡ್ ಎನ್‌ಕ್ರಿಪ್ಟ್ ಆಗಿರುತ್ತದೆ.ಟೆಲಿಗ್ರಾಂ ಒಂದಕ್ಕಿಂತ ಹೆಚ್ಚಿನ ಕಡೆ ಲಾಗಿನ್ ಆಗಲು ಅವಕಾಶ ನೀಡಿದರೂ ಅದರಲ್ಲಿ ಎಂಡ್-ಟು-ಎಂಡ್ ಎನ್‌ಕ್ರಿಪ್ಟ್ ಫೀಚರ್ ಇಲ್ಲ.

ಒಂದು ವೇಳೆ ಪ್ರೈಮರಿ ಫೋನ್ ದೀರ್ಘಕಾಲದವರೆಗೆ ನಿಷ್ಕ್ರಿಯವಾದರೆ ಪ್ರೈಮರಿ ಫೋನ್ ಮೂಲಕ ವಾಟ್ಸ್‌ಆ್ಯಪ್ ಖಾತೆಗೆ ಲಾಗಿನ್ ಆಗಿರುವ ಇತರ ಎಲ್ಲ ಫೋನ್‌ಗಳ ವಾಟ್ಸ್‌ಆ್ಯಪ್ ಖಾತೆಗಳು ತನ್ನಿಂತಾನೆ (ಆಟೋಮ್ಯಾಟಿಕಲಿ) ಲಾಗೌಟ್ ಆಗುತ್ತವೆ.



ಕ್ರಿಕೆಟ್ ಅಂಗಳದ ನವತಾರೆ 'ಯಶಸ್ವಿ'

ಕ್ರೀಡೆ

ಗಿರೀಶ ದೊಡ್ಡಮನಿ

ಐದು ವರ್ಷಗಳ ಹಿಂದಿನ ಮಾತು. ಬೆಂಗಳೂರು ಹೊರವಲಯದಲ್ಲಿರುವ ಆಲೂರಿನ ಕ್ರೀಡಾಂಗಣದಲ್ಲಿ ಸಿಡಿದ ಸಿಕ್ಸರ್‌ಗಳು ದೂರದವರೆಗೂ ಸದ್ದು ಮಾಡಿದ್ದವು. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿಯೂ ಇದೇ ಚರ್ಚೆಯಾಗಿತ್ತು.

ಆ ಸಿಕ್ಸರ್‌ಗಳ ರೂವಾರಿ ಪಂದ್ಯದ ನಂತರ ಪತ್ರಕರ್ತರ ಮುಂದೆ ನಿಂತಿದ್ದರು. 18 ವರ್ಷದ ಆ ಪೋರನ ಮುಖದಲ್ಲಿ ಬೆವರಿತ್ತು ಆದರೆ, ದಣಿವು ಇರಲಿಲ್ಲ. ದ್ವಿಶತಕ ಬಾರಿಸಿದ ಹೆಮ್ಮೆಯಿತ್ತು. 'ಇನ್ನು ನನ್ನ ಕಷ್ಟದ ದಿನಗಳು ಮುಗಿದವು. ಚೆಂದದ ಭವಿಷ್ಯ ಖಚಿತ' ಎಂಬ ಭರವಸೆ ಆ ಹುಡುಗನ ಕಂಗಳಲ್ಲಿತ್ತು. ಆ ಹುಡುಗನೇ ಯಶಸ್ವಿ ಭೂಪೇಂದ್ರಕುಮಾರ್ ಜೈಸ್ವಾಲ್.

ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ತಮ್ಮ ಬ್ಯಾಟಿಂಗ್ ಮೂಲಕ ಬಹುತೇಕ ಎಲ್ಲ ಬೌಲರ್‌ಗಳ ನಿದ್ದೆಗೆಡಿಸಿದ್ದಾರೆ. ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡುತ್ತಿರುವ ಯಶಸ್ವಿ 13 ಪಂದ್ಯಗಳಿಂದ 575 ರನ್ ಗಳಿಸಿದ್ದಾರೆ. ಅದರಲ್ಲಿ ಒಂದು ಶತಕವೂ ಸೇರಿದೆ. ಈ ಸಾಧನೆ ಅಷ್ಟು ಸುಲಭವಾಗಿ ಅವರಿಗೆ ಒಲಿದಿಲ್ಲ. ಇದರ ಹಿಂದೆ ಅಪಾರವಾದ ಪರಿಶ್ರಮ, ಶ್ರದ್ಧೆ ಮತ್ತು ಛಲವಿದೆ. ಕಡುಬಡತನದ ಕಹಿ ಇದೆ. ಆದರೆ ಈ ಹುಡುಗನಿಗೆ ಅದರ ಅರಿವು ಇದೆ.

ಉತ್ತರಪ್ರದೇಶದ ಕಡುಬಡತನವಿದ್ದ ಕುಟುಂಬದಲ್ಲಿ ಹುಟ್ಟಿ ಬೆಳೆದ ಯಶಸ್ವಿಗೆ ಕ್ರಿಕೆಟ್ ಸರ್ವಸ್ವ. ಉದ್ಯೋಗ ಅರಸಿಕೊಂಡು ಅವರ ಕುಟುಂಬ ಮುಂಬೈಗೆ ಬಂದಾಗ ಯಶಸ್ವಿ ಇನ್ನೂ ಹಾಲುಗಲ್ಲದ ಹಸುಳೆ. ಅಪ್ಪ, ಅಮ್ಮ ಪಾನಿಪುರಿ ಮಾರುತ್ತ, ಕೂಲಿ ಕೆಲಸ ಮಾಡುತ್ತ ಮಗನನ್ನು ಬೆಳೆಸಿದರು. ಶಾಲೆಗೆ ಹೋಗಿ ಬಂದು ಅಪ್ಪನೊಂದಿಗೆ ಪಾನಿಪುರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಹುಡುಗನಿಗೆ ಹತ್ತನೇ ವಯಸ್ಸಿನಿಂದಲೂ ಕ್ರಿಕೆಟ್ ಹುಚ್ಚು ಹಿಡಿಸಿತು. ಗಲ್ಲಿ ಕ್ರಿಕೆಟ್‌ನಲ್ಲಿ ಎಡಗೈ ಬ್ಯಾಟರ್ ಆಗಿ ಗಮನ ಸೆಳೆಯತೊಡಗಿದರೂ ಸಲಕರಣೆಗಳನ್ನು ಖರೀದಿಸುವ ಆರ್ಥಿಕ ಶಕ್ತಿ ಇರಲಿಲ್ಲ.

ಮುಸ್ಲಿಂ ಕ್ರಿಕೆಟ್ ಕ್ಲಬ್‌ನ ಕೆಲವು ಸದಸ್ಯರು ಯಶಸ್ವಿಗೆ ಕಿಟ್ ತೆಗೆದುಕೊಳ್ಳಲು ನೆರವಾದರು. ಕ್ರಿಕೆಟ್‌ಗಾಗಿ 11ನೇ ವಯಸ್ಸಿಗೆ ಆಜಾದ್ ಮೈದಾನದಲ್ಲಿದ್ದ ಕಾರ್ಮಿಕರೊಂದಿಗೆ ಉಳಿದುಕೊಂಡರು. ಕ್ರಿಕೆಟ್ ಕೋಚ್ ಜ್ವಾಲಾ ಈ ಬಾಲಕನ ಕೈಹಿಡಿದು ಕ್ರಿಕೆಟ್‌ನ ವರ್ಣಮಾಲೆ ಕಲಿಸಿಕೊಟ್ಟರು. ಜ್ವಾಲಾ ಅವರ ನಿರೀಕ್ಷೆಗಳು ಹುಸಿಯಾಗಲಿಲ್ಲ. ಯಶಸ್ವಿ ಪ್ರಜ್ವಲಿಸುತ್ತಿದ್ದಾರೆ.

ಜೂನಿಯರ್ ಕ್ರಿಕೆಟ್‌ನಲ್ಲಿ ತಮ್ಮ ಬಿರುಸಾದ ಹೊಡೆತಗಳ ಮೂಲಕ ಗಮನ ಸೆಳೆದು 18ನೇ ವಯಸ್ಸಿಗೇ ಮುಂಬೈ ತಂಡದಲ್ಲಿ ಸ್ಥಾನ ಪಡೆದರು. ಆಡಿದ ಚೊಚ್ಚಲ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ದ್ವಿಶತಕ ಬಾರಿಸಿದರು. ಈ ಸಾಧನೆ ಮಾಡಿದ ಅತಿ ಕಿರಿಯ ಬ್ಯಾಟರ್ ಎಂಬ ವಿಶ್ವದಾಖಲೆ ಬರೆದರು. ಅವರು ಅವತ್ತು ಸಿಡಿಸಿದ್ದ 17 ಬೌಂಡರಿ, 12 ಸಿಕ್ಸರ್‌ಗಳನ್ನು ನೋಡಿದವರು 'ಈ ಹುಡುಗ ಟಿ20 ಕ್ರಿಕೆಟ್ ಸೂಕ್ತ' ಎಂದಿದ್ದರು. ಅದಂತೂ ನಿಜವಾಯಿತು.

ಆದರೆ ದೀರ್ಘ ಮಾದರಿಯಲ್ಲಿಯೂ ತಮ್ಮ ಭುಜಬಲ ಪರಾಕ್ರಮ ಮೆರೆದರು. 15 ಪ್ರಥಮ ದರ್ಜೆ ಪಂದ್ಯಗಳಲ್ಲಿ ಒಂಬತ್ತು ಶತಕಗಳನ್ನು ಬಾರಿಸಿದ್ದಾರೆ. 1845 ರನ್‌ಗಳು ಅವರ ಖಾತೆಯಲ್ಲಿವೆ. ಮುಂಬೈ ತಂಡದೊಳಗೆ ಸ್ಥಾನ ಪಡೆಯಲು ಅಜಿಂಕ್ಯ ರಹಾನೆ, ಪೃಥ್ವಿ ಶಾ ಅಂತಹವರೊಂದಿಗೆ ಪೈಪೋಟಿ ನಡೆಸಿ ಗೆದ್ದಿದ್ದಾರೆ.

ಇದೆಲ್ಲದರ ಫಲವಾಗಿ ಅವರಿಗೆ ಮೂರು ವರ್ಷಗಳ ಹಿಂದಿನ ಐಪಿಎಲ್‌ನಲ್ಲಿ ಆಡುವ ಅವಕಾಶ ಸಿಕ್ಕಿತು. ಅದೂ ಬರೋಬ್ಬರಿ ₹ 4 ಕೋಟಿ ರೂಪಾಯಿ ಮೌಲ್ಯದೊಂದಿಗೆ. ಬಡಕುಟುಂಬದ ಹುಡುಗ ಕೋಟ್ಯಧೀಶನಾದ. ಮನೆ, ಕಾರು, ಪಂಚತಾರಾ ಜೀವನಶೈಲಿಗಳೆಲ್ಲವೂ ಸಣ್ಣ ವಯಸ್ಸಿಗೆ ಒಲಿದಿವೆ.

ಆದರೆ ಇದನ್ನು ಯಶಸ್ವಿ ತಲೆಗೇರಿಸಿಕೊಂಡಿಲ್ಲ. ಅವರ ರನ್‌ಗಳ ಹಸಿವು ನೀಗಿಲ್ಲ. ಈ ಬಾರಿಯ ಐಪಿಎಲ್‌ನಲ್ಲಿ 13 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ ದಾಖಲೆ ಬರೆದರು. ಅಂದು ಆಲೂರಿನಲ್ಲಿ ಸಿಡಿಸಿದ್ದ ಸಿಕ್ಸರ್‌ಗಳಷ್ಟೇ ಪರಿಣಾಮಕಾರಿಯಾಗಿ ಈಗಲೂ ಚೆಂಡನ್ನು ಬೌಂಡರಿಯಾಚೆ ಕಳಿಸುತ್ತಿದ್ದಾರೆ. ಭಾರತ ತಂಡದ ಕದ ತಟ್ಟುತ್ತಿದ್ದಾರೆ.





ಟಾಯ್ ಟ್ರೇನ್..

ಪಿಕ್ಚರ್ ಪ್ಯಾಲೆಸ್

ಚುಕುಬುಕು ಚುಕುಬುಕು ಅಂತ ರೈಲೇನೋ ಬಂತು. ಅದನ್ನೇರಿದ ಪುಟಾಣಿಗಳ ಕಣ್ಣಲ್ಲಿ ಹೊಸ ಬಗೆಯ ಹೊಳಪು ತಂತು. ಚಿಕ್ಕಾಸು ಕೂಡಿಟ್ಟು, ಜಾತ್ರೆಯಲ್ಲಿ ಖರೀದಿಸಿದ ಬಣ್ಣದ ಆಟಿಕೆಯಂಥ ಈ ಉಗಿಬಂಡಿ ಕಂಡರೆ ದೊಡ್ಡವರ ಎದೆಯಲ್ಲೂ ಪುಳಕ. ಬೆಂಗಳೂರಿನ ಬಾಲಭವನದಲ್ಲಿ ಹಳಿಗಳ ಮೇಲೆ ಓಡುವ ಈ ಬಣ್ಣದ ರೈಲಿನಲ್ಲಿ ಸವಾರಿ ಮಾಡಲು ನಾ, ಮುಂದು, ತಾ ಮುಂದು ಎಂಬ ಸರದಿಯಲ್ಲಿ ಪುಟಾಣಿಗಳಿದ್ದರು.

ಚಿತ್ರಗಳು: ಪ್ರಶಾಂತ್ ಎಚ್.ಜಿ









ಒಟಿಟಿಯಲ್ಲಿ 'ರಂಜಾನ್'

ಹಿಂದೂ ಮುಸ್ಲಿಂ ಭಾವೈಕ್ಯತೆ ಸಾರುವ 'ರಂಜಾನ್' ಸಿನಿಮಾವು ಬಿಡುಗಡೆಯಾಗಿದ್ದು, ಎಲ್ಲೆಡೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಈಗ ಸಿನಿಮಾ ಹಿಂದಿಗೆ ಡಬ್ ಆಗುತ್ತಿದೆ. ಜೊತೆಗೆ ಕನ್ನಡದ ಒಟಿಟಿ 'ನಮ್ಮ ಫ್ಲಿಕ್ಸ್'ನವರು ಸಿನಿಮಾದ ಹಕ್ಕುಗಳನ್ನು ಪಡೆದುಕೊಂಡಿದ್ದಾರೆ. ಈಗಾಗಲೇ ಸಾಕಷ್ಟು ಜನರು ವೀಕ್ಷಿಸಿದ್ದು ಪ್ರಶಂಸೆಗೆ ಪಾತ್ರವಾಗಿದೆ.

ಹಿರಿಯ ಲೇಖಕ ಫಕೀರ್‌ಮುಹಮ್ಮದ್ ಕಟ್ಪಾಡಿ ಬರೆದಿರುವ 'ನೊಂಬು' ಕಥೆಯಾಧಾರಿತ ಸಿನಿಮಾ ರಂಜಾನ್‌ನಲ್ಲಿ ಸಂಗಮೇಶ ಉಪಾಸೆ ಮೊದಲ ಬಾರಿಗೆ ನಾಯಕ ನಟನಾಗಿದ್ದಾರೆ. ಜೊತೆಗೆ, ಸಿನಿಮಾಕ್ಕೆ ಚಿತ್ರಕಥೆ-ಸಂಭಾಷಣೆ ಹಾಗೂ ಸಾಹಿತ್ಯ ಬರೆದಿದ್ದಾರೆ.

ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತ ಪಂಚಾಕ್ಷರಿ.ಸಿ ಅವರು ಸಿನಿಮಾ ನಿರ್ದೇಶನ ಮಾಡಿದ್ದಾರೆ. ಯೂನಿವರ್ಸಲ್ ಸ್ಟುಡಿಯೊ ಮೂಲಕ ಮಡಿವಾಳಪ್ಪ.ಎಂ.ಗೂಗಿ ಬಂಡವಾಳ ಹೂಡಿದ್ದಾರೆ.

ಸಿನಿಮಾದಲ್ಲಿ ಪ್ರೇಮಾವತಿ ಉಪಾಸೆ, ಬೇಬಿ ಈಶಾನಿ ಉಪಾಸೆ, ಮಾಸ್ಟರ್ ವೇದಿಕ್, ಭಾಸ್ಕರ್‌ಮಣಿಪಾಲ್, ಮಾಸ್ಟರ್ ನೀಲ್, ಜಯಲಕ್ಷ್ಮಿ ಮಧುರಾಜ್, ಮಂಜುನಾಥ್ ಕರುವಿನಕಟ್ಟೆ, ಆರ್ಯನ್, ಆದ್ಯತಾಭಟ್ ಮತ್ತಿತರರ ತಾರಾಗಣವಿದೆ. ಸಂಗೀತ ಇಂದ್ರ. ಛಾಯಾಗ್ರಹಣ ರಂಗಸ್ವಾಮಿ.ಜಿ. ಸಂಕಲನ ಡಿ.ಮಲ್ಲಿ, ಮಿಕ್ಸಿಂಗ್ ಪಳನಿ. ಡಿ. ಸೇನಾಪತಿ.



ಫಟಾಫಟ್ ಸಲಾಡ್

ಸವಿರುಚಿ



ಬ್ರೆಡ್ – ತರಕಾರಿ ಸಲಾಡ್

ಬೇಕಾದ ಸಾಮಗ್ರಿಗಳು: ಸೌತೆಕಾಯಿ ಅರ್ಧ, ಟೊಮೆಟೊ ಒಂದು, ಸ್ಪ್ರಿಂಗ್ ಆನಿಯನ್ ಎಲೆ (ಈರುಳ್ಳಿ ಕಾವು) ಐದು. ಆರು ಲೆಟ್ಯೂಸ್ ಎಲೆಗಳು, ಬ್ರೆಡ್ ಸ್ಲೈಸ್ ಮೂರು. ಕ್ಯಾರೆಟ್ ಅರ್ಧ. ಕ್ಯಾಪ್ಸಿಕಂ ಕಾಲು ಭಾಗ, ಪಾಸ್ಲೆ ಸ್ವಲ್ಪ, ಪುದಿನ, ಕೊತ್ತಂಬರಿ ಸೊಪ್ಪು ಸ್ವಲ್ಪ ಮತ್ತು ರುಚಿಗೆ ತಕ್ಕಷ್ಟು ಉಪ್ಪು.

ಮೂರು ಎಸಳು ಬೆಳ್ಳುಳ್ಳಿ, ಆಲಿವ್ ಆಯಿಲ್ ಅರ್ಧಕಪ್, ಮೆಣಸು ಪುಡಿ ಒಂದು ಟೀ ಸ್ಪೂನ್, ನಿಂಬೆ ರಸ ಎರಡು ಚಮಚ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಹದ ಮಾಡಿಟ್ಟುಕೊಳ್ಳಿ.

ಮಾಡುವ ವಿಧಾನ: ಬೆಳ್ಳುಳ್ಳಿಯನ್ನು ಜಜ್ಜಿ, ಮೆಣಸು ಹಾಕಿ. ಉಪ್ಪು, ನಿಂಬೆರಸ, ಎಣ್ಣೆ ಹಾಕಿ ಮಿಶ್ರಣ ಮಾಡಿ ಇಡಿ.

ತರಕಾರಿಗಳನ್ನು ಚೌಕಾಕಾರಕ್ಕೆ ಕತ್ತರಿಸಿ. ಅರ್ಧ ಭಾಗದಷ್ಟು ಸಲಾಡ್ ಹದವನ್ನು ಇದಕ್ಕೆ ಹಾಕಿ ಮಿಕ್ಸ್ ಮಾಡಿ. ಬ್ರೆಡ್ ತುಂಡುಗಳನ್ನು ಟೋಸ್ಟ್ ಮಾಡಿ ಕತ್ತರಿಸಿ ಬಡಿಸುವಾಗ ಸಲಾಡ್‌ಗೆ ಹಾಕಿರಿ. ಉಳಿದ ಡ್ರೆಸಿಂಗ್ ಅನ್ನು ಹಾಕಿ ಸರ್ವ ಮಾಡಿ.

ಹಲಸಿನ ಹಣ್ಣುಗಳ ಸುಗ್ಗಿ



ನಟರಾಜ ನಾಗಸಂದ್ರ

ಏಪ್ರಿಲ್–ಮೇ ತಿಂಗಳಲ್ಲಿ ಬೆಂಗಳೂರಿನಿಂದ ಹಿಂದೂಪುರ, ಗೌರಿಬಿದನೂರು ಕಡೆಗೆ ಹೋಗುವ ಪ್ರಯಾಣಿಕರು ದೊಡ್ಡಬಳ್ಳಾಪುರದ ಎಪಿಎಂಸಿ ಮಾರುಕಟ್ಟೆ, ಡಿ.ಕ್ರಾಸ್‌ನ ರಸ್ತೆಯ ತಿರುವಿನಲ್ಲಿ ಸ್ವಲ್ಪ ಹೊತ್ತು ತಮ್ಮ ವಾಹನಕ್ಕೆ 'ಬ್ರೇಕ್' ಹಾಕ್ತಾರೆ ! ಅದರಲ್ಲೇನು ವಿಶೇಷ ಅಂತೀರಾ? ವಿಶೇಷ ಇದೆ. ಅವರನ್ನು ಬ್ರೇಕ್ ಹಾಕುವಂತೆ ಮಾಡುವುದು, ರಸ್ತೆಯಲ್ಲಿರುವ ಹಂಪ್‌ಗಳಲ್ಲ. ರಸ್ತೆ ಪಕ್ಕದಲ್ಲಿ ರಾಶಿ ರಾಶಿಯಾಗಿರುವ ಹಲಸಿನ ಹಣ್ಣುಗಳ ರಾಶಿ!

ಹಣ್ಣುಗಳ ರಾಶಿಯ ಮೇಲೆ ಬಿಡಿಸಿಟ್ಟಿರುವ ತೊಳೆಗಳು, ಬಣ್ಣ, ಪರಿಮಳದೊಂದಿಗೆ ಗ್ರಾಹಕರನ್ನು ಆಕರ್ಷಿಸುತ್ತವೆ.

ಹೌದು. ಈಗ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹಲಸಿನ ಹಣ್ಣುಗಳ ಮಾರಾಟದ ಭರಾಟೆ ಜೋರಾಗಿದೆ. ತೂಬಗೆರೆ ಹೋಬಳಿಯ ಕಾಚಹಳ್ಳಿ, ಸಾಸಲು ಹಾಗೂ ಕಸಬಾ ಹೋಬಳಿಯ ವಿವಿಧ ಗ್ರಾಮಗಳಲ್ಲಿ ವೈವಿಧ್ಯಮಯ ಹಲಸಿನ ತಳಿಗಳ ಮರಗಳಿವೆ. ಶಿವರಾತ್ರಿ ಹಲಸು, ಚಂದ್ರ ಹಲಸು, ಕೆಂಪು ರುದ್ರಾಕ್ಷಿ ಹಲಸು, ಹಳದಿ ರುದ್ರಾಕ್ಷಿ ಹಲಸು, ಬಿತ್ತನೆ ಏಕಾದಶಿ ಹಲಸು.. ಹೀಗೆ ತಳಿ ವೈವಿಧ್ಯವಿದೆ. ಜೊತೆಗೆ, ಹಳದಿ, ಕೆಂಪು, ಬಿಳಿ ಬಣ್ಣದ ತೊಳೆಗಳಿರುವ ಹಲಸಿನ ಹಣ್ಣುಗಳಿವೆ. ಇವೆಲ್ಲವೂ ಬಣ್ಣದಿಂದಲ್ಲದೇ, ರುಚಿಯಿಂದಲೂ ಜನಪ್ರಿಯವಾಗಿವೆ.

> ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹಲಸಿನ ಹಣ್ಣುಗಳ ಮಾರಾಟದ ಭರಾಟೆ ಜೋರಾಗಿದೆ. ಬಣ್ಣ, ರುಚಿ, ಪರಿಮಳದಿಂದ ಗ್ರಾಹಕರನ್ನು ಸೆಳೆಯುತ್ತಿವೆ.

ನಾಲ್ಕು ತಿಂಗಳ ಸುಗ್ಗಿ

ಮಾರ್ಚ್ ತಿಂಗಳಿಂದ ಪ್ರಾರಂಭವಾಗುವ ಹಲಸಿನ ಹಣ್ಣಿನ ಸುಗ್ಗಿ ಜೂನ್ ತಿಂಗಳ ಅಂತ್ಯದ ವೇಳೆಗೆ ಮುಕ್ತಾಯವಾಗುತ್ತದೆ. ಮಾರುಕಟ್ಟೆಗೆ ಮಾವಿನ ಹಣ್ಣು ಬರುವುದಕ್ಕೂ ಮುನ್ನವೇ ಲಗ್ಗೆ ಇಡುವ ಹಲಸಿನ ಹಣ್ಣಿನ ರುಚಿ, ಪರಿಮಳಕ್ಕೆ ಗ್ರಾಹಕರು ಮಾರು ಹೋಗದಿರಲು ಸಾಧ್ಯವೇ ಇಲ್ಲ.



ಏಪ್ರಿಲ್ ತಿಂಗಳಲ್ಲಿ ಹಲಸಿನ ಹಣ್ಣಿನ ಬೆಲೆ ತುಸು ಹೆಚ್ಚಿರುತ್ತದೆ. ಮಾವು ಮಾರುಕಟ್ಟೆ ಪ್ರವೇಶಿಸುತ್ತಿದ್ದಂತೆ, ಸ್ವಲ್ಪ ಮಟ್ಟಿಗೆ ಬೆಲೆ ಕಡಿಮೆಯಾಗುತ್ತದೆ. ಆಗ, ಗ್ರಾಹಕರ ಕೈಗೆಟುಕುವ ಬೆಲೆಯಲ್ಲಿ ಹಲಸಿನ ಹಣ್ಣು ಲಭ್ಯ.

ಸಗಟು–ಚಿಲ್ಲರೆ ಮಾರಾಟ

ಸುಮಾರು 25 ರಿಂದ 35 ಕೆ.ಜಿ.ತೂಕದ ಹಲಸಿನ ಹಣ್ಣು ₹100 ರಿಂದ ₹150 ಗಳವರೆಗೂ ಮಾರಾಟವಾಗುತ್ತಿವೆ. ಹಲಸಿನ ಹಣ್ಣು ಖರೀದಿಗೆ ಬರುವ ಬಹುತೇಕ ಗ್ರಾಹಕರು `ಹಲಸಿನ ಹಣ್ಣಿನ ತೊಳೆಯ ಸವಿಯನ್ನು ಸವಿದೇ ಖರೀದಿಸುವುದು ವಿಶೇಷ. ₹10ಕ್ಕೆ ಮೂರರಿಂದ ನಾಲ್ಕು ತೊಳೆಗಳು ಮಾರಾಟವಾಗುತ್ತಿವೆ.

ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ಬೇರೆ ಬೇರೆ ರಾಜ್ಯಗಳ ಹಲಸಿನ ಹಣ್ಣಿನ ವ್ಯಾಪಾರಸ್ಥರು ಇಲ್ಲಿಂದ ಲೋಡುಗಟ್ಟಲೆ ಹಣ್ಣನ್ನು ಖರೀದಿಸಿಕೊಂಡು ಹೋಗುತ್ತಾರೆ. ಇದಷ್ಟೇ ಅಲ್ಲದೆ ಬೆಂಗಳೂರಿನ ಗ್ರಾಹಕರು ಭಾನುವಾರ ಮತ್ತು ಇತರೆ ರಜಾ ದಿನಗಳಲ್ಲಿ ಕುಟುಂಬ ಸಮೇತ ಇಲ್ಲಿಗೆ ಬಂದು ಹಣ್ಣು ಖರೀದಿಸುತ್ತಾರೆ.



ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಬೆಂಗಳೂರಿನಿಂದ ಭಕ್ತರು ಬರುತ್ತಾರೆ. ಹೀಗಾಗಿ ಈ ದಿನದಂದು ಎಪಿಎಂಸಿ ಮಾರುಕಟ್ಟೆ ಸಮೀಪ ಹೆಚ್ಚಿನ ಹಲಸಿನ ಹಣ್ಣಿನ ರಾಶಿ ಹೆಚ್ಚಾಗಿ ಕಾಣುತ್ತದೆ.

ಒನ್ ಪ್ಲಸ್ ನಾರ್ಡ್ ಬಡ್ಸ್ 2 ಕಾಸಿಗೆ ತಕ್ಕ ಇಯರ್‌ಬಡ್ಸ್

ವಿಶ್ವನಾಥ ಎಸ್.

ತಂತ್ರಜ್ಞಾನ



ಒನ್‌ಪ್ಲಸ್ ಕಂಪನಿಯು ಸ್ಮಾರ್ಟ್ ಸಾಧನಗಳ ವಿಭಾಗದಲ್ಲಿ ಕಡಿಮೆ ಬೆಲೆಗೆ ಹೊಸ ವಯರ್‌ಲೆಸ್ ಇಯರ್‌ಬಡ್ಸ್ 'ಒನ್‌ಪ್ಲಸ್ ನಾರ್ಡ್ ಬಡ್ಸ್ 2' (OnePlus Nord Buds 2) ಬಿಡುಗಡೆ ಮಾಡಿದೆ. ಹೊರಗಿನ ಶಬ್ದವನ್ನು ತಡೆಯಲು ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಷನ್ (ಎಎನ್‌ಸಿ) ಹಾಗೂ ಹೊರಗಿನ ಶಬ್ದವನ್ನೂ ಕೇಳುವಂತೆ ಮಾಡುವ 'ಟ್ರಾನ್ಸ್‌ಪರೆನ್ಸಿ ಮೋಡ್' ಇದರ ಹೈಲೈಟ್ಸ್. ಬಡ್ಸ್‌ನ ಗುಣಮಟ್ಟ, ಆಡಿಯೊ ಕ್ಲಾರಿಟಿ, ಬ್ಯಾಟರಿ ಬಾಳಿಕೆ ಹೀಗೆ ಎಲ್ಲಾ ದೃಷ್ಟಿಯಿಂದಲೂ ಇದು ಉತ್ತಮವಾಗಿದೆ.

ಬ್ಲುಟೂತ್ 5.3 ಆವೃತ್ತಿ ಹೊಂದಿದ್ದು, ಮೊಬೈಲ್ ಜೊತೆ ಸುಲಭವಾಗಿ ಸಂಪರ್ಕಿಸಬಹುದು. ಒನ್‌ಪ್ಲಸ್ ಫೋನ್ ಜೊತೆ ಇದನ್ನು ಬಳಸುವುದಾದರೆ ಸೆಟ್ಟಿಂಗ್ಸ್‌ನಲ್ಲಿ ಹೆಚ್ಚು ಬದಲಾವಣೆ ಅಗತ್ಯ ಇಲ್ಲ. ಬೇರೆ ಫೋನ್‌ಗಳ ಜೊತೆ ಬಳಸಲು ಹೇ-ಮೆಲೋಡಿ (HeyMelody) ಆ್ಯಪ್ ಡೌನ್ಲೋಡ್ ಮಾಡಿಕೊಳ್ಳಬೇಕು. ನಾಯ್ಸ್ ಕಂಟ್ರೋಲ್, ಸೌಂಡ್ ಮಾಸ್ಟ್ ಇಕ್ಯು, ಗೇಮ್ ಮೋಡ್, ಕ್ಯಾಮೆರಾಗೆ ಸಂಬಂಧಿಸಿದ ಹೆಚ್ಚಿನ ಸೆಟ್ಟಿಂಗ್ಸ್‌ಗಳನ್ನು ಆ್ಯಪ್ ಮೂಲಕ ನಿರ್ವಹಿಸಬಹುದು.

ಟಚ್ ಕಂಟ್ರೋಲ್ ಬಳಕೆ ಸುಲಭವಾಗಿದೆ. ಮ್ಯೂಸಿಕ್ ಪ್ಲೇ/ಪಾಸ್, ಸ್ಕಿಪ್ ಟ್ರ್ಯಾಕ್ಸ್, ಕರೆ ಸ್ವೀಕರಿಸು/ಕಟ್ ಮಾಡುವುದು ಹಾಗೂ ವಾಯ್ಸ್ ಅಸಿಸ್ಟಂಟ್ ನಿರ್ವಹಿಸಬಹುದು. ಮ್ಯೂಸಿಕ್ ಪ್ಲೇ/ಪಾಸ್ ಮಾಡಲು, ಮುಂದಿನ ಟ್ರ್ಯಾಕ್‌ಗೆ ಹೋಗಬಹುದು. ಲಾಂಗ್ ಪ್ರೆಸ್ ಮಾಡುವ ಮೂಲಕ ಎಎನ್‌ಸಿ ಮತ್ತು ಟ್ರಾನ್ಸ್‌ಪರೆನ್ಸಿ ಮೋಡ್ ಆಯ್ಕೆ ಮಾಡಬಹುದು. ಹೊರಗಿನ ಶಬ್ದವನ್ನು ತಡೆದು ಆಡಿಯೊ ಅಥವಾ ಕರೆಯನ್ನು ಸ್ಪಷ್ಟವಾಗಿ ಕೇಳುವಂತೆ ಮಾಡಲು ಎಎನ್‌ಸಿ ಸಹಾಯಕ.

ಟ್ರಾನ್ಸ್‌ಪರೆನ್ಸಿ ಮೋಡ್ ಮೂಲತಃ ಎಎನ್‌ಸಿ ಮೋಡ್‌ಗೆ ವಿರುದ್ಧವಾಗಿದೆ. ಈ ಮೋಡ್ ಹೊರಗಿನ ಶಬ್ದಗಳನ್ನು ಕೇಳಲು ಅನುಮತಿಸುತ್ತದೆ. ಇದು ಈ ಇಯರ್‌ಬಡ್‌ಗಳಲ್ಲಿನ ವಿಶೇಷ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಎಎನ್‌ಸಿಯಲ್ಲಿ ಹೊರಗಿನ ಶಬ್ದವು ಒಳಬರದೇ ಇರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ವಾಹನ ಸಂಚಾರದ ಸದ್ದು ಕಿವಿಗೆ ಬೀಳುವುದಿಲ್ಲ. ಹೀಗಾಗಿ ಪಾರದರ್ಶಕ ಮೋಡ್ ಆನ್ ಮಾಡಿಕೊಳ್ಳುವುದು ಹೆಚ್ಚು ಸೂಕ್ತವಾಗುತ್ತದೆ.

ಇದರ ಆಡಿಯೊ ಗುಣಮಟ್ಟ ಚೆನ್ನಾಗಿದೆ. ಬಾಸ್ ಮತ್ತು ವೋಕಲ್ಸ್ ಮಧ್ಯೆ ಸಮತೋಲನ ಕಾಯ್ದುಕೊಳ್ಳಲಾಗಿದೆ. ಎರಡು ಮೈಕ್ರೊಫೋನ್ ಹೊಂದಿವೆ. ಡಾಲ್ಬಿ ಅಟ್ಮೋಸ್ ಸ್ಪೀಕರ್ ಬಳಸಿರುವುದರಿಂದ ಸಂಗೀತ ಆಲಿಸುವಾಗ ಮತ್ತು ಫೋನ್‌ನಲ್ಲಿ ಮಾತನಾಡುವಾಗ ಆಡಿಯೊ ಗುಣಮಟ್ಟ ಉತ್ತಮವಾಗಿದೆ. ಎಎನ್‌ಸಿ ಇರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಕರೆ ಮಾಡಲು ಅಥವಾ ಸ್ವೀಕರಿಸಲು ಯಾವುದೇ ತೊಂದರೆ ಆಗುವುದಿಲ್ಲ. ಆದರೆ, ಮನೆಯೊಳಗೆ ಇದ್ದಾಗ ನಮ್ಮ ಧ್ವನಿಯು ಫೋನ್ ಮಾಡಿರುವವರಿಗೆ ಕೇಳುವಷ್ಟು ಸ್ಪಷ್ಟವಾಗಿ ಮನೆಯಾಚೆಗೆ ಗದ್ದಲದ ಪ್ರದೇಶದಲ್ಲಿ ಕೇಳಿಸುವುದಿಲ್ಲ. ಮೂರು ಗಾತ್ರದ ಸಿಲಿಕಾನ್ ಟಿಪ್ಸ್‌ಗಳಿವೆ. ಹೆಚ್ಚಿನ ಸಮಯದವರೆಗೆ ಕಿವಿಯಲ್ಲಿ ಇಟ್ಟುಕೊಂಡರೂ ಯಾವುದೇ ಸಮಸ್ಯೆ ಆಗುವುದಿಲ್ಲ. ಫೋನ್ ಇರುವಲ್ಲಿಂದ 10ಮೀಟರ್ ವ್ಯಾಪ್ತಿಯಲ್ಲಿ ಹಾಡು ಕೇಳಲು, ಮಾತನಾಡಲು ಬಳಸಬಹುದು.

ನೀರು ಮತ್ತು ದೂಳಿನಿಂದ ರಕ್ಷಣೆಗೆ ಐಪಿ55 ರೇಟಿಂಗ್ಸ್ ಹೊಂದಿದೆ. ಬ್ಯಾಟರಿ ಬಾಳಿಕೆಯೇ ಇದರ ಅತಿದೊಡ್ಡ ಪ್ಲಸ್ ಪಾಯಿಂಟ್. ಪೂರ್ತಿ ಚಾರ್ಜ್ ಆಗಲು ಸುಮಾರು ಒಂದೂವರೆ ಗಂಟೆ ಬೇಕು. ಒಮ್ಮೆ ಚಾರ್ಜ್ ಮಾಡಿದರೆ 7 ಗಂಟೆ ಬಳಸಬಹುದು ಎಂದು ಕಂಪನಿ ಹೇಳಿಕೊಂಡಿದೆ. ಆದರೆ ಹೀಗೆ ಒಮ್ಮೆ ಪೂರ್ತಿ ಚಾರ್ಜ್ ಮಾಡಿದ ಬಳಿಕ ಬಡ್‌ಗಳನ್ನು ಮತ್ತೆ ಕೇಸ್‌ನಲ್ಲಿ ಇಡದೇ 4 ಗಂಟೆ ಬಳಸಿದರೂ ಚಾರ್ಜ್ ಖಾಲಿ ಆಗಲಿಲ್ಲ. ಬಳಸಿದ ನಂತರ ಬಡ್‌ಗಳನ್ನು ಕೇಸ್‌ನಲ್ಲಿ ಇಡುತ್ತಿದ್ದರೆ 25 ರಿಂದ 30 ಗಂಟೆಯವರೆಗೆ ಬಳಕೆ ಮಾಡಬಹುದು. ಆಡಿಯೊ ಗುಣಮಟ್ಟ, ಅದರಲ್ಲಿಯೂ ಮುಖ್ಯವಾಗಿ ಬಾಸ್ ದೃಷ್ಟಿಯಿಂದ, ನಾಯ್ಸ್ ಕ್ಯಾನ್ಸಲೇಷನ್ ಹಾಗೂ ಬ್ಯಾಟರಿ ಬಾಳಿಕೆಯ ದೃಷ್ಟಿಯಿಂದ ಒನ್‌ಪ್ಲಸ್ ನಾರ್ಡ್‌ನ ಆಡಿಯೊ ವಿಭಾಗದಲ್ಲಿ ಉತ್ತಮ ಬಡ್ಸ್ ಇದಾಗಿದೆ. ಬೆಲೆ ₹2,999 ಇದೆ.

'ಶೂಟಿಂಗ್'ನಲ್ಲಿ ದಿವ್ಯಾ ಮಿಂಚು

ಬಾಲ್ಯದಲ್ಲಿ ಬ್ಯಾಸ್ಕೆಟ್ ಬಾಲ್ ಆಡುತ್ತಿದ್ದ ಬೆಂಗಳೂರಿನ ದಿವ್ಯಾ, 'ವೈಯಕ್ತಿ ಕ್ರೀಡೆ'ಯಲ್ಲೇ ಸಾಧನೆ ಮಾಡಬೇಕೆಂಬ ಛಲದೊಂದಿಗೆ 'ಶೂಟಿಂಗ್ ಕ್ರೀಡೆ'ಯನ್ನು ಆಯ್ಕೆ ಮಾಡಿಕೊಂಡರು. ಕಠಿಣ ಅಭ್ಯಾಸ, ಪರಿಶ್ರಮ ದೊಂದಿಗೆ ಇತ್ತೀಚೆಗೆ ನಡೆದ ವಿಶ್ವಕಪ್‌ನಲ್ಲಿ 'ಚಿನ್ನ' ಜಯಿಸಿದ್ದಾರೆ.

ಮಹಮ್ಮದ್ ನೂಮಾನ್

ಕ್ರೀಡೆ

ಶೂಟಿಂಗ್ ಕ್ರೀಡೆಯನ್ನು ಗಂಭೀರವಾಗಿ ತೆಗೆದುಕೊಂಡ ಆರೇಳು ವರ್ಷಗಳಲ್ಲೇ ವಿಶ್ವಕಪ್‌ನಲ್ಲಿ ಚಿನ್ನ ಗೆದ್ದಿರುವ ದಿವ್ಯಾ ಟಿ.ಎಸ್ ಅವರದ್ದು ಅಮೋಘ ಸಾಧನೆಯೇ ಸರಿ. ಬೆಂಗಳೂರಿನ ದಿವ್ಯಾ, ಅಜರ್‌ಬೈಜಾನ್‌ನ ಬಾಕುವಿನಲ್ಲಿ ಈಚೆಗೆ ನಡೆದ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಜಯಿಸಿದ್ದರು.

ದಿವ್ಯಾ ಅವರಿಗೆ ಹರಿಯಾಣದ ಸರಬ್ಜೋತ್ ಸಿಂಗ್ ಸಾಥ್ ನೀಡಿದ್ದರು. 55 ದೇಶಗಳ ತಂಡಗಳು ಪಾಲ್ಗೊಂಡಿದ್ದ ಕಣದಲ್ಲಿ ದಿವ್ಯಾ- ಸರಬ್ಜೋತ್ ಜೋಡಿ ಚಿನ್ನದೆಡೆಗೆ ಗುರಿಯಿಟ್ಟಿತ್ತು. ದಿವ್ಯಾ ಅವರು ಅಲ್ಪ ಸಮಯದಲ್ಲೇ ವಿಶ್ವಕಪ್ ಚಿನ್ನ ಗೆಲ್ಲುವಷ್ಟರ ಮಟ್ಟಿಗೆ ಬೆಳೆದು ನಿಂತದ್ದು, ಎಲ್ಲರ ಹುಬ್ಬೇರುವಂತೆ ಮಾಡಿದೆ. ಈ ಸಾಧನೆಯ ಹಿಂದೆ ಅವರ ಕಠಿಣ ಅಭ್ಯಾಸ, ಪರಿಶ್ರಮ ಅಡಗಿದೆ.

ಸಾಧನೆಯ ಆರಂಭದ ಹೆಜ್ಜೆಗಳು

ಅಂದ ಹಾಗೆ ದಿವ್ಯಾ ಎಳೆ ವಯಸ್ಸಿನಲ್ಲೇ ಶೂಟಿಂಗ್ ಆಯ್ಕೆ ಮಾಡಿರಲಿಲ್ಲ. ಆರಂಭದಲ್ಲಿ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿಯಾಗಿದ್ದರು. 19ನೇ ವಯಸ್ಸಿನಲ್ಲಿ ಶೂಟಿಂಗ್ ಕ್ರೀಡೆಯನ್ನು ಗಂಭೀರವಾಗಿ ತೆಗೆದುಕೊಂಡರು. 'ಬ್ಯಾಸ್ಕೆಟ್‌ಬಾಲ್‌ನಂತಹ 'ತಂಡ ಕ್ರೀಡೆ'ಯಲ್ಲಿ ಯಶಸ್ಸು ಸಾಧಿಸಲು ಇತಿಮಿತಿಗಳಿರುತ್ತವೆ. ವೈಯಕ್ತಿಕ ಕ್ರೀಡೆಯಲ್ಲಿ ಸಾಧನೆಗೆ ಹೆಚ್ಚಿನ ಅವಕಾಶಗಳಿರುತ್ತವೆ' ಎಂದು ಶೂಟಿಂಗ್ ಆಯ್ಕೆ ಮಾಡಿಕೊಂಡ ಹಿಂದಿನ ಕಾರಣ ವಿವರಿಸುತ್ತಾರೆ ದಿವ್ಯಾ.

'ಶೂಟಿಂಗ್‌ನಲ್ಲಿ ವೃತ್ತಿಜೀವನವನ್ನು ತುಂಬಾ ದೀರ್ಘವಾಗಿಸಬಹುದು. ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ ಕಾಪಾಡಿಕೊಂಡರೆ ಈ ಕ್ರೀಡೆಯಲ್ಲಿ 40ರ ವಯಸ್ಸಿನಲ್ಲೂ ಪದಕ ಗೆಲ್ಲಬಹುದು. ಇದೇ ಕಾರಣದಿಂದ ಶೂಟಿಂಗ್‌ನತ್ತ ಗಮನಹರಿಸಿದೆ' ಎನ್ನುತ್ತಾರೆ ಅವರು.



ಸರಬ್ಜೋತ್- ದಿವ್ಯಾ

2016 ರಲ್ಲಿ ರಾಜ್ಯಮಟ್ಟದ ಸರ್ಧೆಗಳಲ್ಲಿ ಪಾಲ್ಗೊಳ್ಳಲು ಶುರು ಮಾಡಿದ್ದ ಅವರು, 2018ರ ಬಳಿಕವಷ್ಟೇ ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಆರಂಭಿಸಿದ್ದರು. ವೃತ್ತಿಪರ ಶೂಟರ್ ಆಗಬೇಕು ಎಂದು ನಿರ್ಧರಿಸಿದ ಬೆನ್ನಲ್ಲೇ ಕೋವಿಡ್ ಕ್ರೀಡಾ ಚಟುವಟಿಕೆಗಳಿಗೆ ಬ್ರೇಕ್ ಹಾಕಿಸಿತು. ಇದರಿಂದ ಸುಮಾರು ಎರಡು ವರ್ಷ ಯಾವುದೇ ಸ್ಪರ್ಧೆಗಳು ನಡೆಯಲಿಲ್ಲ. ಅಭ್ಯಾಸ ನಡೆಸಲೂ ಆಗಲಿಲ್ಲ. ಕೋವಿಡ್ ದೂರವಾದ ಬಳಿಕ ಸತತ ತರಬೇತಿ ನಡೆಸಿ ಯಶಸ್ಸುಗಳಿಸಿದ್ದಾರೆ.

ಉತ್ತಮ ತರಬೇತಿ

ಆರಂಭದ ದಿನಗಳಲ್ಲಿ ಕೋಚ್ ಮಂಜುನಾಥ್ ಪಟಗಾರ್ ಅವರಿಂದ ತರಬೇತಿ ಪಡೆದ ದಿವ್ಯಾ, ಬಹಳ ಬೇಗನೇ ಈ ಕ್ರೀಡೆಯ ಕೌಶಲಗಳನ್ನು ಕರಗತಮಾಡಿ ಕೊಂಡರು. ಒಬ್ಬ ಶೂಟರ್ ಆಗಲು ಬೇಕಾದ ಪ್ರತಿಭೆ ಇವರಲ್ಲಿದೆ ಎಂಬುದನ್ನು ಗುರುತಿಸಿ ಪ್ರೋತ್ಸಾಹ ಕೊಟ್ಟದ್ದು ಮಂಜುನಾಥ್.

ರಾಷ್ಟ್ರೀಯ ಶಿಬಿರಗಳು ಮತ್ತು ಭಾರತ ತಂಡಕ್ಕೆ ಆಯ್ಕೆಯಾದ ಬಳಿಕ ಎಸ್‌ಎಐ ಹಾಗೂ ರಾಷ್ಟ್ರೀಯ ತಂಡದ ಕೋಚ್‌ಗಳ ಮಾರ್ಗದರ್ಶನ ಲಭಿಸಿತು. ಇದರಿಂದ ದಿವ್ಯಾಗೆ ಕಡಿಮೆ ಅವಧಿಯಲ್ಲೇ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲು ಸಾಧ್ಯವಾಗಿದೆ.

ಹುರುಪು ನೀಡಿದ 'ಚಿನ್ನ'

ಕಳೆದ ವರ್ಷ ಡಿಸೆಂಬರ್‌ನಲ್ಲಿ ಭೋಪಾಲ್‌ನಲ್ಲಿ ನಡೆದಿದ್ದ 65 ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ದಿವ್ಯಾ ಚಿನ್ನ ಜಯಿಸಿ ದ್ದರು. ಅಂತರರಾಷ್ಟ್ರೀಯ ಕೂಟಗಳಲ್ಲಿ ಪದಕ ಗೆದ್ದು ಛಾಪು ಮೂಡಿಸಿದ್ದ ರಿದಮ್ ಸಾಂಗ್ವಾನ್, ಇಶಾ ಸಿಂಗ್ ಮತ್ತು ಮನು ಭಾಕರ್ ಅಂತಹ ಸ್ಪರ್ಧಿಗಳನ್ನು ಹಿಂದಿಕ್ಕುವಲ್ಲಿ ಯಶಸ್ವಿಯಾಗಿದ್ದರು. ಆ ಪದಕವು ಅವರಿಗೆ ಹೊಸ ಹುರುಪು ನೀಡಿತ್ತು. 'ವಿಶ್ವಮಟ್ಟದ ಶೂಟರ್‌ಗಳು ಸ್ಪರ್ಧಿಸಿದ್ದ ಕೂಟದಲ್ಲಿ ಯಶಸ್ವಿಯಾಗಿದ್ದು ನನ್ನ ಆತ್ಮವಿಶ್ವಾಸ ಹೆಚ್ಚಿಸಿತು. ಅದರಿಂದ ವಿಶ್ವಕಪ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆಯಲು ಸಾಧ್ಯವಾಯಿತು' ಎನ್ನುತ್ತಾರೆ ದಿವ್ಯಾ.

ಮೂರನೇ ವಿಶ್ವಕಪ್ ಯಶಸ್ಸು

ಕೈರೊ ಮತ್ತು ಭೋಪಾಲ್‌ನಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ ಸ್ಪರ್ಧಿಸಿದ್ದ ದಿವ್ಯಾಗೆ ಪದಕ ಸಿಕ್ಕಿರಲಿಲ್ಲ. ಆಗ, ವೈಯಕ್ತಿಕ ವಿಭಾಗದಲ್ಲಿ ಕ್ರಮವಾಗಿ ಏಳು ಹಾಗೂ ಐದನೇ ಸ್ಥಾನಗಳಿಸಿದ್ದರು. ತಂಡ ವಿಭಾಗದಲ್ಲೂ ಪದಕದೆಡೆಗೆ ಗುರಿಯಿಡಲು ಆಗಿರಲಿಲ್ಲ. ಆದರೆ, ಪಶ್ಚಿಮ ಯೂರೋಪ್‌ನ ಅಜರ್‌ಬೈಜಾನ್ ಗಣರಾಜ್ಯದ ಬಾಕುವಿನಲ್ಲಿ ನಡೆದ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಗೆದ್ದರು. ಇದು ಅವರಿಗೆ ಮೂರನೇ ವಿಶ್ವಕಪ್. 'ವಿಶ್ವದ ಘಟಾನುಘಟಿ ಶೂಟರ್‌ಗಳ ಜತೆ ಪೈಪೋಟಿ ನಡೆಸಿ ಚಿನ್ನ ಗೆಲ್ಲಲು ಸಾಧ್ಯವಾಗಿದೆ. ಇದು ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆಗೆ ಪ್ರೇರಣೆ ನೀಡಲಿದೆ' ಎಂಬುದು ಅವರ ಆತ್ಮವಿಶ್ವಾಸದ ನುಡಿ.



ಮುಂದೆ 25 ಮೀ. ಪಿಸ್ತೂಲ್ ವಿಭಾಗದಲ್ಲೂ ವಿಶ್ವಕಪ್‌ನಲ್ಲಿ ಪದಕ ಗೆಲ್ಲುವ ಗುರಿ ಅವರದ್ದು. ಕಾನೂನು ವಿಷಯ ವ್ಯಾಸಂಗ (ಎಲ್‌ಎಲ್‌ಎಂ) ಮಾಡುತ್ತಿರುವ ದಿವ್ಯಾ ಅವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಕೆಲ ಕಾಲ ತಯಾರಿ ನಡೆಸಿದ್ದರು. ಅದರ ನಡುವೆಯೇ ಶೂಟಿಂಗ್ ರೇಂಜ್‌ನಲ್ಲಿ ನಿಖರ ಗುರಿ ಹಿಡಿದು ಹೊಸ ಎತ್ತರಕ್ಕೇರಿದ್ದಾರೆ.

ಪ್ಯಾನ್ ಇಂಡಿಯಾ ಚಿತ್ರಕ್ಕೆ ರಾಧಿಕಾ ನಾಯಕಿ



ಶ್ರೇಯಸ್ ತಲ್ಪಡೆ ಹಾಗೂ ರಾಧಿಕಾ ಕುಮಾರಸ್ವಾಮಿ

ಸಿನಿ ಹನಿ

ನಟಿ ರಾಧಿಕಾ ಕುಮಾರಸ್ವಾಮಿ ಬೆಳ್ಳಿತೆರೆಯಲ್ಲಿ ಸಕ್ರಿಯವಾಗಿ ಕಾಣಿಸಿಕೊಳ್ಳದೆ ವರ್ಷಗಳೇ ಉರುಳಿವೆ. ಅವರ ಇತ್ತೀಚೆಗಿನ ಸಿನಿಮಾ, 2022ರಲ್ಲಿ ಬಿಡುಗಡೆಯಾಗಿದ್ದ 'ರವಿ ಬೋಪಣ್ಣ' ಕೂಡ ಎರಡು ವರ್ಷದ ಹಿಂದೆ ಶೂಟಿಂಗ್ ಪೂರ್ಣಗೊಳಿಸಿತ್ತು. ಇದಾದ ಬಳಿಕ ರಾಧಿಕಾ ಅವರು ಯಾವುದೇ ಹೊಸ ಪ್ರಾಜೆಕ್ಟ್ ಒಪ್ಪಿಕೊಂಡಿರಲಿಲ್ಲ. ಇದೀಗ ಪ್ಯಾನ್ ಇಂಡಿಯಾ ಸಿನಿಮಾವೊಂದರ ಮೂಲಕ ರಾಧಿಕಾ ಮತ್ತೆ ಸಿಲ್ವರ್‌ಸ್ಕ್ರೀನ್‌ನಲ್ಲಿ ಮಿಂಚಲು ಸಜ್ಜಾಗಿದ್ದಾರೆ.

ರಾಧಿಕಾ, ತಮ್ಮದೇ ಶಮಿಕಾ ಪ್ರೊಡಕ್ಷನ್ಸ್ ಮೂಲಕ ನಿರ್ಮಿಸಿರುವ 'ಭೈರಾದೇವಿ' ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಈ ಸಿನಿಮಾ ಬಿಡುಗಡೆಯನ್ನೇ ಆದ್ಯತೆಯನ್ನಾಗಿ ತೆಗೆದುಕೊಂಡಿದ್ದ ಅವರು, ಮಲಯಾಳಂ ಸೇರಿದಂತೆ ಇತರೆ ಭಾಷೆಗಳಿಂದ ಬಂದ ಆಫರ್‌ಗಳನ್ನೂ ತಿರಸ್ಕರಿಸಿದ್ದರು. ಈ ನಡುವೆ ಏಳು ಭಾಷೆಗಳಲ್ಲಿ ತೆರೆಕಾಣಲಿರುವ 'ಅಜಾಗ್ರತ' ಎಂಬ ಸಿನಿಮಾವನ್ನು ಅವರು ಒಪ್ಪಿಕೊಂಡಿದ್ದಾರೆ. ರಾಧಿಕಾ ಸಹೋದರ ರವಿರಾಜ್ ಅವರೇ ಈ ಸಿನಿಮಾ ನಿರ್ಮಿಸುತ್ತಿದ್ದು, ರಾಧಿಕಾ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಈ ಮೂಲಕ ಚಿತ್ರರಂಗದಲ್ಲಿ ಮತ್ತೆ ಸಕ್ರಿಯರಾಗಿರುವ ಸುಳಿವನ್ನೂ ಅವರು ನೀಡಿದ್ದಾರೆ.

ಈ ಚಿತ್ರದ ಮುಹೂರ್ತ ಇತ್ತೀಚೆಗೆ ವಿವಿಧ ಗಣ್ಯರ ಉಪಸ್ಥಿತಿಯಲ್ಲಿ ಹೈದರಾಬಾದ್‌ನ ರಾಮನಾಯ್ಡು ಸ್ಟುಡಿಯೊದಲ್ಲಿ ನಡೆಯಿತು. ತೆಲುಗು ಚಿತ್ರರಂಗದ ಖ್ಯಾತ ನಿರ್ಮಾಪಕ ಎ.ಎಂ.ರತ್ನಂ ಚಿತ್ರದ ಮೊದಲ ದೃಶ್ಯಕ್ಕೆ ಫಲಕ ತೋರಿದರು. ವಿತರಕ ಟ್ಯಾಗೋರ್ ಮಧು ಕ್ಯಾಮೆರಾ ಚಾಲನೆ ಮಾಡಿದರು.

ಎಂ.ಶಶಿಧರ್ ಆ್ಯಕ್ಷನ್ ಕಟ್ ಹೇಳಲಿರುವ ಈ ಚಿತ್ರದಲ್ಲಿ ಬಾಲಿವುಡ್‌ನ ಖ್ಯಾತ ನಟ ಶ್ರೇಯಸ್ ತಲ್ಪಡೆ ನಾಯಕನಾಗಿ ನಟಿಸುತ್ತಿದ್ದಾರೆ. ರಾವ್ ರಮೇಶ್, ಸುನೀಲ್, ಆದಿತ್ಯ ಮೆನನ್, ರಾಘವೇಂದ್ರ ಶ್ರವಣ್, ದೇವರಾಜ್, ಜಯಪ್ರಕಾಶ್, ವಿನಯಾಪ್ರಸಾದ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ತೆಲುಗು, ಕನ್ನಡ ಸೇರಿದಂತೆ ಏಳು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದ್ದು, ರವಿರಾಜ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸಂದೀಪ್ ವಲ್ಲೂರಿ ಛಾಯಾಚಿತ್ರಗ್ರಹಣ, ಶ್ರೀಹರಿ ಸಂಗೀತ ನಿರ್ದೇಶನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಡಬ್ ಮಾಡದೇ, ಆಯಾ ಭಾಷೆಗಳಲ್ಲಿ ಪ್ರತ್ಯೇಕವಾಗಿ ಚಿತ್ರೀಕರಣ ನಡೆಯಲಿರುವುದು ಈ ಚಿತ್ರದ ವಿಶೇಷ ಎಂದಿದೆ ಚಿತ್ರತಂಡ.

ಚಾರಿತ್ರಿಕ ಐಸಿರಿಯ ಸೋಮೇಶ್ವರ ದೇಗುಲ

ದೊಡ್ಡಬಾಣಗೆರೆ ಮಾರಣ್ಣ

ಸುತ್ತಾಟ

ರಾಮನಗರ ಜಿಲ್ಲೆ ಮಾಗಡಿ ಸುತ್ತಮುತ್ತ ಹಲವು ಪ್ರವಾಸಿ ತಾಣಗಳಿವೆ. ಹಾಗೆಯೇ, ಐತಿಹಾಸಿಕ, ಪುರಾತತ್ವ ಐಸಿರಿಯ ದೇವಾಲಯಗಳೂ ಇವೆ. ಅಂಥ ದೇವಾಲಯಗಳಲ್ಲಿ ಸೋಮೇಶ್ವರ ದೇವಾಲಯವೂ ಒಂದು.

ಮಾಗಡಿಯಿಂದ ಕುಣಿಗಲ್‌ಗೆ ಹೋಗುವ ರಸ್ತೆಯ ಎಡ ಬದಿಯಲ್ಲಿ ಹಸಿರುಸಿರಿಯ ನಡುವೆ ಸೋಮೇಶ್ವರ ದೇವಾಲಯವಿದೆ. ಸುತ್ತಲೂ ಮರಗಿಡಗಳಿವೆ. ಒಳಭಾಗದಲ್ಲಿ ಹಲ್ಲು ಹಾಸಿನ ಅಂಗಳ. ನಡುವೆ ಬೃಹತ್ ಗೋಪುರವಿರುವ ದೇಗುಲವೇ ಸೋಮೇಶ್ವರ ದೇವಾಲಯ.

ಇದು ದ್ರಾವಿಡ ಶೈಲಿಯ ದೇಗುಲ. ದೇವಾಲಯಕ್ಕೆ ಉತ್ತರಾಭಿಮುಖವಾಗಿ ಪ್ರವೇಶದ್ವಾರವಿದೆ. ಇದು ವಿಜಯನಗರದ ಹಂಪಿಯಲ್ಲಿನ ವಿರೂಪಾಕ್ಷ ದೇವಾಲಯದ ಮಾದರಿಯಲ್ಲಿದೆ.

ದೇವಾಲಯ ಪ್ರವೇಶಿಸುತ್ತಿದ್ದಂತೆ, ಎರಡು ಬದಿಯಲ್ಲಿ ಲತಾವಳಿಗಳಿಂದ ಕೂಡಿರುವ ಬೃಹತ್ ಕಂಬಗಳಲ್ಲಿ ಉಬ್ಬುಚಿತ್ರಗಳಿವೆ. ದೇವಾಲಯದ ಪ್ರಾಕಾರದ ಪೂರ್ವ ಮತ್ತು ಪಶ್ಚಿಮದಲ್ಲಿ ಎರಡು ಬೃಹತ್ ಕೆಂಪೇಗೌಡರ ಹಜಾರಗಳಿವೆ. ಗರ್ಭಗೃಹದಲ್ಲಿ ನಯನಮನೋಹರ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಎದುರಿನಲ್ಲಿ ಕೊರಳಗಂಟೆ, ಹಣೆಗೆಜ್ಜೆ, ಸರಪಳಿ ಸೂಕ್ಷ್ಮ ಕೆತ್ತನೆಯ ಕಪ್ಪುಶಿಲೆಯ ನಂದಿ ವಿಗ್ರಹ ಗಮನಸೆಳೆಯುತ್ತದೆ.

ದೇಗುಲದ ಇತಿಹಾಸ

ನಾಡಪ್ರಭು ಕೆಂಪೇಗೌಡರ ವಂಶಸ್ಥರು ಹಾಗೂ ಮಾಗಡಿ ಸೀಮೆಯನ್ನಾಳಿದ ಕೊನೆಯ ದೊರೆ ಕೆಂಪವೀರಪ್ಪಗೌಡ, ದೊಡ್ಡವೀರಪ್ಪಗೌಡ ಮತ್ತು ಮುದ್ದುವೀರಾಂಬೆಯ ಪುತ್ರ. ತನ್ನ ತಾಯಿ ಮುದ್ದುವೀರಾಂಬೆಯ ಮನದಾಸೆಯಂತೆ ಕ್ರಿ.ಶ. 1712ರಲ್ಲಿ ಮಾಗಡಿ ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿ ವಿಶಾಲ ಬಂಡೆಯ ಮೇಲೆ ಸೋಮೇಶ್ವರ ದೇವಾಲಯ ನಿರ್ಮಿಸಿದ್ದಾರೆ. ಇದು ಸೌರಾಷ್ಟ್ರದ ಸೋಮೇಶ್ವರ ದೇವಾಲಯವನ್ನು ಹೋಲುತ್ತದೆ. ವಿಜಯನಗರ ಕಾಲದ ದ್ರಾವಿಡ ಶೈಲಿಯಲ್ಲಿದೆ ಎಂದು ದೇವಾಲಯದ ಗರ್ಭಗೃಹದಲ್ಲಿನ ಶಿವಲಿಂಗದ ಹಿಂದಿನ ಶಿಲಾಶಾಸನದಲ್ಲಿ ಉಲ್ಲೇಖವಾಗಿದೆ. ಹನುಮಾಪುರದ ಮುನಿಯಾ ಭೋವಿ ತಂಡದವರು, ಸ್ಥಳೀಯ ಕಲ್ಲುಗಳನ್ನೇ ಬಳಸಿಕೊಂಡು ಈ ಕಲಾತ್ಮಕವಾದ ದೇಗುಲವನ್ನು ನಿರ್ಮಿಸಿದ್ದಾರೆ.

ಕಂಬದ ಮೇಲೆ ಚಿತ್ರಗಳು

ದೇವಾಲಯದ ಪ್ರತಿ ಕಂಬದ ಮೇಲೂ ಶಿವಲೀಲಾ ಉಬ್ಬುಚಿತ್ರಗಳನ್ನು ಕೆತ್ತಿದ್ದಾರೆ. ದೇಗುಲದ ಪೂರ್ವದಲ್ಲಿ ನೃತ್ಯಮಂಟ, ದೇವಾಲಯದ ದಕ್ಷಿಣ ದ್ವಾರದ ಮೇಲೆ ಬೃಹತ್ ರಾಯಗೋಪುರವಿದೆ. ದೇವಾಲಯದ ಪೌಳಿಯ ಒಳಗೆ ಭ್ರಮರಾಂಬಿಕೆ ಅಮ್ಮನವರ ದೇವಾಲಯ, ಪರಶುರಾಮ ಮತ್ತು ಸತ್ಯನಾರಾಯಣಸ್ವಾಮಿ ದೇಗುಲಗಳಿವೆ. ಇದೊಂದು ಹರಿಹರ ದೇವಾಲಯವಾಗಿದೆ.

ಪೌಳಿಯ ಒಳಗಿನ ಪಶ್ಚಿಮ ದಿಕ್ಕಿನ ಹಜಾರದ ಒಳಭಾಗದಲ್ಲಿ ಗಿರಿಜಾಕಲ್ಯಾಣದ ಶಿಲ್ಪಗಳಿವೆ. ದೇವಾಲಯದ ಈಶಾನ್ಯದಲ್ಲಿ ಶಿಲ್ಪಿ ಮುನಿಯಾಭೋವಿ ಗದ್ದುಗೆ ಇದೆ. ಬೃಹತ್ ಕಲ್ಲಿನ ಕಂಬಗಳಲ್ಲಿ ವಿವಿಧ ಭಂಗಿಯ ದೇವಾನುದೇವತೆಗಳ ಉಬ್ಬು ಚಿತ್ರಗಳಿವೆ. ದೇವಾಲಯದ ನೈಋತ್ಯ ದಿಕ್ಕಿನ ಬಂಡೆಯ ಮೇಲೆ ಕೆಂಪೇಗೌಡರ ಕಾಲದ ಗೋಪುರವಿದೆ. ಉತ್ತರ ಭಾಗದಲ್ಲಿ ವಿಶಾಲವಾದ ಕಲ್ಯಾಣಿ ಇದೆ.

ರಥಸಪ್ತಮಿಯಂದು ಜಾತ್ರೆ

ದೇವಾಲಯದಲ್ಲಿ ರಥಸಪ್ತಮಿಯಂದು ರಥೋತ್ಸವ ನಡೆಯಲಿದೆ. ಈ ಸಂದರ್ಭದಲ್ಲಿ ಇದೇ ಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯುತ್ತದೆ. ಮಹಾಶಿವರಾತ್ರಿಯಲ್ಲಿ ವಿಶೇಷ ಪೂಜೆಗಳಿರುತ್ತವೆ. ಕಾರ್ತಿಕ ಮಾಸದಲ್ಲಿ ಲಕ್ಷದೀಪೋತ್ಸವ ಇಲ್ಲಿನ ವಿಶೇಷ.



ಮಾಗಡಿ ಸೋಮೇಶ್ವರ ದೇವಾಲಯದ ಪ್ರಾಂಗಣ

ಸೋಮೇಶ್ವರಸ್ವಾಮಿ ದೇವಾಲಯದ ಪೌಳಿಯ ಒಳಗೆ ಭಕ್ತರಾದ ಪುರುಷೋತ್ತಮ್ ಪಟೇಲ್ ಸಹೋದರರು ಗಿಡಗಳನ್ನು ನೆಟ್ಟು ಆವರಣವನ್ನು ಸುಂದರವಾಗಿಸಿದ್ದಾರೆ. ಕಲ್ಲಿನ ಆಸನಗಳನ್ನು ಅಳವಡಿಸಿದ್ದಾರೆ. ಜೊತೆಗೆ ಮಕ್ಕಳ ಆಟಿಕೆಗಳೂ ಇವೆ.

ದೇವಾಲಯ ಪಕ್ಕದಲ್ಲೇ ಎತ್ತರ ಜಾಗದಲ್ಲಿ ಒಂದು ಕಲ್ಲಿನ ಗೋಪುರದ ಮಂಟಪವಿದೆ. ಆ ಮಂಟಪದ ಮೇಲೆ ನಿಂತರೆ, ಸಾವನದುರ್ಗದ ವಿಹಂಗಮ ನೋಟದ ಜೊತೆಗೆ, ಸೋಮೇಶ್ವರ ದೇವಾಲಯವನ್ನು ಕಣ್ತುಂಬಿಕೊಳ್ಳಬಹುದು

ಹೋಗುವುದು ಹೇಗೆ ?

ಬೆಂಗಳೂರಿನಿಂದ ಸುಮಾರು 50 ಕಿ.ಮೀ ದೂರದಲ್ಲಿ ಮಾಗಡಿ ಇದೆ. ಮಾಗಡಿಯಿಂದ ಕುಣಿಗಲ್ ರಸ್ತೆಯಲ್ಲಿ ಕಲ್ಯಾಬಾಗಿಲು ಮಾರ್ಗವಾಗಿ 1 ಕಿ.ಮೀ. ಸಾಗಿದರೆ ರಸ್ತೆಯ ಎಡಭಾಗದಲ್ಲಿ ದೇವಾಲಯದ ರಾಜಗೋಪುರ ಕಾಣುತ್ತದೆ. ಮುಖ್ಯ ರಸ್ತೆಯಲ್ಲಿ ಸೋಮೇಶ್ವರ ದೇಗುಲದ ನಾಮಫಲಕವೂ ಇದೆ.

ನೋಡಬನ್ನಿ ರಾಮದೇವರ ಸನ್ನಿಧಿ...

ಪಯಣ

ಆರ್. ಜಿತೇಂದ್ರ

ಇದು ಶೂಟಿಂಗ್ ಪ್ರಿಯರ ಪಾಲಿನ ನೆಚ್ಚಿನ 'ಶೋಲೆ' ಬೆಟ್ಟ, ಭಕ್ತರ ಪಾಲಿಗೆ ರಾಮದೇವರ ಸನ್ನಿಧಿ. ಪರಿಸರ ಪ್ರಿಯರಿಗೆ ಹಸಿರನ್ನು ಮೈ ದುಂಬಿನಿಂತ ರಣಹದ್ದುಗಳ ಆವಾಸಸ್ಥಾನ.

ರಾಮನಗರದ ರಾಮದೇವರ ಬೆಟ್ಟ ಈಚೆಗೆ ಟ್ರೆಂಡಿಂಗ್‌ನಲ್ಲಿ ಇರುವ ಪ್ರವಾಸಿ ತಾಣ. ದಕ್ಷಿಣ ಅಯೋಧ್ಯೆ ಮಾದರಿಯಲ್ಲಿ ಇಲ್ಲಿ ದೇಗುಲದ ನಿರ್ಮಾಣದ ಪ್ರಯತ್ನ ನಡೆದಿದ್ದು, ಈ ಕಾರಣಕ್ಕೆ ಇದು ಹೆಚ್ಚು ಸುದ್ದಿಯಲ್ಲೂ ಇದೆ.

ರಾಮ ಭಕ್ತರ ಪಾಲಿನ ಪವಿತ್ರ ಕ್ಷೇತ್ರವಾಗಿರುವ ಈ ಗಿರಿಯು ರಣಹದ್ದುಗಳ ವಾಸಸ್ಥಾನವಾಗಿಯೂ ಪ್ರಸಿದ್ಧಿ. ಪ್ರಾಕೃತಿಕ ಸೌಂದರ್ಯ ಸೌಂದರ್ಯದ ತಾಣವಾಗಿರುವ ಬೆಟ್ಟವು ನಗರಕ್ಕೆ ಸನಿಹದಲ್ಲಿದ್ದು ವರ್ಷವಿಡೀ ಪ್ರವಾಸಿಗರನ್ನು ಆಕರ್ಷಿಸುತ್ತಲೇ ಇದೆ.

ಶ್ರೀರಾಮ ದಂಪತಿ ಸಮೇತ ನೆಲೆಸಿದ್ದರು ಎನ್ನಲಾದ ರಾಮದೇವರ ಬೆಟ್ಟವು ಜಿಲ್ಲೆಯ ಐತಿಹಾಸಿಕ ಕುರುಹುಗಳಲ್ಲಿ ಒಂದು. ಹಿಂದಿ ಭಾಷೆಯ ಪ್ರಸಿದ್ಧ 'ಶೋಲೆ' ಸಿನಿಮಾ ಚಿತ್ರೀಕರಣಗೊಂಡಿದ್ದು ಇಲ್ಲಿಯೇ. ಹೀಗಾಗಿ ಇದು ಶೋಲೆ ಬೆಟ್ಟ ಎಂದೇ ಹೆಸರುವಾಸಿ. ಅಂತೆಯೇ ಇಂಗ್ಲಿಷಿನ 'ಪ್ಯಾಸೇಜ್ ಟು ಇಂಡಿಯಾ' ಸಹಿತ ಹಲವು ಸಿನಿಮಾಗಳೂ ಇಲ್ಲಿ ಚಿತ್ರೀಕರಣಗೊಂಡಿವೆ.

850 ಎಕರೆಯಷ್ಟು ವಿಸ್ತಾರವಾದ ಅರಣ್ಯ ಹೊಂದಿರುವ ಈ ಬೆಟ್ಟವನ್ನು ರಾಜ್ಯ ಸರ್ಕಾರ ರಣಹದ್ದು ಸಂರಕ್ಷಣಾ ಧಾಮ ಎಂದು ಗುರುತಿಸಿದೆ. ಅರಣ್ಯ ಇಲಾಖೆ ಇದರ ನಿರ್ವಹಣೆ ಮಾಡುತ್ತಿದೆ. ಶ್ರಾವಣ ಮಾಸದ ಸಂದರ್ಭ ಬೆಟ್ಟದಲ್ಲಿ ಭಕ್ತರ ದಂಡೇ ನೆರೆದಿರುತ್ತದೆ.

ಏನೇನಿದೆ ಬೆಟ್ಟದಲ್ಲಿ?: ದ್ವಾರದಲ್ಲಿ ಪ್ರವೇಶ ಶುಲ್ಕ ತೆತ್ತು ಒಳಪ್ರವೇಶಿಸಿದರೆ ಅಲ್ಲಿ ಮೆಟ್ಟಿಲುಗಳ ಬಳಿ ವಾಹನಗಳ ನಿಲುಗಡೆಗೆ ವ್ಯವಸ್ಥೆ ಇದೆ. ಮುಂದೆ ಏನಿದ್ದರೂ ಮೆಟ್ಟಿಲು ಹತ್ತಬೇಕು. 300ಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಏರುತ್ತಾ ಹೋಗಬೇಕು. ಮಧ್ಯೆ ಹಕ್ಕಿಗಳ ಕಲರವ ಕಿವಿಗೆ ಕೇಳುತ್ತಲೇ ಮುಂದುವರಿಯಬಹುದು.

ಮೆಟ್ಟಿಲುಗಳು ಮುಗಿದ ಬಳಿಕ ಪಟ್ಟಾಭಿರಾಮನ ದರ್ಶನ ಪಡೆಯಬಹುದು. ನಂತರದ ಕಡಿದಾದ ಕಾಲುದಾರಿಯಲ್ಲಿ ಮುಂದುವರಿಯುತ್ತ ಬೆಟ್ಟದ ತುದಿಗೆ ಹೋದರೆ ಅಲ್ಲಿ ಬೃಹತ್ತಾದ ಬಂಡೆಗಲ್ಲಿನಲ್ಲಿ ಕೊರೆದ ಮೆಟ್ಟಿಲುಗಳನ್ನೇರಿ ಇನ್ನಷ್ಟು ಮೇಲಕ್ಕೆ ಹೋಗಬಹುದು. ಮಳೆಗಾಲದಲ್ಲಿ ಹೋದರೆ ಮೋಡಗಳು ಹತ್ತಿರದಿಂದ ಕಾಣಸಿಗುತ್ತವೆ.


ಉದ್ದಕೊಕ್ಕಿನ ರಣಹದ್ದುಗಳು ಇಲ್ಲಿನ ವಿಶೇಷ. ಅವುಗಳ ವೀಕ್ಷಣೆಗೆ ಪ್ರವೇಶ ದ್ವಾರದ ಬಳಿ ಬೈನಾಕ್ಯುಲರ್ ವ್ಯವಸ್ಥೆ ಇದೆ. ಈ ಹದ್ದುಗಳ ವಿಶೇಷತೆ ಕುರಿತು ವಿವರಣೆಯೂ ಇದೆ. ಬಗೆಬಗೆಯ ಚಿಟ್ಟೆಗಳು ಕಾಣಸಿಗುತ್ತವೆ. ಕಾಡಿನ ಒಳಗೆ ಕರಡಿ–ಚಿರತೆಗಳು ಇವೆಯಾದರೂ ಅವು ಪ್ರವಾಸಿಗರಿಗೆ ಕಾಣಸಿಗುವುದಿಲ್ಲ. ಬೆಟ್ಟದ ಮಧ್ಯಭಾಗದಲ್ಲಿರುವ ಎಂದೂ ಬತ್ತದ ಕೊಳ, ಸಪ್ತರ್ಷಿಗಳ ಕಲ್ಲು ಬಂಡೆ ಇಲ್ಲಿನ ವಿಶೇಷಗಳಲ್ಲಿ ಒಂದು.

ನೆನಪಿರಲಿ ಈ ಸಂಗತಿ: ಇಲ್ಲಿ ರಣಹದ್ದು ಮೊದಲಾದ ಸೂಕ್ಷ್ಮ ಜೀವಿಗಳು ವಾಸವಿವೆ. ಹೀಗಾಗಿ ನಿಶಬ್ದಕ್ಕೆ ಮೊದಲ ಆದ್ಯತೆ. ಜೋರಾಗಿ ಸದ್ದು ಮಾಡುವಂತಿಲ್ಲ. ವಾಹನಗಳೂ ಅಷ್ಟೇ ನಿಧಾನವಾಗಿ ಸಾಗಬೇಕು. ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ನಿಷಿದ್ಧವಾಗಿದ್ದು, ಒಳಗೆ ಪ್ಲಾಸ್ಟಿಕ್ ಸಾಮಗ್ರಿ ಕೊಂಡೊಯ್ಯುವಂತೆ ಇಲ್ಲ.

ಬೆಳಿಗ್ಗೆ 8.30ರಿಂದ ಸಂಜೆ 5ವರೆಗೆ ಮಾತ್ರ ಪ್ರವಾಸಿಗರಿಗೆ ಪ್ರವೇಶ ಇದೆ. ಬೆಟ್ಟದಲ್ಲಿ ಯಾವುದೇ ಉಪಾಹಾರ ಗೃಹ ಇಲ್ಲ. ಹೀಗಾಗಿ ಪ್ರವಾಸಿಗರು ಜೊತೆಯಲ್ಲೇ ಆಹಾರ, ಕುಡಿಯುವ ನೀರು ಕೊಂಡೊಯ್ಯಬೇಕು.



ರಾಮದೇವರ ಬೆಟ್ಟದ ತುತ್ತ ತುದಿಯನ್ನೇರಿ ಮತ್ತೆ ಕೆಳಗೆ ಇಳಿಯುತ್ತಿರುವ ಪ್ರವಾಸಿಗರು



ರಾಮದೇವರ ಬೆಟ್ಟದ ಮೇಲ್ಭಾಗದಲ್ಲಿನ ಸಪ್ತರ್ಷಿ ಬಂಡೆಗಳು



ರಾಮದೇವರ ಬೆಟ್ಟದಲ್ಲಿರುವ ಕೊಳ ಹಾಗೂ ಹಿನ್ನೆಲೆಯಲ್ಲಿ ಪಟ್ಟಾಭಿರಾಮ ದೇಗುಲ

ಬನ್ನೇರುಘಟ್ಟ ಉದ್ಯಾನದಲ್ಲಿ 'ಪರಿಸರ ದಿನ' ಮಾಸಾಚರಣೆ

'ಪಾರ್ಕ್'ನಲ್ಲಿ ಪರಿಸರ ಪಾಠ

'ಪರಿಸರ ದಿನ'ದ ಹಿನ್ನಲೆಯಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನದಲ್ಲಿ 'ಪರಿಸರ ದಿನ ಮಾಸಾಚರಣೆ' ನಡೆಯುತ್ತಿದೆ. ಇದರ ಭಾಗವಾಗಿ ಮೇ 29 ಮತ್ತು ಜೂನ್ 5 ರಂದು ಸಾರ್ವಜನಿಕ ಸಾರಿಗೆಯಲ್ಲಿ ಉದ್ಯಾನ ವೀಕ್ಷಣೆಗಾಗಿ ಬರುವ ಪ್ರವಾಸಿಗರಿಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಆನೇಕಲ್ ಶಿವಣ್ಣ

ಬನ್ನೇರುಘಟ್ಟ ಜೈವಿಕ ಉದ್ಯಾನ ವೀಕ್ಷಣೆಗೆ ಸಾರ್ವಜನಿಕ ಸಾರಿಗೆಯಲ್ಲಿ ಬರುವವರಿಗೆ ಚಿಟ್ಟೆ ಪಾರ್ಕ್‌ಗೆ ಉಚಿತ ಪ್ರವೇಶ. ಚಿಟ್ಟೆ ಪಾರ್ಕ್ ವೀಕ್ಷಿಸಿ ಬರುವ ಪ್ರವಾಸಿಗರಿಗೆ ಗಿಡ ನೆಡುವ ಅವಕಾಶ. ಸ್ಥಳದಲ್ಲೇ ಪರಿಸರ ಸಂರಕ್ಷಣೆಯ ಸಂಕಲ್ಪ...!


ಜೂನ್ 5, ವಿಶ್ವ ಪರಿಸರ ದಿನದ ಅಂಗವಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರವಾಸಿಗರಿಗಾಗಿ ತಿಂಗಳ ಕಾಲ ಕೈಗೊಂಡಿರುವ 'ಪರಿಸರ ಮಾಸಾಚರಣೆಯ ಜಾಗೃತಿ' ಕಾರ್ಯಕ್ರಮಗಳಿವು.

ಮಾಸಾಚರಣೆಯ ಭಾಗವಾಗಿ ಮೇ ತಿಂಗಳಲ್ಲಿ ಪ್ರತಿ ಸೋಮವಾರ ಜೈವಿಕ ಉದ್ಯಾನಕ್ಕೆ ಭೇಟಿ ನೀಡುವ ಪ್ರವಾಸಿಗರಿಗಾಗಿ ಇಂಥ ವಿಶಿಷ್ಟ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. ಈಗಾಗಲೇ ಮೂರ್ನಾಲ್ಕು ಸೋಮವಾರಗಳಲ್ಲಿ ಈ ಎಲ್ಲ ಕಾರ್ಯಕ್ರಮಗಳು ನಡೆದಿವೆ. ಆ ದಿನಗಳಲ್ಲಿ ಉದ್ಯಾನಕ್ಕೆ ಭೇಟಿ ನೀಡಿದ ಪ್ರವಾಸಿಗರೆಲ್ಲರೂ ಬಹಳ ಉತ್ಸಾಹದಿಂದ ಚಿಟ್ಟೆ ಪಾರ್ಕ್ ವೀಕ್ಷಿಸಿ, ಗಿಡಗಳನ್ನು ನೆಟ್ಟು, 'ಪರಿಸರ ಸಂರಕ್ಷಣೆ ನಮ್ಮ ಹೊಣೆ' ಎಂದು ಪ್ರತಿಜ್ಞೆ ಮಾಡಿ, ಸಹಿಯನ್ನೂ ಹಾಕಿದ್ದಾರೆ. ಈಗ ಮೇ 29 ಮತ್ತು ಜೂನ್ 5 ರಂದು ಪ್ರವಾಸಿಗರಿಗೆ ಇದೇ ರೀತಿಯ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.

ಮಾಸಾಚರಣೆಯ ಕಾರ್ಯಕ್ರಮದ ಉದ್ದೇಶ ಪ್ರವಾಸಿಗರಿಗೆ ಪರಿಸರ ಜಾಗೃತಿ ಮೂಡಿಸುವುದು ಎನ್ನುತ್ತಾರೆ ಉದ್ಯಾನದ ಅಧಿಕಾರಿಗಳು. 'ಪ್ರವಾಸಿಗರು ಸಾರ್ವಜನಿಕ ಸಾರಿಗೆಯಲ್ಲಿ ಉದ್ಯಾನ ವೀಕ್ಷಣೆಗೆ ಬರುವುದರಿಂದ ಇಂಧನ ಉಳಿತಾಯವಾಗುತ್ತದೆ ಮತ್ತು ವಾಯು ಮಾಲಿನ್ಯಕ್ಕೆ ಕಡಿವಾಣ ಹಾಕಬಹುದು. ಈ ಮೂಲಕ ಪರಿಸರ ರಕ್ಷಣೆಗೆ ಅಳಿಲು ಸೇವೆ ಸಲ್ಲಿಸುವ ಉದ್ದೇಶ ನಮ್ಮದು' ಎಂದು ಹೇಳುತ್ತಾರೆ ಉದ್ಯಾನದ ಪರಿಸರ ಶಿಕ್ಷಣಾಧಿಕಾರಿ ಅಮಲಾ.

ಸಾರ್ವಜನಿಕ ವಾಹನದ ಪ್ರಯಾಣದ ಅಗತ್ಯವನ್ನು ಈ ಸಂದರ್ಭದಲ್ಲಿ ಪ್ರವಾಸಿಗರಿಗೆ ಮನವರಿಕೆ ಮಾಡಿಕೊಡಲಾಗುತ್ತದೆ. ಅಂದು ಜೈವಿಕ ಜೈವಿಕ ಉದ್ಯಾನವನ್ನು ಸುತ್ತಾಡಿ ಬರುವ ಪ್ರವಾಸಿಗರಿಗೆ, ನಿರ್ಗಮನ ದ್ವಾರದಲ್ಲೇ ಯಾವ ರೀತಿ ಪರಿಸರ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳುತ್ತಾರೆಂಬ ಸಂಕಲ್ಪ ಮಾಡಿಸಿ, ಗೋಡೆಯ ಮೇಲೆ ಸಹಿ ಹಾಕುವ ಕಾರ್ಯಕ್ರಮವನ್ನೂ ರೂಪಿಸಲಾಗಿದೆ.

'ಪರಿಸರ ದಿನ' ಮಾಸಾಚರಣೆ ಕೇವಲ ಪ್ರವಾಸಿಗರಿಗಷ್ಟೇ ಅಲ್ಲ, ಜೈವಿಕ ಉದ್ಯಾನದ ಸಿಬ್ಬಂದಿಗೆ ಪಾರ್ಕ್ ಆವರಣದ ಸ್ವಚ್ಛತೆಯ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಪ್ಲಾಸ್ಟಿಕ್ ರಹಿತ ಪ್ರದೇಶವಾಗಿರುವ ಉದ್ಯಾನದ ಆವರಣದಲ್ಲಿ ತ್ಯಾಜ್ಯ ನಿರ್ವಹಣೆಗಾಗಿ ಕ್ರಮ ಕೈಗೊಳ್ಳಲಾಗಿದೆ.



ಪರಿಸರ ಸಂರಕ್ಷಣೆಯ ಪ್ರತಿಜ್ಞೆ ನಂತರ ಸಹಿ ಹಾಕುತ್ತಿರುವ ಪ್ರವಾಸಿಗರು.

ಪರಿಸರ ಸಂರಕ್ಷಣೆಯ ಜಾಗೃತಿಯ ಜೊತೆಗೆ ಪ್ರಾಣಿಗಳ ಬಗ್ಗೆ ಕಾಳಜಿ ಮೂಡಿಸಲು ಉದ್ಯಾನದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರ ಭಾಗವಾಗಿ ವಿದ್ಯಾರ್ಥಿಗಳಿಗೆ ಶಿಬಿರಗಳನ್ನು ಆಯೋಜಸುತ್ತಿದೆ.


ಇತ್ತೀಚೆಗೆ ಬನ್ನೇರುಘಟ್ಟ ಉದ್ಯಾನವು ಹಸಿರಿನ ಜೀವಕಳೆಯಿಂದ ತುಂಬಿದೆ. ಸಫಾರಿ, ಚಿಟ್ಟೆ ಪಾರ್ಕ್, ಹುಲಿ ಸಿಂಹಗಳ ಸಫಾರಿ, ಮೃಗಾಲಯದಲ್ಲಿ ಮಾಸ್ಟರ್ ಪ್ಲಾನ್‌ನಂತೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಮೃಗಾಲಯದಲ್ಲಿ ಸುತ್ತಾಡಲು ಬಗ್ಗಿಗಳ(ವಾಹನ) ವ್ಯವಸ್ಥೆ ಮಾಡಲಾಗಿದೆ. ದೋಣಿ ವಿಹಾರ, ಅಪರೂಪದ ಬಿಳಿ ಹುಲಿ, ಜಿರಾಫೆ, ನವಿಲು, ಜಿಂಕೆ, ಕಾಡೆಮ್ಮೆ, ಆನೆಗಳ ಕುಟುಂಬವು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ. ಹಸಿರಿನ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನ್ನು ನೋಡುವುದು ಹಬ್ಬವಾಗಿದೆ.

ಪರಿಸರ ದಿನ ಮಾಸಾಚರಣೆಯಲ್ಲಿ ನೀವು ಪಾಲ್ಗೊಳ್ಳಬಹುದು. ಪರಿಸರ ಸಂರಕ್ಷಣೆ ಅರಿವು ಮೂಡಿಸಿಕೊಳ್ಳಬಹುದು. ಮಕ್ಕಳ ಮನದಲ್ಲಿ ಪರಿಸರ ಜಾಗೃತಿಯ ಬೀಜ ಬಿತ್ತಬಹುದು. ಹಾಗಾದರೆ, ಬನ್ನೇರುಘಟ್ಟ ಜೈವಿಕ ಉದ್ಯಾನ ನೋಡಲು ಹೊರಡುತ್ತೀರಲ್ಲವಾ?



ಬನ್ನೇರುಘಟ್ಟ ಜೈವಿಕ ಉದ್ಯಾನ



ಒಳಾಂಗಣ ವಿನ್ಯಾಸ

ಆಪ್ತತೆಯ ನಿವಾಸ

ಸ್ಮಿತಾ ಶಿರೂರ

ವಾಸಿಸುವ ಮನೆ, ಕೆಲಸ ಮಾಡುವ ಕಚೇರಿ, ಊಟ ಮಾಡಲು ಹೋಗುವ ಹೋಟೆಲ್, ರೆಸ್ಟೋರೆಂಟ್.. ಹೀಗೆ ಕಟ್ಟಡಗಳು ಆಪ್ತತೆ ಒದಗಿಸಬೇಕೆಂದರೆ ಅಲ್ಲಿ ಒಳಾಂಗಣ ವಿನ್ಯಾಸ ಪ್ರಮುಖ ಪಾತ್ರ ವಹಿಸುತ್ತದೆ. ದೇಶದಲ್ಲಿ ಈಗ ಒಳಾಂಗಣ ವಿನ್ಯಾಸ ಕ್ಷೇತ್ರ ವೇಗವಾಗಿ ಬೆಳೆಯುತ್ತಿದೆ.

ಹೆಚ್ಚಿನವರು ತಮ್ಮ ಮನೆ ಸುವ್ಯವಸ್ಥಿತ, ಸುರಕ್ಷಿತ, ಗಾಳಿ–ಬೆಳಕು ಆಡುವಂತಿರಲಿ ಎಂದು ಬಯಸುತ್ತಾರೆ. ಹೀಗಾಗಿ ಮನೆ ಕಟ್ಟಿಸುವಾಗ ಒಳಾಂಗಣ ವಿನ್ಯಾಸಕ್ಕೆ ಪ್ರಾಮುಖ್ಯ ನೀಡುತ್ತಾರೆ. ಜಾಗ ಚಿಕ್ಕದಾದರೆ ಅದನ್ನು ಸೂಕ್ತವಾಗಿ ಬಳಸಿಕೊಳ್ಳುವುದು ಹೇಗೆ ಎಂಬ ಉಪಾಯವನ್ನೂ ಒಳಾಂಗಣ ವಿನ್ಯಾಸ ಒದಗಿಸುತ್ತದೆ. ಮನೆಯ ಒಳ–ಹೊರ ವಾತಾವರಣ ಸುಂದರವಾಗಿದ್ದರೆ ಮನಸ್ಸೂ ಪ್ರಫುಲ್ಲಗೊಳ್ಳುತ್ತದೆ.

ಉತ್ತಮವಾಗಿ ವಿನ್ಯಾಸ ಮಾಡಿದ ಕಟ್ಟಡಗಳಿಂದಾಗಿ ಮನೆಗೆ ಕ್ರಿಯಾತ್ಮಕತೆ ಮೂಡುತ್ತದೆ. ಇಲ್ಲಿ ಕಡಿಮೆ ಜಾಗವನ್ನು ಉತ್ತಮವಾಗಿ ಬಳಸಿಕೊಳ್ಳಲು ಸಾಧ್ಯ. ಮನೆ, ಸೂಪರ್ ಮಾರ್ಕೆಟ್, ಕಚೇರಿ, ಮಾಲ್, ಕಂಪನಿ, ಕಾಫಿ ಶಾಪ್, ರೆಸ್ಟೋರೆಂಟ್... ಹೀಗೆ ಯಾವುದೇ ಕಟ್ಟಡವಿರಲಿ, ಅಲ್ಲಿ ಒಳಾಂಗಣ ವಿನ್ಯಾಸ ಮಹತ್ವದ ಪಾತ್ರ ವಹಿಸುತ್ತದೆ. ಅಲ್ಲಿ ಬಳಸುವ ಬಣ್ಣ, ಸಾಮಗ್ರಿ, ಪೀಠೋಪಕರಣ, ನೆಲಹಾಸು, ಲೈಟಿಂಗ್‌ಗಳಿಂದ ಹಿಡಿದು ಗೋಡೆಯ ಮೇಲೆ ಹಾಕುವ ಪೇಂಟಿಂಗ್ ಸಹ ಮಹತ್ವದ್ದಾಗಿ ಪರಿಗಣಿತವಾಗುತ್ತಿದೆ.

'ಒಳಾಂಗಣ ವಿನ್ಯಾಸ'ದ ಪರಿಧಿ ಪಟ್ಟಣ–ನಗರಗಳೆನ್ನದೇ ಎಲ್ಲೆಡೆಗೂ ವಿಸ್ತರಿಸಿದೆ. ಕಾರಣ ಜನರ ಜೀವನ ಶೈಲಿ ಬದಲಾಗಿರುವುದು. ಕಲಾಪ್ರೇಮಿ ಜನರು ತಾವು ಇರುವ ಮನೆಯೂ ಕಲಾತ್ಮಕವಾಗಿರಲಿ ಎಂದು ಬಯಸುತ್ತಿ ದ್ದಾರೆ. ಸಾಮಾಜಿಕ ಜಾಲತಾಣ ಎನ್ನುವುದು ಎಲ್ಲವೂ ಎಲ್ಲರಿಗೂ ಎಟಕುವಂತೆ ಮಾಡಿರುವುದರಿಂದ ಒಳಾಂಗಣ ವಿನ್ಯಾಸದ ಕಲ್ಪನೆ ಈಗ ಸಾಮಾನ್ಯ ಜನರಲ್ಲೂ ಮೂಡಿದೆ. ಸಾಮಾಜಿಕ ಜಾಲತಾಣಗಳು,ಸ್ಮಾರ್ಟ್ ಹೌಸ್ ಕಲ್ಪನೆಗಳು ದೇಶದಲ್ಲಿ ಮನೆ ನಿರ್ಮಾಣದ ಆಲೋಚನೆಗಳನ್ನು ಬದಲಾಯಿಸಿವೆ. ಹೀಗಾಗಿ ಒಳಾಂಗಣ ವಿನ್ಯಾಸದ ಬೇಡಿಕೆಯೂ ವಿಸ್ತರಿಸಲಿದೆ.

ಕಲೆ ಹಾಗೂ ವಿಜ್ಞಾನ ಎರಡೂ ಸೇರಿದ ಕ್ಷೇತ್ರವಾಗಿರುವ ಒಳಾಂಗಣ ವಿನ್ಯಾಸವು ಜೀವನದ ಪದ್ಧತಿಯನ್ನು ಸುಧಾರಿಸುವುದಲ್ಲದೇ ಕ್ರಿಯಾತ್ಮಕತೆ ಉಂಟುಮಾಡುತ್ತದೆ ಎನ್ನುವುದು ತಜ್ಞರ ಅಭಿಮತ.

ಸುರಕ್ಷತೆಯ ದೃಷ್ಟಿಯಿಂದಲೂ ಒಳಾಂಗಣ ವಿನ್ಯಾಸ ಮಹತ್ವ ಪಡೆದಿದೆ. ಒಂಟಿಯಾಗಿ ಬದುಕುವ ಮಹಿಳೆಯರು, ಒಂಟಿ ವೃದ್ಧರು ಇರುವ ಮನೆಗಳಿಗೆ ಸುರಕ್ಷತೆಯ ದೃಷ್ಟಿಯಿಂದ ವಿಶೇಷ ಒಳಾಂಗಣ ಹಾಗೂ ಹೊರಾಂಗಣ ವಿನ್ಯಾಸ ಮಾಡಲಾಗುತ್ತದೆ. ವೃದ್ಧರಿಗೆ ಸುಲಭವಾಗಿ ಓಡಾಡಲು ಅನುಕೂಲವಾಗುವ ನೆಲಹಾಸು, ಅಡುಗೆ ಮಾಡಿಕೊಳ್ಳಲು ಸೂಕ್ತ ಸಾಮಗ್ರಿಗಳನ್ನು ಒಳಾಂಗಣ ವಿನ್ಯಾಸಗಾರರು ಗುರುತಿಸುತ್ತಾರೆ. ಹೆಚ್ಚು ತಂತ್ರಜ್ಞಾನ ಸ್ನೇಹಿ ವಿನ್ಯಾಸಗಳನ್ನು ಮನೆಗಳಲ್ಲಿ ಅಳವಡಿಸಿದರೆ ನಿತ್ಯದ ಕೆಲಸಗಳನ್ನೂ ಸುಲಭವಾಗಿ ಇವರು ಮಾಡಿಕೊಳ್ಳಬಹುದು.

ಗೋಡೆಚಿತ್ರಗಳು, ಪೀಠೋಪಕರಣ, ವಿನ್ಯಾಸಭರಿತ ನೆಲಹಾಸು, ತೂಗು ದೀಪಗಳು, ಪ್ರದರ್ಶನ ಸಾಮಗ್ರಿಗಳು, ಗಾಳಿ–ಬೆಳಕು ಬರಲು ಅನುಕೂಲವಾಗುವ ಕಿಟಕಿಗಳು... ಹೀಗೆ ನೂರಾರು ವಿನ್ಯಾಸಗಳನ್ನು ಪರಿಶೀಲಿಸಲು ತಂತ್ರಜ್ಞಾನವು ಈ ಕ್ಷೇತ್ರಕ್ಕೆ ವರವಾಗಿದೆ. ಮನೆಯ ಒಳ–ಹೊರಗೆ ಅಂತಿಮ ರೂಪ ಹೇಗೆ ಇರಲಿದೆ ಎಂಬುದನ್ನು ಗ್ರಾಹಕರು ನಿಖರವಾಗಿ ನೋಡಲು ಇದರಲ್ಲಿ ಸಾಧ್ಯ.

ಮನೆ ಕಟ್ಟಿಸುವಾಗ ಹಲವರಿಗೆ ಹೀಗೆಯೇ ಇರಬೇಕೆ ಎಂಬ ಪರಿಕಲ್ಪನೆ ಮನಸ್ಸಿನಲ್ಲಿ ಮೊದಲೇ ಇರುತ್ತದೆ. ಇನ್ನಷ್ಟು ಮಂದಿಗೆ ಮನೆ ಚೆನ್ನಾಗಿ ಕಾಣಬೇಕು. ಆದರೆ, ಹೇಗೆ ಮಾಡಿಸುವುದು ಎಂಬ ಸ್ಪಷ್ಟ ಚಿತ್ರಣ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಒಳಾಂಗಣ ವಿನ್ಯಾಸಗಾರರ ಸಹಾಯ ಪಡೆಯಬಹುದು.

> ಜಾಗ ಚಿಕ್ಕದಾದರೆ ಅದನ್ನು ಸೂಕ್ತವಾಗಿ ಬಳಸಿಕೊಳ್ಳುವುದು ಹೇಗೆ ಎಂಬ ಉಪಾಯವನ್ನೂ ಒಳಾಂಗಣ ವಿನ್ಯಾಸ ಒದಗಿಸುತ್ತದೆ. ಮನೆಯ ಒಳ–ಹೊರ ವಾತಾವರಣ ಸುಂದರವಾಗಿದ್ದರೆ ಮನಸ್ಸೂ ಪ್ರಫುಲ್ಲಗೊಳ್ಳುತ್ತದೆ.

ಸೂಕ್ತ ಜೋಡಣೆ ಅಗತ್ಯ

'ನೆಮ್ಮದಿಯ ಜೀವನ ಬೇಕೆಂದರೆ ನಾವು ವಾಸಿಸುವ ಮನೆಯು ವ್ಯವಸ್ಥಿತವಾಗಿರಬೇಕು. ಪೀಠೋಪಕರಣ, ಗೋಡೆಯ ಬಣ್ಣ, ಪರದೆಗಳು, ಅಡುಗೆಮನೆ ಹೀಗೆ ಎಲ್ಲ ವಸ್ತು ವೈವಿಧ್ಯಗಳು ಒಂದು ಸೂಕ್ತ ಕ್ರಮದಲ್ಲಿ ಜೋಡಣೆಯಾದಾಗಲೇ ಇದು ಸಾಧ್ಯ. ಸದ್ಯ ಸಮಕಾಲೀನ ಒಳಾಂಗಣ ವಿನ್ಯಾಸಕ್ಕೆ ಮಹತ್ವ ಲಭಿಸಿದೆ' ಎಂದು ದಾವಣಗೆರೆಯ 'ಪಿವಿ ಝೋನ್ ಕನ್‌ಸ್ಟ್ರಕ್ಷನ್ಸ್'ನ ಎಂಜಿನಿಯರ್ ಎಸ್.ಎಸ್. ಸುಧೀಂದ್ರಬಾಬು ವಿವರಿಸುತ್ತಾರೆ.

'ತಮ್ಮ ಮನೆ ಇನ್ನೊಬ್ಬರ ಮನೆಯಂತೆ ಇರಬಾರದು. ಭಿನ್ನವಾಗಿ, ಆಕರ್ಷಕವಾಗಿ ಕಾಣಬೇಕು ಎಂದು ಜನ ಬಯಸುತ್ತಾರೆ. ಹೀಗಾಗಿ ಒಳಾಂಗಣ–ಹೊರಾಂಗಣ ವಿನ್ಯಾಸಕ್ಕೆ ಹೊಸ ವಸ್ತು ವೈವಿಧ್ಯ ಜೋಡಿಸುವುದು ಎಂಜಿನಿಯರ್ ಹಾಗೂ ಒಳಾಂಗಣ ವಿನ್ಯಾಸಗಾರರಿಗೆ ಅನಿವಾರ್ಯ. ಜನರ ಅಭಿಲಾಷೆಗೆ ಅನುಸಾರವಾಗಿ ನವನವೀನ ಕಟ್ಟಡ ಸಾಮಗ್ರಿ, ಒಳಾಂಗಣ ವಿನ್ಯಾಸದ ವಸ್ತುಗಳೂ ಸಹ ಹೊಸದಾಗಿ ಮಾರುಕಟ್ಟೆಗೆ ಬರುತ್ತಲೇ ಇವೆ' ಎಂದು ಅವರು ವಿವರಿಸಿದರು.

'ಪರಿಸರಸ್ನೇಹಿ ಮನೆಯಂಥ ಎಕ್ಸ್‌ಕ್ಲೂಸಿವ್ ವಿನ್ಯಾಸ ಮಾಡಲು ಖರ್ಚು ಹೆಚ್ಚಾಗುತ್ತದೆ. ಹೀಗಾಗಿ ಇಂಥ ವಿಶೇಷಗಳು ಅಪರೂಪ. ಈಚೆಗೆ 3ಕ್ಕಿಂತ ಹೆಚ್ಚು ಬೆಡ್‌ರೂಮ್‌ಗಳಿರುವ ಮನೆಯಾದರೆ ಲೈಬ್ರರಿ ಹಾಗೂ ಸ್ಟಡಿ ರೂಂ ನಿರ್ಮಿಸುವ ಹೊಸ ರೂಢಿ ಆರಂಭವಾಗಿದೆ' ಎಂದು ಸುಧೀಂದ್ರಬಾಬು ವಿವರಿಸಿದರು.

'ಕಾದಾಡಿ' ಟೀಸರ್ ರಿಲೀಸ್

ಸಿನಿ ಹನಿ

ಸುಪ್ರೀಂ ಹೀರೊ ಶಶಿಕುಮಾರ್ ಪುತ್ರ ಅಕ್ಷಿತ್‌ಶಶಿಕುಮಾರ್ ನಟನೆಯ 'ಕಾದಾಡಿ' ಸಿನಿಮಾ ಕನ್ನಡ, ತೆಲುಗು,ಹಿಂದಿ ಮತ್ತು ತಮಿಳು ಭಾಷೆಗಳಲ್ಲಿ ತಯಾರಾಗುತ್ತಿದೆ. ಈ ಸಿನಿಮಾ ತಂಡ ಇತ್ತೀಚೆಗೆ ಸಿನಿಮಾ ಟೀಸರ್ ಬಿಡುಗಡೆ ಮಾಡಿದೆ.

ಸತೀಶ್ ಮಾಲೆಂಪಾಟಿ ನಿರ್ದೇಶಿಸಿ, ಅರುಣಂ ಫಿಲಿಂಸ್ ಮೂಲಕ ನಿರ್ಮಾಣ ಮಾಡುತ್ತಿದ್ದಾರೆ. ಅಕ್ಷಿತ್‌ಗೆ, ಲಾವಣ್ಯ ಸಾಹುಕಾರ ಹಾಗೂ ಚಾಂದಿನಿ ತಮಿಳರಸನ್ ನಾಯಕಿಯರಾಗಿದ್ದಾರೆ. ಉಳಿದಂತೆ ಪೋಸಾನಿ, ರವಿಕಾಳೆ, ಮಾರಿಮುತ್ತು, ಪ್ರೇಮ್‌ಮನೋಹರ್, ಶ್ರವಣ್‌ರಾಘವೇಂದ್ರ ಮತ್ತಿತರರ ತಾರಾಗಣವಿದೆ.

ಆರು ಹಾಡುಗಳಿಗೆ ಭೀಮ್ಸ್ ಸಿಸಿರಿಲಿಯೋ ಸಂಗೀತ ಸಂಯೋಜಿಸಿ ದ್ದಾರೆ. ಛಾಯಾಗ್ರಹಣ ಡಿ.ಯೋಗಿ ಪ್ರಸಾದ್, ಕಲೆ ಅರ್ಜುನ್ ಸೂರಿಸೆಟ್ಟಿ, ಸಂಕಲನ ಪ್ರಕಾಶ್‌ತೋಟ, ನೃತ್ಯ ರಾಜ್‌ಪಿಡಿ-ರಾಜ್‌ಕೃಷ್ಣ. ಸಾಹಸ ಬಿ.ಎಲ್.ಸತೀಶ್-ವಿನ್‌ಚೇನ್ ಅಂಜಿ-ಬಿಂಬಸಾರ -ರಾಮಕೃಷ್ಣ-ರಾಮಸುಂಕರ ಅವರದಾಗಿದೆ. ಗೋವಾ, ಚಿಕ್ಕಮಗಳೂರು, ಹೈದರಬಾದ್, ಚೆನ್ನೈ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಯುತ್ತಿದೆ. ಟೀಸರ್ ನೋಡಲು ಲಿಂಕ್ ಕ್ಲಿಕ್ ಮಾಡಿ: https://youtu.be/d7SPdHq456s



ಪ್ರಜಾವಾಣಿ ಶನಿವಾರ • ಮೇ 27, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH Stage 4th_Block 50x80 near RV_College 2,94,00,000/-, 4th_B`Block 50x80 -2,80,00,000/- both 40'Road -9980761200

BDA SITE for Sale Banashankari 5th, 6th stage, Uttarahalli, Rajarajeshwarinagar, 30x40, 40x60, 50x80, Corner/intermediate Residential and Commercial, available with 80% Bank Loan also with flexible payment terms 9916592400.

"AVAILABLE BDA Sites Banasankari 6th Stage 20x30, 30x40, 40x60, 50x80 Genuine buyers Contact: 9845146725/ 9741466369"

SALE- BDA Banashankari 6th Stage, 1st Block, 40x60sft East Facing Owner Meeting KK Realtorss. 9741437555, 6366623666.

Kanakapura Road

KANAKAPURA ROAD Gubbalala 1km- Doddakallasandra Metro Station 40x60 N/F, Road Face 60 Feet. 9945724472.

Magadi Road

SALE- AGRAHARA Dasarahalli Near Magadi Road tollgate 30x40 West facing. Suitable Residential/ Industrial. Contact- 9845066279

Nagarabhavi

"NAGARABHAVI BDA 40x60, 30x40 East facing 60ft Road, Vishveshwaraiah 8th Block 40x60 West facing. 9845862388"

Rajarajeshwari Nagar

SITE FOR Sale at Gattigere (Sudarshana Layout), RR Nagar 30x40 Site W/F @ 8500/- Nego: 9740252729

Ramanagar

RESIDENTIAL CONVERTED Site Sale Near Ramanagar 0.5Km from Highway 10890Sqft 1550/ P.Sqft Clear Title. Owner- 9900115519





BDA SITE for Sale at Viveshwaraiah & Kempegowda Layout 30x40, 40x60, 50x80, Corner/intermediateResidential & Commercial available with 80% Bank Loan also with flexible payment terms 9916592400.

VISHWESHWARAIAH LAYOUT BDA 5th BLOCK 30x40 SITE FOR SALE GOOD LOCATION CONTACT: 9980860138

VISHWESHWARAIAH LAYOUT Wanted All Block Sites 20x30, 30x40, 40x60 50x80 Immediate Settlement Contact: 9611257376

40X60 SITE Vishweshwaraiah BDA 6th Block Near KLE College Owner Meeting 20x30 Site 6th North National Public School: 8310003509

SMV LAYOUT, 7th Block, Site No-63, 20x30, W/F, 58 Lakhs/- Good Location. Contact: 9844966208

Yelahanka

IMMEDIATE SALE 7000 sqft converted land near Ardeshanhalli toll gate. Contact 9036656567

Anjanapura

BDA SITE for Sale Anjanapura, Kanakapura Road, 30x40, 40x60, 50x80 corner/intermediate Residential & Commercial available with 80% Bank Loan also with flexible payment terms 9916592400.

Hanumanthnagar

SITE FOR Sale 30x40 West FACING At Hanumanthnagar Basappa layout & 60×40 East facing at Banashakari 2nd Stage Near BDA Complex contact:9343742082/7892586674

Kengeri

VINAYAKANAGAR KENGERI Satellite Town 6th Cross Maramma Temple BBMP Khatha Site No:11 Measuring 40x50 sqft @ 1.15Cr Nego:9448444205

Agricultural Land Converted

Multiple Locations

CHIKKABALAPURA, DODDABALLAPURA, Malur, Kolar 25 to 50 acres converted land available for sale. Contact 9380586105.

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Call: 9663001940.

Yeshwanthpur

COMMERICAL OFFICE SPACE`for SALE. BRAND NEW Grade-A, German MNC Tenanted. 1st_Floor 4650_SFT._Near Yeshwanthpur Metro. Call:9916155055

Flat

Uttarahalli

"POORNA PRAGNA Layout, close to Raghavendraswamy Mutt Luxury 3BHK Marble, Teakwood, 1.50 Crore. 9845286505"

REAL ESTATE BUYING

Sites

Anjanapura

ANJANAPURA WANTED JPNagar, 8 and 9th Phase, Banashankari 5th, 6th Stage Viveshwaraya Layout Kempegowda Layout any measurement. Ph: 9845132011/ 9663554448

Banashankari

BDA SITES Wanted Anjanapura Arkavathy Banashankari 6th Stage, Vishweshwaraiah Kempegowda Any BDA Layout,Contact: 9845062822, 8660751654

Jayanagar

REQUIRED/WANTED JAYANAGARA, JPNagar, BTM, HSR layout, RMV & also any measurement in any Gated Community, Royal Classic Arcade, Karshima Hills, Singapore Garden, Vakil garden, Spring Value, South Avenue NRI Buyer settlement within Seven days 9916592400.

BANASHANKARI 6TH Stage, 3rd Block, W/F, 100Feet Road Commercial Site,50x80, S/F, Contact: 9900097239

Dollars Colony

SALE 50X80 West`Facing No_218 5th_Cross diagonally Opposite cafe-coffee day Dollars_Colony RMV 2nd Stage Bangalore Call:9980066939

Jayanagar

JAYANAGAR EXCELLENT LOCATION 45x90 Property For Sale Near Metro Station. Details Contact: R.N. RAO: 9341906338

J P Nagar

JP.NAGAR 7TH Phase Adjacent to Brigade Millennium Corner Plot 2100 Sft NW Corner. Contact: 99622-77959

Tumkur Road

SALE, SITE No:555, BDA Approved, W/F 40X60, HMT Layout, Nelagadaranahalli, Nagasandra, Bangalore-73 Rs.15000/- sqft (Negotiable) OWNER: 9448483407

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

Vishweshwariah Layout

30X40 SITE 1st BLOCK BDA EAST FACING 30ft ROAD GOOD LOCATION 10000 SQFT NEGOTIABLE: 7892059756

"VISVESHWARAIAH 9TH-BLOCK 20x30 East near Ambedkar College and 8th Block Triplex House sale. 9945698808"

House

Banashankari

30X45 (1350 sft) House for Sale, BSK 1st Stage, Srinivasnagar, SBM Colony, West Facing, Rs. 14000 /sft. Negotiable. 9242894191, 9448167957

BTM Layout

30X45 DUPLEX, 2BHK 7 Houses sale 3.5 Cr. 5 Floors 30x40 2.75 20x33. Owner- 9900966336

Hanumanthnagar

"NEAR VIDYAPEETA Circle, Katriguppe 30x43 old demolition House A Katha East facing, Full Cheque. 9845286505"

Isro Layout

BUILDING SALE 800-Sqft Site 3200Sqft BuiltUp Area Four Floor Full TeakWood Granite Interior ISRO Layout- 9448879788/ 7019678016

Agricultural Land

Ramanagar

AGRICULTURAL FARM Land 3-Acres Sale Near Ramanagar 3.5Km from Highway (0.5Km Mud road) 55 Lakhs Per Acre Clear Title-9900115519

Commerical

M G Road And Around



FOR SALE COMMERCIAL Property on Magrath Road Near Garuda Mall 3600 Sq. ft Fully Furnished. Independent Unit on 1st Floor. Rental Income Call- 9242286495

Rajajinagar

-:RAJAJINAGAR INDUSTRIAL Town:- Suitable for Kalyana Mantapa 120x120 corner site for sale. Contact: 9945079777

Industrial & Factory

Hoskote

1 ACRE industrial converted land for sale off Sidalaghatta Road. Call 9591011118

REQUIRED 4000 Sft & above Residential Plot at Jayanagar. Contact Abhay- 8147201589. Brokers Excuse.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA`Sites Wanted. Contact: SAPTHAGIRI. 9900268073, 9448068073.

Vishweshwariah Layout

WANTED VISHWESHWARAIAH LAYOUT ANY BLOCK SITES 20X30,30X40 40X60, 50X80 CLEAR TITLE IMMEDIATE REGISTRATION: 9341353573

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ADDRESS MAKER

RERA REGISTRATION
PRM/KA/RERA/1251/310/PR/250822/005190



Artist's Impression of Main Entrance

PREMIUM VILLA PLOTS OFF MYSORE ROAD | **₹69 LACS* ONWARDS**

STAGE 1 SOLD

Thank you for the overwhelming response

BOOKINGS NOW OPEN FOR STAGE 2

'The Akshara Valley Address' is designed for those longing to experience the true essence of nature. A premium plotted development housed amidst surreal green cover. Located near Kengeri Metro Station with close connectivity to NICE road, this project is artfully balanced by the blend of convenience and exclusiveness. This is your opportunity to go beyond crowds and congestion to build your dream home and experience nature friendly lifespaces.

- **BDA** Approved
- **30** Acres
- **378** Villa Plots
- **08** Gardens
- **20000+** Trees
- **ESTABLISHED** Micro Market

THE AKSHARA VALLEY ADDRESS

www.addressmaker.in


Artist's Impression

Add-on Services*
- Villa Design
- Design Approvals
- Villa Execution

SCAN FOR LOCATION

Disclaimer : The images and impressions contained herein are artist's impression indicative of the actual design for information purpose only. This information and the contents herein mentioned are subject to change and is being updated by us in the light of enactment and commencement of the Real Estate (Regulation and Development) Act, 2016. The Company reserves the right to change by adding, deleting or altering the information/material including designs, plans, specifications, facilities, images, features, amenities such as clubhouse, parks etc without any prior notice. Any interested party should verify all the information including designs, plans, specifications, facilities, features etc. independently with the Company prior to concluding any decision for buying in the project. For RERA registration information, visit www.rera.karnataka.gov.in

88847 44244

*T& C Apply | Add-on services offered at additional charges.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

BUILDERS ESSENTIAL

Water Proofing Materials

'WE FIX'
LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

OFFICE SPACE & 2BHK House for Rent in Basavanagudi Near Lalbagh Metro Station. Mob : 9113218451

Industrial And Factory

RENT:- RAJAJINAGAR Industrial Town Bangalore-79, Available 1200 Sq.ft with 10 HP. Contact:- 9845066279

House


HOUSE FOR Rent, JPNagar Dollars Colony, 5BHK,Fully Furnished 100% Vastu And 4Car-Parking ,9632852947 /9945114693

INDIVIDUAL DUPLEX House FOR LEASE 30×40 at PADMANABHA NAGAR Rs:20.00.000/= CONTACT:9902800702

Accommodation Wanted

General

OFFICE SPACE REQUIRED
Entrepreneurship Development Institute of India (EDII), Gandhinagar is looking for office space of about 5,000-6,000sq.ft in an approved commercial area (fully furnished ready to move with vehicle parking facilities, construction should not be of more than 3-5 years old) for Bangalore preferably in the area Koramangala, RajajiNagar, Yeswanthpur, and Cunningham Road. Interested parties may send their proposal within 07 days of release of this advertisement to Mr. Samuel Moses Amarnath T:+91-80-23119360/9361, E:weact@ediindia.org



JOB OPPORTUNITIES

Teachers/ Professors

A PREMIER CAIE affiliated school is looking for innovative and passionate female teachers for Science English French Music Dance. The candidate must be fluent in English and ready to relocate. Handsome salary package with free Accommodation. Interested candidates may send their resume to info@saintmsgis.com, or through WhatsApp at 70820-07717

TEACHER REQUIRED for Primary and High school for Maths and Science. Contact Kenmore school Basavanagudi opp M N Krishna rao park or kenmoreschool@gmail.com or whatsapp 9901501185.

SOCIAL SERVICES

Old Age Home

SUKHSHANTHI LUXURY Retirement Home. Furnished Accommodation with 3 meals, 24x7 Nurse, Ambulance, Library. Rent Rs. 19,348/- pm. Off Sarjapur, Bangalore. Call: 8884710009/ 9341289357.

PERSONAL

Change of Name

CHANGE OF NAME
I, **YASHAWANTHAKUMAR Y,** R/@. # 2/14, 6th 'A' Cross, Magadi Road, Bengaluru- 560023, have changed my name to **YASHWANTHKUMAR Y** vide affidavit dated 26.05.2023 before Notary S.I. Balaguru, Bengaluru. Hence forth I shall be know as **YASHWANTHKUMAR Y** only

S KALAVATHI, Wife/o, JC681925L, SUB/ASH, K Ramakishtaiah, Vill-Ramakrishna Nagar, Kullor, Kurnool, Andhra Pradesh changed name S KALAVATHI to KAMPILI KALAVATHI, 26/05/2023 Notary K.V.Mani, Bangalore

CHANGE OF NAME
I, **AMUDHA SEKAR,** Spouse of No. **14584573L** Rank EX/NK, **CHANDRASEKARAN K C,** residing at Old No. 59/2, New No. 17, 3rd cross, Muddappa Garden, Dayananda Nagar, Srirampura Post, Bangalore North, Bangalore-560021, have changed my name from **AMUDHA SEKAR** to **AMUDHA K** vide affidavit dated 22.05.2023 before Notary Vanajakshi R., Bangalore.

CHANGE OF NAME
I, **SHRINIVAS DESHPANDE** S/o **SHRIKANT DESHPANDE** Residing at flat-303, Silver Waves Royal, 4th cross, 8th A main, Kengeri Satellite Towm, Bengaluru-560060 have changed my name to **SHRINIVAS S DESHPANDE** S/o **SHRIKANT D DESHPANDE** vide affidavit dated 25/5/2023 before notary Ravi Bengaluru

I,SHIVARAJ, CHANGED my name to SHIVARAJ BUDEPPA JAKA dated: 22-05-2023 Sworn before Notary Deepa.M, Bengaluru.

CHANGE OF NAME
I, **R. SUBRAMANIAN @ SUBRAMANIAN. R S,** residing at No. 20, "Shreyas", 3rd A cross, Venkataswamappa Layout, Nanjappa Circle, Vidyaranyapura, Bangalore- 560097, declare that both the names pertain to me and henceforth I shall be known as **SUBRAMANIAN .R S,** vide affidavit dated 25.05.2023 before Notary Hegde Ganapati Venkataraman, Bangalore.

I, C. UMASHANKAR S/o B.Chandrappa R/a#30/31, 1st Main Road, 3rd Cross Narayanappa Garden Tavarekere Bengaluru-560029 Declare`That My Correct DOB is 02.02.1967 Instead of 17.02.1967 (Passport No.A8788785) vide Affidavit`Dated 26-05-2023 Before Notary`K.V.Mani Bangalore

CHANGE OF NAME
I, **VENKATAKRISHNA** R/@ No. 80, 7th A Cross, Sir M.V. Layout, Virupakshapura, Bengaluru-560097, have changed my son's name from **JAYANTH** to **JAYANTH VENKATAKRISHNA** vide affidavit dated 17.05.2023 before Notary L.Veena, Bangalore.

I, EEDE TEJA DURGA PRASAD Alias Ede Teja Durga Prasad R/at No.4/1043-22, Rajpet, Machilipatnam, Krishna, Andhra Pradesh- 521001, in some record my name is entered as EDE TEJA DURGA PRASAD and My Father Name as Been Mentioned as EDE VENKATA SRINIVAS RAO I submit that both Names EEDE TEJA DURGA PRASAD and EDE TEJA DURGA PRASAD and My Father name as EEDE VENKATA SRINIVAS RAO and EDE VENKATA SRINIVAS RAO are one and the same names and both are belongs to me only vide affidavit dated: 19/5/2023 Before Notary M.Krishnamurthy Bangalore.

CHANGE OF NAME
I, **A.Madhusudhan** R/at. Bommasandra, Anekal Taluk, Benglauru-560099 have changed my Daughter's name from **A. SANJANA YADAV** to **A. YASHASWINI YADAV** vide affidavit dated 20/05/2023 before notary Chanchala Lakshmi., Bangalore.

I, YASMEEN, residing at #108, V.Kallahalli, Volagere Kallahalli, Sarjapura, Bangalore- 562125, have changed my name to LAKSHMI M. vide affidavit dated 25.05.2023 before Notary L. Shankaranarayana, Bangalore.

CHANGE OF NAME
I, **MANJUNATH,** R/@. No.G-1G Tower, 1st Block, RBD Stillwaters, Silver Country Road, Near Harlur Lake, Harlur, Bengaluru- 560068, have changed my name to **MANJUNATH S** vide affidavit dated 26.05.2023 before Notary A.C.Subbu Swamy, Bengaluru.

I, MAMATHA DURGA CHAND, R/a. #265, Sri Sankeshwar Apt, 3rd floor, Akkamahadevi Road, Cottonpet, Bangalore-560053 Changed my Name To MAMATHA Vide Affidavit Dated 26/05/2023 before Notary Mohammed Hussain. K Bangalore

PUBLIC NOTICE

PUBLIC NOTICE

The General Public is hereby informed that, our client intends to PURCHASE the immovable property more fully described in the schedule property hereunder from present owners mentioned below from its Owners **Mrs. Prafulla M. Rai, Mrs. Shamira Rai and Mrs. Sharitha Rai, all are legal heirs of late Mr. B.K. Manjappa Rai,** Residing at No.829, 23rd Cross, 22nd Main, Sector 2, HSR Layout, Bangalore-560102

Any persons, financial institutions having any sort of claim / rights / interest / charge on the below said property or any objections for the said sale of the property may file their objections in writing along with supporting documents, addressed to the undersigned within 07 days from the date of publication of this notice, failing which, it shall be construed that there are no claims of any sort over the below said property and our client shall be advised to proceed with the proposed transaction. Any claims thereafter shall not be entertained.

SCHEDULE PROPERTY

All that piece and parcel of the Residential property **BDA No.829,** having BBMP Katha No.3038/829, in the layout formed by Bangalore Development Authority, Bangalore, situated at Sector-II, HSR Layout, Bangalore, measuring East to West: 9.14 Meters and North to South: 12.19 Meters, totally measuring 111.42 Square Meters, along with building consisting thereon, now comes under the jurisdiction of BBMP, Bangalore, and bounded on the:- East by: Site No.830, West by: Site No.828, North by: Road, South by: Site No.846.

Sd/-
S.M. Manjunatha, Advocate,
Law Park Associates,
6th Sector, HSR Layout,
Bangalore-560 102.
+91 80 41715959 / +91 98456 65379
helpdesk@lawpark.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PUBLIC NOTICE

My client intends to purchase the property bearing Sy No.66/5 situated at Yelenahalli, Begur Hobli, BSTQ from its owner Smt. K. Leelavathi, aged about 60 years, W/o Late R. Prakash, residing at No.03, 2nd Floor, 12th Main, Near Bajaj Service Centre, Maruthi Nagar, Bengaluru - 560 075.

SCHEDULE PROPERTY

All that piece and parcel of the Residentially Converted land bearing Sy No.66/5, situated at Yelenahalli Village, Begur Hobli, Bangalore South Taluk, Bangalore Urban District, measuring 1 Acre 21 Guntas and bounded on the :
East By : Land bearing Sy No.66/1,
West By : Land bearing Sy No. 66/6,
North By : Land bearing Sy No. 67,
South By : Land bearing Sy No.66/3.

Notice is hereby given to all concerned who have any objection/s for purchase of Schedule Property or have any right, title, interest or claim/s over the same or any part thereof are hereby requested to lodge their written objections/ claims together with supporting documentary proof to the undersigned with in (07) Seven Days from the date of publication of this notice. If no objections or claims are forthcoming with in the above said period, my client shall purchase the above said property and no subsequent claim/s by anybody shall be entertained and all such objections and claims would be deemed to be void and non-binding on my client.

Maryanne Thomas, Advocate
No.46, 36th Main, BTM Dollar Scheme, Bangalore - 560 068
Mob : +91 9900607684
Date: 27.05.2023- Place : Bangalore

BUSINESS

Business to Business

Hotel & Restaurant

WORKING PARTNER required Veg Darshini Hotel (3000SFT) in Koramangala. Investment Rs.20-25 lakhs. Contact 8618556359

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್





*Source: Average Combined Circulation for All Edition ABC July-Dec. 2022
CIN: U92113KA2007PTC043480
VRL MEDIA PRIVATE LIMITED

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331